ಶುಕ್ರವಾರ, ಸೆಪ್ಟೆಂಬರ್ 26, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ರಮಿಕ ಮಹಿಳೆ...

ಛತ್ತೀಸಗಢದ ಬಸ್ತಾರ್ ಜಿಲ್ಲೆಯ ಹೊಲದಲ್ಲಿ ಗುರುವಾರ ಕಳೆ ತೆಗೆಯವುದರಲ್ಲಿ ನಿರತರಾಗಿದ್ದ ಕೃಷಿ ಕಾರ್ಮಿಕರು

ಚಿನ್ನಕ್ಕೆ ಗುರಿಯಿಟ್ಟ ಅನುಷ್ಕಾ

ಕರ್ನಾಟಕದ ಅನುಷ್ಕಾ ತೋಕೂರು ಅವರು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಮಹಿಳೆಯರ 50 ಮೀ. ರೈಫಲ್ ಪ್ರೋನ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು

iPhone 17

Magichromatic.

Go to IndiaiStore.com to find Apple Authorised stores near you.

Available now at an Exchange Effective Price of ₹49900*

Inclusive of ₹6000* instant cashback on credit cards of
ICICI Bank | SBI card
+
Exchange bonus up to ₹7000*

	iPhone 17
MRP (incl. of all taxes) (256 GB, 1N)	₹82900.00
Instant Cashback*	₹6000.00
Exchange value of your old smartphone*	₹20000.00
Exchange bonus*	₹7000.00
Exchange Effective Price*	**₹49900.00**

*Terms and conditions apply.
Please scan the QR Code for terms and conditions.

INDIA iSTORE
INGRAM MICRO | Redington

ಶುಕ್ರವಾರ, ಸೆಪ್ಟೆಂಬರ್ 26, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೃತ್ಯದ ಸೊಬಗು...
ಬೆಂಗಳೂರಿನಲ್ಲಿ ಅಖಿಲ ಭಾರತ ಹಣಕಾಸು ಸಾಲಗಾರರ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾವಿದೆಯರ ನೃತ್ಯ

ಪಡಿಕ್ಕಲ್‌ಗೆ ಸ್ಥಾನ
ಕರ್ನಾಟಕದ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆಯಲಿರುವ ಎರಡು ಟೆಸ್ಟ್‌ಗಳ ಸರಣಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ

REGAL
JEWELLERS

MANUFACTURER
& WHOLESALERS

ರೀಗಲ್ ಜ್ಯುವೆಲ್ಲರ್ಸ್‌ನ

ಮಾರತಹಳ್ಳಿ ಶಾಖೆಯ ಅದ್ದೂರಿ ಆರಂಭವನ್ನು

ನಾವು ಸಂತೋಷದಿಂದ ಘೋಷಿಸುತ್ತಿದ್ದೇವೆ

ಇದೀಗ ನೀವು ನಿಜವಾದ
ಹೋಲ್ಸೇಲ್ ಮೌಲ್ಯದಲ್ಲಿ ಆಭರಣ
ಖರೀದಿಯ ಅನುಭವ
ಪಡೆಯಬಹುದು

ವರ್ತೂರ್ ಮುಖ್ಯ ರಸ್ತೆ, ಮಾರತಹಳ್ಳಿ
+91 8404 90 90 90

ಅದ್ದೂರಿ ಉದ್ಘಾಟನಾ ಕೊಡುಗೆಗಳು

ಸೆಪ್ಟೆಂಬರ್ 26ರಿಂದ ಅಕ್ಟೋಬರ್ 26ರವರೆಗೆ

ಉಚಿತ ಚಿನ್ನದ ನಾಣ್ಯ
ಪ್ರತಿ 10 ಗ್ರಾಂ ಚಿನ್ನ ಖರೀದಿಗೆ*

ಉಚಿತ ಚಿನ್ನದ ನಾಣ್ಯ
ಪ್ರತಿ ₹1,00,000 ಮೌಲ್ಯದ ವಜ್ರ ಖರೀದಿಗೆ

ನೇರ 50% ರಿಯಾಯಿತಿ
ಎಲ್ಲಾ ಚಿನ್ನಾಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ

ಪ್ರತಿಗ್ರಾಂ ₹1,000 ಹೆಚ್ಚುವರಿ
ಹಳೆ ಚಿನ್ನದ ವಿನಿಮಯಕ್ಕೆ*

₹20,000 ರಿಯಾಯಿತಿ
ವಜ್ರದ ಆಭರಣಗಳ ಪ್ರತಿ ಕ್ಯಾರೆಟ್‌ಗೆ

ಆಫರ್‌ಗಳು ಲಭ್ಯವಿರುವ ಶಾಖೆಗಳು
ಮಾರತಹಳ್ಳಿ, ಮಲ್ಲೇಶ್ವರಂ ಮತ್ತು ಕಮ್ಮನಹಳ್ಳಿ

*T&C Apply

ಹೋಲ್‌ಸೇಲ್ ಪ್ರೈಸಿಂಗ್	100% 916 ಹೆಚ್‌ಯುಐಡಿ ಹಾಲ್‌ಮಾರ್ಕ್‌ಡ್
ಅಂತರಾಷ್ಟ್ರೀಯ ಪ್ರಮಾಣಿತ ವಜ್ರಗಳು	100% ವಿನಿಮಯ ಮೌಲ್ಯ

ಮಾರತಹಳ್ಳಿ: ವರ್ತೂರ್ ಮುಖ್ಯ ರಸ್ತೆ, ಮಾರತಹಳ್ಳಿ | ಕರೆಮಾಡಿ : **+91 8404 90 90 90**
ಕಮ್ಮನಹಳ್ಳಿ: ಕಮ್ಮನಹಳ್ಳಿ ಮುಖ್ಯ ರಸ್ತೆ, ಬಾಣಸವಾಡಿ, ಬೆಂಗಳೂರು | ಕರೆಮಾಡಿ : **+91 8720 90 90 90**
ಮಲ್ಲೇಶ್ವರಂ: ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು | ಕರೆಮಾಡಿ: **+ 91 7297 90 90 90**

care@regaljewellers.net | www.regaljewellers.net | +91 9656 019 990

ಹೆಚ್ಚಿನ ಮಾಹಿತಿಗಾಗಿ

ಮಾರತಹಳ್ಳಿ | ಕಮ್ಮನಹಳ್ಳಿ | ಮಲ್ಲೇಶ್ವರಂ | ಕೇರಳ

ಶುಕ್ರವಾರ, ಸೆಪ್ಟೆಂಬರ್ 26, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮರಿಯಾನೆಗಳ ರಕ್ಷಣೆ
ಜಾರ್ಖಂಡ್‌ನ ರಾಮಗಢ ಜಿಲ್ಲೆಯಲ್ಲಿ ಪಾಳು ಬಾವಿಗೆ ಬಿದ್ದ ಎರಡು ಆನೆ ಮರಿಗಳನ್ನು ರಕ್ಷಿಸಲು ಕಾರ್ಯಾಚರಣೆ ನಡೆಯಿತು

ಮಯೂರ ಮಹಲ್
ಅಸ್ಸಾಂನ ಗುವಾಹಟಿಯಲ್ಲಿ ದುರ್ಗಾ ಪೂಜೆಗೆ 'ಮಯೂರ ಮಹಲ್' ಮಾದರಿಯಲ್ಲಿ ಭವ್ಯ ಮಂಟಪವನ್ನು ನಿರ್ಮಿಸಲಾಗಿದೆ

CREDAI

PRM/KA/RERA/1251/472/PR/110925/008086
www.rera.karnataka.gov.in | T&C Apply*

Dear Bengaluru,

Sorry, we took up so much space in Kogilu

We didn't mean to be this extra.

It started with **5.5 acres of open space,**
then came **the 11,500 sft. pool,**
then the **73 amenities, glass façade,**
& no vehicles near your kids.

We didn't know what we were doing,
we just kept giving people more.
More light. More air. More life.

LAUNCHING
CASAGRAND
ESTANCIA

Extra-spacious **3 & 4 BHK** Homes
20 mins from **Manyata Tech Park**

From ₹1.25cr

Yours,
Team Casagrand

CASAGRAND
building aspirations

Before we go "sorry, sold out". Book today!

93840 54982

CREDAI

PRM/KA/RERA/1251/472/PR/110925/008086
www.rera.karnataka.gov.in | T&C Apply*

LAUNCHING
CASAGRAND ESTANCIA

Extra-spacious **3 & 4 BHK** Homes
20 mins from **Manyata Tech Park**
At Kogilu

From ₹1.25cr

Kogilu Market Price: ~~₹8500/sft~~ | Casagrand Launch Price: ~~₹7299/sft~~ | Casagrand Early Bird Price: **₹6999/sft.** (FOR FIRST 25 BOOKINGS ONLY)

Sorry, we got a little carried away with the home

- **Dubai-inspired** glass façade on 7.32 acres
- Large living spaces with big bedrooms **(11*18ft.)**
- No overlooking units for **maximum privacy**
- All bedrooms have **convertible balconies**
- **8ft. high windows** for scenic unrestricted view
- **Swimming pool of 11,500 sft.** with exclusive poolside amenities like adult's pool, aqua gym, kids pool, interactive water jets & more
- **Grand clubhouse of 22,500 sft.** with exclusive indoor amenities

with the location

- Upcoming Kogilu Metro Station - **2.8 KM**
- REVA University - **3.2 KM**
- SPARSH Hospital - **4.7 KM**
- RMZ Galleria Mall - **5.7 KM**
- Phoenix Mall of Asia - **9.1 KM**

& the price

TYPE	SIZE	LAUNCH PRICE	EARLY BIRD PRICE
2 BHK	1323 - 1382 SFT.	~~₹96L - ₹1CR~~	₹93L - ₹97L
3 BHK	1770 - 2157 SFT.	~~₹1.30CR - ₹1.55CR~~	₹1.25CR - ₹1.49CR
4 BHK	2655 - 2773 SFT.	~~₹1.88CR - ₹1.96CR~~	₹1.81CR - ₹1.88CR

TOTAL UNITS: 429 | SOLD: 140 | AVAILABLE: 289

WHY CASAGRAND?

- 20+ years of real estate excellence
- 160+ landmark projects
- 55,000+ happy families
- 2023 rigorous quality checks
- 87% on-time delivery
- 7 cities Chennai, Bengaluru, Hyderabad, Coimbatore, Pune, Delhi & Dubai
- 2 months of rental support to find tenants
- 6 months of resale support
- 8 years warranty & 10 years of community maintenance
- 75% open area for 2x more light & ventilation
- 0% space wastage planning for carpet area efficiency
- 23 global brands used in fittings and finishing materials

SCHEDULE YOUR SITE VISIT TODAY
93840 54982
VISIT MODEL HOUSE AT SITE

SCAN TO EXPERIENCE OUR SPACE

CASAGRAND building aspirations

ಶುಕ್ರವಾರ, ಸೆಪ್ಟೆಂಬರ್ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 267 | ಪುಟ 24

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹೂವಿನ ಮಾಲೆಯಂತೆ...

ಪ್ರಯಾಗರಾಜ್‌ನ ಮಾರುಕಟ್ಟೆಯಲ್ಲಿ ವ್ಯಾಪಾರಿಯೊಬ್ಬರು ಚೆಂಡು ಹೂವಿನ ಮಾಲೆಗಳನ್ನು ಜೋಡಿಸಿಟ್ಟರು. ನವರಾತ್ರಿ ಆಚರಣೆಯಿಂದಾಗಿ ಹೂವಿನ ವ್ಯಾಪಾರ ಜೋರಾಗಿದೆ

‘ತಾಜ್’ ಗುಮ್ಮಟವನ್ನೇರಿ...

ಆಗ್ರಾದಲ್ಲಿರುವ ವಿಶ್ವಪ್ರಸಿದ್ಧ ತಾಜ್‌ಮಹಲ್‌ನ ಮುಖ್ಯ ಗುಮ್ಮಟದಲ್ಲಿ ಕಾರ್ಮಿಕರು ಗುರುವಾರ ದುರಸ್ತಿ ಕೆಲಸ ನಡೆಸಿದರು

ಸೆನ್ಸೆಕ್ಸ್	ನಿಫ್ಟಿ	$/₹	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
81,159	24,890	88.76	₹1,18,600 (ಬೆಂಗಳೂರು)	₹1,42,900 (ಬೆಂಗಳೂರು)

ಜಾತಿವಾರು ಸಮೀಕ್ಷೆಗೆ ಇಲ್ಲ ತಡೆ

ಗೋಪ್ಯತೆ ಕಾಪಾಡಲು ಹಿಂದುಳಿದ ವರ್ಗಗಳ ಆಯೋಗಕ್ಕೆ ನ್ಯಾಯಪೀಠದ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಸಮೀಕ್ಷೆಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಮಧ್ಯಂತರ ಆದೇಶದ ಮೇಲಿನ ವಿಚಾರಣೆಯನ್ನು ಗುರುವಾರ ಮುಕ್ತಾಯ ಗೊಳಿಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತು ಆದೇಶಿಸಿದೆ.

‘ಸಮೀಕ್ಷೆಯಲ್ಲಿ ಜನರು ಭಾಗವಹಿಸುವುದು ಕಡ್ಡಾಯವಲ್ಲ. ಸಂಗ್ರಹಿಸಿದ ದತ್ತಾಂಶ ಸೋರಿಕೆ ಆಗದಂತೆ ಗೋಪ್ಯತೆ ಕಾಯ್ದುಕೊಳ್ಳ-ಬೇಕು ಮತ್ತು ಈ ಸಂಬಂಧ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಬೇಕು’ ಎಂದೂ ನ್ಯಾಯಪೀಠ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ನಿರ್ದೇಶಿಸಿದೆ.

‘ಸಮೀಕ್ಷೆಯಲ್ಲಿ ಜನರು ಸ್ವಯಂ ಪ್ರೇರಿತವಾಗಿ ಭಾಗವಹಿಸಬಹುದು. ಅಲ್ಲಿ ಯಾವುದೇ ಮಾಹಿತಿಯನ್ನು ನೀಡುವುದು ಕಡ್ಡಾಯವಲ್ಲ ಎಂಬುದರ ಸಂಬಂಧ ಆಯೋಗ ಹೊರಡಿಸುವ ಅಧಿಸೂಚನೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ದತ್ತಾಂಶ ಸಂಗ್ರಹಿಸಲು ಮನೆಮನೆಗೆ ತೆರಳುವ ಸಮೀಕ್ಷಕರು, ಸಮೀಕ್ಷೆಯಲ್ಲಿ ಭಾಗವಹಿಸುವುದು ಸ್ವಯಂಪ್ರೇರಿತ ಎಂಬುದನ್ನು ಜನರಿಗೆ ಮನದಟ್ಟು ಮಾಡಬೇಕು. ಒಂದೊಮ್ಮೆ ಸಮೀಕ್ಷೆಯಲ್ಲಿ ಜನರು ಭಾಗವಹಿಸಲು ನಿರಾಕರಿಸಿದರೆ, ಸಮೀಕ್ಷೆಯಲ್ಲಿ ಭಾಗವಹಿಸುವಂತೆ ಜನರನ್ನು ಪುಸಲಾಯಿಸುವಂತಿಲ್ಲ’ ಎಂದು ನ್ಯಾಯಪೀಠ ತಾಕೀತು ಮಾಡಿದೆ.

ಪ್ರತಿವಾದಿಗಳಿಗೆ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್‌ಗೆ ಮುಂದೂಡಿದೆ. ಸಮೀಕ್ಷೆ ನಡೆಸುವುದಕ್ಕಾಗಿ ಕಳೆದ ತಿಂಗಳ 13ರಂದು ರಾಜ್ಯ ಸರ್ಕಾರ ಹೊರಡಿಸಿ ರುವ ಆದೇಶವನ್ನು ಪ್ರಶ್ನಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್, ಅಖಿಲ ಭಾರತ ವೀರಶೈವ ಮಹಾಸಭೆಯ ಬಿ.ಆರ್.ಉದಯಶಂಕರ್ ಸೇರಿದಂತೆ 9 ಜನರು, ರಾಜ್ಯ ಒಕ್ಕಲಿಗರ ಸಂಘದ ಕಾರ್ಯದರ್ಶಿ ಮತ್ತು ಕೆ.ಎನ್.ಸುಬ್ಬಾರೆಡ್ಡಿ ಸೇರಿದಂತೆ ನಾಲ್ವರು ಪ್ರತ್ಯೇಕವಾಗಿ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಸಮೀಕ್ಷಾ ಪ್ರಕ್ರಿಯೆ ತಡೆಯುವುದು ಸೂಕ್ತ ಎನಿಸುವುದಿಲ್ಲ. ಆದರೆ, ಆಯೋಗ ಸಂಗ್ರಹಿಸಿದ ದತ್ತಾಂಶವನ್ನು ಯಾರಿಗೂ ಬಹಿರಂಗಪಡಿಸಬಾರದು

ವಿಭು ಬಖ್ರು, ಮುಖ್ಯ ನ್ಯಾಯಮೂರ್ತಿ

ದತ್ತಾಂಶ ರಕ್ಷಣೆಯ ಜವಾಬ್ದಾರಿಯನ್ನು ಇ-ಆಡಳಿತ ಇಲಾಖೆಗೆ ವಹಿಸಲಾಗಿದೆ. ಇದಕ್ಕೆ ಪೂರಕವಾಗಿ ಪ್ರಮಾಣಪತ್ರ ಸಲ್ಲಿಸಲಾಗುವುದು

ಕೆ.ಶಶಿಕಿರಣ ಶೆಟ್ಟಿ, ಅಡ್ವೊಕೇಟ್ ಜನರಲ್

ಸಮಸ್ಯೆಗಳ ಸುಳಿಯೊಳಗೆ ಸಮೀಕ್ಷೆ

ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸೆ. 22ರಿಂದ ಆರಂಭಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ (ಜಾತಿವಾರು ಸಮೀಕ್ಷೆ) ಎದುರಾಗಿರುವ ಆರಂಭಿಕ ವಿಘ್ನಗಳು ನಾಲ್ಕನೇ ದಿನವೂ ಮುಂದುವರಿದಿವೆ.

ಮನೆ ಸಂಖ್ಯೆಯು (ಯುಎಚ್‌ಐಡಿ–ಯೂನಿಕ್ ಹೌಸ್‌ಹೋಲ್ಡ್ ಐಡೆಂಟಿಫಿ ಕೇಶನ್ ನಂಬರ್) ಮೊಬೈಲ್ ಆ್ಯಪ್‌ನಲ್ಲಿ ತೋರಿಸದೆ ಸಮೀಕ್ಷೆಗೆ ಹಂಚಿಕೆ ಮಾಡಿದ ಮನೆಗಳನ್ನು ಗುರುತಿಸಲು ಸಮೀಕ್ಷಕರು ಪರದಾಡುತ್ತಿದ್ದಾರೆ.

ಆ್ಯಪ್ ಆವೃತ್ತಿಯನ್ನು ಗುರುವಾರ 4ನೇ ಬಾರಿಗೆ 3.4 ವರ್ಷನ್‌ಗೆ ಅಪ್‌ಡೇಟ್ ಮಾಡಲಾಗಿತ್ತು. ಆ ಬಳಿಕ ಸಮಸ್ಯೆ ಪರಿಹಾರ ಆಗಬಹುದೆಂಬ ನಿರೀಕ್ಷೆಯೂ ಈಡೇರಲಿಲ್ಲ. ಕೆಲವು ಕಡೆ ಸಮೀಕ್ಷಕರು ಮನೆ ನಂಬರ್‌ಗಾಗಿ ಕಾದು ಸುಸ್ತಾದರು.

ಸಮೀಕ್ಷಕರಿಗೆ ಒಂದು ವಾರ್ಡ್, ಒಂದು ಗ್ರಾಮದಲ್ಲಿ ಮನೆಗಳನ್ನು ಹಂಚಿಕೆ ಮಾಡದೆ, ಬೇರೆ ಬೇರೆ ಗ್ರಾಮ, ವಾರ್ಡ್‌ಗಳಲ್ಲಿನ ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ಒಂದು ಭಾಗದಲ್ಲಿ ಕೈಗೊಂಡ ಸಮೀಕ್ಷೆಯ ಮನೆಗಳಿಗೆ ಹಾಗೂ ಮತ್ತೊಂದು ಭಾಗದ ಮನೆಗಳಿಗೆ ಕೆಲವೆಡೆ 8ರಿಂದ 10 ಕಿ.ಮೀ. ಅಂತರವಿರುವುದು ಸಮೀಕ್ಷಕರನ್ನು ಹೈರಾಣಾಗಿಸಿದೆ.

7

ಸಿ.ಎಂ ವಿಡಿಯೊ ಸಂವಾದ ಇಂದು

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಕುರಿತು ಕೆಲವು ನಿರ್ದೇಶನಗಳನ್ನು ನೀಡಲು ಮತ್ತು ಗೊಂದಲಗಳನ್ನು ಪರಿಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ನಡೆಸಲಿದ್ದಾರೆ.

ಶುಕ್ರವಾರ ಬೆಳಿಗ್ಗೆ 11.30 ಕ್ಕೆ ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸಲಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ. ಪಾಟೀಲ, ಕೃಷ್ಣ ಬೈರೇಗೌಡ, ಶಿವರಾಜ ತಂಗಡಗಿ, ಮಧು ಬಂಗಾರಪ್ಪ, ಬೈರತಿ ಸುರೇಶ್, ರಹೀಂಖಾನ್ ಭಾಗವಹಿಸಲಿದ್ದಾರೆ.

ನೌಕರಿಗಾಗಿ...

ಪ್ರಜಾವಾಣಿ ಚಿತ್ರ
ಬಿ.ಎಂ.ಕೇದಾರನಾಥ

ವಿವಿಧ ಇಲಾಖೆಗಳಲ್ಲಿನ ಹುದ್ದೆಗಳ ನೇಮಕಾತಿಗೆ ನಿಗದಿಪಡಿಸಿದ ವಯೋಮಿತಿಯನ್ನು ಕನಿಷ್ಠ ಐದು ವರ್ಷ ಸಡಿಲಿಸುವುದೂ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆಯವರು ಧಾರವಾಡದಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಸಿದರು

ನಕ್ಷೆ, ಒ.ಸಿ ಇಲ್ಲದಿದ್ದರೂ ವಿದ್ಯುತ್

ಒಂದು ಬಾರಿ ಮಾತ್ರ ಅನ್ವಯ • ಇದಕ್ಕಾಗಿ ಪ್ರತ್ಯೇಕ ಕಾನೂನು

• ಎ.ಎಂ.ಸುರೇಶ

ಬೆಂಗಳೂರು: ನಿವೇಶನ ಅಥವಾ ಕಟ್ಟಡದ ವಿಸ್ತೀರ್ಣವನ್ನು ಪರಿಗಣಿಸದೆ, ಈಗಾಗಲೇ ನಿರ್ಮಾಣವಾಗಿರುವ ಎಲ್ಲ ಕಟ್ಟಡಗಳಿಗೆ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ವಿದ್ಯುತ್ ಸಂಪರ್ಕ ಕಲ್ಪಿಸಲು ಇಂಧನ ಇಲಾಖೆಯು ನಿರ್ಧರಿಸಿದೆ.

ಇದಕ್ಕೆ ಸಚಿವ ಸಂಪುಟದ ಒಪ್ಪಿಗೆ ಪಡೆಯಲು ಟಿಪ್ಪಣಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ.

‘ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಂಬಂಧಪಟ್ಟ ಇಲಾಖೆಯಿಂದ ನಕ್ಷೆಗೆ ಅನುಮೋದನೆ ಪಡೆಯದೆ ಕಟ್ಟಡಗಳನ್ನು ನಿರ್ಮಿಸಿರುವ, ಸ್ವಾಧೀನಾನುಭವ ಪತ್ರ (ಒಸಿ) ಇಲ್ಲದೆ ಇದ್ದರೂ, ವಿದ್ಯುತ್ ಸಂಪರ್ಕ ಕೋರಿ ಈಗಾಗಲೇ ಅರ್ಜಿ ಸಲ್ಲಿಸಿರುವ ಸುಮಾರು ಒಂದು ಲಕ್ಷ ಗ್ರಾಹಕರಿಗೆ ಇದರಿಂದ ಅನುಕೂಲವಾಗಲಿದೆ’ ಎಂದು ಇಂಧನ ಇಲಾಖೆ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಎ ಖಾತಾ ನಿವೇಶನದಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಮಾತ್ರ ಅನ್ವಯ ಎಂಬ ಷರತ್ತುಗಳನ್ನು ವಿಧಿಸದೆ, ಎಲ್ಲ ಎಸ್ಕಾಂಗಳ ವ್ಯಾಪ್ತಿಯಲ್ಲಿ ಈಗಾಗಲೇ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ. ನಕ್ಷೆ ಮಂಜೂರಾತಿ, ಸ್ವಾಧೀನಾನುಭವ ಪತ್ರ ಸಲ್ಲಿಕೆ ಕಡ್ಡಾಯ ಎಂಬ ನಿಯಮವನ್ನು ಒಮ್ಮೆ ಮಾತ್ರ ಸಡಿಲಿಸಲಾಗುತ್ತದೆ’ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

7

ಮುಖ್ಯಾಂಶಗಳು

- ಒಮ್ಮೆ ಮಾತ್ರ ನಿಯಮ ಸಡಿಲಿಸಲು ಸಿ.ಎಂ ಸೂಚನೆ
- ನಿಯಮ ಉಲ್ಲಂಘನೆ ಮಾಡಿದವರಿಗೆ ದಂಡ
- ಗ್ರಾಮೀಣ, ನಗರ ಪ್ರದೇಶಕ್ಕೆ ಅನ್ವಯ

ಒ.ಸಿ ವಿನಾಯಿತಿ ಉಪಯೋಗಕ್ಕೆ ಬಾರದ ಆದೇಶ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ 1,200 ಚದರ ಅಡಿವರೆಗಿನ ನಿವೇಶನ ದಲ್ಲಿ ನಿರ್ಮಿಸಿರುವ ಮೂರು ಅಂತಸ್ತಿನ ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಪಡೆಯುವುದರಿಂದ ವಿನಾಯಿತಿ ನೀಡಿ ಈ ತಿಂಗಳ ಮೊದಲ ವಾರ ಆದೇಶ ಹೊರಡಿಸಲಾಗಿದೆ.

ಇದು ವಸತಿ ಕಟ್ಟಡಗಳಿಗೆ ಮಾತ್ರ ಅನ್ವಯವಾಗಲಿದೆ. ಅಲ್ಲದೆ ನಕ್ಷೆ ಮಂಜೂರಾತಿ ಇಲ್ಲದೆ ನಿರ್ಮಾಣ ಮಾಡಿರುವ ಕಟ್ಟಡಗಳ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ.

7

ಚಿನಕುರುಳಿ ಪ್ರಕಾಶ್ ಶೆಟ್ಟಿ

ವಿಪ್ರೊ ಕ್ಯಾಂಪಸ್‌ನಲ್ಲಿ ಸಂಚಾರಕ್ಕೆ ಅವಕಾಶ ಕೋರಿ ಪತ್ರ ಬರೆದಿದ್ದ ಸಿದ್ದರಾಮಯ್ಯ

ಸಿ.ಎಂ ಮನವಿ ತಿರಸ್ಕರಿಸಿದ ಅಜೀಂ ಪ್ರೇಮ್‌ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ವರ್ತುಲ ರಸ್ತೆಯ ಇಬ್ಬಲೂರು ಜಂಕ್ಷನ್ ಬಳಿಯ ಸಂಚಾರ ದಟ್ಟಣೆ ತಪ್ಪಿಸಲು, ವಿಪ್ರೊ ಕ್ಯಾಂಪಸ್‌ನಲ್ಲಿ ಸಾರ್ವಜನಿಕ ವಾಹನಗಳ ಸೀಮಿತ ಸಂಚಾರಕ್ಕೆ ಅನುವು ಮಾಡಿಕೊಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಡಿದ್ದ ಮನವಿಯನ್ನು ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ನಯವಾಗಿ ತಿರಸ್ಕರಿಸಿದ್ದಾರೆ.

ಅಜೀಂ ಪ್ರೇಮ್‌ಜಿ

‘ಹೊರ ವರ್ತುಲ ರಸ್ತೆಯಲ್ಲಿ ದಟ್ಟಣೆ ಅವಧಿಯಲ್ಲಿ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಅದರಲ್ಲೂ ಇಬ್ಬಲೂರು ಜಂಕ್ಷನ್‌ನಲ್ಲಿ ಸಮಸ್ಯೆ ತೀವ್ರವಾಗಿದೆ. ಇದು ತಯಾರಿಕಾ ವಲಯ ಹಾಗೂ ಸ್ಥಳೀಯ ಜನರ ಜೀವನದ ಗುಣಮಟ್ಟದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಹಾಗಾಗಿ ಪರಸ್ಪರ ಒಪ್ಪಿತ ಷರತ್ತು ಮತ್ತು ಅಗತ್ಯ ಭದ್ರತೆಯೊಂದಿಗೆ ವಿಪ್ರೊ ಕ್ಯಾಂಪ್‌ಸ್‌ನಲ್ಲಿ ವಾಹನ ಸಂಚಾರಕ್ಕೆ ಅವಕಾಶ ನೀಡಬೇಕು’ ಎಂದು ಸಿದ್ದರಾಮಯ್ಯ ಅವರು ಇದೇ 23ರಂದು ಅಜೀಂ ಅವರಿಗೆ ಪತ್ರ ಬರೆದಿದ್ದರು.

5B

‘ರಸ್ತೆ ಗುಂಡಿ ಮುಚ್ಚಲು ₹750 ಕೋಟಿ’

ಡಿ.ಕೆ. ಶಿವಕುಮಾರ್

ಬೆಂಗಳೂರು: ‘ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಮುಖ್ಯಮಂತ್ರಿ ₹750 ಕೋಟಿ ಅನುದಾನ ನೀಡಿದ್ದಾರೆ’ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಬಿಜೆಪಿ ಆಡಳಿತಾವಧಿಯಲ್ಲಿ ಆಗಿದ್ದ ರಸ್ತೆಗುಂಡಿಗಳನ್ನು ನಾವು ಮುಚ್ಚುತ್ತಿದ್ದೇವೆ. ಅವರು (ಬಿಜೆಪಿಯವರು) ಅಧಿಕಾರದಲ್ಲಿದ್ದಾಗ ಬೆಂಗಳೂರಿನಲ್ಲಿ ಸಣ್ಣ ಪಿಲ್ಲರ್ ಕೂಡ ಹಾಕಿಲ್ಲ. ಒಂದೇ ಒಂದು ಮೇಲ್ಸೇತುವೆ ಮಾಡಿಲ್ಲ. ಹೀಗಾಗಿಯೇ ಜನರು ನಮ್ಮ ಕೈಗೆ ಅಧಿಕಾರ ಕೊಟ್ಟಿದ್ದಾರೆ’ ಎಂದರು.

5B

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಕೆಎಸ್‌ಆರ್‌ಟಿಸಿಗೆ ರಾಷ್ಟ್ರಮಟ್ಟದ ಆರು ಪ್ರಶಸ್ತಿ: ನವದೆಹಲಿಯಲ್ಲಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರ ಮಟ್ಟದ ಮೂರು ಅನ್‌ಲಾಕ್ಡ್, ಎರಡು ಎಂಕ್ಯೂಬ್ ಹಾಗೂ ಒಂದು ಸ್ಕಾಚ್ ಪ್ರಶಸ್ತಿಗಳಿಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ.

ಸಾರಿಗೆ ಸುರಕ್ಷಾ ಯೋಜನೆಯ ಪರಿಚಯಕ್ಕಾಗಿ ಅತ್ಯುತ್ತಮ ಮಾನವ ಸಂಪನ್ಮೂಲ ನಿರ್ವಹಣೆ ಪ್ರಶಸ್ತಿ, ಅಶ್ವಮೇಧ ಕ್ಲಾಸಿಕ್ ಬಸ್‌ಗಳ ಪರಿಚಯಕ್ಕಾಗಿ ಅತ್ಯುತ್ತಮ ಹೊಸ ಉತ್ಪನ್ನ ಪ್ರಶಸ್ತಿ, ಡೈನಾಮಿಕ್ ಯುಪಿಐ ಮತ್ತು ಅವತಾರ್ ಪರಿಚಯಕ್ಕಾಗಿ ತಂತ್ರಜ್ಞಾನದ ಅತ್ಯುತ್ತಮ ಬಳಕೆ ಪ್ರಶಸ್ತಿಗಳು ಅನ್‌ಲಾಕ್ಡ್ ವಿಭಾಗದಲ್ಲಿ ಸಿಕ್ಕಿವೆ.

ಅಂಬಾರಿ ಉತ್ಸವ ಬಸ್ ಪರಿಚಯಕ್ಕಾಗಿ ವಿಡಿಯೊ ಮಾರ್ಕೆಟಿಂಗ್ ಅಭಿಯಾನದಲ್ಲಿ ಅತ್ಯುತ್ತಮ ವಿಷಯ ಪ್ರಶಸ್ತಿ, ಐರಾವತ್ ಕ್ಲಬ್ ಕ್ಲಾಸ್ ಬಸ್ ಪುನಶ್ಚೇತನದ ಪರಿಚಯಕ್ಕಾಗಿ ಅತ್ಯುತ್ತಮ ಉತ್ಪನ್ನ ನಿಯೋಜನೆ ತಂತ್ರ ಪ್ರಶಸ್ತಿಗಳು ಎಂಕ್ಯೂಬ್‌ನಲ್ಲಿ ಲಭಿಸಿವೆ.

ಎಚ್‌ಆರ್‌ಎಂಎಸ್ ತಂತ್ರಾಂಶವನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿದ್ದಕ್ಕಾಗಿ ಸ್ಕಾಚ್ 2025 ಪ್ರಶಸ್ತಿಯನ್ನು ನವದೆಹಲಿಯಲ್ಲಿ ಪ್ರದಾನ ಮಾಡಲಾಯಿತು.

‘ಹೊಸ ಅಧಿಸೂಚನೆ ಹೊರಡಿಸಿ’

ಬಿಬಿಸಿ: ಕೇಂದ್ರ ಭೂ ಸ್ವಾಧೀನ ಕಾಯ್ದೆ ಅಡಿ ಪರಿಹಾರಕ್ಕೆ ರೈತರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1 ಬಿಬಿಸಿ) ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗೆ ಕೇಂದ್ರ ಸರ್ಕಾರದ 2013ರ ಭೂ ಸ್ವಾಧೀನ ಕಾಯ್ದೆ ಅಡಿ ಪರಿಹಾರ ನೀಡಬೇಕು. ಇಲ್ಲವಾದರೆ ಅಧಿಸೂಚನೆ ರದ್ದುಪಡಿಸಿ, ಹೊಸದಾಗಿ ಹೊರಡಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಚೇರಿಯಲ್ಲಿ ಗುರುವಾರ ಯೋಜನೆಗೆ ಸಂಬಂಧಿಸಿದಂತೆ ಕರೆದಿದ್ದ ಸಭೆಯಲ್ಲಿ ಮಾತನಾಡಿದ ರೈತರು, ‘ಬಿಡಿಎ ಕಾನೂನಿಗೆ ತಿದ್ದುಪಡಿ ತಂದು ಕೇಂದ್ರ ಸರ್ಕಾರದ ಭೂ ಸ್ವಾಧೀನ ಕಾಯ್ದೆ ಅಳವಡಿಸಿಕೊಳ್ಳಬೇಕು. ಈ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕು’ ಎಂದು ಪಟ್ಟು ಹಿಡಿದರು.

ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್ ಮಾತನಾಡಿ, ‘1894ರಲ್ಲಿ ಬ್ರಿಟಿಷರು ರೂಪಿಸಿದ ಕಾನೂನಿನಡಿ ನೀಡುವ ಪರಿಹಾರ ಬೇಡ. ಮೆಟ್ರೊ, ರೈಲ್ವೆ, ಕೆಐಎಡಿಬಿ, ಕೆಎಚ್‌ಬಿ ಸೇರಿ ಅನೇಕ ಪ್ರಾಧಿಕಾರಗಳು 2013ರ ಕಾಯ್ದೆ ಅಳವಡಿಸಿಕೊಂಡು ವಿವಿಧ ಯೋಜನೆಗೆ ಪರಿಹಾರ ನೀಡುತ್ತಿವೆ. 2006ರಲ್ಲಿ ಅಧಿಸೂಚನೆ ಹೊರಡಿಸಿ, ಅಲ್ಲಿಂದ ಇಲ್ಲಿವರೆಗೆ ಯೋಜನೆ ಕುಂಟುತ್ತ ಸಾಗಿದೆ. ಪರಿಹಾರ ನೀಡಲು ಏನು ತೊಂದರೆ? ಅಧಿಕಾರಿಗಳು ಅವರ ಮನೆಯಿಂದ ಹಣವನ್ನು ತಂದು ಕೊಡುತ್ತಾರೆಯೇ’ ಎಂದು ತರಾಟೆಗೆ ತೆಗೆದುಕೊಂಡರು.

‘ಈಗಾಗಲೇ 400 ಮಂದಿ ನ್ಯಾಯಾಲಯದಲ್ಲಿ ಕೇಸ್ ದಾಖಲಿಸಿದ್ದಾರೆ. ಬಿಡಿಎ ವರ್ತನೆ ಹೀಗೆ ಮುಂದುವರಿದರೆ ಮತ್ತೆ ನೂರಾರು ಮಂದಿ ಕೇಸ್ ದಾಖಲಿಸುತ್ತಾರೆ’ ಎಂದು ಎಚ್ಚರಿಸಿದರು.

‘ಪಿಆರ್‌ಆರ್‌ಗೆ ಗುರುತಿಸಿರುವ ಸರ್ವೆ ನಂಬರ್‌ಗಳ ಭೂಮಿಗೆ ಶೇಕಡ 60 ಮಾರ್ಗಸೂಚಿ ದರ ಕಡಿಮೆ ಮಾಡಲಾಗಿದೆ. ಈಗ ಮಾರ್ಗಸೂಚಿ ಪ್ರಕಾರ ಎರಡು, ಮೂರು ಪಟ್ಟು ಪರಿಹಾರ ನೀಡಲಾಗುವುದು ಎಂದರೆ ಏನು ಅರ್ಥ. ರೈತರನ್ನು ಮೋಸ ಮಾಡುವ ಉದ್ದೇಶದಿಂದಲೇ ಈ ರೀತಿ ಮಾಡಲಾಗಿದೆ’ ಎಂದು ವರ್ತೂರು ರೈತ ಜಗದೀಶ್ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ರಘು ಮಾತನಾಡಿ, ‘ರಸ್ತೆಗೆ ಎಷ್ಟು ಬೇಕೋ ಅಷ್ಟು ಭೂಮಿ ಮಾತ್ರ ಸ್ವಾಧೀನ ಪಡಿಸಿಕೊಂಡು ಉಳಿದಿದ್ದನ್ನು ರೈತರಿಗೆ ನೀಡಬೇಕು. ಉದಾಹರಣೆಗೆ 60 ಮೀಟರ್ ರಸ್ತೆಗೆ ಅಷ್ಟೇ ಭೂಮಿಯನ್ನು ವಶಪಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಪರಿಹಾರ ನಿಗದಿಯಲ್ಲೂ ಅಧಿಕಾರಿಗಳು ತಾರತಮ್ಯ ಮಾಡುತ್ತಿದ್ದಾರೆ. ಹೊಸ ಕಾಯ್ದೆ ಪ್ರಕಾರ ಪರಿಹಾರ ಸಿಗುವುದಿಲ್ಲ ಎಂದು ಅಧಿಕಾರಿಗಳು ಧಮ್ಕಿ ಹಾಕಿ ಸಂಧಾನ ಸೂತ್ರದ ಪತ್ರಕ್ಕೆ ಸಹಿ ಹಾಕಿಸಿಕೊಂಡಿದ್ದಾರೆ. ಎರಡು ದಶಕಗಳಿಂದ ರೈತರು ಅನುಭವಿಸಿದ ಸಂಕಷ್ಟ ಅಷ್ಟಿಷ್ಟಲ್ಲ. ಸಾಲ ಪಡೆಯಲು ಆಗುತ್ತಿಲ್ಲ. ನಗರದಿಂದ ಹೊರಗೆ ಭೂಮಿ ಮೌಲ್ಯ ಕೋಟ್ಯಂತರ ರೂಪಾಯಿ ಇದೆ. ಅಲ್ಲಿಗೆ ಹೋಗಿ ಬದುಕು ಕಟ್ಟಿಕೊಳ್ಳಲು ಕಷ್ಟ. ಆದಷ್ಟು ಬೇಗ ಇತ್ಯರ್ಥ ಪಡಿಸಿ’ ಎಂದು ರೈತರಾದ ಶ್ರೀಧರ, ಹೇಮಂತ್ ಕುಮಾರ್ ಹಾಗೂ ರಂಜನಿ ಮನವಿ ಮಾಡಿದರು.

ಆಯುಕ್ತ ಪಿ.ಮಣಿವಣ್ಣನ್, ಬಿಬಿಸಿ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ)ದ ಅಧ್ಯಕ್ಷ ಎಲ್‌.ಕೆ.ಅತೀಕ್ ಹಾಜರಿದ್ದರು..

ಭೂ ಮಾಲೀಕರಿಗೆ ನೀಡಿದ ಆಯ್ಕೆಗಳು

- 2013ರ ಕಾಯ್ದೆ ಅಡಿ ಮಾರ್ಗಸೂಚಿ ದರದ ಪ್ರಕಾರ ಪರಿಹಾರ ನೀಡಲಾಗುವುದು. (ನಗರ ಪ್ರದೇಶಕ್ಕೆ ಎರಡು ಪಟ್ಟು ಹಾಗೂ ಗ್ರಾಮೀಣ ಪ್ರದೇಶಕ್ಕೆ ಮೂರು ಪಟ್ಟು)
- ಸ್ವಾಧೀನ ಪಡಿಸಿಕೊಳ್ಳುವ ಭೂಮಿಗೆ ಮಾರ್ಗಸೂಚಿ ಅನ್ವಯ ನಗದು ಪರಿಹಾರ.
- ಯೋಜನೆಗೆ ಭೂಮಿ ನೀಡುವವರಿಗೆ ಪರ್ಯಾಯವಾಗಿ ಶೇಕಡ 40 ಅಭಿವೃದ್ಧಿ ಪಡಿಸಿದ ನಿವೇಶನ. (ಜನವಸತಿ ಪ್ರದೇಶದಲ್ಲಿ ಶೇಕಡ 40, ವಾಣಿಜ್ಯ ಪ್ರದೇಶದಲ್ಲಿ ಶೇಕಡ 30)
- ಫ್ಲೋರ್ ಏರಿಯಾ ರೇಷಿಯೊ (ಎಫ್‌ಎಆರ್) , ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರಕ್ಕೆ ಅವಕಾಶ

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆಗೆ ಸಂಬಂಧಿಸಿದಂತೆ ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರೈತರು ಪಾಲ್ಗೊಂಡಿದ್ದರು. ಎಲ್‌.ಕೆ.ಅತೀಕ್, ಮಣಿವಣ್ಣನ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಮುಖ್ಯಮಂತ್ರಿ ಜತೆ ಚರ್ಚಿಸಿ ಪರಿಹಾರ’

‘ರೈತರ ನೋವು ಅರ್ಥವಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ರೂಪಿಸಿರುವ ಯೋಜನೆಯನ್ನು ರದ್ದು ಮಾಡಲು ಆಗುವುದಿಲ್ಲ. ಕೇಂದ್ರ ಸರ್ಕಾರದ ಕಾಯ್ದೆ ಅಡಿ ಪರಿಹಾರಕ್ಕೆ ನೀಡುವಂತೆ ರೈತರು ಒತ್ತಾಯಿಸಿದ್ದಾರೆ. ಯಾರಿಗೂ ನಷ್ಟವಾಗಬಾರದು. ಹಾಗಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಜತೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು. ರೈತರು ಸಹ ಮುಖ್ಯಮಂತ್ರಿ ಜತೆ ಚರ್ಚಿಸಲು ಅವಕಾಶ ಕಲ್ಪಿಸಲಾಗುವುದು’ ಎಂದು ಬಿಡಿಎ ಅಧ್ಯಕ್ಷ ಎನ್‌.ಎ.ಹ್ಯಾರಿಸ್ ತಿಳಿಸಿದರು.

‘ಯೋಜನೆಗೆ ಹುಡ್ಕೊ ಸಾಲ ಮಂಜೂರು ಮಾಡಿದೆ. ಅಂತಿಮ ವಿಸ್ತೃತ ವರದಿ ಸಹ ಸಿದ್ಧಗೊಂಡಿದೆ. ಭೂ ಮಾಲೀಕರಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದ್ದು, ಇದು ಅವರಿಗೆ ಲಾಭವೇ ಹೊರತು ನಷ್ಟವಲ್ಲ’ ಎಂದು ಹೇಳಿದರು.

ವಿಷ ಕೊಟ್ಟು ಬಿಡಿ: ರೈತರ ಅಳಲು

‘ಬಿಡಿಎ ಕಚೇರಿಗೆ ಅಲೆದು ಸಾಕಾಗಿದೆ. ಪರಿಹಾರವೂ ನಿಗದಿ ಆಗಿಲ್ಲ. ಸ್ವಲ್ಪ ವಿಷ ಕೊಟ್ಟು ಬಿಡಿ, ಜಮೀನು ಪಡೆದುಕೊಂಡು ರಸ್ತೆ ನಿರ್ಮಿಸಿಕೊಳ್ಳಿ. ಕೇಂದ್ರ ಕಾಯ್ದೆ ಅಡಿ ಪರಿಹಾರ ನೀಡಲು ಸಾಧ್ಯವಾಗದಿದ್ದರೆ ಅಧಿಸೂಚನೆ ರದ್ದುಪಡಿಸಿ, ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಿ’ ಎಂದು ರೈತರು ಸಭೆಯಲ್ಲಿ ಅಳಲು ತೋಡಿಕೊಂಡರು.

ರಾತ್ರಿ ಕಳ್ಳರ ಗ್ಯಾಂಗ್ ಬಂಧನ

ದೊಡ್ಡಬಳ್ಳಾಪುರ: ರಾತ್ರಿ ವೇಳೆ ಮನೆಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಗ್ಯಾಂಗ್ ಅನ್ನು ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ನಾಗರಕಟ್ಟೆಯ ಪುರುಷೋತ್ತಮ (22), ಇದೇ ಜಿಲ್ಲೆಯ ಬಸವನಾಳ್ ಗೊಲ್ಲರಹಟ್ಟಿಯ ಚಂದ್ರು (24), ಆದೋಡಿಯ ದರ್ಶನ್ (20) ಬಂಧಿತರು.ಈ ಮೂವರು ಬೆಂಗಳೂರಿನ ಕೂಡ್ಲು ಗೇಟ್ ಬಳಿ ಬಾಡಿಗೆ ಮನೆಯಲ್ಲಿ ವಾಸವಿದ್ದರು.

ಸೆ.16ರ ಮಧ್ಯರಾತ್ರಿ ಖದೀಮರು ಟಿ.ಬಿ ನಾರಾಯಣಪ್ಪ ಬಡಾವಣೆಯಲ್ಲಿ ಯಾರು ಇಲ್ಲದ ಮನೆಗಳಿಗೆ ನುಗ್ಗಿ ಸುಮಾರು 115 ಗ್ರಾಂ ಚಿನ್ನದ ಒಡವೆ ಕದ್ದು ಪರಾರಿಯಾಗಿದ್ದರು.

ಫಾರಂ ಆರ್‌ಎಸ್‌ಸಿ–4

[ನಿಯಮ 3(3)ರ ಪ್ರಕಾರ]

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ ಇವರ ಸಮ್ಮುಖದಲ್ಲಿ

ಕಂಪನಿ ಪಿಟಿಷನ್ ನಂ. 07/2025

ಟೊಯೊಟ್ಸು ಭಾರತ್ ಇಂಟಿಗ್ರೇಟೆಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ...ಅರ್ಜಿದಾರರು

ಖಚಿತತೆಯ ಆದೇಶ ಪ್ರಕಟಣೆ

ಮೇಲೆ ಉಲ್ಲೇಖಿಸಲಾಗಿರುವ ಕಂಪನಿಯ ಷೇರು ಬಂಡವಾಳ ಕಡಿತಗೊಳಿಸುವಿಕೆಯನ್ನು ಖಚಿತಪಡಿಸುವುದಕ್ಕಾಗಿ 29ನೇ ಜನವರಿ, 2025 ರಂದು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ (**ಮಾನ್ಯ ನ್ಯಾಯಾಧಿಕರಣ**) ಸಮ್ಮುಖದಲ್ಲಿ ಸಲ್ಲಿಕೆಗೆ ಸಂಬಂಧಿಸಿದಂತೆ ಈ ಮೂಲಕ ಅಧಿಸೂಚಿಸಲಾಗಿದೆ.

ಮಾನ್ಯ ಪೀಠವು ದಿನಾಂಕ **02.09.2025**ರ ತನ್ನ ಆದೇಶ ಹಾಗೂ ತಿದ್ದುಪಡಿ ಆದೇಶದಲ್ಲಿ, ಸದರಿ ಪಿಟಿಷನ್‌ಗೆ, **ಎನ್‌ಸಿಎಲ್‌ಟಿ ಫಾರಂ ಆರ್‌ಎಸ್‌ಸಿ–6** ಮುಖಾಂತರ ಅರ್ಜಿದಾರ ಕಂಪನಿಯ ಪೇಡಪ್ ಬಂಡವಾಳ ಕಡಿತವನ್ನು ಅನುಮೋದಿಸಲು ಅವಕಾಶ ನೀಡಿರುತ್ತದೆ.

ಇದಕ್ಕೆ ಸಂಬಂಧಿಸಿದಂತೆ ನಾವು, ಮಾನ್ಯ ನ್ಯಾಯಾಧಿಕರಣದ ನಿರ್ದೇಶನದ ಮೇರೆಗೆ ಅರ್ಜಿದಾರ ಕಂಪನಿಯ ಷೇರು ಬಂಡವಾಳ ಕಡಿತದ ಖಚಿತತೆಯ ಆದೇಶವನ್ನು ಈ ಮೂಲಕ ಪ್ರಕಟಿಸುತ್ತಿದ್ದೇವೆ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 66ರ ಅಡಿಯಲ್ಲಿ ನೋಂದಾಯಿಸಬೇಕಾದ ಫಾರಂ ಆಫ್ ಮಿನಿಟ್ಸ್ ಕೆಳಗಿನಂತಿರುತ್ತದೆ:

“ಟೊಯೊಟ್ಸು ಭಾರತ್ ಇಂಟಿಗ್ರೇಟೆಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ಪೇಡಪ್ ಬಂಡವಾಳವಾಗಿರುವ ತಲಾ ರೂ. 10/– (ರೂಪಾಯಿ ಹತ್ತು) ಮುಖಬೆಲೆಯ ಇಕ್ವಿಟಿ ಷೇರುಗಳ ರೂಪದಲ್ಲಿರುವ ರೂ. 185,07,81,050 (ರೂಪಾಯಿ ಒಂದು ನೂರ ಎಂಬತ್ತೈದು ಕೋಟಿ ಏಳು ಲಕ್ಷ ಎಂಬತ್ತೊಂದು ಸಾವಿರದ ಐವತ್ತು ಮಾತ್ರ) ಮೊತ್ತವನ್ನು ತಲಾ ರೂ. 10/– (ರೂಪಾಯಿ ಹತ್ತು) ಮುಖಬೆಲೆಯ 18,50,78,105 (ಹದಿನೆಂಟು ಕೋಟಿ ಐವತ್ತು ಲಕ್ಷ ಎಪ್ಪತ್ತೆಂಟು ಸಾವಿರದ ಒಂದು ನೂರ ಐದು ಮಾತ್ರ) ಇಕ್ವಿಟಿ ಷೇರುಗಳನ್ನಾಗಿ ವಿಭಜನೆಗೊಳಿಸಿ, ತಲಾ ರೂ. 10 (ರೂಪಾಯಿ ಹತ್ತು) ಮುಖಬೆಲೆಯ 25,00,16,105 (ಇಪ್ಪತ್ತೈದು ಕೋಟಿ ಹದಿನಾರು ಸಾವಿರದ ಒಂದು ನೂರ ಐದು ಮಾತ್ರ) ಇಕ್ವಿಟಿ ಷೇರುಗಳನ್ನಾಗಿ ವಿಭಜಿಸಿ, ರೂ. 250,01,61,050ಕ್ಕೆ (ಎರಡು ನೂರ ಐವತ್ತು ಕೋಟಿ ಒಂದು ಲಕ್ಷ ಅರವತ್ತೊಂದು ಸಾವಿರದ ಐವತ್ತು ರೂಪಾಯಿ ಮಾತ್ರ) ಕಡಿತಗೊಳಿಸಲಾಗಿದೆ.”

ದಿನಾಂಕ: 25ನೇ ಸೆಪ್ಟಂಬರ್ 2025

ಟೊಯೊಟ್ಸು ಭಾರತ್ ಇಂಟಿಗ್ರೇಟೆಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
ಸಹಿ/–
ಸದನೊರಿ ಇಶಿಕಿ
ಅಧಿಕೃತ ಸಹಿದಾರರು

73rd Anniversary Celebration

THE JUMBO JANARDHANA SALE Till Oct. 22

40% OFF ON WEDDING SAREES

Great time to buy all your wedding sarees with a name trusted for generations!

OPEN ALL DAYS

JANARDHANA SILK HOUSE
WEAVER TO WEARER
SINCE 1952

Scan QR Code

Unity Buildings, J.C. Road, Bangalore-560 002
Customer care: 9886302937/ 9845504571
Shop online at: www.janardhanasilk.com

*at special counter

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಿಐಎನ್: ಯು40109ಕೆಎ1999ಎಸ್‌ಜಿಸಿ025521

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಬಿಡ್ ವಿಚಾರಣೆ ಸಂಖ್ಯೆಗಳ ಅನ್ವಯ ಈ ಕೆಳಕಂಡ ಕಾಮಗಾರಿಗಳಿಗಾಗಿ **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ ಭಾಗಶ: ಟರ್ನ್‌ಕೀ (ಗುತ್ತಿಗೆ) ಆಧಾರದ ಮೇಲೆ** ಬಿಡ್‌ಗಳನ್ನು ಆಹ್ವಾನಿಸಿದೆ:

(1) ಸಂ :ಮುಇಂ/ಪ್ರ(ಕಾ)ವಚೆ/ಅಇಂ(ಕ)/ಸಇಂ–1/ಎಫ್–417/2025–26/5885–86 ದಿನಾಂಕ: 24–09–2025

ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇವಿ/ಪ್ರ(ಕಾ)ವ/ಬೆಂ.ವ/ಸಂಯೋಜಿತ ಪ್ಯಾಕೇಜ್–ಗೌರಿಬಿದನೂರು/ಪಿ.ಟಿ.ಕೆ–23/2025–26 ರನ್ವಯ (1) ಗೌರಿಬಿದನೂರು ತಾಲ್ಲೂಕಿನಲ್ಲಿರುವ, ಚಿಕ್ಕಬಳ್ಳಾಪುರ ಜಿಲ್ಲೆಯ **220/66/11ಕೆ.ವಿ ಗೌರಿಬಿದನೂರು** ಸ್ವೀಕರಣಾ ಕೇಂದ್ರದಲ್ಲಿರುವ ವಿಫಲಗೊಂಡಿರುವ 1x100MVA, 220/66kV APEX ತಯಾರಿಕೆಯ ವಿದ್ಯುತ್ ಪರಿವರ್ತಕ–2 ರನ್ನು ಸುಸ್ಥಿತಿಯಲ್ಲಿರುವ 1x100MVA, 220/66kV TBEA ತಯಾರಿಕೆಯ ವಿದ್ಯುತ್ ಪರಿವರ್ತಕದಿಂದ ಬದಲಾಯಿಸಲು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸರಬರಾಜು (100MVA ಪರಿವರ್ತಕವನ್ನು ಹೊರತುಪಡಿಸಿ) ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವ ಬಗ್ಗೆ. (2) ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಜಿಲ್ಲೆಯಲ್ಲಿರುವ 220/66/11ಕೆ.ವಿ ಎಸ್.ಆರ್.ಎಸ್ ಪೀಣ್ಯ ಸ್ವೀಕರಣಾ ಕೇಂದ್ರದಿಂದ ಗೌರಿಬಿದನೂರು ತಾಲ್ಲೂಕಿನಲ್ಲಿರುವ, ಚಿಕ್ಕಬಳ್ಳಾಪುರ ಜಿಲ್ಲೆಯ 220/66/11ಕೆ.ವಿ ಗೌರಿಬಿದನೂರು ಸ್ವೀಕರಣಾ ಕೇಂದ್ರಕ್ಕೆ, ಸುಸ್ಥಿತಿಯಲ್ಲಿರುವ 1x100MVA, 220/66kV TBEA ತಯಾರಿಕೆಯ ವಿದ್ಯುತ್ ಪರಿವರ್ತಕದ ಕಳಚುವಿಕೆ (DISMANTLING), ಸಾಗಾಣಿಕೆ, ಲೋಡಿಂಗ್ ಮತ್ತು ಅನ್–ಲೋಡಿಂಗ್ ಮಾಡುವ ಬಗ್ಗೆ.

(2) ಸಂ :ಮುಇಂ/ಪ್ರ(ಕಾ)ವಚೆ/ಅಇಂ(ಕ)/ಸಇಂ–1/ಎಫ್–416/2025–26/5887–88 ದಿನಾಂಕ: 24–09–2025

ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇವಿ/ಪ್ರ(ಕಾ)ವ/ಬೆಂ.ವ/ಸಂಯೋಜಿತ ಪ್ಯಾಕೇಜ್–ಚಿಂತಾಮಣಿ/ಪಿ.ಟಿ.ಕೆ–22/2025–26, ರನ್ವಯ (1) ಚಿಂತಾಮಣಿ ತಾಲ್ಲೂಕಿನಲ್ಲಿರುವ, ಚಿಕ್ಕಬಳ್ಳಾಪುರ ಜಿಲ್ಲೆಯ **220/66/11ಕೆ.ವಿ ಚಿಂತಾಮಣಿ** ಸ್ವೀಕರಣಾ ಕೇಂದ್ರದಲ್ಲಿರುವ ವಿಫಲಗೊಂಡಿರುವ 1x100MVA, 220/66kV BHEL ತಯಾರಿಕೆಯ ವಿದ್ಯುತ್ ಪರಿವರ್ತಕ–3 ಅನ್ನು ಹೊಸದಾದ/ಬಿಡುಗಡೆ ಮಾಡಿ ಸುಸ್ಥಿತಿಯಲ್ಲಿರುವ 1x100MVA, 220/66kV BBL ತಯಾರಿಕೆಯ ವಿದ್ಯುತ್ ಪರಿವರ್ತಕದಿಂದ ಬದಲಾಯಿಸಲು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸರಬರಾಜು (100MVA ಪರಿವರ್ತಕವನ್ನು ಹೊರತುಪಡಿಸಿ) ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು /ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವ ಬಗ್ಗೆ. (2) ಕೋಲಾರ ತಾಲ್ಲೂಕಿನ ಕೆ.ಐ.ಎ.ಡಿ.ಬಿ ಯವರ ಕೆಲಸ ಪ್ರಗತಿಯಲ್ಲಿರುವ **220/66/11ಕೆ.ವಿ ಜಕ್ಕಸಂದ್ರ** ಉಪಕೇಂದ್ರದಿಂದ ಚಿಂತಾಮಣಿ ತಾಲ್ಲೂಕಿನಲ್ಲಿರುವ, ಚಿಕ್ಕಬಳ್ಳಾಪುರ ಜಿಲ್ಲೆಯ 220/66/11ಕೆ.ವಿ ಚಿಂತಾಮಣಿ ಸ್ವೀಕರಣಾ ಕೇಂದ್ರಕ್ಕೆ, ಹೊಸದಾದ/ಬಿಡುಗಡೆ ಮಾಡಿ ಸುಸ್ಥಿತಿಯಲ್ಲಿರುವ 1x100MVA, 220/66kV BBL ತಯಾರಿಕೆಯ ವಿದ್ಯುತ್ ಪರಿವರ್ತಕದ ಕಳಚುವಿಕೆ (DISMANTLING), ಸಾಗಾಣಿಕೆ, ಲೋಡಿಂಗ್ ಮತ್ತು ಅನ್– ಲೋಡಿಂಗ್.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ವಿಚಾರಣೆಯ ಸಂಪೂರ್ಣ ವಿವರಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ:29.09.2025 ರಂದು ಅಥವಾ ತದನಂತರ** ಲಾಗಿನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ)
ಪ್ರಸರಣ (ಕಾರ್ಯಾಚರಣೆ) ವಲಯ, ಕವಿಪ್ರನಿನಿ,
ಆನಂದರಾವ್ ವೃತ್ತ, ಬೆಂಗಳೂರು–560009.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ಇಸ್ರೋ
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್.ಇ.ಓ.ಎಸ್.) ಪ್ರಯೋಗಾಲಯ
ಪೀಣ್ಯ, ಬೆಂಗಳೂರು - 560058. ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
[ದೂರವಾಣಿ : (080)-22685088, 5047, 5094, 5086, 5087 (ಫ್ಯಾಕ್ಸ್ : (080)-28392310]

ಸಂಕ್ಷಿಪ್ತ ಇ-ಟೆಂಡರ್ (NIET) ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಲಿಯೋಸ್ ಆರ್ಯಭಟ, ಅತಿಥಿ ಗೃಹ ಮತ್ತು ಐ.ಎಸ್.ಆರ್.ಎ.ಡಿ. ಕ್ಯಾಂಪಸ್, ಪೀಣ್ಯ, ಬೆಂಗಳೂರು – 58. ಇಲ್ಲಿನ ವಿವಿಧ ಸ್ಥಳಗಳಲ್ಲಿ ರೀಪೇಂಟಿಂಗ್ ಗುತ್ತಿಗೆ. ಎನ್.ಐ.ಇ.ಟಿ. ನಂ.: CMG/LEOS/2025-26/LMN-06; ದಿನಾಂಕ : 19-09-2025. **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ** 16.35 **ಲಕ್ಷ; ಇ.ಎಂ.ಡಿ. ರೂ.** 32,700/- **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ** : 01 ವರ್ಷ, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ :** 25-09-2025, **ಮುಕ್ತಾಯದ ದಿನಾಂಕ :** 10.10.2025

ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಬೆಂಗಳೂರಿನ ಪೀಣ್ಯದಲ್ಲಿರುವ ಲಿಯೋಸ್ ಕ್ಯಾಂಪಸ್‌ನಲ್ಲಿ ಅಲ್ಯೂಮಿನಿಯಂ ವಿಭಜನೆಗಳ ಗುತ್ತಿಗೆ ಒಪ್ಪಂದ. ಎನ್.ಐ.ಇ.ಟಿ. ನಂ.: CMG/LEOS/2025-26/LMN-05; ದಿನಾಂಕ : 19-09-2025. **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ** 16.32 **ಲಕ್ಷ; ಇ.ಎಂ.ಡಿ. ರೂ.** 32,640/- **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ** : 01 ವರ್ಷ, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ :** 25-09-2025, **ಮುಕ್ತಾಯದ ದಿನಾಂಕ :** 10.10.2025

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್ : www.isro.gov.in ನಲ್ಲಿ ವಿವರವಾದ ಇ–ಟೆಂಡರ್ ಆಹ್ವಾನ ಸೂಚನೆ (NIET) ಅನ್ನು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ನಿರ್ದೇಶಕರು
ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಸಿ & ಎಂ.ಜಿ.)
ಯು.ಎಸ್.ಆರ್.ಸಿ., ಬೆಂಗಳೂರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/46/2025–26 ದಿನಾಂಕ: 24–09–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಕೆರೆಕತ್ತಿಗನೂರು** ಗ್ರಾಮವು “ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ” ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **“ವ್ಯವಸಾಯ”** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ** "ಕೈಗಾರಿಕೆ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ" ವಲಯದಿಂದ** "ಕೈಗಾರಿಕೆ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ರಂಗರಾಮ.ಆರ್. ಬಿನ್ ಲೇಟ್ ರಂಗಸ್ವಾಮಿ	ನೆಲಮಂಗಲ / ಸೋಂಪುರ / ಕೆರೆಕತ್ತಿಗನೂರು	68/1	00–23	ವ್ಯವಸಾಯ	ಕೈಗಾರಿಕೆ

ಷರಾ:– ಪ್ರಶ್ನಿತ ಜಮೀನುಗಳಲ್ಲಿ **ಕೈಗಾರಿಕೆ** ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವ್ಯವಸಾಯ ವಲಯದಿಂದ ಕೈಗಾರಿಕೆ ಉದ್ದೇಶಕ್ಕೆ"** ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2980/ಅಡ್ವರ್ಟೋರ್/2025–26

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

SECRETARY

Work Location : Bengaluru (MG Road)
Qualification : Any Graduate
Experience : 3-5 years

Job description:
- Coordinate Executive communications, including taking calls, responding to emails and interfacing with clients as and when required
- Interact with stakeholders.
- Organize and update schedules
- Travel management
- Calendar management
- Arrange events if required
- Uphold a strict level of confidentiality

To do this, you should:
- Experience in managing travel, calendar, schedules
- Hands on experience in Microsoft suite
- Atleast 3 years of experience in secretarial functions

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ನೈಋುತ್ಯ ರೈಲ್ವೆ

ಇ–ಟೆಂಡರು ಬಿಡ್ ಸೂಚನೆ ಸಂ.: **SBC-MECH-CW-ROH-25** ದಿನಾಂಕ: **18.09.2025**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗ: ಬೆಂಗಳೂರು ವಿಭಾಗದಲ್ಲಿ ಸ್ಯಾಟಲೈಟ್ ಗುಡ್ಸ್ ಟರ್ಮಿನಲ್ ವೇಗನ್ ಡಿಪೋನಲ್ಲಿ ಎರಡು ವರ್ಷಗಳ ಅವಧಿಗೆ ಔಟ್‌ಕಮ್ ನೀತಿಯಡಿ ಆರ್‌ಒಹೆಚ್ ಚಟುವಟಿಕೆಗಳ ಹೊರಗುತ್ತಿಗೆ ಕಾಮಗಾರಿ.	ರೂ. 2,71,40,471.58

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.10.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ ಬೆಂಗಳೂರು
PUB/507/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋುತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರು ಸೂಚನೆ ಸಂ.: **13-CWS-MYSS-2025-26** ದಿನಾಂಕ: **19.09.2025**

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಆರ್‌ಟಿ/ಎಆರ್‌ಎಂಇ ಕೋಚ್‌ಗಳನ್ನು ಪರಿವರ್ತನೆಗೊಳಿಸುವುದು (3 ಕೋಚ್‌ಗಳು)	ರೂ. 7,25,700/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.10.2025, 13:00 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: **14-CWS-MYSS-2025-26** ದಿನಾಂಕ: **19.09.2025**

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಐಸಿಎಫ್ ಕೋಚ್‌ಗಳ ಆಕ್ಸೆಲ್ ಬಾಕ್ಸ್‌ಗಳ ಶುದ್ಧೀಕರಣ ಮತ್ತು ಆಕ್ಸೆಲ್ ಬಾಕ್ಸ್‌ಗಳ ಪೆಂಟಿಂಗ್.	ರೂ. 11,42,198.72

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13.10.2025, 10:30 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: **11-CWS-MYSS-2025-26** ದಿನಾಂಕ: **19.09.2025**

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಲ್‌ಹೆಚ್‌ಬಿ ಕೋಚ್‌ಗಳಲ್ಲಿ ತುಕ್ಕುಗಳ ರಿಪೇರಿ ಕೆಲಸ (ಶೌಚಾಲಯಗಳ ಕೆಳಭಾಗದಲ್ಲಿ)	ರೂ. 1,29,66,769.85

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.10.2025, 16:30 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: **12-CWS-MYSS-2025-26** ದಿನಾಂಕ: **22.09.2025**

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಲ್‌ಹೆಚ್‌ಬಿ ಕೋಚ್‌ಗಳಲ್ಲಿ ಚೈಲ್ಡ್ ಭಾಗಗಳು/ಬಿಡಿ ವಸ್ತುಗಳಿಂದ ಮುಂಭಾಗದ ಸಂಪೂರ್ಣ ಅಂಡರ್ ಫ್ರೇಮ್ ಫಿಟ್‌ಮೆಂಟ್.	Rs. 18,85,752.80

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.10.2025, 15:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು/ಕೇಂದ್ರ ಕಾರ್ಯಾಗಾರ/ಮೈಸೂರು
PUB/505/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

Manager

WANTED MANAGER- Male/ Female for Plywood Shop, Lalbagh Road. Working time: 10 to 6. Starting Salary 20,000/-. Apply through whatsapp: 9243120231.

Part-Time Jobs

JOB OPPORTUNITY Retired Men, Housewife & Graduates Age 40 to 80, Earn upto 75,000: 9886641282/ 6362220162

EXCELLENT OPPORTUNITY with HDFC Bank Subsidiary. Age 35-70, 75K +, PF/ESI. Experience Only: 9606096111

BUSINESS

Business to Business

Business

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services- 93422247637.

Business Offers

Finance

BIG LOANS upto 700Cr Against Property Business Cheques Solar Easy Process, Repayment. AGENTS/ DSA Welcome 9092692403

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

I, SANTOSH KUMARI. D, residing at Bengaluru-10, have changed my name as SANTOSH SINGHVI, vide affidavit dated 25/09/2025 before Notary K.S. Bammappanavar, Bengaluru

PROPERTY CORNER

Required on Lease / Purchase – Industrial Property

We are looking to take on lease / Purchase a built-up industrial property of upto 1,00,000 sq. ft. at 50 kms radius from Centre of Bangalore for manufacturing activity. Property should be road touching and have good infrastructure, power, water, and connectivity.

Owners contact: Call / WhatsApp: +91 9880089144

I, CHANDRASHEKARA P.S. residing at Bengaluru-96, have changed my name as CHANDRASHEKAR P.S. vide affidavit dated 25/09/2025 before Notary K.S. Bammappanavar, Bengaluru

I, RAHUL THIMMAIAH K, Father of Minor daughter CHARVI RAHULTHIMMAIAH Residing at G208, DSR Greenfields, Immadihalli Road, Whitefield, Bengaluru-560066, is changing to New name CHARVI R.K, vide affidavit dated 24/09/2025 before Notary Veena J, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)
ದ್ರವ ಚಾಲನಾ ವ್ಯವಸ್ಥಾ ಕೇಂದ್ರ (LPSC), ನಿರ್ಮಾಣ ಮತ್ತು ನಿರ್ವಹಣೆ ವಿಭಾಗ,
ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು,
ದೂ.ಸಂ: 080–25037203/ 080–25037214

ದಿನಾಂಕ: 25.09.2025

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕೆಲಸದ ಹೆಸರು ಮತ್ತು ಎನ್‌ಐಟಿ ಸಂ. & ದಿನಾಂಕ	ಅಂದಾಜು ಮೊತ್ತ	ಇಎಂಡಿ	ಪೂರ್ಣಗೊಳಿಸುವ ಅವಧಿ
1	ಎಲ್‌ಪಿಎಸ್‌ಸಿ (ಬಿ) ಕ್ಯಾಂಪಸ್, ಬೆಂಗಳೂರು ಇಲ್ಲಿ ವಿದ್ಯುತ್ ಉಪಕೇಂದ್ರದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ವಾರ್ಷಿಕ ನಿರ್ವಹಣೆ ಗುತ್ತಿಗೆ. ಎನ್‌ಐಟಿ ಸಂ.: ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/03/3012/ಇ/ಎಂಐ/021/2025–26 ದಿನಾಂಕ: 25.09.2025	₹ 29.76 ಲಕ್ಷಗಳು	₹ 59,520/–	12 ತಿಂಗಳು
2	ಎಲ್‌ಪಿಎಸ್‌ಸಿ ಕ್ಯಾಂಪಸ್, ತುಮಕೂರು ಫೆಸಿಲಿಟಿ ಇಲ್ಲಿ ವಿದ್ಯುತ್ ಉಪಕೇಂದ್ರದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ವಾರ್ಷಿಕ ನಿರ್ವಹಣೆ ಗುತ್ತಿಗೆ. ಎನ್‌ಐಟಿ ಸಂ.: ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/03/3013/ಇ/ಎಂಐ/022/2025–26 ದಿನಾಂಕ: 25.09.2025	₹ 22.91 ಲಕ್ಷಗಳು	₹ 45,820/–	12 ತಿಂಗಳು
3	ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್, ಬೆಂಗಳೂರು ಇಲ್ಲಿ ಹವಾನಿಯಂತ್ರಣ ವ್ಯವಸ್ಥೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ವಾರ್ಷಿಕ ನಿರ್ವಹಣೆ ಗುತ್ತಿಗೆ. ಎನ್‌ಐಟಿ ಸಂ.: ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/03/3014/ಎಸಿ/ಎಂಐ/023/2025–26 ದಿನಾಂಕ: 25.09.2025	₹ 22.32 ಲಕ್ಷಗಳು	₹ 44,640/–	12 ತಿಂಗಳು
4	ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್, ತುಮಕೂರು ಇಲ್ಲಿ ಹವಾನಿಯಂತ್ರಣ ವ್ಯವಸ್ಥೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ವಾರ್ಷಿಕ ನಿರ್ವಹಣೆ ಗುತ್ತಿಗೆ. ಎನ್‌ಐಟಿ ಸಂ.: ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/03/3015/ಎಸಿ/ಎಂಐ/024/2025–26 ದಿನಾಂಕ: 25.09.2025	₹ 22.32 ಲಕ್ಷಗಳು	₹ 44,640/–	12 ತಿಂಗಳು

ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ: **26.09.2025** ರಿಂದ **10.10.2025** ರವರೆಗೆ

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು **www.tenderwizard.com/ISRO** ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ **www.isro.gov.in, www.lpsc.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಮರ, ನೀರಿನ ಟ್ಯಾಂಕ್ ಹತ್ತಿದ ಸಮೀಕ್ಷಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೀದರ್: ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವೇಳೆ 'ನೆಟ್‌ವರ್ಕ್' ಸಿಗದ ಕಾರಣ ಮರ ಹಾಗೂ ನೀರಿನ ಟ್ಯಾಂಕ್ ಏರಿದ ಸಮೀಕ್ಷಕರಿಬ್ಬರಿಗೆ ಗುರುವಾರ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಸಮೀಕ್ಷೆ ಕಾರ್ಯಕ್ಕೆ ನಿಯೋಜನೆಗೊಂಡ ಹುಲಸೂರ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಗೋವಿಂದ ಮಹಾರಾಜ ಹಾಗೂ ಹಂದ್ರಾಳ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಅನೀಲಕುಮಾರ ಶಾಸ್ತ್ರಿ ಅವರಿಗೆ ಬಸವಕಲ್ಯಾಣ ಕ್ಷೇತ್ರ ಶಿಕ್ಷಣಾಧಿಕಾರಿ ನೋಟಿಸ್ ನೀಡಿದ್ದಾರೆ. ಕ್ರಮವಾಗಿ ಈ ಇಬ್ಬರು ಬುಧವಾರ ಮರ ಹಾಗೂ ನೀರಿನ ಟ್ಯಾಂಕ್ ಹತ್ತಿದ್ದರು.

'ಸರ್ಕಾರದ ಆದೇಶವನ್ನು ಗಾಳಿಗೆ ತೂರಿ ನಿಯಮಬಾಹಿರವಾಗಿ ವರ್ತಿಸಿ, ಸರ್ಕಾರದ ನೀತಿಯನ್ನು ಅಣಕಿಸಿ ಸರ್ಕಾರಿ ನೌಕರರಲ್ಲದ ರೀತಿ ವರ್ತಿಸಿ ನೆಟ್‌ವರ್ಕ್‌ಗಾಗಿ ಮರ ಹಾಗೂ ನೀರಿನ ಟ್ಯಾಂಕ್ ಹತ್ತಿ ಆ ಚಿತ್ರಗಳನ್ನು ಹಂಚಿಕೊಂಡಿದ್ದೀರಿ. ಮೂರು ದಿನಗಳ ಒಳಗೆ ಲಿಖಿತ ಹೇಳಿಕೆ ಸಲ್ಲಿಸಬೇಕು. ಇಲ್ಲವಾದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು' ಎಂದು ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಶಿಕ್ಷಕರಿಗೆ ಬಿಸಿತುಪ್ಪವಾದ ಸಮೀಕ್ಷೆ

ಬೆನ್ನಟ್ಟಿಸಿಕೊಂಡು ಬಂದ ಸಾಕು ನಾಯಿ– ಓಡಿಬಂದ ಶಿಕ್ಷಕರು

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಹೋಗುತ್ತಿರುವ ಶಿಕ್ಷಕರು ತಾಂತ್ರಿಕ ಸಮಸ್ಯೆಯ ಜೊತೆಗೆ, ಹಲವಾರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

'ಗ್ರಾಮೀಣ ಪ್ರದೇಶದ ಒಂಟಿ ಮನೆಗೆ ಸಮೀಕ್ಷೆಗೆ ತೆರಳಿದ ಶಿಕ್ಷಕಿಯೊಬ್ಬರಿಗೆ ಕಹಿ ಅನುಭವ ಆಗಿದೆ. ಕಂಠಪೂರ್ತಿ ಮದ್ಯಸೇವನೆ ಮಾಡಿಕೊಂಡು, ಮಾತನಾಡಲಾಗದ ಸ್ಥಿತಿಯಲ್ಲಿ ಮನೆಯಲ್ಲಿ ಒಬ್ಬಂಟಿಯಾಗಿದ್ದ ಆ ಮನೆಯ ಯಜಮಾನನನ್ನು ಕಂಡ ಶಿಕ್ಷಕಿ ಭಯದಿಂದ ಓಡಿ ಬಂದಿದ್ದಾರೆ' ಎಂದು ಪುತ್ತೂರು ತಾಲ್ಲೂಕಿನ ಶಿಕ್ಷಕರ ಸಂಘದ ಮುಖಂಡರೊಬ್ಬರು ತಿಳಿಸಿದರು.

'ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆಗೆ ಹೋಗುವ ಶಿಕ್ಷಕರ ಪಡಿಪಾಟಲು ಅಷ್ಟಿಷ್ಟಲ್ಲ. ಸಮೀಕ್ಷೆಗೆ ತೆರಳಿದಾಗ ಮನೆಯ ಸಾಕು ನಾಯಿ ಬೆನ್ನಟ್ಟಿಕೊಂಡು ಬಂದು, ಜೀವ ಕೈಯಲ್ಲಿ ಉಳಿಸಿಕೊಂಡರೆ ಸಾಕು ಎಂದು ಒಂದಿಬ್ಬರು ಶಿಕ್ಷಕರು ಓಡಿ ಬಂದಿದ್ದಾರೆ. ಶಿಕ್ಷಕರು ಕಾರ್ಯ ನಿರ್ವಹಿಸುವ ಸ್ಥಳದ ಸುತ್ತಮುತ್ತಲಿನ 8 ಕಿ.ಮೀ ವ್ಯಾಪ್ತಿಯಲ್ಲಿ ಸಮೀಕ್ಷೆಗೆ ನೇಮಿಸಬೇಕು ಎಂಬ ಬೇಡಿಕೆ ಸಲ್ಲಿಸಿದ್ದರೂ, ಇದು ಅನುಷ್ಠಾನ ಗೊಂಡಿಲ್ಲ' ಎಂದು ಅವರು ಬೇಸರಿಸಿದರು.

'ಸಮರ್ಪಕವಾಗಿ ನೆಟ್‌ವರ್ಕ್ ಸಿಗದ ಪರಿಣಾಮ ದಿನಕ್ಕೆ 3–4 ಮನೆಗಳ ಸಮೀಕ್ಷೆ ನಡೆಸಲೂ ಕಷ್ಟವಾಗಿದೆ. ಸಮೀಕ್ಷೆಗೆ ತೆರಳಿದಾಗ ಮನೆಯವರು ಶಿಕ್ಷಕರ ಬಳಿ ದಾಖಲೆ ಕೇಳುತ್ತಾರೆ. ಸಮೀಕ್ಷಕರಿಗೆ ನೇಮಕಾತಿ ಆದೇಶವನ್ನೂ ಕೊಟ್ಟಿಲ್ಲ. ಮನೆ ಪಟ್ಟಿ ಇಲ್ಲದೆ, ಮನೆ ಹುಡುಕುವುದೇ ದೊಡ್ಡ ಸಮಸ್ಯೆಯಾಗಿದೆ. ಸಮೀಕ್ಷಕರಿಗೆ ಮನೆ ಪಟ್ಟಿ ಒದಗಿಸಬೇಕು, ಸಮೀಕ್ಷೆಗೆ ಪೂರಕ ವಾತಾವರಣ ಕಲ್ಪಿಸಿದರೆ, ಸಮೀಕ್ಷಕರು ಅಚ್ಚುಕಟ್ಟಾಗಿ ಕೆಲಸ ಮಾಡಲು ಸಿದ್ಧರಿದ್ದಾರೆ ಎಂದು ಹಿರಿಯ ಅಧಿಕಾರಿಗಳಲ್ಲಿ ಬೇಡಿಕೆ ಇಡಲಾಗಿದೆ' ಎಂದು ಶಿಕ್ಷಕ ಶಿವು ರಾಥೋಡ್ ತಿಳಿಸಿದರು.

ಮುಖ್ಯಾಂಶಗಳು

- ಗ್ರಾಮೀಣ ಭಾಗದಲ್ಲಿ ಸಮರ್ಪಕವಾಗಿ ಸಿಗದ ನೆಟ್‌ವರ್ಕ್
- ಮನೆಗಳನ್ನು ಹುಡುಕುವುದೇ ದೊಡ್ಡ ಸಮಸ್ಯೆ

ಉಡುಪಿ ಜಿಲ್ಲೆಯಲ್ಲಿ ಆ್ಯಪ್ ಸಮಸ್ಯೆಯಿಂದಾಗಿ ಸಮೀಕ್ಷೆ ಕಾರ್ಯ ಸಮರ್ಪಕವಾಗಿ ನಡೆದಿಲ್ಲ ಎಂದು ಮೂಲಗಳು ತಿಳಿಸಿವೆ.

'ಗಣತಿ ಕಾರ್ಯದಲ್ಲಿ ಶಿಕ್ಷಕರು ಪಾಲ್ಗೊಂಡಿದ್ದಾರೆ. ಆದರೆ ಆ್ಯಪ್‌ನ ಸಮಸ್ಯೆಯಿಂದಾಗಿ ಮರಳಿ ಬಂದಿದ್ದಾರೆ. ಸಮಸ್ಯೆ ಬಗೆಹರಿಸುವಂತೆ ನಾವು ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದೇವೆ. ಆದರೆ ಇನ್ನೂ ಪರಿಹಾರವಾಗಿಲ್ಲ' ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೆ. ದಿನಕರ ಶೆಟ್ಟಿ ಅಂಪಾರು ತಿಳಿಸಿದರು.

ಶಿಕ್ಷಕನ ಮೇಲೆ ಬೀದಿನಾಯಿ ದಾಳಿ: (ಬಂಗಾರಪೇಟೆ ವರದಿ): ತಾಲ್ಲೂಕಿನ ದೇಶಿಹಳ್ಳಿ ಗ್ರಾಮದಲ್ಲಿ ಗುರುವಾರ ಸಮೀಕ್ಷೆಗೆ ತೆರಳಿದ್ದ ಶಿಕ್ಷಕ ವೆಂಕಟಪ್ಪ ಅವರ ಮೇಲೆ ಬೀದಿನಾಯಿಯೊಂದು ದಾಳಿ ಮಾಡಿದೆ.

ಹಿಂದಿನಿಂದ ಬಂದ ನಾಯಿ ಏಕಾಏಕಿ ಕಾಲನ್ನು ಕಚ್ಚಿದೆ. ಕಾಲಿನಲ್ಲಿ ನಾಯಿಯ ಮೂರು ಹಲ್ಲುಗಳ ಗುರುತು ಮೂಡಿದ್ದು ರಕ್ತಸ್ರಾವವಾಗಿದೆ. ಇತರ ಶಿಕ್ಷಕರು ಅವರನ್ನು ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೆಲವು ಶಿಕ್ಷಕರು ಗುರುವಾರ ಬಿಇಒಗೆ ಮನವಿ ಸಲ್ಲಿಸಿದರು

ಮೂರು ದಿನ ಶೂನ್ಯ ಸಮೀಕ್ಷೆ!

ಚಿಕ್ಕಬಳ್ಳಾಪುರ: ತಾಂತ್ರಿಕ ಸಮಸ್ಯೆಗಳಿಂದಾಗಿ ಮೂರು ದಿನ ಕಳೆದರೂ ಒಂದು ಮನೆಯನ್ನೂ ಸಮೀಕ್ಷೆ ಮಾಡಲು ಸಾಧ್ಯವಾಗಿಲ್ಲ ಸಮೀಕ್ಷೆಗೆ ನಿಯೋಜಿಸಿರುವ ಶಿಕ್ಷಕರು ಹೇಳಿದ್ದಾರೆ.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವೇಳೆ ಎದುರಾಗಿರುವ ಲೋಪಗಳನ್ನು ಸರಿಪಡಿಸುವಂತೆ ಗುರುವಾರ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಆ್ಯಪ್‌ನಲ್ಲಿ ತೇರದಾಳ ತಾಲ್ಲೂಕು ಇಲ್ಲ

ಹುಬ್ಬಳ್ಳಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ಬೇರೆ ಬೇರೆ ಸ್ವರೂಪದ ಸಮಸ್ಯೆಗಳು ತಲೆದೋರುತ್ತಿವೆ. ಸಮರ್ಪಕವಾಗಿ ನೆಟ್‌ವರ್ಕ್ ಸಿಗದಿರುವುದು ಸೇರಿ ಹಲವು ಸಮಸ್ಯೆಗಳನ್ನು ಸಮೀಕ್ಷೆದಾರರು ಗುರುವಾರ ಎದುರಿಸಿದರು.

'ಬಾಗಲಕೋಟೆ ಜಿಲ್ಲೆಯ ನೂತನ ತಾಲ್ಲೂಕು ತೇರದಾಳ ಹೆಸರನ್ನು ಆ್ಯಪ್‌ನಲ್ಲಿ ಸೇರ್ಪಡೆ ಮಾಡಲಾಗಿಲ್ಲ. ಹಿಂದಿ ರಬಕವಿ–ಬನಹಟ್ಟಿ ತಾಲ್ಲೂಕಿನ ಹೆಸರಿನಲ್ಲೇ ಸಮೀಕ್ಷೆ ಪ್ರಕ್ರಿಯೆ ಮುಂದುವರೆದಿದೆ. ತೇರದಾಳ ಸೇರಿ ಅಖಂಡ ರಬಕವಿ–ಬನಹಟ್ಟಿ ತಾಲ್ಲೂಕಿಗೆ 562 ಬ್ಲಾಕ್‌ಗಳನ್ನು ರಚಿಸಿ, ಪ್ರತಿ ಬ್ಲಾಕ್‌ಗೆ ಒಬ್ಬರಂತೆ ಸಮೀಕ್ಷಕರು ಸಮೀಕ್ಷೆ ಆರಂಭಿಸಿದ್ದಾರೆ' ಎಂದು ಸ್ಥಳೀಯರು ಆಕ್ಷೇಪಿಸಿದರು.

'ಆ್ಯಪ್‌ನಲ್ಲಿ ಲೊಕೇಶನ್ ಜಾಗದಲ್ಲಿ ತೇರದಾಳ ಹೆಸರು ಸೇರಿಸಲು ಎರಡು–ಮೂರು ದಿನ ಕಾದೆವು. ಕೊನೆಗೆ ರಬಕವಿ–ಬನಹಟ್ಟಿ ತಾಲ್ಲೂಕಿನ ಲೊಕೇಶನ್‌ನಲ್ಲಿ ತೇರದಾಳ ಗ್ರಾಮಗಳನ್ನು ಸೇರಿಸಿ, ಸಮೀಕ್ಷೆ ಆರಂಭಿಸಿದೆವು. ಮೇಲಧಿಕಾರಿಗಳ ಜೊತೆಗೆ ಚರ್ಚಿಸಿ, ತೇರದಾಳ ಲೊಕೇಶನ್ ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮವಹಿಸಲಾಗುವುದು' ಎಂದು ತೇರದಾಳ ತಹಶೀಲ್ದಾರ್ ವಿಜಯಕುಮಾರ ಕಡಕೋಳ ತಿಳಿಸಿದರು.

ಕಾಡಿನ ಕುರಿಹಟ್ಟಿಗೆ ಹೋದ ಶಿಕ್ಷಕ

ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯಲ್ಲಿ ಲೊಕೇಶನ್ ಟ್ಯಾಗ್ ಗೊಂದಲದಿಂದ ಸಮೀಕ್ಷಕರ ಮಂಜಪ್ಪ.ಎಸ್. ಅವರು ಕಾಡಿನ ಕುರಿಹಟ್ಟಿಗೆ ತಲುಪಿ, ಮನೆಗಾಗಿ ಹುಡುಕಾಟ ನಡೆಸಿದರು.

ಪಟ್ಟಣದ ಹೊರವಲಯದ ದೇವಿನಗರದ 19ನೇ ವಾರ್ಡ್‌ನ ರೇವಣಸಿದ್ದಪ್ಪ ಬಡಾವಣೆಗೆ ಲೊಕೇಶನ್ ಟ್ಯಾಗ್ ಮೂಲಕ ಮಂಜಪ್ಪ ತೆರಳಿದರು. ಎರಡು ಮನೆಗಳ ಬಳಿಕ ಮುಂದಿನ ಮನೆಗೆ ಲೊಕೇಶನ್ ಹಾಕಿದಾಗ, 2-3 ಕಿಮೀ ದೂರದ ಹೊಲಗದ್ದೆಗಳ ನಡುವಿನ ಕುರಿ ಹಟ್ಟಿಗೆ ಕರೆದೊಯ್ದಿದೆ. 'ಮೂರು ಕಿಮೀ ನಡೆದುಹೋದರೆ ಅಲ್ಲಿ ಕುರಿಹಟ್ಟಿ ಇದೆ. ಮ್ಯಾಪಿಂಗ್ ಸಮಸ್ಯೆಯಿಂದ ನಿಯೋಜಿಸಿರುವ ಮನೆಗಳು ಲೊಕೇಶನ್‌ನ ಸಿಗಲಿಲ್ಲ' ಎಂದು ಶಿಕ್ಷಕ ಮಂಜಪ್ಪ ತಿಳಿಸಿದರು.

ಶಾಸಕ ಟಿ.ಡಿ.ರಾಜೇಗೌಡ, ಪತ್ನಿ, ಪುತ್ರನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ ಹಾಗೂ ಅವರ ಕುಟುಂಬದವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಇಲ್ಲಿನ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.



ಟಿ.ಡಿ. ರಾಜೇಗೌಡ

ಕೊಪ್ಪ ನಿವಾಸಿ ದಿನೇಶ್ ಎಚ್.ಕೆ. ಸಲ್ಲಿಸಿದ್ದ ಖಾಸಗಿ ದೂರು ಆಧರಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿರುವ ಆದೇಶದಂತೆ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ಟಿ.ಡಿ. ರಾಜೇಗೌಡ ಅವರು ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ಸರ್ಕಾರಕ್ಕೆ ಮತ್ತು ಆದಾಯ ತೆರಿಗೆ ಇಲಾಖೆಗೆ ವಂಚನೆ ಮಾಡಿದ್ದಾರೆ. ಅವರ ವಿರುದ್ಧ ಸಮಗ್ರ ತನಿಖೆ ನಡೆಸಬೇಕು' ಎಂದು ದಿನೇಶ್ ಎಚ್.ಕೆ. ದೂರಿನಲ್ಲಿ ಮನವಿ ಮಾಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ ಸೆ.16ರಂದು ಆದೇಶ ನೀಡಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಸೂಚಿಸಿತ್ತು.

'ರಾಜೇಗೌಡ ಅವರ ಕುಟುಂಬ ಸದಸ್ಯರು ತಮ್ಮ ಆದಾಯ ಮೂಲಗಳಿಗೆ ತಾಳೆಯಾಗದಷ್ಟು ಆಸ್ತಿ ಸಂಪಾದಿಸಿದ್ದಾರೆ. ಅವರ ಪಾಲುದಾರಿಕೆ ಸಂಸ್ಥೆಯಾದ ಮೆ.ಶಬಾನಾ ರಂಜಾನ್‌ನ ವ್ಯವಹಾರಗಳು ಸಾಕ್ಷಿ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

1984ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯಲ್ಲಿ ಪ್ರಾಥಮಿಕವಾಗಿ ಹಾಜಿ ಔರಂಗಜೇಬ್ ಮತ್ತು ಇತರರು ಪಾಲುದಾರರಾಗಿದ್ದರು. ನಂತರ 1992ರಲ್ಲಿ ಎಸ್.ವಿ. ಗಂಗಯ್ಯ ಹೆಗ್ಡೆ, ವಿ.ಜಿ. ಸಿದ್ಧಾರ್ಥ ಹಾಗೂ ಮಾಳವಿಕಾ ಹೆಗ್ಡೆ ಸಂಸ್ಥೆಗೆ ಪಾಲುದಾರರಾದರು. ಈ ಸಂಸ್ಥೆಯ ಮೂಲಕ ಅವರು 266 ಎಕರೆ ಕಾಫಿ ತೋಟ ಖರೀದಿಸಿದ್ದರು. 1993ರಲ್ಲಿ ಮೂಲ ಪಾಲುದಾರರು ಸಂಸ್ಥೆಯಿಂದ ಹಿಂದೆ ಸರಿದರು. ನಂತರ, ಕಂಪನಿಯು ತೋಟ ಅಡಮಾನವಿಟ್ಟು ಬ್ಯಾಂಕ್‌ಗಳಿಂದ ಸಾಲ ಪಡೆದುಕೊಂಡಿತ್ತು.

2019ರಲ್ಲಿ ಸಿದ್ಧಾರ್ಥ ಹಾಗೂ ಗಂಗಯ್ಯ ಹೆಗ್ಡೆ ಅವರ ಮರಣದ ನಂತರ, ಶಾಸಕ ರಾಜೇಗೌಡರ ಪತ್ನಿ ಡಿ.ಕೆ. ಪುಷ್ಪಾ ಅವರನ್ನು ಶೇ 48ರಷ್ಟು ಪಾಲುದಾರರನ್ನಾಗಿ ಸೇರಿಸಲಾಯಿತು. ಕೆಲವು ತಿಂಗಳ ನಂತರ ಶಾಸಕರ ಪುತ್ರ ರಾಜ್‌ದೇವ್ ಟಿ.ಆರ್. ಸಹ ಪಾಲುದಾರರಾದರು.

'ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ಗೆ ₹55.75 ಕೋಟಿ, ಬ್ಯಾಂಕ್ ಆಫ್ ಬರೋಡಾಗೆ ₹66 ಕೋಟಿ ಹಾಗೂ ಕರ್ನಾಟಕ ಬ್ಯಾಂಕ್‌ಗೆ ₹81.95 ಲಕ್ಷ ಪಾವತಿಸಲಾಗಿದೆ. ಆದರೆ, ಲೋಕಾಯುಕ್ತಕ್ಕೆ ರಾಜೇಗೌಡರು ಸಲ್ಲಿಸಿರುವ ಅಫಿಡವಿಟ್‌ನಲ್ಲಿ ವಾರ್ಷಿಕ ಆದಾಯ ಕೇವಲ ₹40 ಲಕ್ಷ ಎಂದು ಘೋಷಿಸಿದ್ದಾರೆ' ಎಂಬುದು ದೂರುದಾರರ ವಾದ.

ಈ ದಾಖಲೆಗಳನ್ನು ಲೋಕಾಯುಕ್ತರಿಗೆ ಸಲ್ಲಿಸಿದ್ದ ದಿನೇಶ್ ಅವರು, ತನಿಖೆ ನಡೆಸುವಂತೆ ಈ ಹಿಂದೆಯೇ ದೂರು ಸಲ್ಲಿಸಿದ್ದರು. ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಆರೋಪಗಳು ನಿರಾಧಾರ ಎಂದು 2023ರಲ್ಲಿ ವರದಿ ನೀಡಿದ್ದರು. ದೂರುದಾರರು ಇದನ್ನು ಪ್ರಶ್ನಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮೊರೆ ಹೋಗಿದ್ದರು.

ಚಿಟಿಕೆ ಸುದ್ದಿ

'ಗೌರಿ' ಆನೆ ಮರಿ ಸಾವು

ಅರಣ್ಯ ಅಧಿಕಾರಿಗಳ ಸಮ್ಮುಖದಲ್ಲಿ ಫಣಸೋಲಿ ಅರಣ್ಯ ಪ್ರದೇಶದಲ್ಲಿ ಮರಿ ಆನೆ ಗೌರಿಯ ಕಳೇಬರದ ಅಂತ್ಯಸಂಸ್ಕಾರ ನಡೆಸಲಾಯಿತು

ಕಾರವಾರ: ದಾಂಡೇಲಿಯ ಫಣಸೋಲಿ ವನ್ಯಜೀವಿ ವಲಯದ ಆನೆ ಶಿಬಿರದಲ್ಲಿದ್ದ 'ಗೌರಿ' ಹೆಸರಿನ ಹೆಣ್ಣು ಮರಿ ಆನೆ ಅನಾರೋಗ್ಯದಿಂದ ಗುರುವಾರ ಸಾವನ್ನಪ್ಪಿದೆ.

'2 ವರ್ಷ 9 ತಿಂಗಳ ವಯಸ್ಸಿನ ಆನೆಮರಿಯು ಒಂದು ತಿಂಗಳಿನಿಂದ ಅನಾರೋಗ್ಯಕ್ಕೆ ಒಳಗಾಗಿತ್ತು. ತಜ್ಞವೈದ್ಯರು ಚಿಕಿತ್ಸೆ ನೀಡಿದ್ದರು. ರಕ್ತ ಪರೀಕ್ಷೆ ನಡೆಸಿದಾಗ ಆನೆ ಸಹಜ ಸ್ಥಿತಿಯಲ್ಲಿದೆ ಎಂಬ ವರದಿ ಬಂದಿತ್ತು. ಆದರೆ, ಕೆಲದಿನಗಳಿಂದ ಗೌರಿ ಸರಿಯಾಗಿ ಆಹಾರ ಸೇವಿಸುತ್ತಿರಲಿಲ್ಲ. ಚಿಕಿತ್ಸೆಗೆ ಸ್ಪಂದಿಸದೆ ಗೌರಿ ಮೃತಪಟ್ಟಿದೆ' ಎಂದು ಫಣಸೋಲಿ ವನ್ಯಜೀವಿ ವಲಯದ ಎಸಿಎಫ್ ಮಂಜುನಾಥ ಕಳ್ಳಿಮಠ ತಿಳಿಸಿದರು.

ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ, ಆನೆ ಜನ್ಮತಳೆದ ಅರಣ್ಯ ಪ್ರದೇಶದಲ್ಲಿಯೇ ಅದನ್ನು ಹೂಳಲಾಯಿತು. ಡಿಸಿಎಫ್ ಕೆ.ಸಿ.ಪ್ರಶಾಂತಕುಮಾರ್ ಈ ಸಂದರ್ಭದಲ್ಲಿ ಇದ್ದರು.

ಪ್ರೊ. ಪೋತೆಗೆ 'ದೇಸಿ ಸನ್ಮಾನ' ಪ್ರಶಸ್ತಿ

ಸಿಂದಗಿ (ವಿಜಯಪುರ): ಪಟ್ಟಣದ ನೆಲೆ ಪ್ರಕಾಶನ ಸಂಸ್ಥೆಯ ಎಂ.ಎಂ.ಪಡಶೆಟ್ಟಿ ಸಾಂಸ್ಕೃತಿಕ ಪ್ರತಿಷ್ಠಾನವು ಜಾನಪದ ವಿದ್ವಾಂಸರಿಗೆ ನೀಡುವ ರಾಜ್ಯಮಟ್ಟದ 'ದೇಸಿ ಸನ್ಮಾನ' ಪ್ರಶಸ್ತಿ ಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ.ಪೋತೆ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರೊ.ಎಚ್. ಟಿ.ಪೋತೆ

ಪ್ರಶಸ್ತಿಯು ₹ 11 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಜೊತೆಗೆ ಪ್ರಶಸ್ತಿ ಪುರಸ್ಕೃತರ ಸಾಹಿತ್ಯ ಸಾಧನೆ ಕುರಿತು ಕಿರು ಗ್ರಂಥ ಪ್ರಕಟಿಸಲಾಗುವುದು ಎಂದು ಪ್ರತಿಷ್ಠಾನದ ಸಂಚಾಲಕ ಚನ್ನಪ್ಪ ಕಟ್ಟಿ ತಿಳಿಸಿದ್ದಾರೆ.

ಸಮೀಕ್ಷೆ, ಸಿ.ಎಂ ಬೆನ್ನಿಗೆ 'ಅಹಿಂದ'

ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ಸಚಿವರು, ಶಾಸಕರು ಒಕ್ಕೊರಲ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಜಾತಿವಾರು ಸಮೀಕ್ಷೆ ಮತ್ತು ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲಲು ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗಗಳ ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು, ಹಿಂದುಳಿದ ವರ್ಗಗಳ ಮುಖಂಡರು ಒಕ್ಕೊರಲಿನಿಂದ ನಿರ್ಧರಿಸಿದ್ದಾರೆ.

ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಗುರುವಾರ ನಡೆದ ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗಗಳ ಮುಖಂಡರ ಸಭೆಯ ಬಳಿಕ ಮಾತನಾಡಿದ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು, 'ಬಹುಮತದಿಂದ ಈ ನಿರ್ಧಾರ ಕೈಗೊಳ್ಳಲಾಯಿತು' ಎಂದರು.

'ಹಿಂದುಳಿದ ಜಾತಿಗಳು ಶಿಕ್ಷಣ, ಉದ್ಯೋಗ, ರಾಜಕೀಯ, ಆರ್ಥಿಕ ಸೌಲಭ್ಯ ಪಡೆಯಲು ಈ ಸಮೀಕ್ಷೆ ಅಗತ್ಯವಾಗಿದೆ. ಹೀಗಾಗಿ, ಹಿಂದುಳಿದ ವರ್ಗಗಳ ಜನರು ಸಮೀಕ್ಷೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸಲು ಒಕ್ಕೊರಲಿನಿಂದ ನಿರ್ಧರಿಸಲಾಯಿತು' ಎಂದರು.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, 'ಈ ಸಭೆ ಮೊದಲೇ ಆಗ ಬೇಕಿತ್ತು. ನಮ್ಮ ದೇಶ ಪ್ರಜಾಪ್ರಭುತ್ವದ ಅಡಿಯಲ್ಲಿ ನಡೆಯ ಬೇಕು. ಹಿಂದುಳಿದ ವರ್ಗಗಳಿಗೆ ಸರಿಯಾದ ಮೀಸಲಾತಿ ಸಿಗಬೇಕು. ಸಾಮಾಜಿಕ, ಶೈಕ್ಷಣಿಕ ಹಕ್ಕು ಕಸಿಯಲು ಯಾರಿಂದಲೂ ಸಾಧ್ಯವಿಲ್ಲ. ಅದನ್ನು ವಿರೋಧಿಸುವ ಕೆಲಸ ಆಗಬಾರದು' ಎಂದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, 'ಜನಜಾಗೃತಿಗಾಗಿ ಅಹಿಂದ ನಾಯಕರು ಸಭೆ ಸೇರಿದ್ದೇವೆ. ಪ್ರಣಾಳಿಕೆಯಲ್ಲಿ ಕೊಟ್ಟಿದ್ದ ಆಶ್ವಾಸನೆಯಂತೆ ಸಮೀಕ್ಷೆ ಮಾಡಲು ಹೊರಟಿದ್ದೇವೆ. ಅಹಿಂದ, ಮೀಸಲಾತಿ ವಿರುದ್ಧ ಇರುವವರು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ' ಎಂದರು.

> 197 ಹಿಂದುಳಿದ ಜಾತಿಗಳ ಅಂಕಿಅಂಶಗಳು ಗೊತ್ತಾಗಬೇಕಿದೆ. ಯಾರು ಎಷ್ಟು ಹಿಂದುಳಿದಿದ್ದಾರೆ ಎಂದು ತಿಳಿಯಲು ಈ ಸಮೀಕ್ಷೆ ಅಗತ್ಯವಾಗಿದೆ
> **ಬಿ.ಕೆ. ಹರಿಪ್ರಸಾದ್**, ವಿಧಾನ ಪರಿಷತ್ ಸದಸ್ಯ

> ಹಲವು ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದೇವೆ. ಸಮೀಕ್ಷೆಯ ಕುರಿತು ಸಮುದಾಯಗಳಿಗೆ ಹಿಂದುಳಿದ ವರ್ಗಗಳ ಸಚಿವರು ಜಾಗೃತಿ ಮೂಡಿಸಬೇಕು
> **ವೀರಪ್ಪ ಮೊಯಿಲಿ**, ಮಾಜಿ ಮುಖ್ಯಮಂತ್ರಿ

ಸಚಿವರಾದ ಸಂತೋಷ್ ಲಾಡ್, ಮಧು ಬಂಗಾರಪ್ಪ, ಬೈರತಿ ಸುರೇಶ್, ಶಾಸಕರಾದ ಎ.ಎಸ್. ಪೊನ್ನಣ್ಣ, ಭೀಮಣ್ಣ ನಾಯ್ಕ್, ಶ್ರೀನಿವಾಸ್, ಪ್ರದೀಪ್ ಈಶ್ವರ್, ಪುಟ್ಟರಂಗ ಶೆಟ್ಟಿ, ಬಸವರಾಜ್ ಶಿವಣ್ಣನವರ್, ಗವಿಯಪ್ಪ, ಪರಿಷತ್ ಸದಸ್ಯರಾದ ಯತೀಂದ್ರ ಸಿದ್ದರಾಮಯ್ಯ, ಉಮಾಶ್ರೀ, ರಮೇಶ್ ಬಾಬು, ತಿಪ್ಪಣ್ಣ ಕಮಕನೂರು, ಮಾಜಿ ಸಭಾಪತಿ ವಿ. ಆರ್. ಸುದರ್ಶನ್, ಹಿಂದುಳಿದ ವರ್ಗಗಳ ನಾಯಕರು ಸಭೆಯಲ್ಲಿದ್ದರು.

ಸಮಸ್ಯೆಗಳ ಸುಳಿಯೊಳಗೆ ಸಮೀಕ್ಷೆ

ಒಂದನೇ ಪುಟದಿಂದ...

ರಾಜ್ಯದ ಎಲ್ಲೆಡೆ ಸಮೀಕ್ಷಾ ಕಾರ್ಯದಲ್ಲಿ ತೊಡಗಿಸಿಕೊಂಡವರು ಬಹುತೇಕ ಒಂದೇ ಮಾದರಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆ ಆಧಾರದಲ್ಲಿ ಇಂಧನ ಇಲಾಖೆಯ ಮೀಟರ್ ರೀಡರ್‌ಗಳು ಮನೆಮನೆಗೆ ಜಿಯೋ ಟ್ಯಾಗ್ ಚೀಟಿ ಅಂಟಿಸಿದ್ದರು. ಕೆಲ ತಾಂತ್ರಿಕ ತೊಂದರೆ, ನೆಟ್‌ವರ್ಕ್ ಸಮಸ್ಯೆ ಸೇರಿದಂತೆ ನಾನಾ ಸಮಸ್ಯೆಗಳಿಂದ ಸಮೀಕ್ಷೆ ನಡೆಸುವವರಿಗೆ ಒದಗಿಸಲಾದ ಆ್ಯಪ್ ಸರಿಯಾಗಿ ಕಾರ್ಯನಿರ್ವಹಿಸದೆ ಮನೆಗಳನ್ನು 'ಲೊಕೇಷನ್ ಶೇರ್' ಮೂಲಕ ಹುಡುಕಲು ಸಮೀಕ್ಷೆದಾರರಿಗೆ ಸಾಧ್ಯವಾಗಿಲ್ಲ. ಸಂಗ್ರಹಿಸಿದ ದತ್ತಾಂಶಗಳು ಮತ್ತು 60 ಪ್ರಶ್ನೆಗಳಿಗೆ ಪಡೆದ ಉತ್ತರಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗಿಲ್ಲ. ಕೆಲವಡೆ ಒಬ್ಬ ಸಮೀಕ್ಷಕರಿಗೆ ಒಂದು ದಿನಕ್ಕೆ 75ಕ್ಕಿಂತಲೂ ಹೆಚ್ಚು ಮನೆಗಳನ್ನು ಹಂಚಿಕೆ ಮಾಡಿರುವುದು ಕೂಡಾ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ನಾಲ್ಕು ದಿನಗಳಾದರೂ ಸಮೀಕ್ಷೆ ಕಾರ್ಯ ಆರಂಭವಾಗಿಲ್ಲ. ಗುರುವಾರವೂ ಹಲವರಿಗೆ ಸಮೀಕ್ಷಾ ತರಬೇತಿ ನೀಡಲಾಯಿತು.

ತರಹೇವಾರಿ ತಾಂತ್ರಿಕ ತೊಂದರೆ

- ಮೊಬೈಲ್ ನೆಟ್‌ವರ್ಕ್, ಆ್ಯಪ್ ಡೌನ್‌ಲೋಡ್ ಸಮಸ್ಯೆ
- ಅಪ್‌ಡೇಟ್ ಆಗದ ಆ್ಯಪ್, ಕ್ರ್ಯಾಶ್, ಲಾಗಿನ್ ಗೊಂದಲ
- ತೆರೆದುಕೊಳ್ಳದ ಆ್ಯಪ್, ಬಾರದ ಒಟಿಪಿ, ಲೊಕೇಶನ್ ಗುರುತಿಸಲು ವಿಫಲ
- ಸರ್ವರ್ ಸಮಸ್ಯೆ ಮತ್ತು ಜಿಯೋ ಟ್ಯಾಗಿಂಗ್‌ನಲ್ಲೂ ದೋಷ
- ಸಮೀಕ್ಷಕರು ಆ್ಯಪ್‌ನಲ್ಲಿ ಲೊಕೇಶನ್ ಗುರುತಿಸಲು ವಿಫಲ
- ಸಮೀಕ್ಷೆ ನಡೆಸಬೇಕಾದ ಸ್ಥಳದ ಬದಲು ಅನ್ಯ ಸ್ಥಳ ತೋರಿಸುತ್ತಿರುವ ಆ್ಯಪ್
- ಸಮಸ್ಯೆ ಬಗೆಹರಿಯುವ ಬಗ್ಗೆ ಅಧಿಕಾರಿಗಳಿಂದ ಸಿಗದ ಸ್ಪಷ್ಟತೆ

ಆಯೋಗಕ್ಕೆ ಸಮಸ್ಯೆಗಳ ಪಟ್ಟಿ ನೀಡಿದ ಶಿಕ್ಷಕರ ಸಂಘ

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವೂ ಕೆಲ ಸಮಸ್ಯೆಗಳನ್ನು ಪಟ್ಟಿ ಮಾಡಿ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಲ್ಲಿಸಿದೆ.

'ಶಿಕ್ಷಕರು ಕೆಲಸ ಮಾಡುವ ಸ್ಥಳದಲ್ಲೇ ಸಮೀಕ್ಷೆಗೆ ಅವಕಾಶ ನೀಡಬೇಕು. ಒಳಮೀಸಲಾತಿ ಸಮೀಕ್ಷೆಯಲ್ಲಿ ಗುರುತಿಸಿದ ಮನೆಗಳ ಸಂಪೂರ್ಣ ವಿಳಾಸವನ್ನು ಒದಗಿಸಬೇಕು. ಒಬ್ಬ ಸಮೀಕ್ಷಕರಿಗೆ 75ಕ್ಕಿಂತ ಹೆಚ್ಚು ಮನೆಗಳನ್ನು ನಿಗದಿ ಮಾಡಬಾರದು. ಶಿಕ್ಷಕರ ಜತೆಗೆ, ಇತರೆ ಇಲಾಖೆಗಳ ನೌಕರರನ್ನೂ ಬಳಸಿಕೊಳ್ಳಬೇಕು. 55 ವರ್ಷ ಮೇಲ್ಪಟ್ಟ ಶಿಕ್ಷಕರು, ಅಂಗವಿಕಲರು, ತೀವ್ರತರ ಕಾಯಿಲೆಯಿಂದ ಬಳಲುತ್ತಿರುವವರಿಗೆ ವಿನಾಯಿತಿ ನೀಡಬೇಕು ಎಂದು ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಆಯೋಗವನ್ನು ಒತ್ತಾಯಿಸಿದ್ದಾರೆ.

ನಕ್ಷೆ, ಒ.ಸಿ ಇಲ್ಲದಿದ್ದರೂ ವಿದ್ಯುತ್...

ಒಂದನೇ ಪುಟದಿಂದ...

ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿದವರಿಗೆ ದಂಡ ವಿಧಿಸಲಾಗುತ್ತದೆ. ಎಷ್ಟು ಪ್ರಮಾಣದಲ್ಲಿ ಕಟ್ಟಡದ ನಕ್ಷೆ ಉಲ್ಲಂಘನೆ ಆಗಿದೆ ಎಂಬುದನ್ನು ಆಧರಿಸಿ ದಂಡವನ್ನು ನಿರ್ಧರಿಸಲಾಗುತ್ತದೆ. ಉದಾಹರಣೆಗೆ ಶೇ 10ರಷ್ಟು ಉಲ್ಲಂಘನೆ ಆಗಿದ್ದರೆ ವಿನಾಯಿತಿ ನೀಡಬಹುದು. ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಉಲ್ಲಂಘನೆ ಆಗಿದ್ದರೆ ಶೇ 15ರಷ್ಟು ದಂಡ ವಿಧಿಸಬಹುದು. ಅಂತಿಮವಾಗಿ ದಂಡ ಎಷ್ಟು ಎಂಬ ಬಗ್ಗೆ ತೀರ್ಮಾನಿಸುವ ಅಧಿಕಾರವನ್ನು ಸಂಪುಟ ಸಭೆಯ ವಿವೇಚನೆಗೆ ಬಿಡಲಾಗಿದೆ.

'ಇನ್ನು ಮುಂದೆ ನಕ್ಷೆ ಅನುಮೋದನೆ ಇಲ್ಲದೆ ಕಟ್ಟಡಗಳನ್ನು ನಿರ್ಮಿಸುವುದು, ನಕ್ಷೆ ಉಲ್ಲಂಘನೆ ಮಾಡುವುದನ್ನು ತಡೆಯಲು ಮಸೂದೆ ರೂಪಿಸಲಾಗುವುದು. ಬರುವ ದಿನಗಳಲ್ಲಿ ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತದೆ. ನಿಯಮ ಸಡಿಲಿಕೆ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬೆಸ್ಕಾಂ ಸೇರಿದಂತೆ ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಕೋರಿ ಸುಮಾರು ಒಂದು ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಇದರಲ್ಲಿ ಬೆಸ್ಕಾಂ ವ್ಯಾಪ್ತಿಯಲ್ಲೇ ಸುಮಾರು 50 ಸಾವಿರ ಅರ್ಜಿಗಳಿವೆ. ನಕ್ಷೆ ಮಂಜೂರಾತಿ, ಸ್ವಾಧೀನಾನುಭವ ಪತ್ರ ಇಲ್ಲದೆ ಇದ್ದರೆ ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿರುವ ಕಾರಣ ಹೊಸದಾಗಿ ಸಂಪರ್ಕ ನೀಡಲು ಸಾಧ್ಯವಾಗುತ್ತಿಲ್ಲ. ಕೋರ್ಟ್ ತೀರ್ಪನ್ನು ಈ ವರ್ಷದ ಏಪ್ರಿಲ್ 4ರಿಂದ ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತಿದೆ.

ದಿಕ್ಕು ತೋಚದಾಗಿದೆ: 'ಸಾಲ ಮಾಡಿ ಮನೆ ಕಟ್ಟಲಾಗಿದೆ. ಪ್ರತಿ ತಿಂಗಳು ಸಾಲದ ಕಂತು ಕಟ್ಟಬೇಕು. ಇತ್ತ ಬೆಸ್ಕಾಂನವರು ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. ಮನೆ ಕಟ್ಟಿ ಆದ ಮೇಲೆ ವಿದ್ಯುತ್ ನೀಡುವುದಿಲ್ಲ ಎಂದರೆ ನಾವು ಏನು ಮಾಡಬೇಕು? ನಕ್ಷೆ ಮಂಜೂರಾತಿ ಹಾಗೂ ಸ್ವಾಧೀನಾನುಭವ ಪತ್ರ ಬೇಕು ಎನ್ನುತ್ತಿದ್ದಾರೆ. ನಮ್ಮದ್ದು ಬಿ ಖಾತಾ ನಿವೇಶನ. ಇದಕ್ಕೆ ನಕ್ಷೆ ಮಂಜೂರಾತಿ ಸಿಗುವುದಿಲ್ಲ. ಈಗ ಏನು ಮಾಡಬೇಕು ಎಂದು ದಿಕ್ಕು ತೋಚದಂತಾಗಿದೆ' ಎಂದು ಕೆ.ಆರ್.ಪುರದ ನಿವಾಸಿ ನಾಗರಾಜ್ ಅಳಲು ತೋಡಿಕೊಂಡರು.

ಒ.ಸಿ ವಿನಾಯಿತಿ: ಉಪಯೋಗಕ್ಕೆ ಬಾರದ ಆದೇಶ

ಒಂದನೇ ಪುಟದಿಂದ...

ಇದರಿಂದಾಗಿ ನಗರಾಭಿವೃದ್ಧಿ ಇಲಾಖೆಯ ಈ ಆದೇಶದಿಂದ ಯಾರಿಗೂ ಉಪಯೋಗವಾಗುವುದಿಲ್ಲ ಎಂದು ಇಂಧನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಬೆಂಗಳೂರು ಹಾಗೂ ಅದರ ಸುತ್ತಮುತ್ತ ನಿರ್ಮಾಣವಾಗಿರುವ ಹೆಚ್ಚಿನ ಮನೆಗಳು ಬಿ ಖಾತಾ ನಿವೇಶನದಲ್ಲಿಯೇ ಇವೆ. ಬಿ ಖಾತಾದಲ್ಲಿ ಕಟ್ಟಿರುವ ಕಟ್ಟಗಳಿಗೆ ನಕ್ಷೆ ಮಂಜೂರಾತಿ ಸಿಕ್ಕಿರುವುದಿಲ್ಲ. ಎ ಖಾತಾ ನಿವೇಶನದಲ್ಲಿ ಮನೆಗಳನ್ನು ನಿರ್ಮಿಸಿ, ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಬೆರಳೆಣಿಕೆಯಷ್ಟಿದೆ ಎಂದು ಅವರು ತಿಳಿಸಿದರು.

ಮನೆಯಂಗಳದಲ್ಲೇ ಶವ ಸಂಸ್ಕಾರ

ಮಸ್ಕಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ರಂಗಾಪೂರ ಗ್ರಾಮದ ಮುಸ್ಲಿಂ ಸಮಾಜದ ಬಡಾವಣೆಯಲ್ಲಿ ಖಬರಸ್ಥಾನ ಇಲ್ಲದೇ ಇರುವುದರಿಂದ ಯಾರೇ ಮೃತಪಟ್ಟರೂ ಅವರ ಮನೆ ಅಂಗಳದಲ್ಲೇ ಅಂತಿಮ ಸಂಸ್ಕಾರ ಮಾಡಲಾಗುತ್ತಿದೆ.

ಈ ಗ್ರಾಮದಲ್ಲಿ ಮುಸ್ಲಿಂ ಸಮಾಜಕ್ಕೆ ಸೇರಿದ 40 ಮನೆಗಳು ಇದ್ದು 200ರಷ್ಟು ಜನ ಇದ್ದಾರೆ. ಇವರಿಗೆ ಮನೆ ಮುಂದಿನ ಖಾಲಿ ಜಾಗ, ತೋಟವೇ ಶವ ಹೂಳಲು ಆಸರೆಯಾಗಿದೆ.

'ಶವ ಹೊಳಲು ಖಬರ ಸ್ಥಾನಕ್ಕೆ ಜಾಗ ನೀಡುವಂತೆ ಹಲವಾರು ವರ್ಷಗಳಿಂದ ಮುಸ್ಲಿಂ ಸಮಾಜದವರು ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಜಾಗ ಮುಂಜೂರಾಗಿಲ್ಲ' ಎಂದು ಸ್ಥಳೀಯ ಅಮ್ಜದ್ ಖಾನ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
Corporate Identity Number (CIN) - L13100TG1958GOI001674

CONTRACTS DEPARTMENT
E-Tender Notice (Open Tender Enquiry for Domestic Bidding)

Tender Enquiry No: HO(Contracts)/KIOM-SWAM/HAM/NMDC/2025/279 **Dated** 25.09.2025

NMDC Limited, A "NAVARATNA" Public Sector Company under Ministry of Steel, Govt. of India, invites online bids through MSTC Portal from experienced domestic bidders for the work of **(a)** Development of feeding system, suitable conveying system with 1500 tph (rated capacity) for transportation of iron ore from Kumaraswamy mine to Swamihalli siding, stacking, spreading, weighing, and loading into rail wagons at Swamihalli siding at Donimalai, Karnataka on Build, Operate and Transfer (BOT) on a Hybrid Annuity Model (HAM)." **And (b)** "The operation & maintenance of the developed facilities for an estimated period of 15 years from date of commissioning, which shall be coterminous with Kumaraswamy mining lease, i.e. October 2042".

The detailed NIT and Bid documents can be viewed and / or downloaded from **25.09.2025** to **24.10.2025** from following website links;
1. NMDC website – **https://nmdcportals.nmdc.co.in/nmdctender**
2. Central Public Procurement portal – **https://www.eprocure.gov.in/epublish/app** and search tender through tender enquiry number
3. MSTC Portal - portal **https://www.mstcecommerce.com/eprocn/**

For accessing the bid document from MSTC portal, bidders to visit MSTC website (use Microsoft Edge browser for compatibility) and search **Tender Event No. NMDC/Head Office/Contract/29/25-26/ET/393.**

The bidders are requested to submit their bids online through MSTC Portal. The details of submission of bid through online are given in NIT. The Bidders on regular basis are required to visit the NMDC's website/CPP Portal/ MSTC Portal for corrigendum, if any, at a future date.

For further clarification, the following can be contacted:
Executive Director (Works), NMDC Limited, Hyderabad, Fax No. 040 – 2353 4746, Telephone No. 040 – 23532800, email: **contracts@nmdc.co.in.**

For and on behalf of NMDC Ltd.
Executive Director (Works)

ದಸರಾಕ್ಕೆ ಅದ್ದೂರಿ ಚಾಲನೆ- ಚಾಮುಂಡೇಶ್ವರಿ ದೇವಿಗೆ ವೇದ ಘೋಷಗಳ ನಡುವೆ ಪುಷ್ಪಾರ್ಚನೆ

ಶ್ರೀರಂಗಪಟ್ಟಣ ಜಂಬೂ ಸವಾರಿ: ಕಲಾತಂಡಗಳ ಮೆರುಗು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಪಟ್ಟಣದಲ್ಲಿ ಗುರುವಾರ ಆರಂಭವಾದ ನಾಲ್ಕು ದಿನಗಳ 'ಶ್ರೀರಂಗಪಟ್ಟಣ ದಸರಾ ಉತ್ಸವ'ದ ಅಂಗವಾಗಿ ನಡೆದ ಜಂಬೂಸವಾರಿಯನ್ನು ಸಾವಿರಾರು ಮಂದಿ ಕಣ್ತುಂಬಿಕೊಂಡರು.

ತಾಲ್ಲೂಕಿನ ಕಿರಂಗೂರು ವೃತ್ತದ ಬಳಿಯ ಬನ್ನಿ ಮಂಟಪದ ಬಳಿ ಮಧ್ಯಾಹ್ನ 3.40ಕ್ಕೆ 'ಜಂಬೂ ಸವಾರಿ'ಗೆ ಚಾಲನೆ ದೊರೆಯಿತು. ನಾಲ್ಕನೇ ಬಾರಿ ಅಂಬಾರಿ ಹೊತ್ತಿದ್ದ ಮಹೇಂದ್ರ ಆನೆಯ ಮೇಲೆ ಪ್ರತಿಷ್ಠಾಪಿಸಿದ್ದ ಚಾಮುಂಡೇಶ್ವರಿ ದೇವಿಗೆ ವೇದ ಘೋಷಗಳ ನಡುವೆ ಪುಷ್ಪಾರ್ಚನೆ ಮಾಡಲಾಯಿತು.

ಕುಮ್ಕಿ ಆನೆಗಳಾಗಿ ಲಕ್ಷ್ಮಿ, ಕಾವೇರಿ ಮೆರವಣಿಗೆಯುದ್ದಕ್ಕೂ ಮಹೇಂದ್ರನ ಜೊತೆ ಗಾಂಭೀರ್ಯದಿಂದ ಹೆಜ್ಜೆ ಹಾಕಿದವು. ಜಂಬೂ ಸವಾರಿಯು ತಾಲ್ಲೂಕಿನ ಕಿರಂಗೂರು, ಬಾಬುರಾಯನಕೊಪ್ಪಲು, ಬೆಂಗಳೂರು–ಮೈಸೂರು ಹೆದ್ದಾರಿ, ಕುವೆಂಪು ವೃತ್ತ, ಪುರಸಭೆ ಕಚೇರಿ ವೃತ್ತ, ಮುಖ್ಯ ಬೀದಿ, ಅಂಬೇಡ್ಕರ್ ವೃತ್ತ ಮಾರ್ಗದಲ್ಲಿ 4 ಕಿ.ಮೀ.ದೂರ ಸಾಗಿತು.

ಆಕರ್ಷಕ ಜನಪದ ಕಲಾ ತಂಡಗಳು ಹಾಗೂ ಸ್ತಬ್ಧಚಿತ್ರಗಳು ಜಂಬೂ ಸವಾರಿಯ ಜತೆ ಸಾಗಿದವು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಪಟ್ಟಣ ಮತ್ತು ಆಸುಪಾಸಿನ ಗ್ರಾಮಗಳ ಸಹಸ್ರಾರು ಮಂದಿ ಅಟ್ಟಣಿಗೆಯ ಮೇಲೆ ಕುಳಿತು ಜಂಬೂ ಸವಾರಿಯನ್ನು ಕಣ್ತುಂಬಿಕೊಂಡರು. ಮೂರು ತಾಸುಗಳ ಕಾಲ ನಡೆದ ಜಂಬೂ ಸವಾರಿ ಮೆರವಣಿಗೆ ಸಂಜೆ 6.40ಕ್ಕೆ ಶ್ರೀರಂಗನಾಥಸ್ವಾಮಿ ದೇವಾಲಯ ಮೈದಾನ ತಲುಪಿತು.

ನಂತರ ಪ್ರಧಾನ ವೇದಿಕೆಯಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅವರು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಶಾಸಕರಾದ ರಮೇಶ ಬಂಡಿಸಿದ್ದೇಗೌಡ, ಪಿ. ರವಿಕುಮಾರ್, ಮಾಜಿ ಶಾಸಕಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಕುಮಾರ ಪುಷ್ಪಾರ್ಚನೆ ಮಾಡಿದರು. ಜ್ಯೋತಿಷಿ ಭಾನುಪ್ರಕಾಶ್ ಶರ್ಮಾ ನೇತೃತ್ವದ ವೈದಿಕರ ತಂಡ 'ಬನ್ನಿಪೂಜೆ' ನೆರವೇರಿಸಿತು.



ಶ್ರೀರಂಗಪಟ್ಟಣದಲ್ಲಿ ಗುರುವಾರ ದಸರಾ ಉತ್ಸವ ಆರಂಭವಾಗಿದ್ದು, ಮೊದಲ ದಿನ ನಡೆದ ಜಂಬೂಸವಾರಿಯನ್ನು ಸಹಸ್ರಾರು ಮಂದಿ ಕಣ್ತುಂಬಿಕೊಂಡರು

ಕೆಆರ್‌ಎಸ್‌ಗೆ ಉಚಿತ ಪ್ರವೇಶ

ಮಂಡ್ಯ: ಶ್ರೀರಂಗಪಟ್ಟಣ ದಸರಾ ಮತ್ತು ಕಾವೇರಿ ಆರತಿ ಕಾರ್ಯಕ್ರಮದ ಅಂಗವಾಗಿ ಸೆ.26ರಿಂದ ಅ. 2ರವರೆಗೆ ಕೆಆರ್‌ಎಸ್ ಬೃಂದಾವನಕ್ಕೆ ಬರುವ ಸಾರ್ವಜನಿಕರ ವಾಹನಕ್ಕೆ ಟೋಲ್ ಹಾಗೂ ಬೃಂದಾವನ ವೀಕ್ಷಣೆಗೆ ಪ್ರವೇಶ ಶುಲ್ಕ ಇರುವುದಿಲ್ಲ ಎಂದು ಶ್ರೀರಂಗಪಟ್ಟಣ ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದ್ದಾರೆ.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period **October to December - 2025.**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH & PV Print waste & unsolds (Voucher & Office copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH, PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH, PV, Sudha & Mayura	8	1.8	0.6	1	2	1	1
DH, PV, Sudha & Mayura Reel wrappers / Miscellaneous sweep / Bale pattie waste	6	2	0.9	1.2	1.2	0.9	0.9
Sudha & Mayura Print waste & unsolds - Magazine	1	0.4	0.9	0.4	0.6	0.9	0.05
Miscellaneous Tissue/Mixed White waste / Carton boxs	2	0.2	0.3	0.4	0.2	0.5	0.2

For clarification, Contact the Procurement Head at **45557340/ Mobile No; 9900042650.** Sealed Quotes/Tenders/mail may be addressed to Procurement Head **babu.v@printersmysore.co.in, venu.tl@printersmysore.co.in** and sent to the above address within 7 days from the date of this advertisement.

ಶುಕ್ರವಾರ • ಸೆಪ್ಟೆಂಬರ್ 26, 2025
ಪ್ರಜಾವಾಣಿ

ಚಿಟಿಕೆ ಸುದ್ದಿ

ಸಿಪಿಐ ಪ್ರಧಾನ ಕಾರ್ಯದರ್ಶಿಯಾಗಿ ಡಿ.ರಾಜಾ ಪುನರಾಯ್ಕೆ

ನವದೆಹಲಿ: ಸಿಪಿಐ ಪ್ರಧಾನ ಕಾರ್ಯದರ್ಶಿಯಾಗಿ ಡಿ.ರಾಜಾ ಅವರು ಮೂರನೇ ಬಾರಿಗೆ ಆಯ್ಕೆಯಾದರು.

ಚಂಡೀಗಢದಲ್ಲಿ ಬುಧವಾರ ನಡೆದ ಪಕ್ಷದ ತ್ರೈವಾರ್ಷಿಕ ರಾಷ್ಟ್ರೀಯ ಸಮ್ಮೇಳನದಲ್ಲಿ ಈ ಆಯ್ಕೆ ನಡೆಯಿತು.

ಕೇರಳದ ಜೊತೆಗೆ ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶದ ನಾಯಕರು ರಾಜಾ ಅವರ ಮುಂದುವರಿಕೆಯನ್ನು ವಿರೋಧಿಸಿದರು. ಆದರೆ, ಅವರನ್ನು ಉತ್ತರ ಭಾರತದ ನಾಯಕರು ಬೆಂಬಲಿಸಿದರು.

'ಜುಬಿನ್ ಸಾವು: ಎಸ್ಐಟಿ ವಿಫಲವಾದರೆ ಪ್ರಕರಣ ಸಿಬಿಐಗೆ'

ಗುವಾಹಟಿ (ಪಿಟಿಐ): 'ಗಾಯಕ ಜುಬಿನ್ ಗರ್ಗ್ ಅವರ ಸಾವಿನ ಪ್ರಕರಣದಲ್ಲಿ, ಎಸ್ಐಟಿಯ ತನಿಖೆ ಯಾವುದೇ ಹಂತದಲ್ಲಿ ತೃಪ್ತಿಕರವಲ್ಲ ಎಂದು ಕಂಡು ಬಂದರೆ, ಸರ್ಕಾರ ತನಿಖೆಯನ್ನು ಸಿಬಿಐಗೆ ಶಿಫಾರಸು ಮಾಡುತ್ತದೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಗುರುವಾರ ಹೇಳಿದ್ದಾರೆ.

ಎಸ್ಐಟಿ ಬಗ್ಗೆ ನಂಬಿಕೆ ಇಡುವಂತೆ ಕೇಳಿಕೊಂಡ ಸಿ.ಎಂ, ಸಾಮಾಜಿಕ ಮಾಧ್ಯಮಗಳಲ್ಲಿ ವದಂತಿಗಳನ್ನು ಹರಡಿದರೆ, ಅದರಿಂದ ತನಿಖೆಗೆ ಅಡ್ಡಿಯಾಗುತ್ತದೆ' ಎಂದಿದ್ದಾರೆ.

ಸಂಘರ್ಷ: ಲಡಾಖ್‌ನಲ್ಲಿ ಕರ್ಫ್ಯೂ

ರಾಜ್ಯದ ಸ್ಥಾನಮಾನಕ್ಕಾಗಿ ಎಲ್ಎಬಿ, ಕೆಡಿಎ ಪ್ರತಿಭಟನೆ ವೇಳೆ ಹಿಂಸಾಚಾರ

ಲಡಾಖ್‌ನಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಗಾಯಗೊಂಡವರು ಲೇಹ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ — ಪಿಟಿಐ ಚಿತ್ರ

ಲೇಹ್ (ಪಿಟಿಐ): ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಲೇಹ್‌ನಲ್ಲಿ ನಡೆಯುತ್ತಿದ್ದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ ಬೆನ್ನಲ್ಲೇ ಗುರುವಾರ ಕರ್ಫ್ಯೂ ಜಾರಿಗೊಳಿಸಲಾಗಿದೆ.

ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಬುಧವಾರ ಲೇಹ್ ಅಪೆಕ್ಸ್ ಬಾಡಿ (ಎಲ್ಎಬಿ) ಬಂದ್‌ಗೆ ಕರೆ ನೀಡಿತ್ತು. ಈ ವೇಳೆ ಪೊಲೀಸರು ಮತ್ತು ಪ್ರತಿಭಟನಕಾರರ ಮಧ್ಯೆ ಸಂಘರ್ಷ ಉಲ್ಬಣಗೊಂಡು, ನಾಲ್ವರು ಮೃತಪಟ್ಟು, 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಘಟನೆಗೆ ಸಂಬಂಧಿಸಿದಂತೆ ಪೊಲೀಸರು 50 ಜನರನ್ನು ಬಂಧಿಸಿದ್ದಾರೆ.

ಕಾರ್ಗಿಲ್ ಪ್ರಜಾಸತ್ತಾತ್ಮಕ ಒಕ್ಕೂಟವೂ (ಕೆಡಿಎ) ಬಂದ್‌ಗೆ ಕರೆ ನೀಡಿದ್ದರಿಂದ ಕಾರ್ಗಿಲ್, ಲೇಹ್, ಜಾಂಗ್‌ಸ್ಕರ್, ನುಬ್ರಾ, ಪದಮ್, ಚಾಂಗ್‌ತಾಂಗ್, ಡ್ರಾಸ್, ಲಾಮಾಯುರು ಪ್ರದೇಶಗಳಲ್ಲಿ ಪೊಲೀಸರು ಗುರುವಾರ ಬಿಗಿ ಭದ್ರತೆ ಕೈಗೊಂಡಿದ್ದರು. 'ಕರ್ಫ್ಯೂ ಜಾರಿಗೊಳಿಸಿರುವ ಪ್ರದೇಶಗಳಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಅಹಿತಕರ ಘಟನೆಗಳು ವರದಿಯಾಗಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ತೆಸೆರಿಂಗ್ ಆಂಗ್ಚುಕ್ (72) ಮತ್ತು ತಾಶಿ ಡೊಲ್ಮಾ (60) ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದೇ, ಬುಧವಾರದ ಪ್ರತಿಭಟನೆಗೆ ಇದು ತಕ್ಷಣದ ಪ್ರಚೋದನೆಯಾಗಿರಬಹುದು' ಎಂದು ವಾಂಗ್ಚುಕ್ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

ಲಡಾಖ್‌ನ ಹಿಂಸಾಚಾರವು ಬಿಜೆಪಿಯ ಸ್ವಯಂ ಸೃಷ್ಟಿ ಎಂದು ಕಾಂಗ್ರೆಸ್ ಆರೋಪಿಸಿದೆ. 'ಲಡಾಖ್‌ನ ಜನರ ಘನತೆ ಮತ್ತು ಅವರ ಅಸ್ಮಿತೆಗಾಗಿ ರಾಜ್ಯ ಸ್ಥಾನಮಾನದ ಬೇಡಿಕೆಯು ನ್ಯಾಯಯುತವಾಗಿದೆ' ಎಂದಿದೆ.

'ಶಾಂತಿಯುತ ಪ್ರತಿಭಟನೆ ನಡೆಯುತ್ತಿದ್ದ ಸ್ಥಳದಲ್ಲಿ ಹಿಂಸಾಚಾರ ಭುಗಿಲೇಳುವ ವಾತಾವರಣ ಸೃಷ್ಟಿಯಾಗಲು ಕೇಂದ್ರವೇ ಹೊಣೆ' ಎಂದು ಸಿಪಿಎಂ ಹೇಳಿದೆ.

> ಲಡಾಖ್‌ನ ಹಿಂಸಾಚಾರವು ಪಿತೂರಿಯ ಭಾಗ. ಇದು ಸ್ವಯಂಪ್ರೇರಿತ ಅಲ್ಲ. ಹೆಚ್ಚಿನ ಸಾವು–ನೋವು ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ಕರ್ಫ್ಯೂ ಜಾರಿಗೊಳಿಸಿದ್ದೇವೆ
> **ಕವೀಂದರ್ ಗುಪ್ತಾ,** ಲೆಫ್ಟಿನೆಂಟ್ ಗವರ್ನರ್

> ಹಿಂಸಾಚಾರವು ನಮ್ಮ ಉದ್ದೇಶಕ್ಕೆ ಹಾನಿ ಉಂಟುಮಾಡುತ್ತದೆ, ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ಲಡಾಖ್ ಮತ್ತು ದೇಶದಲ್ಲಿ ಅಸ್ಥಿರತೆ ನಮಗೆ ಬೇಡ
> **ಸೋನಮ್ ವಾಂಗ್ಚುಕ್,** ಪರಿಸರ ಹೋರಾಟಗಾರ

ಸಿಬಿಐ ತನಿಖೆ: ವಾಂಗ್ಚುಕ್ ಸ್ಥಾಪಿಸಿರುವ 'ಎಚ್ಐಎಲ್' ಸಂಸ್ಥೆಯು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯನ್ನು (ಎಫ್‌ಸಿಆರ್ಎ) ಉಲ್ಲಂಘಿಸಿದೆಯೇ ಎನ್ನುವುದರ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ. ಆದರೆ, ಇದುವರೆಗೆ ಯಾವುದೇ ಎಫ್ಐಆರ್ ದಾಖಲಾಗಿಲ್ಲ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಕಿರುಕುಳ ನಿಲ್ಲಿಸಿ': 'ಲಡಾಖ್‌ನ ಜನರ ಮೇಲಿನ ಕಿರುಕುಳವನ್ನು ನಿಲ್ಲಿಸಬೇಕು' ಎಂದು ಕಾರ್ಗಿಲ್ ಪ್ರಜಾಸತ್ತಾತ್ಮಕ ಒಕ್ಕೂಟ ಒತ್ತಾಯಿಸಿದೆ.

ಪ್ರತಿಭಟನಕಾರರ ಮೇಲೆ ಬುಧವಾರ ಗುಂಡು ಹಾರಿಸಲು ಆದೇಶ ನೀಡಿದ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೆಡಿಎ ಅಧ್ಯಕ್ಷ ಅಸ್ಗರ್ ಅಲಿ ಕರ್ಬಾಲಿ ಆಗ್ರಹಿಸಿದ್ದಾರೆ.

ಪ್ರಚೋದನಕಾರಿ ಹೇಳಿಕೆ: ವಿದೇಶಿ ಕೈವಾಡ – ಕೇಂದ್ರ ಆರೋಪ

ವಾಂಗ್ಚುಕ್ ಅವರ 'ಪ್ರಚೋದನಕಾರಿ ಹೇಳಿಕೆ'ಯಿಂದ ಹಿಂಸಾಚಾರ ನಡೆದಿದೆ ಎಂದು ಕೇಂದ್ರ ಸರ್ಕಾರ ಆರೋಪಿಸಿದೆ. ಸರ್ಕಾರದ ಪ್ರತಿನಿಧಿಗಳು ಮತ್ತು ಲಡಾಖ್ ಗುಂಪಿನ ನಡುವೆ ನಡೆಯುತ್ತಿರುವ ಮಾತುಕತೆಯಲ್ಲಿ ಪ್ರಗತಿ ಕಂಡುಬಂದಿದ್ದು, ಇದರಿಂದ ಕೆಲವು 'ರಾಜಕೀಯ ಪ್ರೇರಿತ' ವ್ಯಕ್ತಿಗಳಿಗೆ ಅಸಂತೋಷವಾಗಿದೆ ಎಂದು ಕೇಂದ್ರ ಸರ್ಕಾರವು ಹೇಳಿದೆ.

ಬುಧವಾರ ಪ್ರತಿಭಟನೆಯಲ್ಲಿ ಗಾಯಗೊಂಡವರಲ್ಲಿ ಮೂವರು ನೇಪಾಳದವರು. ಹಿಂಸಾಚಾರದಲ್ಲಿ ವಿದೇಶಿ ಕೈವಾಡದ ಸಾಧ್ಯತೆ ಕುರಿತೂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಅ.6ರಂದು ಸಭೆ

'ಎಲ್‌ಡಿಎ' ಮತ್ತು 'ಕೆಡಿಎ' ಲಡಾಖ್‌ಗೆ ರಾಜ್ಯದ ಸ್ಥಾನಮಾನ ಮತ್ತು ಇದನ್ನು ಸಂವಿಧಾನದ 6ನೇ ಪರಿಚ್ಛೇದಕ್ಕೆ ಸೇರಿಸಲು ನಾಲ್ಕು ವರ್ಷಗಳಿಂದ ಒತ್ತಾಯಿಸುತ್ತಿವೆ. ಈಗಾಗಲೇ ಕೇಂದ್ರ ಸರ್ಕಾರದೊಂದಿಗೆ ಹಲವು ಸುತ್ತಿನ ಮಾತುಕತೆ ನಡೆದಿದೆ. ಮುಂದಿನ ಸುತ್ತಿನ ಮಾತುಕತೆ ಅಕ್ಟೋಬರ್ 6ರಂದು ನಿಗದಿಯಾಗಿದೆ.

'ಲಡಾಖ್‌ನ ಜನರಿಗೆ ಸಾಂವಿಧಾನಿಕ ರಕ್ಷಣೆ ಒದಗಿಸುವ ಮೂಲಕ ಅವರ ಆಶೋತ್ತರಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ' ಎಂದು ಗೃಹ ಸಚಿವಾಲಯ ಪುನರುಚ್ಚರಿಸಿದೆ.

ಸುದ್ದಿ 2 ನಿಮಿಷ

ಕಸ್ಟಡಿ ಸಾವು: ಮಧ್ಯಪ್ರದೇಶ ಸರ್ಕಾರ ಮತ್ತು ಸಿಬಿಐಗೆ 'ಸುಪ್ರೀಂ' ತಪರಾಕಿ

ನವದೆಹಲಿ (ಪಿಟಿಐ): ಕಸ್ಟಡಿ ಸಾವು ಪ್ರಕರಣದ ಆರೋಪಿಗಳಾಗಿ ತಲೆಮರೆಸಿಕೊಂಡಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸುವಲ್ಲಿ ವಿಳಂಬ ಮಾಡಿದ್ದಕ್ಕಾಗಿ ಮಧ್ಯಪ್ರದೇಶ ಸರ್ಕಾರ ಮತ್ತು ಸಿಬಿಐಯನ್ನು ಸುಪ್ರೀಂಕೋರ್ಟ್ ತರಾಟೆಗೆ ತೆಗೆದುಕೊಂಡಿದ್ದು, ನ್ಯಾಯಾಂಗ ನಿಂದನೆ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದೆ.

ಆರೋಪಿ ಪೊಲೀಸ್ ಅಧಿಕಾರಿಗಳು ಏಪ್ರಿಲ್‌ನಿಂದ ತಲೆಮರೆಸಿಕೊಂಡಿದ್ದರೂ ಅವರನ್ನು ಅಮಾನತು ಮಾಡಿಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರ ಪೀಠವು ಹೇಳಿದೆ. ಸ್ಥಳೀಯ ಪೊಲೀಸರು ತನಿಖೆ ಮೇಲೆ ಪ್ರಭಾವ ಬೀರುವ ಜೊತೆಗೆ, ಪ್ರಕರಣ ಮುಚ್ಚಿಹಾಕಲು ಯತ್ನಿಸಿದರು ಎಂದಿದೆ.

ಪೊಲೀಸ್ ಕಸ್ಟಡಿಯಲ್ಲಿ ಮೃತಪಟ್ಟ 24 ವರ್ಷದ ಸಂತ್ರಸ್ತ ವ್ಯಕ್ತಿಯ ತಾಯಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಪ್ರಕರಣವನ್ನು ಮಧ್ಯಪ್ರದೇಶ ಪೊಲೀಸರಿಂದ ಸಿಬಿಐಗೆ ವರ್ಗಾಯಿಸುವಂತೆ ಮೇ 15ಕ್ಕೆ ಆದೇಶ ನೀಡಲಾಗಿದ್ದರೂ, ಅದನ್ನು ಪಾಲಿಸದೆ ನ್ಯಾಯಾಂಗ ನಿಂದನೆ ಕೃತ್ಯ ಎಸಗಲಾಗಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿತ್ತು.

ಸಿಬಿಐ ಪರ ವಕೀಲರು ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಬುಧವಾರ ಅಮಾನತುಗೊಳಿಸಲಾಗಿದೆ ಎಂದು ಪೀಠಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೋರ್ಟ್, 'ಅವರು ಏಪ್ರಿಲ್‌ನಿಂದ ತಲೆಮರೆಸಿಕೊಂಡಿದ್ದಾರೆ ಎಂದು ನೀವು ಹೇಳಿದ್ದೀರಿ. ಆದರೆ ಬುಧವಾರ ಅಮಾನತು ಮಾಡಿದ್ದೀರಿ. ಇದರ ಅರ್ಥ ನೀವು ಅವರನ್ನು ರಕ್ಷಣೆ ಮಾಡುತ್ತಿದ್ದೀರಿ. ಇದು ನಿಜವಾಗಿಯೂ ನ್ಯಾಯಾಂಗ ನಿಂದನೆಯಾಗಿದೆ' ಎಂದಿದೆ.

ಅಂಚೆ ಮತಪತ್ರ ಎಣಿಕೆ ಸುಗಮಕ್ಕೆ ಕ್ರಮ: ಆಯೋಗ

ನವದೆಹಲಿ: ಅಂಚೆ ಮತಪತ್ರಗಳ ಎಣಿಕೆ ಪೂರ್ಣಗೊಂಡ ಬಳಿಕವಷ್ಟೇ ಇವಿಎಂ/ವಿವಿಪ್ಯಾಟ್‌ನ ಅಂತಿಮ ಸುತ್ತಿಗೂ ಮುಂಚಿನ ಸುತ್ತಿನ ಮತ ಎಣಿಕೆ ಪ್ರಕ್ರಿಯೆ ನಡೆಯಬೇಕು ಎಂದು ಚುನಾವಣಾ ಆಯೋಗ ಹೇಳಿದೆ.

ಆಯೋಗದ ಈ ಹೊಸ ನಿರ್ಧಾರವು ಬಿಹಾರ ವಿಧಾನಸಭಾ ಚುನಾವಣೆಯಿಂದ ಜಾರಿಗೆ ಬರಲಿದೆ.

ಅಂಚೆ ಮತಪತ್ರಗಳ ಎಣಿಕೆ ಪ್ರಕ್ರಿಯೆಯನ್ನು ಸುಗಮಗೊಳಿಸುವ ಉದ್ದೇಶದಿಂದ ಈ ಕ್ರಮ ತೆಗೆದುಕೊಂಡಿರುವುದಾಗಿ ಅದು ಹೇಳಿದೆ.

'ಅಂಚೆ ಮತಪತ್ರಗಳ ಎಣಿಕೆಯ ಹಂತವನ್ನು ಲೆಕ್ಕಿಸದೆ ಇವಿಎಂ ಎಣಿಕೆ ಮುಂದುವರಿಯಬಹುದು' ಎಂದು 2019ರ ಆದೇಶದಲ್ಲಿ ಹೇಳಲಾಗಿತ್ತು. ಈ ಆದೇಶವನ್ನು ಹಿಂಪಡೆದಿರುವ ಆಯೋಗ, 'ಅಂಚೆ ಮತಪತ್ರಗಳ ಎಣಿಕ ಪೂರ್ಣಗೊಂಡ ಬಳವಷ್ಟೇ ಇವಿಎಂ/ವಿವಿಪ್ಯಾಟ್‌ನ ಕೊನೆಯ ಸುತ್ತಿಗೂ ಹಿಂದಿನ ಸುತ್ತಿನ ಮತ ಎಣಿಕೆ ನಡೆಸಲಾಗುವುದು' ಎಂದು ಸ್ಪಷ್ಟಪಡಿಸಿದೆ.

ಇವಿಎಂ ಎಣಿಕೆ ಪೂರ್ಣಗೊಳ್ಳುವ ಮೊದಲು ಅಂಚೆ ಮತಪತ್ರಗಳ ಎಣಿಕೆಯನ್ನು ಪೂರ್ಣಗೊಳಿಸಬೇಕು ಎಂಬುದು ವಿರೋಧ ಪಕ್ಷಗಳ ದೀರ್ಘಕಾಲದ ಬೇಡಿಕೆಯಾಗಿತ್ತು. ಅಂಗವಿಕಲರು ಮತ್ತು 85 ವರ್ಷ ದಾಟಿದ ಹಿರಿಯ ನಾಗರಿಕರ ಮತದಾನಕ್ಕಾಗಿ ಆಯೋಗ ಇತ್ತೀಚೆಗೆ ತೆಗೆದುಕೊಂಡ ಕ್ರಮಗಳಿಂದಾಗಿ ಅಂಚೆ ಮತಪತ್ರಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡು ಬಂದಿದೆ. ಹೀಗಾಗಿ ಆಯೋಗ ಈ ಕುರಿತು ನಿರ್ಧಾರ ತೆಗೆದುಕೊಂಡಿದೆ.

'ವಸತಿಗೃಹಕ್ಕೆ ಭೇಟಿ ನೀಡುವಂತೆ ಒತ್ತಾಯಿಸಿದ್ದ ಸ್ವಾಮೀಜಿ'

ಸ್ವಾಮಿ ಚೈತನ್ಯಾನಂದ ವಿರುದ್ಧದ ಎಫ್ಐಆರ್‌ನಲ್ಲಿ ಆರೋಪ

ನವದೆಹಲಿ (ಪಿಟಿಐ): 'ಸ್ವಯಂ ಘೋಷಿತ ದೇವಮಾನವ ಸ್ವಾಮಿ ಚೈತನ್ಯಾನಂದ ಸರಸ್ವತಿ ಅವರು ತಮ್ಮ ವಸತಿಗೃಹಕ್ಕೆ ತಡರಾತ್ರಿ ವೇಳೆ ಭೇಟಿ ನೀಡುವಂತೆ ವಿದ್ಯಾರ್ಥಿನಿಯರನ್ನು ಒತ್ತಾಯಿಸುತ್ತಿದ್ದರು' ಎಂದು ಶ್ರೀ ಶಾರದಾ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜ್‌ಮೆಂಟ್‌ನ ವಿದ್ಯಾರ್ಥಿನಿಯರು ದಾಖಲಿಸಿದ ಎಫ್ಐಆರ್‌ನಲ್ಲಿ ವಿವರಿಸಲಾಗಿದೆ.

ಸ್ವಾಮೀಜಿಯಿಂದ ಲೈಂಗಿಕ ಕಿರುಕುಳ ಹಾಗೂ ಬೆದರಿಕೆ ಕುರಿತು ಆಡಳಿತ ಮಂಡಳಿಯು ವರ್ಚುವಲ್ ಸಂವಾದ ನಡೆಸಿದ ವೇಳೆ 30ಕ್ಕೂ ಅಧಿಕ ವಿದ್ಯಾರ್ಥಿನಿಯರು ನೋವು ತೋಡಿಕೊಂಡ ಬೆನ್ನಲ್ಲೇ ದೂರು ದಾಖಲಿಸಿದೆ.

'ಲೈಂಗಿಕವಾಗಿ ಸಹಕರಿಸದಿದ್ದರೆ, ಕಾಲೇಜಿನಿಂದ ಅಮಾನತು ಮಾಡಲಾಗುವುದು ಹಾಗೂ ಪದವಿಯನ್ನು ತಡೆಹಿಡಿಯಲಾಗುವುದು ಎಂದು ವಿದ್ಯಾರ್ಥಿನಿಯರಿಗೆ ಸ್ವಾಮೀಜಿ ಬೆದರಿಕೆ ಹಾಕಿದ್ದರು' ಎಂದು ಎಫ್ಐಆರ್ ಉಲ್ಲೇಖಿಸಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆರ್ಥಿಕವಾಗಿ ತೀವ್ರ ಹಿಂದುಳಿದ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿನಿಯರು ತಡರಾತ್ರಿ ವೇಳೆ ಸ್ವಾಮೀಜಿಯ ವಸತಿಗೃಹಕ್ಕೆ ತೆರಳಬೇಕಿತ್ತು. ವಿದ್ಯಾರ್ಥಿನಿಯೊಬ್ಬಳ ಹೆಸರನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಬದಲಾಯಿಸಲು ಬಲವಂತಪಡಿಸಲಾಗಿತ್ತು. ಸಾಕ್ಷ್ಯಗಳನ್ನು ನಾಶಪಡಿಸುವ ಉದ್ದೇಶದಿಂದ ಮೊಬೈಲ್‌ನಲ್ಲಿದ್ದ ಸಂದೇಶಗಳನ್ನು ಅಳಿಸಲು ಒತ್ತಾಯಿಸಲಾಗಿತ್ತು' ಎಂದು ದೂರಿನಲ್ಲಿ ತಿಳಿಸಲಾಗಿದೆ.

ವಸಂತ್‌ಕುಂಜ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ತನಿಖೆಗಾಗಿ ಹಲವು ತಂಡಗಳನ್ನು ರಚಿಸಲಾಗಿದೆ. ಆರೋಪಿಯು ವಿದೇಶಕ್ಕೆ ಪರಾರಿಯಾಗುವ ಶಂಕೆಯಿಂದ, ಆರೋಪಿಯ ವಿರುದ್ಧ ಈಗಾಗಲೇ ಲುಕ್‌ಔಟ್ ನೋಟಿಸ್ ಜಾರಿಗೊಳಿಸಲಾಗಿದೆ' ಎಂದು ತಿಳಿಸಿದ್ದಾರೆ.

'ವಿದ್ಯಾರ್ಥಿಗಳು ಸುರಕ್ಷಿತ'

ಸ್ವಾಮಿ ಚೈತನ್ಯಾನಂದ ಸರಸ್ವತಿ ಕುರಿತಂತೆ ಕೇಳಿಬಂದಿರುವ ಆರೋಪ ಹಾಗೂ ಸಂಸ್ಥೆಯು ತೆಗೆದುಕೊಂಡಿರುವ ಕ್ರಮಗಳ ಕುರಿತಂತೆ ದಿ ಶಾರದಾ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜ್‌ಮೆಂಟ್–ರಿಸರ್ಚ್ ಸಂಸ್ಥೆಯು ನಾಲ್ಕು ಪುಟಗಳ ವಿಸ್ತೃತವಾದ ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆಗೊಳಿಸಿದೆ.

'ಅವರ ವಿರುದ್ಧ ಕೇಳಿಬಂದ ಕಿರುಕುಳ, ಹಣಕಾಸು ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ತ್ವರಿತವಾಗಿ ಕ್ರಮ ಕೈಗೊಂಡಿದ್ದು, ವಿದ್ಯಾರ್ಥಿಗಳ ಹಿತರಕ್ಷಿಸಲು ಕ್ರಮ ಕೈಗೊಳ್ಳಲಾಗಿದೆ. ಸ್ವತಂತ್ರ ತನಿಖೆ ವೇಳೆ ಸ್ವಾಮಿ ಚೈತನ್ಯಾನಂದ ಅವರಿಂದ ಹಲವು ಅಕ್ರಮಗಳು ನಡೆದಿರುವುದು ಗೊತ್ತಾಗಿದೆ. ಇದರ ಆಧಾರದ ಮೇಲೆ ಇದೇ ಜುಲೈ 19ರಂದೇ ಆಡಳಿತ ಮಂಡಳಿಯು ಚೈತನ್ಯಾನಂದ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, 300 ಪುಟಗಳ ದಾಖಲೆಗಳನ್ನು ಸಲ್ಲಿಸಿದೆ' ಎಂದಿದೆ.

'ಚೈತನ್ಯಾನಂದ ಅವರು ವಿದ್ಯಾರ್ಥಿನಿಯರಿಗೆ ನೀಡಿದ ಕಿರುಕುಳದ ಕುರಿತು ಶಿಕ್ಷಣ ನಿರ್ದೇಶನಾಲಯದ ಗ್ರೂಪ್ ಕ್ಯಾಪ್ಟನ್ ಅವರು ಆಗಸ್ಟ್ 1ರಂದು ಸಂಸ್ಥೆಗೆ ಇ–ಮೇಲ್ ಮೂಲಕ ತಿಳಿಸಿದ್ದರು. ವಿದ್ಯಾರ್ಥಿನಿಯರಿಗೆ ಅವರು ಕಳುಹಿಸಿದ್ದ ವಾಟ್ಸ್ಆ್ಯಪ್ ಸಂದೇಶ, ಇನ್ನಿತರ ದಾಖಲೆಗಳನ್ನು ಇ–ಮೇಲ್ ಮೂಲಕ ರವಾನಿಸಿದ್ದರು. ಇದರ ಆಧಾರದ ಮೇಲೆ ಆಡಳಿತ ಮಂಡಳಿಯು ಸಂತ್ರಸ್ತ ವಿದ್ಯಾರ್ಥಿನಿಯರ ಜೊತೆಗೆ ವರ್ಚುವಲ್ ಸಂವಾದದ ಮೂಲಕ ಮಾಹಿತಿ ಸಂಗ್ರಹಿಸಿ, ಎಲ್ಲ ವಿಚಾರಗಳನ್ನು ಪೊಲೀಸರಿಗೆ ನೀಡಿದೆ. ಚೈತನ್ಯಾನಂದ ಅವರಿಗೆ ನೀಡಲಾಗಿದ್ದ ಪವರ್ ಆಫ್ ಅಟಾರ್ನಿಯನ್ನು ರದ್ದುಗೊಳಿಸಲಾಗಿದೆ' ಎಂದು ಹೇಳಿದೆ.

'ಸ್ವಾಮಿ ಚೈತನ್ಯಾನಂದ ಅವರು ಶೃಂಗೇರಿ ಶಾರದಾ ಪೀಠದ ಸನ್ಯಾಸಿಯಾಗಿರಲಿಲ್ಲ. ಆದಿ ಶಂಕರಾಚಾರ್ಯರ ಪರಂಪರೆಯನ್ನೂ ಹೊಂದಿಲ್ಲ' ಎಂದು ಪೀಠವು ಸ್ಪಷ್ಟಪಡಿಸಿದೆ.

'ಅಗ್ನಿ ಪ್ರೈಮ್' ಕ್ಷಿಪಣಿ ಪರೀಕ್ಷೆ ಯಶಸ್ವಿ

'ಅಗ್ನಿ ಪ್ರೈಮ್' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಭಾರತ ಬುಧವಾರ ಯಶಸ್ವಿಯಾಗಿ ನಡೆಸಿತು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 2,000 ಕಿ.ಮೀ ವ್ಯಾಪ್ತಿಯಲ್ಲಿನ ಗುರಿಯನ್ನು ಹೊಡೆದುರುಳಿಸಬಲ್ಲ ಸಾಮರ್ಥ್ಯದ 'ಅಗ್ನಿ ಪ್ರೈಮ್' ಕ್ಷಿಪಣಿಯನ್ನು ರೈಲು ಬೋಗಿಯ ಮೇಲೆ ಅಳವಡಿಸಿದ್ದ ಲಾಂಚರ್‌ನಿಂದ ಉಡಾಯಿಸುವ ಪರೀಕ್ಷಾರ್ಥ ಪ್ರಯೋಗವನ್ನು ಭಾರತ ಬುಧವಾರ ಯಶಸ್ವಿಯಾಗಿ ನಡೆಸಿದೆ.

ದೇಶದಲ್ಲಿ ಇದೇ ಮೊದಲ ಬಾರಿಗೆ ರೈಲು ಬೋಗಿಯ ಮೇಲಿನಿಂದ ಕ್ಷಿಪಣಿ ಉಡಾಯಿಸಲಾಗಿದೆ. ಯಾವುದೇ ಭಾಗಕ್ಕೆ ತ್ವರಿತವಾಗಿ ಕ್ಷಿಪಣಿ ಕೊಂಡೊಯ್ದು, ಉಡ್ಡಯನಕ್ಕೆ ಅನುಕೂಲವಾಗುವಂತೆ ಈ ವ್ಯವಸ್ಥೆಯನ್ನು ರೂಪಿಸಲಾಗಿದೆ.

'ಅಗ್ನಿ ಪ್ರೈಮ್' ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆ ಯಶಸ್ವಿಯಾಗಿರುವ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 'ಈ ಪರೀಕ್ಷೆಯಿಂದ, ರೈಲಿನ ಮೇಲಿಂದ ಕ್ಷಿಪಣಿಯನ್ನು ಉಡಾಯಿಸಬಲ್ಲ ಸಾಮರ್ಥ್ಯವಿರುವ ದೇಶಗಳ ಗುಂಪಿಗೆ ಭಾರತ ಸೇರಿತು' ಎಂದಿದ್ದಾರೆ.

'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಹಾಗೂ ವ್ಯೂಹಾತ್ಮಕ ಪಡೆಗಳ ಕಮಾಂಡ್ (ಎಸ್‌ಎಫ್‌ಸಿ) ಸಹಯೋಗದಲ್ಲಿ ಮಧ್ಯಂತರ ಶ್ರೇಣಿಯ 'ಅಗ್ನಿ ಪ್ರೈಮ್' ಕ್ಷಿಪಣಿಯನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು' ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಪರೀಕ್ಷೆ ನಡೆದ ಸ್ಥಳವನ್ನು ಅದು ಬಹಿರಂಗಪಡಿಸಿಲ್ಲ.

ಅತ್ಯಾಧುನಿಕ ಸಂವಹನ ವ್ಯವಸ್ಥೆ ಹಾಗೂ ರಕ್ಷಣಾ ಕಾರ್ಯವಿಧಾನಗಳು ಸೇರಿದಂತೆ ಕ್ಷಿಪಣಿಯು ಎಲ್ಲಾ ವೈಶಿಷ್ಟ್ಯಗಳನ್ನು ಹೊಂದಿದೆ.

ಗುತ್ತಿಗೆ ಪ್ರದೇಶ: ಗಡಿ ನಿರ್ಧರಿಸಲು ಸಮಿತಿ

ಕರ್ನಾಟಕ, ಆಂಧ್ರಪ್ರದೇಶ ಗಡಿಯಲ್ಲಿ ಅಕ್ರಮ ಗಣಿಗಾರಿಕೆ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಮತ್ತು ಆಂಧ್ರಪ್ರದೇಶ ಗಡಿಯಲ್ಲಿ ಗಣಿಗಾರಿಕೆಗೆ ಗುತ್ತಿಗೆ ನೀಡಿರುವ ಪ್ರದೇಶ ಹಾಗೂ ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದ ಗಡಿಗಳನ್ನು ಗುರುತಿಸುವುದಕ್ಕಾಗಿ ಸುಪ್ರೀಂ ಕೋರ್ಟ್, ನಿವೃತ್ತ ನ್ಯಾಯಮೂರ್ತಿ ಸುಧಾಂಶು ಧುಲಿಯಾ ನೇತೃತ್ವದ ಸಮಿತಿಯನ್ನು ರಚಿಸಿದೆ.

ಮೂರು ತಿಂಗಳ ಒಳಗಾಗಿ ವರದಿ ಸಲ್ಲಿಸುವಂತೆಯೂ ಸುಪ್ರೀಂ ಕೋರ್ಟ್, ಈ ಸಮಿತಿಗೆ ಸೂಚಿಸಿದೆ.

ಉಭಯ ರಾಜ್ಯಗಳ ಗಡಿ ಭಾಗದಲ್ಲಿ ಎಷ್ಟು ಭೂಪ್ರದೇಶವನ್ನು ಒತ್ತುವರಿ ಮಾಡಲಾಗಿದೆ, ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶವೆಷ್ಟು ಹಾಗೂ ಇತರ ಅಕ್ರಮ ಚಟುವಟಿಕೆಗಳನ್ನು ಈ ಸಮಿತಿ ಕಂಡುಹಿಡಿಯಲಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿಗಳಾದ ಕೆ.ವಿನೋದ ಚಂದ್ರನ್ ಹಾಗೂ ಎನ್.ವಿ.ಅಂಜಾರಿಯಾ ನೇತೃತ್ವದ ಪೀಠವು, ಈ ಕುರಿತು ಆಂಧ್ರಪ್ರದೇಶ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ನೀಡಿದ್ದ ಸಲಹೆ ಪರಿಗಣಿಸಿ, ಈ ಸಮಿತಿಯನ್ನು ರಚಿಸಿದೆ.

ಆಂಧ್ರಪ್ರದೇಶದ ಗಣಿ ಮತ್ತು ಭೂವಿಜ್ಞಾನ ಇಲಾಖೆ ನಿರ್ದೇಶಕ ಹಾಗೂ ಆಯುಕ್ತರು ನೀಡಿದ್ದ ವರದಿಯನ್ನು ವಕೀಲ ಲೂಥ್ರಾ ಅವರು ಸೆಪ್ಟೆಂಬರ್ 18ರಂದು ನಡೆದಿದ್ದ ವಿಚಾರಣೆ ವೇಳೆ ಪೀಠಕ್ಕೆ ಸಲ್ಲಿಸಿ, ಸಮಿತಿ ರಚನೆ ಕುರಿತು ಮನವಿ ಮಾಡಿದ್ದರು.ಈ ಪ್ರಕರಣದಲ್ಲಿ ಪ್ರತಿವಾದಿಗಳಾಗಿರುವ ಓಬುಳಾಪುರಂ ಮೈನಿಂಗ್ ಕಂಪನಿ ಹಾಗೂ ಇತರರು, ಈ ಮನವಿಯನ್ನು ವಿರೋಧಿಸಿದ್ದರು.

ಸಮಿತಿಯು ಅಂತಿಮ ವರದಿ ಸಿದ್ಧಪಡಿಸುವುದಕ್ಕೂ ಮುನ್ನ, ಪ್ರತಿವಾದಿಗಳು ಸೇರಿದಂತೆ ಎಲ್ಲ ಕಕ್ಷಿದಾರರ ಹೇಳಿಕೆಗಳನ್ನು ಪಡೆಯಬೇಕು ಎಂದೂ ಪೀಠ ತಿಳಿಸಿತ್ತು.

ಬಿಹಾರ ಚುನಾವಣೆ: ಪ್ರಧಾನ್‌ಗೆ ಹೊಣೆ

ಧರ್ಮೇಂದ್ರ ಪ್ರಧಾನ್

ನವದೆಹಲಿ (ಪಿಟಿಐ): ಈ ವರ್ಷದ ಅಂತ್ಯದೊಳಗೆ ವಿಧಾನಸಭಾ ಚುನಾವಣೆ ನಡೆಯಲಿರುವ ಬಿಹಾರ ಮತ್ತು ಮುಂದಿನ ವರ್ಷ ಪಶ್ಚಿಮ ಬಂಗಾಳ, ತಮಿಳುನಾಡು ರಾಜ್ಯಗಳಿಗೆ ನಡೆಯುವ ಚುನಾವಣೆಗೆ ಬಿಜೆಪಿಯು ಉಸ್ತುವಾರಿಗಳನ್ನು ಗುರುವಾರ ನೇಮಿಸಿದೆ.

ಬಿಹಾರಕ್ಕೆ ಉಸ್ತುವಾರಿಯಾಗಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ನೇಮಕ ಮಾಡಿದೆ.

ಪಶ್ಚಿಮ ಬಂಗಾಳಕ್ಕೆ ಕೇಂದ್ರ ಸಚಿವ ಭೂಪೇಂದರ್ ಯಾದವ್, ತಮಿಳುನಾಡಿಗೆ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಬೈಜಯಂತ್ ಜಯ್ ಪಾಂಡಾ ಅವರನ್ನು ಉಸ್ತುವಾರಿಯಾಗಿ ನೇಮಕ ಮಾಡಲಾಗಿದೆ.

ವೇಗಿ ಅರುಂಧತಿಗೆ ಗಾಯ; ಮಹಿಳಾ ತಂಡಕ್ಕೆ ಹಿನ್ನಡೆ

ಬೆಂಗಳೂರು: ಭಾರತ ಮಹಿಳಾ ತಂಡದ ವೇಗದ ಬೌಲರ್ ಅರುಂಧತಿ ರೆಡ್ಡಿ ಅವರು ವಿರುದ್ಧ ಗುರುವಾರ ನಡೆದ ಅಭ್ಯಾಸ ಪಂದ್ಯದ ವೇಳೆ ಆಕಸ್ಮಿಕವಾಗಿ ಗಾಯಾಳಾಗಿದ್ದಾರೆ. ಹೀಗಾಗಿ ಐಸಿಸಿ ಮಹಿಳಾ ಏಕದಿನ ವಿಶ್ವ ಕಪ್ ಸನಿಹದಲ್ಲಿರುವಾಗ ಭಾರತ ತಂಡಕ್ಕೆ ಹಿನ್ನಡೆಯಾಗಿದೆ.

ಹೀದರ್ ನೈಟ್ ಅವರನ್ನು ತಮ್ಮದೇ ಬೌಲಿಂಗ್‌ನಲ್ಲಿ ರಿಟರ್ನ್ ಕ್ಯಾಚ್ ಪಡೆಯುವ ಯತ್ನದಲ್ಲಿದ್ದಾಗ ಅವರು ಎಡಗಾಲಿನ ತೀವ್ರ ನೋವಿಗೆ ಒಳಗಾದರು. ಮೈದಾನಕ್ಕೆ ಧಾವಿಸಿದ ವೈದ್ಯರು ಎದ್ದೇಳಲು ನೆರವಾದರು. ಆದರೆ ನಂತರ ವೀಲ್‌ಚೇರ್ ಮೂಲಕ ಅವರನ್ನು ಕ್ರೀಡಾಂಗಣದಿಂದ ಕರೆದೊಯ್ಯಲಾಯಿತು.

ಗುರುವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 153 ರನ್‌ಗಳಿಂದ ಭಾರತ ತಂಡವನ್ನು ಮಣಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 9 ವಿಕೆಟ್‌ಗೆ 340 ರನ್ ಗಳಿಸಿತು. ಭಾರತ 187 ರನ್‌ಗಳಿಗೆ ಹೋರಾಟ ಮುಗಿಸಿತು.

'ವಿಶ್ವಕಪ್‌ಗೆ ಅರುಂದತಿ ಲಭ್ಯತೆಗೆ ಸಂಬಂಧಿಸಿ ಸ್ಪಷ್ಟತೆಗೆ ಕಾಯಲಾಗುತ್ತಿದೆ' ಎಂದು ಐಸಿಸಿ ತಿಳಿಸಿದೆ. ಭಾರತ ಸೆ. 30ರಂದು ಶ್ರೀಲಂಕಾ ವಿರುದ್ಧ ಗುವಾಹಟಿಯಲ್ಲಿ ವಿಶ್ವಕಪ್‌ನ ಉದ್ಘಾಟನಾ ಪಂದ್ಯ ಆಡಲಿದೆ. ಆ ವೇಳೆಗೆ ಚೇತರಿಸಿ ಆಡಲು ಲಭ್ಯರಾಗಬಹುದೆಂಬ ವಿಶ್ವಾಸದಲ್ಲಿ ತಂಡವಿದೆ.

'ಸಿ.ಎಂ. ಕಪ್' ದಸರಾ ಕ್ರೀಡಾಕೂಟ • ಆಶ್ರಿತ್, ನಿಯೋಲ್ ಉತ್ತಮ ಅಥ್ಲೀಟ್ಸ್

ಬೆಂಗಳೂರು ನಗರ ಚಾಂಪಿಯನ್ಸ್

• ಆರ್.ಜಿತೇಂದ್ರ

ಮೈಸೂರಿನಲ್ಲಿ ಗುರುವಾರ ಮುಕ್ತಾಯಗೊಂಡ 'ಸಿ.ಎಂ. ಕಪ್' ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಬೆಂಗಳೂರು ನಗರ ವಿಭಾಗ ತಂಡ ಪ್ರಜಾವಾಣಿ ಚಿತ್ರ/ಅನೂಪ್ ರಾಘ. ಟಿ.

ಮೈಸೂರು: ಅಥ್ಲೆಟಿಕ್ಸ್ ಹಾಗೂ ಗುಂಪು ವಿಭಾಗದ ಕ್ರೀಡೆಗಳೆರೆಡರಲ್ಲೂ ಉತ್ತಮ ಪ್ರದರ್ಶನ ತೋರಿದ ಬೆಂಗಳೂರು ನಗರ ವಿಭಾಗವು 'ಸಿ.ಎಂ. ಕಪ್' ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಸಮಗ್ರ ಚಾಂಪಿಯನ್ ಆಗಿ ಹೊರಹೊಮ್ಮಿತು.

ಬೆಂಗಳೂರು ನಗರ ವಿಭಾಗವು ಒಟ್ಟು 865 ಅಂಕಗಳೊಂದಿಗೆ ಈ ಸಾಧನೆ ಮಾಡಿತು. ಮೈಸೂರು ವಿಭಾಗ ತಂಡವು 597 ಅಂಕಗಳೊಂದಿಗೆ ರನ್ನರ್ ಅಪ್ ಹಾಗೂ ಬೆಳಗಾವಿ ವಿಭಾಗವು 493 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆಯಿತು. 319 ಅಂಕ ಗಳಿಸಿದ ಬೆಂಗಳೂರು ಗ್ರಾಮಾಂತರ ಹಾಗೂ 104 ಅಂಕದೊಂದಿಗೆ ಕಲಬುರಗಿ ವಿಭಾಗ ತಂಡಗಳು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದವು.

ಆಶ್ರಿತ್, ನಿಯೋಲ್‌ಗೆ ಪ್ರಶಸ್ತಿ: ಅಥ್ಲೆಟಿಕ್ಸ್ ಪುರುಷರ ವಿಭಾಗದಲ್ಲಿ 800 ಮೀ. ಓಟ, 1500 ಮೀ ಓಟದಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದ ಎಂ.ಎಸ್. ಆಶ್ರಿತ್ 1006 ಅಂಕಗಳೊಂದಿಗೆ ವೈಯಕ್ತಿಕ ಚಾಂಪಿಯನ್ ಆದರು. ಮಹಿಳಾ ವಿಭಾಗದಲ್ಲಿ 100 ಮೀ. ಓಟದ ವಿಜೇತೆ ನಿಯೋಲ್ ಅನಾ ಕಾರ್ನೆಲಿಯೊ 991 ಅಂಕಗಳೊಂದಿಗೆ ವೈಯಕ್ತಿಕ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಅಥ್ಲೆಟಿಕ್ಸ್ ಪುರುಷರ ವಿಭಾಗದಲ್ಲಿ 9 ಹಾಗೂ ಮಹಿಳೆಯರ ವಿಭಾಗದಲ್ಲಿ 7 ಸೇರಿದಂತೆ ಒಟ್ಟಾರೆ 16 ಕೂಟ ದಾಖಲೆಗಳು ನಿರ್ಮಾಣ ಆದವು.

ಅಥ್ಲೆಟಿಕ್ಸ್ ಮಹಿಳಾ ವಿಭಾಗದಲ್ಲಿ ಮೈಸೂರು ವನಿತೆಯರು ಒಟ್ಟು 7 ಚಿನ್ನ, 6 ಬೆಳ್ಳಿ ಹಾಗೂ 4 ಕಂಚಿನೊಂದಿಗೆ ಒಟ್ಟಾರೆ 95 ಅಂಕಗಳೊಂದಿಗೆ ಅಗ್ರ ಸ್ಥಾನ ಪಡೆದರು. ಬೆಂಗಳೂರು ನಗರ 5 ಚಿನ್ನ, 4 ಬೆಳ್ಳಿ ಹಾಗೂ 1 ಕಂಚಿನೊಂದಿಗೆ 59 ಅಂಕ ಗಳಿಸಿ ದ್ವಿತೀಯ ಹಾಗೂ ಬೆಳಗಾವಿ 2 ಚಿನ್ನ, 4 ಬೆಳ್ಳಿ, 4 ಕಂಚಿನೊಂದಿಗೆ 50 ಅಂಕ ಸ್ಥಾನ ಪಡೆದು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಅಥ್ಲೆಟಿಕ್ಸ್ ಪುರುಷರ ವಿಭಾಗದಲ್ಲಿ ಬೆಂಗಳೂರು ನಗರ ಸ್ಪರ್ಧಿಗಳು 3 ಚಿನ್ನ, 8 ಬೆಳ್ಳಿ, 4 ಕಂಚಿನೊಂದಿಗೆ 77 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದರೆ, ಬೆಳಗಾವಿ ವಿಭಾಗವು 4 ಚಿನ್ನ, 1 ಬೆಳ್ಳಿ, 8 ಕಂಚಿನೊಂದಿಗೆ ದ್ವಿತೀಯ ಹಾಗೂ ಬೆಂಗಳೂರು ಗ್ರಾಮಾಂತರ ವಿಭಾಗವು 6 ಚಿನ್ನ, 2 ಬೆಳ್ಳಿ ಹಾಗೂ 1 ಕಂಚಿನೊಂದಿಗೆ 56 ಅಂಕ ಗಳಿಸಿ ಮೂರನೇ ಸ್ಥಾನ ಪಡೆಯಿತು.

ಕೊನೆಯ ದಿನದ ಫಲಿತಾಂಶ: ಅಥ್ಲೆಟಿಕ್ಸ್: ಪುರುಷರು: 10 ಕಿ.ಮೀ. ಓಟ: ಆರ್. ಪುರುಷೋತ್ತಮ (ಮೈಸೂರು. ಕಾಲ: 32 ನಿ. 36.46 ಸೆ.)–1, ಟಿ.ಎಸ್. ಸಂದೀಪ್ (ಬೆಂಗಳೂರು)–2, ಸಂಗಮೇಶ್ ಹಳ್ಳಿ (ಬಾಗಲಕೋಟೆ)–3; ಟ್ರಿಪಲ್ ಜಂಪ್: ಜಫರ್‌ಖಾನ್ (ಬೆಳಗಾವಿ. ದೂರ: 15 ಮೀ.)–1, ಯಶಸ್ ಗೌಡ (ಮಂಡ್ಯ)–2, ಜೆ.ಸಿ. ರಮೇಶ್ ನಾಯಕ (ಮೈಸೂರು)–3; 4X400 ಮೀ ರಿಲೆ: ಬೆಂಗಳೂರು ಗ್ರಾಮೀಣ (ಕಾಲ: 3ನಿ.16.84 ಸೆ.)–1, ಬೆಂಗಳೂರು ನಗರ–2, ಬೆಳಗಾವಿ–3. **ಮಹಿಳೆಯರು:** ಟ್ರಿಪಲ್ ಜಂಪ್: ಎಚ್. ಐಶ್ವರ್ಯಾ (ಬೆಳಗಾವಿ. ದೂರ: 11 ಮೀ)–1, ಸ್ಮಿತಾ ಕಾಕತ್ಕರ್ (ಬೆಳಗಾವಿ)–2, ಅಮೂಲ್ಯಾ (ಶಿವಮೊಗ್ಗ)–3; 4X400 ಮೀ. ರಿಲೇ: ಮೈಸೂರು (ಕಾಲ: 4ನಿ. 00.45 ಸೆ)–1, ಬೆಂಗಳೂರು ಗ್ರಾಮಾಂತರ–2.

ದಸರಾ 10ಕೆ ಓಟ 28ರಂದು

ಮೈಸೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಸೆ. 28ರಂದು ನಗರದಲ್ಲಿ 'ಡಿವೈಇಎಸ್ ಮೈಸೂರು ದಸರಾ 10 ಕಿ.ಮೀ. ಓಟ' ಆಯೋಜಿಸಿದೆ.

'15 ವರ್ಷ ಮೇಲ್ಪಟ್ಟವರು ಪಾಲ್ಗೊಳ್ಳಬಹುದಾಗಿದ್ದು, ಉಚಿತ ಪ್ರವೇಶವಿದೆ. ಮುಕ್ತ ವಿಭಾಗ ಹಾಗೂ 45 ವರ್ಷ ಮೇಲ್ಪಟ್ಟವರ ವಿಭಾಗಗಳಲ್ಲಿ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಬಹುಮಾನ ನೀಡಲಾಗುವುದು. ಪ್ರತಿ ವಿಭಾಗದಲ್ಲಿ ಮೊದಲ ಮೂರು ಸ್ಥಾನ ಪಡೆದವರಿಗೆ ಕ್ರಮವಾಗಿ ₹10 ಸಾವಿರ, ₹7 ಸಾವಿರ ಹಾಗೂ ₹5 ಸಾವಿರ ನಗದು ಬಹುಮಾನವಿದೆ. 2,500ಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ' ಎಂದು ಇಲಾಖೆಯ ಆಯುಕ್ತ ಆರ್. ಚೇತನ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಆಸಕ್ತರು ಆನ್‌ಲೈನ್ ಮೂಲಕ ನೋಂದಾಯಿಸುವುದು ಕಡ್ಡಾಯ.

ಮಾಹಿತಿಗೆ ದೂರವಾಣಿ ಸಂಖ್ಯೆ 0821–2564179, 8151993256, 7411763256 ಸಂಪರ್ಕಿಸಬಹುದು.

ಮಹಿಳಾ ಜೂನಿಯರ್ ಹಾಕಿ: ಆಸ್ಟ್ರೇಲಿಯಾ ವಿರುದ್ಧ ಸರಣಿಗೆ ಸಜ್ಜು

ಕೆನ್‌ಬೆರಾ (ಪಿಟಿಐ): ಭಾರತ ಜೂನಿಯರ್ ಮಹಿಳಾ ಹಾಕಿ ತಂಡವು, ಎಫ್‌ಐಎಚ್ ಹಾಕಿ ಮಹಿಳಾ ಜೂನಿಯರ್ ವಿಶ್ವಕಪ್‌ಗೆ ಮುನ್ನ ತಾಲೀಮು ರೂಪದಲ್ಲಿ ಆಸ್ಟ್ರೇಲಿಯಾ ಜೂನಿಯರ್ ತಂಡದ ವಿರುದ್ಧ ಸರಣಿ ಆಡಲಿದೆ. ಇದರ ಮೊದಲ ಪಂದ್ಯ ಶುಕ್ರವಾರ ಇಲ್ಲಿ ನಡೆಯಲಿದೆ.

ಇದೇ 26ರಿಂದ ಅಕ್ಟೋಬರ್ 2ರವರೆಗಿನ ಅವಧಿಯಲ್ಲಿ ಭಾರತ ತಂಡ ಐದು ಪಂದ್ಯಗಳನ್ನು ಆಡಲಿದೆ. ವಿಶ್ವಕಪ್‌ಗೆ ಮುನ್ನ ಯಾವ ಕ್ಷೇತ್ರದಲ್ಲಿ ಸುಧಾರಣೆಯಾಗಬೇಕಿದೆ ಎಂಬುದನ್ನು ಅರಿಯಲು ಈ ಅಭ್ಯಾಸ ಪಂದ್ಯಗಳು ನೆರವಾಗಲಿವೆ.

ನೌಕರರ ಭವಿಷ್ಯ ನಿಧಿ ಸಂಸ್ಥೆಯು (ಇಪಿಎಫ್‌ಒ) ಬೆಂಗಳೂರಿನ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಮೈದಾನದಲ್ಲಿ ಆಯೋಜಿಸಿರುವ ದಕ್ಷಿಣ ವಲಯ ಕ್ರಿಕೆಟ್ ಟೂರ್ನಿಗೆ ಗುರುವಾರ ಚಾಲನೆ ನೀಡಲಾಯಿತು. (ಎಡದಿಂದ) ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ 1 (ಆರ್‌ಪಿಎಫ್‌ಸಿ) ಸುನಿಲ್ ಕುಮಾರ್, ಕೇಂದ್ರ ಕ್ರೀಡಾ ಪ್ರಚಾರ ಮಂಡಳಿ ಸದಸ್ಯ ವಿ. ರವಿಕುಮಾರ್, ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಾದ ಬಾಲಕೃಷ್ಣ ನಾಯ್ಕ್, ಆನಂದ್ ಎಂ. ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಚೆಸ್: ಇಮ್ರಾನ್, ಸರವಣ ಮುನ್ನಡೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಂಟರ್ ನ್ಯಾಷನಲ್ ಮಾಸ್ಟರ್‌ಗಳಾದ ಭಾರತದ ಎಂ.ಡಿ. ಇಮ್ರಾನ್, ಸರವಣ ಕೃಷ್ಣ ಪಿ. ಮತ್ತು ಮುರಳಿಕೃಷ್ಣ ಬಿ.ಟಿ. ಅವರು ಇಲ್ಲಿ ನಡೆಯುತ್ತಿರುವ ಗ್ರ್ಯಾಂಡ್ ಆರ್‌ಸಿಸಿ ಫಿಡೆ ರೇಟೆಡ್ ಕ್ಲಾಸಿಕಲ್ ಚೆಸ್ ಟೂರ್ನಿಯ ಮೊದಲ ದಿನ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ದಕ್ಷಿಣ ಕನ್ನಡದ 8 ಆಟಗಾರರೂ ಅಗ್ರಸ್ಥಾನ ಗಳಿಸಿದವರ ಪಟ್ಟಿಯಲ್ಲಿ ಇದ್ದಾರೆ.

ರಾವ್ಸ್ ಚೆಸ್ ಕಾರ್ನರ್, ನಗರದ ಶಾರದಾ ಕಾಲೇಜು ಆವರಣದಲ್ಲಿ ಆಯೋಜಿಸಿರುವ ಟೂರ್ನಿಯ 2 ಸುತ್ತುಗಳ ಮುಕ್ತಾಯಕ್ಕೆ ಕರ್ನಾಟಕದ 35 ಮಂದಿ ಸೇರಿದಂತೆ ಒಟ್ಟು 98 ಮಂದಿ 2 ಪಾಯಿಂಟ್‌ಗಳನ್ನು ಗಳಿಸಿದ್ದಾರೆ. ವಿದೇಶಿ ಆಟಗಾರರ ಪೈಕಿ ಕೆನಡಾದ ಮುತ್ಯಾಳಪತಿ ಮೋದಿತ್ ಆರೋಹ್ 2 ಸುತ್ತುಗಳನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಅಮೆರಿಕ, ಶ್ರೀಲಂಕಾ, ಕೆನ್ಯಾ ಮತ್ತು ಸಿಂಗಪುರದ ಚೆಸ್ ಪಟುಗಳೂ ಪಾಲ್ಗೊಂಡಿದ್ದಾರೆ.

ಅಗ್ರ ಶ್ರೇಯಾಂಕಿತ ಆಟಗಾರ ಆಂಧ್ರ ಪ್ರದೇಶದ ಎಂ.ಡಿ. ಇಮ್ರಾನ್ (2476 ರೇಟಿಂಗ್) ಎರಡೂ ಸುತ್ತುಗಳಲ್ಲಿ ತಮಗಿಂತ ಕಡಿಮೆ ರೇಟಿಂಗ್‌ನವರ ವಿರುದ್ಧ ಸುಲಭ ಜಯ ಸಾಧಿಸಿದರು. ಮೊದಲ ಸುತ್ತಿನಲ್ಲಿ ಕರ್ನಾಟಕದ ಮಧ್ವ ವ್ಯಾಸರಾಜ ತಂತ್ರಿ ವಿರುದ್ಧ ಗೆದ್ದ ಅವರು ಎರಡನೇ ಸುತ್ತಿನಲ್ಲಿ ಕರ್ನಾಟಕದ ಶ್ರದ್ಧಾ ಎಸ್ ರೈ ಅವರನ್ನು ಮಣಿಸಿದರು.

ತಮಿಳುನಾಡಿನ ಸರವಣ ಕೃಷ್ಣ (2307) ಕ್ರಮವಾಗಿ ತಮಿಳುನಾಡಿನ ಧೀರಜ್ ಕುಮಾರ್ ಮತ್ತು ಕೇರಳದ ಆ್ಯರನ್ ವಳಕ್ಕೋಟ್ಟಿಲ್ ವಿರುದ್ಧ ಹಾಗೂ ಆಂಧ್ರಪ್ರದೇಶದ ಮುರಳಿ ಕೃಷ್ಣ ಬಿ.ಟಿ. (2080) ಕ್ರಮವಾಗಿ ದಕ್ಷಿಣ ಕನ್ನಡದ ಪ್ರಣ್ವಿತ್ ನಾಯಕ್ ಹಾಗೂ ಗೋವರ್ಧನ್ ಸಿ ವಿರುದ್ಧ ಗೆಲುವು ದಾಖಲಿಸಿದರು. ಸರವಣ ಮೂರನೇ ಶ್ರೇಯಾಂಕ ಹೊಂದಿದ್ದು ಮುರಳಿಕೃಷ್ಣಗೆ ಏಳನೇ ಶ್ರೇಯಾಂಕ ನೀಡಲಾಗಿದೆ.

ರೋಟ್ಯಾಕ್ಸ್ ಮ್ಯಾಕ್ಸ್ ಚಾಲೆಂಜ್‌ನಲ್ಲಿ ಇಶಾನ್ ಮಿಂಚು

ಬೆಂಗಳೂರು: ಕರ್ನಾಟಕದ 10 ವರ್ಷದ ರೇಸರ್ ಇಶಾನ್ ಸ್ವರೂಪ್, ಥಾಯ್ಲೆಂಡ್‌ನ ಬೀರಾ ಕಾರ್ಟ್ ಸರ್ಕ್ಯೂಟ್‌ನಲ್ಲಿ ನಡೆದ ರೋಟ್ಯಾಕ್ಸ್ ಮ್ಯಾಕ್ಸ್ ಚಾಲೆಂಜ್‌ನಲ್ಲಿ ಮಿಂಚು ಹರಿಸಿದ್ದಾನೆ.

ಬೆಂಗಳೂರಿನ ಇಶಾನ್, ಥಾಯ್ಲೆಂಡ್‌ನ ರೂಕಿ ವಿಭಾಗದ ಮೂರನೇ ಸುತ್ತಿನಲ್ಲಿ ಅಗ್ರಸ್ಥಾನ ಪಡೆದಿದ್ದಾನೆ. ಅಲ್ಲದೆ, ಏಷ್ಯಾ ಟ್ರೋಫಿ ಮೈಕ್ರೊ ಮ್ಯಾಕ್ಸ್ ವಿಭಾಗದ ನಾಲ್ಕನೇ ಸುತ್ತಿನಲ್ಲಿ ಹಾಗೂ ಆರ್‌ಎಂಸಿ ಥಾಯ್ಲೆಂಡ್‌ನ ಮೂರನೇ ಸುತ್ತಿನಲ್ಲಿ ಮೂರನೇ ಸ್ಥಾನ ಗಳಿಸಿ ಗಮನ ಸೆಳೆದಿದ್ದಾನೆ. ಮೈಕ್ರೊ ಮ್ಯಾಕ್ಸ್ ವಿಭಾಗದಲ್ಲಿ ಸ್ಪರ್ಧಿಸಿದ ಇಶಾನ್, ಅಗ್ರ ಮೂರರಲ್ಲಿ ಸ್ಥಾನ ಪಡೆದ ಭಾರತದ ಏಕೈಕ ಚಾಲಕನಾಗಿದ್ದಾನೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,056
ಇಂದಿನ ಅಂತ್ಯ:	24,890
ದಿನದ ಕನಿಷ್ಠ:	24,878
	166

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹585

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹242-635
ದ್ವಿತಳಿ (ಬಿ.ವಿ)	₹479-810

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) 10 ಕೆ.ಜಿಗೆ

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1270 (1270)
ಸೂರ್ಯಕಾಂತಿ (ರಿಫೈನ್ಡ್)	₹1425 (1420)
ಪಾಮೋಲಿನ್	₹1275 (1265)

ಕೊಬ್ಬರಿ ಧಾರಣೆ

ಅರಸೀಕೆರೆ	₹18000-26000
ತಿಪಟೂರು	₹26000-27812
ತುರುವೇಕೆರೆ	₹26000-27700

ಮುಂಬೈ ಧಾರಣೆ (ಶೇಂಗಾ) 25-09-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆಗೆದ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಪಾಮ್ ವಾರದ ಡೆಲಿವರಿ	1273 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1335)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,12,450 (1,13,000)
ಬೆಳ್ಳಿ ಕೆ.ಜಿಗೆ	1,36,000 (1,34,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

₹65 ಸಾವಿರ ಕೋಟಿ ಹೂಡಿಕೆ ಪ್ರಸ್ತಾವ

ವಿಶ್ವ ಆಹಾರ ಭಾರತ ಶೃಂಗಸಭೆಯ ಮೊದಲ ದಿನದಂದು ಹರಿದು ಬಂದ ಹೂಡಿಕೆ: ಕೇಂದ್ರ ಸಚಿವ ಚಿರಾಗ್ ಪಾಸ್ವಾನ್

ನವದೆಹಲಿ (ಪಿಟಿಐ): 'ದೇಶದ ಆಹಾರ ಸಂಸ್ಕರಣಾ ವಲಯವು ₹1 ಲಕ್ಷ ಕೋಟಿಗೂ ಹೆಚ್ಚಿನ ಹೂಡಿಕೆ ಪ್ರಸ್ತಾವಗಳನ್ನು ಆಕರ್ಷಿಸುವ ನಿರೀಕ್ಷೆ ಇದೆ' ಎಂದು ಕೇಂದ್ರ ಆಹಾರ ಸಂಸ್ಕರಣಾ ಸಚಿವ ಚಿರಾಗ್ ಪಾಸ್ವಾನ್ ಹೇಳಿದ್ದಾರೆ.

ಗುರುವಾರದಿಂದ ಆರಂಭವಾದ ವಿಶ್ವ ಆಹಾರ ಭಾರತ ಶೃಂಗಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್ (ಆರ್‌ಸಿಪಿಎಲ್) ಮತ್ತು ಕೋಕ–ಕೋಲಾ ಘಟಕಗಳನ್ನು ಸ್ಥಾಪಿಸಲು ಅಂದಾಜು ₹65 ಸಾವಿರ ಕೋಟಿ ಹೂಡಿಕೆ ಮಾಡಲು ಸಹಿ ಹಾಕಿವೆ ಎಂದು ಗುರುವಾರ ಹೇಳಿದ್ದಾರೆ. ವಿಶ್ವ ಆಹಾರ ಭಾರತ ಶೃಂಗಸಭೆ ಸೆಪ್ಟೆಂಬರ್ 28ರ ವರೆಗೆ ನಡೆಯಲಿದೆ.

ಚಿರಾಗ್ ಪಾಸ್ವಾನ್

ದೇಶದಾದ್ಯಂತ ಆಹಾರ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಆಹಾರ ಸಂಸ್ಕರಣಾ ಸಚಿವಾಲಯದ ಜೊತೆಗೆ ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್ (ಆರ್‌ಸಿಪಿಎಲ್) ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದ ಮೌಲ್ಯ ₹40 ಸಾವಿರ ಕೋಟಿಯಾಗಿದೆ.

ಒಪ್ಪಂದದ ಪ್ರಕಾರ, ಆಹಾರ ಉತ್ಪನ್ನಗಳು ಮತ್ತು ಪಾನೀಯಗಳನ್ನು ತಯಾರಿಸಲು ಮಹಾರಾಷ್ಟ್ರದ ನಾಗ್ಪುರ ಮತ್ತು ಆಂಧ್ರ ಪ್ರದೇಶ ಕರ್ನೂಲು ಜಿಲ್ಲೆಯಲ್ಲಿ ಘಟಕ ಸ್ಥಾಪಿಸಲಿದೆ. ಇದಕ್ಕೆ ಆರ್‌ಸಿಪಿಎಲ್ ₹1,500 ಕೋಟಿಗೂ ಹೆಚ್ಚು ಹೂಡಿಕೆ ಮಾಡಲಿದೆ.

ಕೋಕ–ಕೋಲಾ ₹25,760 ಕೋಟಿ ಹೂಡಿಕೆ ಮಾಡಲಿದೆ. ಇದರಿಂದ 30 ಸಾವಿರ ನೇರ ಉದ್ಯೋಗ ಮತ್ತು 3 ಲಕ್ಷ ಪರೋಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಈ ಯೋಜನೆಯ ಅನುಷ್ಠಾನವು ಈ ವರ್ಷ ಪ್ರಾರಂಭವಾಗಲಿದ್ದು, 2030ರ ವೇಳೆಗೆ ಪೂರ್ಣಗೊಳ್ಳುವ ಗುರಿಯನ್ನು ಹೊಂದಿದೆ ಎಂದು ಹೇಳಿದ್ದಾರೆ.

ಇದೇ ವೇಳೆ ಆಹಾರ ಸಂಸ್ಕರಣಾ ವಲಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ವಲಯದ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ಸಚಿವರು ಚರ್ಚೆ ನಡೆಸಿದರು.

ಆಹಾರ ಸಂಸ್ಕರಣಾ ಸಾಮರ್ಥ್ಯ ಹೆಚ್ಚಳ: ಮೋದಿ

ಕಳೆದ 10 ವರ್ಷದಲ್ಲಿ ದೇಶದ ಆಹಾರ ಸಂಸ್ಕರಣಾ ಸಾಮರ್ಥ್ಯವು 20 ಪಟ್ಟು ಹೆಚ್ಚಳವಾಗಿದೆ. ಜತೆಗೆ ಆಹಾರ ಪದಾರ್ಥಗಳ ರಫ್ತು ದ್ವಿಗುಣಗೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವಿಶ್ವ ಆಹಾರ ಭಾರತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರ ಆಹಾರ ಸಂಸ್ಕರಣಾ ವಲಯಕ್ಕೆ ಉತ್ತೇಜನ ನೀಡುತ್ತಿದೆ ಎಂದರು.

ಭಾರತದಲ್ಲಿ ಹೂಡಿಕೆ ಮಾಡಲು ಇದು ಸೂಕ್ತ ಸಮಯ. ಆಹಾರ ಸಂಸ್ಕರಣಾ ವಲಯದಲ್ಲಿ ಹೂಡಿಕೆ ಮಾಡಲು ದಾರಿಗಳು ತೆರೆದಿವೆ. ಸಹಯೋಗಕ್ಕೆ ಕೈಜೋಡಿಸಲು ಸಿದ್ಧರಾಗಿದ್ದೇವೆ. ಇಲ್ಲಿ ಹೆಚ್ಚಿನ ಅವಕಾಶಗಳಿದ್ದು, ಹೂಡಿಕೆ ಮಾಡುವಂತೆ ಮೋದಿ ಆಹ್ವಾನ ನೀಡಿದರು.

ಸುದ್ದಿ 2 ನಿಮಿಷ

'ಹೋಟೆಲ್ ದರ ಇಳಿಕೆ ಇಲ್ಲ'

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್ ಮತ್ತು ಬಾಡಿಗೆ ಕಟ್ಟಡಗಳ ಮೇಲಿನ ಜಿಎಸ್‌ಟಿಯನ್ನು ಕಡಿತಗೊಳಿಸಿಲ್ಲ. ಹೀಗಾಗಿ, ಗ್ರಾಹಕರಿಗೆ ಜಿಎಸ್‌ಟಿ ಇಳಿಕೆ ಪ್ರಯೋಜನವನ್ನು ವರ್ಗಾಯಿಸಲು ಸಾಧ್ಯವಾಗುವುದಿಲ್ಲ ಎಂದು ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ ಹೇಳಿದೆ.

ಹೋಟೆಲ್ ಆಹಾರ ಮತ್ತು ಕೊಠಡಿ ದರಗಳನ್ನು ಯಾವಾಗ ಕಡಿಮೆ ಮಾಡುತ್ತೀರಿ ಎಂದು ಗ್ರಾಹಕರು ನಮ್ಮನ್ನು ಕೇಳುತ್ತಿದ್ದಾರೆ. ಆದರೆ ಸರ್ಕಾರದಿಂದ ಸ್ವಲ್ಪ ಮಟ್ಟಿನ ಪರಿಹಾರ ಸಿಗದ ಹೊರತು ಈ ಹಂತದಲ್ಲಿ ಜಿಎಸ್‌ಟಿ ಇಳಿಕೆ ಪ್ರಯೋಜನವನ್ನು ಗ್ರಾಹಕರಿಗೆ ತಲುಪಿಸಲು ಆಗುವುದಿಲ್ಲ ಎಂದು ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ಹೇಳಿದ್ದಾರೆ.

ತರಕಾರಿಗಳು, ಮಾಂಸ ಸೇರಿ ಹಲವು ಉತ್ಪನ್ನಗಳಿಗೆ ಆರಂಭದಿಂದಲೂ ಶೂನ್ಯ ಸುಂಕವಿದೆ. ಆದರೆ, ಅಡುಗೆ ಅನಿಲ ಸಿಲಿಂಡರ್ ಮತ್ತು ಬಾಡಿಗೆ ಕಟ್ಟಡದಲ್ಲಿ ವ್ಯವಹಾರ ನಡೆಸುವ ಹೋಟೆಲ್‌ಗಳು ಪಾವತಿಸುವ ಬಾಡಿಗೆಯ ಮೇಲೆ ಶೇ 18ರಷ್ಟು ಜಿಎಸ್‌ಟಿ ಪಾವತಿ ಮಾಡುತ್ತಿವೆ.

ಬಹುತೇಕ ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಬಾಡಿಗೆಯ ಮೇಲಿನ ಜಿಎಸ್‌ಟಿಯು ಶೇ 5ಕ್ಕೆ ಇಳಿಕೆ ಮಾಡಿದರೆ, ಗ್ರಾಹಕರಿಗೆ ಇಳಿಕೆಯ ಪ್ರಯೋಜನವನ್ನು ವರ್ಗಾಯಿಸಲಾಗುವುದು. ಸದ್ಯದ ಜಿಎಸ್‌ಟಿ ದರದೊಂದಿಗೆ ಗ್ರಾಹಕರಿಗೆ ಯಾವುದೇ ಪ್ರಯೋಜನವನ್ನು ವರ್ಗಾಯಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಡಿಜಿಟಲ್ ಪಾವತಿ: ಏಪ್ರಿಲ್‌ನಿಂದ ಹೊಸ ನಿಯಮ

ಮುಂಬೈ (ಪಿಟಿಐ): ಡಿಜಿಟಲ್ ಪಾವತಿಗಳಿಗೆ ಒಟಿಪಿ ಮಾತ್ರವಲ್ಲದೇ ಎರಡು ಹಂತದ ದೃಢೀಕರಣ (2ಎಫ್‌ಎ) ಅನುಸರಿಸಲು ಅನುಮತಿಸುವ ನೂತನ ನಿಯಮಗಳು 2026ರ ಏಪ್ರಿಲ್ 1ರಿಂದ ಜಾರಿಯಾಗಲಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ಘೋಷಿಸಿದೆ.

ಈ ಎರಡು ಹಂತದ ದೃಢೀಕರಣವು, ಬಳಕೆದಾರರಿಗೆ ಸಂಬಂಧಿಸಿದ ವಿಷಯ–ವಸ್ತುಗಳ ಬಗ್ಗೆಯೂ ಇರಬಹುದು ಅಥವಾ ಪಾಸ್‌ವರ್ಡ್, ಬೆರಳಚ್ಚು ಸೇರಿದಂತೆ ಆಧಾರ್‌ಕಾರ್ಡ್ ಆಧಾರಿತ ಇತರೆ ಬಯೊಮೆಟ್ರಿಕ್ ಮಾಹಿತಿಗೆ ಸಂಬಂಧಿಸಿದಂತೆಯೂ ಇರಬಹುದಾಗಿದೆ ಎಂದು ಆರ್‌ಬಿಐ ಹೇಳಿದೆ.

ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿ ತಾಂತ್ರಿಕ ಪ್ರಗತಿಯನ್ನು ಅಳವಡಿಸಿಕೊಳ್ಳುವುದರ ಜತೆಗೆ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಎರಡು ಹಂತದ ದೃಢೀಕರಣದ ಕ್ರಮವನ್ನು ಪರಿಚಯಿಸಲು ಆರ್‌ಬಿಐ ನಿರ್ಧರಿಸಿದೆ. ಎಸ್‌ಎಂಎಸ್–ಒಟಿಪಿ ಜತೆಗೆ 2ಎಫ್‌ಎ ಕಡ್ಡಾಯವಾಗಿ ಇರಲಿದೆ ಎಂದೂ ತಿಳಿಸಿದೆ.

'75 ಸಾವಿರ ವಾಹನ ಮಾರಾಟ'

ನವದೆಹಲಿ (ಪಿಟಿಐ): ಕಳೆದ ನಾಲ್ಕು ದಿನದಲ್ಲಿ 75 ಸಾವಿರ ವಾಹನಗಳು ಮಾರಾಟವಾಗಿವೆ ಎಂದು ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ಗುರುವಾರ ತಿಳಿಸಿದೆ.

ಈ ಮೊದಲು ಪ್ರತಿದಿನ 45 ಸಾವಿರದಷ್ಟು ಗ್ರಾಹಕರು ವಾಹನಗಳ ಬಗ್ಗೆ ವಿಚಾರಿಸುತ್ತಿದ್ದರು. ಈ ಪ್ರಮಾಣ ಈಗ 80 ಸಾವಿರಕ್ಕೆ ಹೆಚ್ಚಳವಾಗಿದೆ. ಪ್ರತಿದಿನ 18 ಸಾವಿರ ವಾಹನಗಳ ಬುಕಿಂಗ್ ಆಗುತ್ತಿವೆ ಎಂದು ಕಂಪನಿಯ ಮಾರ್ಕೆಟಿಂಗ್ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಪಾರ್ಥೋ ಬ್ಯಾನರ್ಜಿ ಹೇಳಿದ್ದಾರೆ.

ಸೆಪ್ಟೆಂಬರ್ 22ರಿಂದ ಜಿಎಸ್‌ಟಿ ಸರಳೀಕರಣವು ಜಾರಿಗೆ ಬಂದಿದ್ದು, ಅಂದಿನಿಂದ ಗುರುವಾರ ಸಂಜೆ ಆರು ಗಂಟೆವರೆಗೆ 75 ಸಾವಿರ ವಾಹನಗಳ ರಿಟೇಲ್ ಮಾರಾಟವಾಗಿವೆ. ವಾಹನಗಳಿಗೆ ಬುಕಿಂಗ್ ಸಹ ಹೆಚ್ಚಳವಾಗಿದೆ. ಕಂಪನಿಯ ಸಣ್ಣ ಕಾರುಗಳಿಗೆ ಹೆಚ್ಚಿನ ಬೇಡಿಕೆ ಇದೆ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	37269-44519	ಸಿಪ್ಪೆಗೋಟು	10899-22599	ಕೋಕ	20500-27900
ಚಿಪ್ಪು	37269-35109	ಬೆಟ್ಟೆ	50009-66719	ಕೆಂಪುಗೋಟು	28019-28019
ಕೋಕ	10309-33100	ಗೊರಬಲು	19009-40019	ರಾಶಿ	48099-52300
ಹಳೆಚಾಲಿ	36749-43500	ಹೊಸತು	54319-59009	ತಟ್ಟಿಬೆಟ್ಟೆ	42499-42499
ಸಾಗರ		ರಾಶಿ	46869-62899	**ಶಿರಸಿ**	
ಬಿಳಿಗೋಟು	13666-31699	ಸರಕು	56659-85540	ಬೆಟ್ಟೆ	34709-45399
ಚಾಲಿ	32599-41789	**ಸಿದ್ದಾಪುರ**		ಬಿಳಿಗೋಟು	25700-36299
ಕೋಕ	10100-28499	ಬಿಳಿಗೋಟು	25600-33189	ಚಾಲಿ	40099-44620
ಕೆಂಪುಗೋಟು	28699-37499	ಚಾಲಿ	38799-43999	ಕೆಂಪುಗೋಟು	28699-31299
ರಾಶಿ	46119-62589			ರಾಶಿ	49061-51859

ಭಾರತದಿಂದ ಅಮೆರಿಕಕ್ಕೆ ರಫ್ತು ಪ್ರಮಾಣ ಶೇ 148ರಷ್ಟು ಹೆಚ್ಚಳ: ಐಸಿಇಎ

ಸ್ಮಾರ್ಟ್‌ಫೋನ್ ರಫ್ತು ಶೇ 39ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ಸ್ಮಾರ್ಟ್‌ಫೋನ್ ರಫ್ತು ಆಗಸ್ಟ್ ತಿಂಗಳಿನಲ್ಲಿ ಶೇ 39ರಷ್ಟು ಏರಿಕೆಯಾಗಿದೆ ಎಂದು ಇಂಡಿಯಾ ಸೆಲ್ಯುಲರ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್ (ಐಸಿಇಎ) ಗುರುವಾರ ತಿಳಿಸಿದೆ.

2024ರ ಆಗಸ್ಟ್ ತಿಂಗಳಿನಲ್ಲಿ ಒಟ್ಟು ₹9,668 ಕೋಟಿ ಮೌಲ್ಯದ ಸ್ಮಾರ್ಟ್‌ಫೋನ್‌ಗಳು ರಫ್ತಾಗಿದ್ದವು. ಪ್ರಸಕ್ತ ವರ್ಷದ ಆಗಸ್ಟ್‌ನಲ್ಲಿ ಈ ರಫ್ತು ಪ್ರಮಾಣ ₹13,572 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಇದೇ ಅವಧಿಯಲ್ಲಿ ಅಮೆರಿಕಕ್ಕೆ ಈ ಪೈಕಿ ₹8,559 ಕೋಟಿಯಷ್ಟು ಮೌಲ್ಯದ ಸ್ಮಾರ್ಟ್‌ಫೋನ್ ರಫ್ತಾಗಿವೆ. ಕಳೆದ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ರಫ್ತು ಶೇ 148ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಅಮೆರಿಕಕ್ಕೆ ದೇಶದ ಸ್ಮಾರ್ಟ್‌ಫೋನ್ ರಫ್ತು ₹74,778 ಕೋಟಿಯಷ್ಟಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹25,547 ಕೋಟಿಯಾಗಿದ್ದು, ಮೂರು ಪಟ್ಟು ರಫ್ತು ಹೆಚ್ಚಳ ಕಂಡಿದೆ ಎಂದು ಹೇಳಿದೆ.

2024-25ರ ಪೂರ್ಣ ಆರ್ಥಿಕ ವರ್ಷದಲ್ಲಿ ಅಮೆರಿಕಕ್ಕೆ ₹93,676 ಕೋಟಿ ಮೌಲ್ಯದ ಸ್ಮಾರ್ಟ್‌ಫೋನ್ ರಫ್ತಾಗಿದ್ದವು. ಪ್ರಸಕ್ತ ವರ್ಷದ ಏಪ್ರಿಲ್-ಆಗಸ್ಟ್ ಅಂಕಿ ಅಂಶದ ಪ್ರಕಾರ ಈ ರಫ್ತಿನ ಶೇ 80ರಷ್ಟನ್ನು ಈಗಾಗಲೇ ತಲುಪಿದೆ ಎಂದು ತಿಳಿಸಿದೆ.

'ಹಿಂದಿನ ಐದು ಆರ್ಥಿಕ ವರ್ಷದ ಅಂಕಿ ಅಂಶಗಳಿಗೆ ಹೋಲಿಸಿದರೆ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನ ಅರ್ಧದಲ್ಲಿ ದೇಶದ ಸ್ಮಾರ್ಟ್‌ಫೋನ್‌ಗಳ ರಫ್ತು ಇಳಿದಿದೆ' ಎಂದು ಐಸಿಇಎ ಅಧ್ಯಕ್ಷ ಪಂಕಜ್ ಮೊಹಿಂದ್ರೂ ಹೇಳಿದ್ದಾರೆ.

ಕಂಪನಿಗಳು ಸೆಪ್ಟೆಂಬರ್ ಕೊನೆಯಲ್ಲಿ ಮತ್ತು ಅಕ್ಟೋಬರ್‌ನಲ್ಲಿ ಹಬ್ಬದ ಋತುವಿನ ಮುಂಚಿತವಾಗಿ ಹೊಸ ಮಾದರಿಯ ಫೋನ್‌ಗಳನ್ನು ಬಿಡುಗಡೆ ಮಾಡುತ್ತಿವೆ. ಈ ಫೋನ್‌ಗಳಿಗಾಗಿ, ಗ್ರಾಹಕರು ಕಾಯುತ್ತಿದ್ದಾರೆ. ಇದರಿಂದ ಖರೀದಿ ಪ್ರಮಾಣ ಕಡಿಮೆ ಆಗಿದೆ' ಎಂದು ತಿಳಿಸಿದ್ದಾರೆ.

ಹಳೆಯ ಮಾದರಿ ಫೋನ್ ಖರೀದಿಸುವ ಗ್ರಾಹಕರು ಸಹ ಹೊಸ ಮಾದರಿಗಳ ಬಿಡುಗಡೆಗಾಗಿ ಕಾಯುತ್ತಿದ್ದಾರೆ. ಕಾರಣ ಹಳೆಯ ಮಾದರಿ ಫೋನ್‌ಗಳ ಮೇಲೆ ಹೆಚ್ಚಿನ ರಿಯಾಯಿತಿ ಸಿಗಲಿದೆ. ಹೀಗಾಗಿ, ಹಳೆಯ ಮಾದರಿ ಫೋನ್‌ಗಳ ರಫ್ತು ಸಹ ಕಡಿಮೆಯಾಗಿದೆ. ಆದರೆ, ಅಕ್ಟೋಬರ್ ವೇಳೆಗೆ ರಫ್ತು ಹೆಚ್ಚಾಗಲಿದೆ ಎಂದು ಹೇಳಿದ್ದಾರೆ.

> **ಕ್ರಿಸ್‌ಮಸ್, ಹೊಸ ವರ್ಷದ ಆಚರಣೆಯಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದೇಶದ ಸ್ಮಾರ್ಟ್‌ಫೋನ್‌ಗಳಿಗೆ ಬೇಡಿಕೆ ಹೆಚ್ಚಳವಾಗಲಿದೆ**
> **ಪಂಕಜ್ ಮೊಹಿಂದ್ರೂ,** ಐಸಿಇಎ ಅಧ್ಯಕ್ಷ

ಚಿಟಿಕೆ ಸುದ್ದಿ

'ಕೆಡುಕಿನ ಘಟನೆಗಳು: ತನಿಖೆ ನಡೆಸಿ'

ಡೊನಾಲ್ಡ್ ಟ್ರಂಪ್

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ವಿಶ್ವ ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ತಾವು ಎದುರಿಸಿದ ಮೂರು 'ಕೆಡುಕಿನ ಘಟನೆ'ಗಳ ಬಗ್ಗೆ ತನಿಖೆ ನಡೆಸಿ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಶ್ವ ಸಂಸ್ಥೆಯನ್ನು ಆಗ್ರಹಿಸಿದ್ದಾರೆ.

ಈ ಬಗ್ಗೆ ತಮ್ಮ 'ಟ್ರುಥ್ ಸೋಷಿಯಲ್' ಜಾಲತಾಣ ವೇದಿಕೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, 'ವಿಶ್ವ ಸಂಸ್ಥೆಗೆ ತನ್ನ ಬಗ್ಗೆ ತನಗೆ ನಾಚಿಕೆಯಾಗಬೇಕು. ಅದರ ಕೇಂದ್ರ ಕಚೇರಿಯಲ್ಲಿ ಒಂದಲ್ಲ, ಎರಡಲ್ಲ ಮೂರು ಕೆಡುಕಿನ ಘಟನೆಗಳು ನಡೆದವು' ಎಂದರು.

'ನಾನು ಮತ್ತು ಮೆಲಾನಿಯಾ (ಪತ್ನಿ) ಎಸ್ಕಲೇಟರ್ ಅನ್ನು ಏರುತ್ತಿದ್ದಂತೆಯೇ ಅದು ನಿಂತೇ ಹೋಯಿತು. ಆಮೇಲೆ, ನಾನು ಭಾಷಣ ಮಾಡುತ್ತಿರುವಾಗ ನನ್ನ ಟೆಲಿಪ್ರಾಂಪ್ಟರ್ ಸ್ಥಗಿತಗೊಂಡಿತು. ಆಮೇಲೆ ನೋಡಿದರೆ, ನನ್ನ ಭಾಷಣ ಯಾರಿಗೂ ಕೇಳಲೇ ಇಲ್ಲ ಎಂದು ತಿಳಿದುಬಂದಿತು. ಇಯರ್‌ಫೋನ್ ಹಾಕಿಕೊಳ್ಳದವರಿಗೆ ನನ್ನ ಭಾಷಣ ಕೇಳಿಸಲೇ ಇಲ್ಲವಂತೆ' ಎಂದು ಹೇಳಿದರು.

ವಿಶ್ವ ಸಂಸ್ಥೆಯ 80ನೇ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಟ್ರಂಪ್ ಅವರು ಬುಧವಾರ ನ್ಯೂಯಾರ್ಕ್‌ನಲ್ಲಿರುವ ವಿಶ್ವ ಸಂಸ್ಥೆಯ ಕೇಂದ್ರ ಕಚೇರಿಗೆ ತೆರಳಿದ್ದರು.

ಡ್ರಗ್ಸ್ ಕಳ್ಳಸಾಗಣೆ ಅಪರಾಧಿಗೆ ಗಲ್ಲು

ಕ್ವಾಲಾಲಂಪುರ (ಎಪಿ): ಸಿಂಗಪುರದಲ್ಲಿ ಮಾದಕ ವಸ್ತು ಕಳ್ಳಸಾಗಣೆ ಪ್ರಕರಣದಲ್ಲಿ ಅಪರಾಧಿ ಎಂದು ಸಾಬೀತಾಗಿದ್ದ ಮಲೇಷ್ಯಾದ ವ್ಯಕ್ತಿಗೆ ಗುರುವಾರ ಗಲ್ಲು ಶಿಕ್ಷೆ ಜಾರಿ ಮಾಡಲಾಯಿತು. ಇದರೊಂದಿಗೆ ಈ ವರ್ಷದಲ್ಲಿ ಸಿಂಗಪುರದಲ್ಲಿ ಗಲ್ಲಿಗೇರಿದವರ ಸಂಖ್ಯೆ 11ಕ್ಕೆ ಏರಿಕೆಯಾಯಿತು.



ದಕ್ಷಿಣಾಮೂರ್ತಿ ಕಾಟಯ್ಯ (39) ಗಲ್ಲಿಗೆ ಗುರಿಯಾದ ವ್ಯಕ್ತಿ. ಸಿಂಗಪುರಕ್ಕೆ 45 ಗ್ರಾಂ. ಹೆರಾಯಿನ್ ಕಳ್ಳಸಾಗಣೆ ಮಾಡಿದ ಆರೋಪದಡಿ 2011ರಲ್ಲಿ ಇವರನ್ನು ಬಂಧಿಸಲಾಗಿತ್ತು. 2022ರಲ್ಲೇ ದಕ್ಷಿಣಾಮೂರ್ತಿಗೆ ಗಲ್ಲು ಶಿಕ್ಷೆ ಜಾರಿಯಾಗಬೇಕಿತ್ತು. ಆದರೆ, ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮುಂದುವರಿದಿತ್ತು. ಆಗಸ್ಟ್‌ನಲ್ಲಿ ಅಪರಾಧಿಯ ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿತ್ತು.

ಗುರುವಾರ ಮಧ್ಯಾಹ್ನ ಗಲ್ಲಿಗೇರಿಸುವ ಪ್ರಕ್ರಿಯೆ ನಡೆಸಲಾಯಿತು. 2 ಗಂಟೆಗಳೊಳಗೆ ಮೃತದೇಹವನ್ನು ಕೊಂಡೊಯ್ಯುವಂತೆ ದಕ್ಷಿಣಾಮೂರ್ತಿ ಕುಟುಂಬಕ್ಕೆ ಮಾಹಿತಿ ನೀಡಲಾಗಿತ್ತು.

'ನ್ಯಾಯ ಸಮಾವೇಶ'ದಲ್ಲಿ ಧರ್ಮಸ್ಥಳ ದೌರ್ಜನ್ಯ ವಿರೋಧಿ ವೇದಿಕೆ ಆಗ್ರಹ

'20 ವರ್ಷಗಳ ಪ್ರಕರಣಗಳು ತನಿಖೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಸುತ್ತಮುತ್ತ 20 ವರ್ಷಗಳಲ್ಲಿ ನಡೆದಿರುವ ಅತ್ಯಾಚಾರ, ಅಸಹಜ ಸಾವು, ಕೊಲೆ ಪ್ರಕರಣಗಳನ್ನು ಎಸ್‌ಐಟಿ ರಚನೆಯ ಸಂಬಂಧ ಹೊರಡಿಸಲಾದ ಆದೇಶದಲ್ಲಿ ಇರುವಂತೆಯೇ ಪೂರ್ಣ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಧರ್ಮಸ್ಥಳ ದೌರ್ಜನ್ಯ ವಿರೋಧಿ ವೇದಿಕೆ ನೇತೃತ್ವದಲ್ಲಿ ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ 'ನ್ಯಾಯ ಸಮಾವೇಶ' ನಡೆಯಿತು.

ಪದ್ಮಲತಾ, ವೇದವಲ್ಲಿ, ಮಾವುತ ನಾರಾಯಣ, ಯಮುನಾ, ಸೌಜನ್ಯ ಕೊಲೆ ಪ್ರಕರಣಗಳು, ಭೂಕಬಳಿಕೆ, ಮೈಕ್ರೊ ಫೈನಾನ್ಸ್ ದೌರ್ಜನ್ಯಗಳು, ದಲಿತರ ಮೀಸಲು ಭೂಮಿ ಕಬಳಿಕೆ, ಆರ್ಥಿಕ ಅಪರಾಧದ ಆರೋಪ ಪ್ರಕರಣಗಳನ್ನು ಈಗ ರಚಿಸಲಾಗಿರುವ ಎಸ್‌ಐಟಿಗೆ ವಹಿಸಲು ಸಮಸ್ಯೆಗಳಿದ್ದಲ್ಲಿ ಪ್ರತ್ಯೇಕವಾಗಿ ವಿಶೇಷ ತನಿಖಾ ತಂಡ ರಚಿಸಿ ತನಿಖೆಗೆ ಒಳಪಡಿಸಬೇಕು ಎಂದು ಸಮಾವೇಶದಲ್ಲಿ ಆಗ್ರಹಿಸಲಾಯಿತು.

ಹೋರಾಟಗಾರರನ್ನು ಗುರಿಯಾಗಿಸುವುದನ್ನು ಕೈಬಿಡಬೇಕು ಎಂಬುದು ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ನ್ಯಾಯ ಕೊಡಿಸುವಂತೆ ಆಗ್ರಹಿಸಿ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಯಿತು.

ಮಾಜಿ ಸಂಸದೆ ಸುಭಾಷಿಣಿ ಅಲಿ ಮಾತನಾಡಿ, 'ನಾವು ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಹಾಸನದಲ್ಲಿ ಹೋರಾಟ ನಡೆಸಿದೆವು. ಪ್ರಜ್ವಲ್ ಜೈಲು ಪಾಲಾಗುವಂತೆ ಮಾಡಿದೆವು. ಹಾಸನದಲ್ಲಿ ಒಬ್ಬ ಅಪರಾಧಿಯಾದರೆ, ಧರ್ಮಸ್ಥಳದಲ್ಲಿ ಇಡೀ ವ್ಯವಸ್ಥೆಯೇ ಅಪರಾಧದಲ್ಲಿ ಭಾಗಿಯಾಗಿದೆ' ಎಂದು ಆರೋಪಿಸಿದರು.

ವಕೀಲ ಎಸ್. ಬಾಲನ್ ಮಾತನಾಡಿ, 'ಸೌಜನ್ಯ ಪ್ರಕರಣದಲ್ಲಿ ಮಾತ್ರ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಪದ್ಮಲತಾ, ವೇದವಲ್ಲಿ ಸಹಿತ ಉಳಿದೆಲ್ಲ ಪ್ರಕರಣಗಳಲ್ಲಿ ಸಿ ರಿಪೋರ್ಟ್ ಹಾಕಲಾಗಿದೆ. ಸೌಜನ್ಯ ಪ್ರಕರಣದಲ್ಲಿಯೂ ಮೃತದೇಹ ಸಿಕ್ಕಿದ ಜಾಗವನ್ನಷ್ಟೇ ಮಹಜರು ನಡೆಸಲಾಗಿದೆ. ಅಪಹರಣವಾದ ಸ್ಥಳ, ಅತ್ಯಾಚಾರವಾದ ಸ್ಥಳ, ಕೊಲೆಯಾದ ಸ್ಥಳಗಳನ್ನು ಮಹಜರು ನಡೆಸಿಲ್ಲ. ಆ ನಂತರ ಮರಣೋತ್ತರ ಪರೀಕ್ಷೆ ನಡೆಸುವಾಗ ಪ್ರಾಥಮಿಕ ಸಾಕ್ಷ್ಯಗಳನ್ನೂ ಕಾಪಾಡಿಲ್ಲ. ಹಾಗಾಗಿ ಮಹಜರು ನಡೆಸಿದವರನ್ನು, ಮರಣೋತ್ತರ ಪರೀಕ್ಷೆ ನಡೆಸಿದವರನ್ನು ಜೈಲಿಗೆ ಕಳುಹಿಸಬೇಕು' ಎಂದು ಒತ್ತಾಯಿಸಿದರು.

ಕವಿ ಮೂಡ್ನಾಕೂಡು ಚಿನ್ನಸ್ವಾಮಿ, ಹೋರಾಟಗಾರರಾದ ಗಿರೀಶ್ ಮಟ್ಟಣ್ಣವರ್, ಜ್ಯೋತಿ ಎಸ್., ವಿಮಲಾ ಕೆ.ಎಸ್., ದಸಂಸ ಮುಖಂಡ ಮಾವಳ್ಳಿ ಶಂಕರ್, ಲೇಖಕ ಜಾಣಗೆರೆ ವೆಂಕಟರಾಮಯ್ಯ, ವಕೀಲ ಸೂರ್ಯ ಮುಕುಂದರಾಜ್ ಸೇರಿದಂತೆ ಹಲವರು ಮಾತನಾಡಿದರು.

ಧರ್ಮಸ್ಥಳ ಎಸ್‌ಐಟಿ ವಿಚಾರಣೆಗೆ ಸಂಬಂಧಿಸಿದಂತೆ ಸರ್ಕಾರ ಜನಪರ ಕಾಳಜಿ ವಹಿಸಬೇಕೆಂದು ಆಗ್ರಹಿಸಿ ಧರ್ಮಸ್ಥಳ ದೌರ್ಜನ್ಯ ವಿರೋಧಿ ವೇದಿಕೆಯ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

> **ಈ ಹೋರಾಟವು ಧರ್ಮ, ದೇವರು ಅಥವಾ ದೇವಾಲಯದ ವಿರುದ್ಧ ಅಲ್ಲ. ಅಲ್ಲಿ ನಡೆದ ಅತ್ಯಾಚಾರ, ದೌರ್ಜನ್ಯದ ವಿರುದ್ಧ. ಇದಕ್ಕೆ ಧರ್ಮಾಧಿಕಾರಿ ಉತ್ತರಿಸಬೇಕು**
> **ಎಸ್.ಜಿ. ಸಿದ್ದರಾಮಯ್ಯ,** ಸಾಹಿತಿ

> **ಅನ್ಯಾಯದ ವಿರುದ್ಧ ಹೋರಾಡಿದರೆ ಧರ್ಮದ ವಿರುದ್ಧ ಪಿತೂರಿ ಎಂದು ಸುಳ್ಳು ಆರೋಪ ಹೊರಿಸಿ, ಹೋರಾಟವನ್ನು ಹತ್ತಿಕ್ಕಿ ಎಸ್‌ಐಟಿಯನ್ನು ವಿರೋಧಿಸುತ್ತಿದ್ದಾರೆ**
> **ಸಿದ್ದನಗೌಡ ಪಾಟೀಲ,** ಲೇಖಕ

> **ಧರ್ಮಸ್ಥಳದಲ್ಲಿನ ವ್ಯವಸ್ಥೆ ಮನುಸ್ಮೃತಿಯ ಆಧಾರದ ಮೇಲೆ ನಿಂತಿದೆ. ಅತ್ಯಾಚಾರ ಮತ್ತು ಕೊಲೆಗಳನ್ನು ಖಂಡಿಸಿದರೆ ಜೀವಬೆದರಿಕೆ ಹಾಕಲಾಗುತ್ತಿದೆ**
> **ಸುಭಾಷಿಣಿ ಅಲಿ,** ಮಾಜಿ ಸಂಸದೆ

> **ಕಮ್ಯುನಿಸ್ಟರು ಧರ್ಮಸ್ಥಳದಲ್ಲಿ ಸಂವಿಧಾನ, ಪ್ರಜಾಪ್ರಭುತ್ವದ ಕುರಿತು ಜಾಗೃತಿ ಮೂಡಿಸಲು ಓಡಾಡಿದ್ದಕ್ಕೆ ಜಾತಿ ನಿಂದನೆ ಪ್ರಕರಣ ದಾಖಲಿಸುತ್ತಾರೆ**
> **ಕೆ. ನೀಲಾ,** ಹೋರಾಟಗಾರ್ತಿ

'ಎಸ್‌ಐಟಿ ಮುಂದುವರಿಕೆ'

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ರಚಿಸಿರುವ ಎಸ್‌ಐಟಿ ತನಿಖೆ ಮುಂದುವರೆಸಲು ಸಂಪುಟ ಒಮ್ಮತದ ತೀರ್ಮಾನ ಕೈಗೊಂಡಿದೆ.

'ಎಸ್‌ಐಟಿ ತನಿಖೆಯನ್ನು ನಿಲ್ಲಿಸಲಾಗುತ್ತದೆ' ಎಂದು ಕೆಲವು ಸುದ್ದಿವಾಹಿನಿಗಳಲ್ಲಿ ವರದಿ ಪ್ರಸಾರವಾಗಿರುವ ಬಗ್ಗೆ ಸಂಪುಟದಲ್ಲಿ ಅನೌಪಚಾರಿಕವಾಗಿ ಚರ್ಚೆ ನಡೆಯಿತು. 'ಅಂತಹ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಈ ಹಂತದಲ್ಲಿ ಎಸ್‌ಐಟಿ ನಿಲ್ಲಿಸುವುದು ತಪ್ಪು ಸಂದೇಶಕ್ಕೆ ಕಾರಣವಾಗುತ್ತದೆ. ಸರ್ಕಾರದ ಮೇಲೆಯೂ ಅನುಮಾನಗಳಿಗೆ ಕಾರಣವಾಗುತ್ತದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು' ಎಂದು ಮೂಲಗಳು ಹೇಳಿವೆ.

ಬದಲಾದ ಮುಸುಕುಧಾರಿ

ಮುಸುಕುಧಾರಿ ಭೀಮ ಆಗಿರುವಾಗ ಸತ್ಯ ಹೇಳಿದ್ದ. ಚಿನ್ನಯ್ಯನಾದ ಮೇಲೆ ಸುಳ್ಳು ಹೇಳತೊಡಗಿದ ಎಂದು ವಕೀಲ ಎಸ್. ಬಾಲನ್ ತಿಳಿಸಿದರು.

ಚಿನ್ನಯ್ಯ ಬದಲಾಗಲು ಯಾರು ಕಾರಣ ಎಂಬುದರ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಗಿರೀಶ್ ಮಟ್ಟಣ್ಣವರ್ ಆಗ್ರಹಿಸಿದರು.

ಧರ್ಮಸ್ಥಳ ಪ್ರಕರಣ: 27ರಂದು ಮುಂದುವರಿಕೆ

ಸಾಕ್ಷಿ ದೂರುದಾರ ಹೇಳಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧಗಳಲ್ಲಿನ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ ಸಂಬಂಧ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸಾಕ್ಷಿ ದೂರುದಾರನ ಹೇಳಿಕೆ ದಾಖಲಿಸುವ ಪ್ರಕ್ರಿಯೆ ಗುರುವಾರವೂ ಮುಂದುವರಿಯಿತು.

'ನ್ಯಾಯಾಧೀಶರ ಸಮ್ಮುಖದಲ್ಲಿ ಸಾಕ್ಷಿ ದೂರುದಾರ ನೀಡುವ ಹೇಳಿಕೆಯನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 183ರ ಅಡಿ ದಾಖಲಿಸಿಕೊಳ್ಳುವ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಈ ಪ್ರಕ್ರಿಯೆ ಇದೇ 27ರಂದು ಮುಂದುವರಿಯಲಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಶಿವಮೊಗ್ಗ ಜೈಲಿನಲ್ಲಿದ್ದ ಸಾಕ್ಷಿ ದೂರುದಾರನನ್ನು ಪೊಲೀಸರು ಬೆಳಿಗ್ಗೆ 11 ಗಂಟೆ ಸುಮಾರಿಗೆ ಬೆಳ್ತಂಗಡಿಗೆ ಕರೆತಂದರು. ಮಧ್ಯಾಹ್ನ 12.15 ಸುಮಾರಿಗೆ ಆತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಸಂಜೆ 6 ಗಂಟೆವರೆಗೂ ನ್ಯಾಯಾಲಯದಲ್ಲೇ ಇದ್ದ. ಬಳಿಕ ಆತನನ್ನು ಬಿಗಿ ಭದ್ರತೆಯಲ್ಲಿ ಶಿವಮೊಗ್ಗ ಜೈಲಿಗೆ ಕರೆದೊಯ್ಯಲಾಯಿತು.

ಈ ಪ್ರಕರಣ ಸಂಬಂಧ ಧರ್ಮಸ್ಥಳ ಠಾಣೆಗೆ ದೂರು ನೀಡಿದ್ದ ಸಂದರ್ಭದಲ್ಲಿ ಸಾಕ್ಷಿ ದೂರುದಾರ ತಲೆ ಬುರುಡೆಯನ್ನು ತಂದೊಪ್ಪಿಸಿದ್ದ. 'ಅದನ್ನು ನಾನು ನೆಲದಿಂದ ಹೊರತೆಗೆದಿಲ್ಲ' ಎಂದು ಆತ ಎಸ್‌ಐಟಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದ. ಬಳಿಕ ಆತನನ್ನು ಬಂಧಿಸಿದ್ದ ಎಸ್‌ಐಟಿ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಆ.23ರಂದು ಹಾಜರುಪಡಿಸಿತ್ತು. ನ್ಯಾಯಾಲಯವು ಆತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಸಾಕ್ಷಿ ದೂರುದಾರನನ್ನು ಹೇಳಿಕೆ ದಾಖಲಿಸಲು ಸೆ.18ರಂದು ಬೆಳ್ತಂಗಡಿ ನ್ಯಾಯಾಲಯಕ್ಕೆ ಕರೆತರಲಾಗಿತ್ತು. ಅಂದು ಹೇಳಿಕೆ ದಾಖಲು ಮಾಡಿರಲಿಲ್ಲ. ಬಳಿಕ ಸೆ.23 ರಂದು ಆತ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದ.

ಮತ್ತೊಂದು ಬುರುಡೆಯ ಕುರುಹು ಪತ್ತೆ?

ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆ ಕಾಡಿನಲ್ಲಿ ಸಿಕ್ಕಿರುವ ಮೃತದೇಹಗಳ ಅವಶೇಷವೊಂದರ ಬಳಿ ಚಾಲನಾ ಪರವಾನಗಿ ಪತ್ರವೂ ಸಿಕ್ಕಿದ್ದು, ಅದರಲ್ಲಿ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ದಾಸರ ಕಲ್ಲಹಳ್ಳಿ ಆದಿಶೇಷ ನಾರಾಯಣ (27) ಅವರ ಹೆಸರು ಇತ್ತು. ಆದಿಶೇಷ ನಾರಾಯಣ ಕುಟುಂಬದವರನ್ನು ಬೆಳ್ತಂಗಡಿ ಕಚೇರಿಗೆ ಕರೆಸಿಕೊಂಡ ಎಸ್‌ಐಟಿ ಅಧಿಕಾರಿಗಳು, ಆ ವ್ಯಕ್ತಿಯ ಕುರಿತು ಮಾಹಿತಿ ಕಲೆ ಹಾಕಿದ್ದಾರೆ.

ಎಸ್‌ಐಟಿ ಕಚೇರಿಗೆ ಹಾಜರಾದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಆದಿಶೇಷ ನಾರಾಯಣ ಅವರ ಸೋದರಿ ಲಕ್ಷ್ಮೀ, 'ಎಸ್‌ಐಟಿ ಅವರಿಗೆ ಸಿಕ್ಕಿದ ಡ್ರೈವಿಂಗ್ ಲೈಸೆನ್ಸ್ ನನ್ನ ಸೋದರನದೇ. ಆತನ ಬಟ್ಟೆಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ಆತ ಬೆಂಗಳೂರಿನಲ್ಲಿ ಬಾರ್ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಆಗಾಗ ಮನೆಗೆ ಬಂದು ಹೋಗುತ್ತಿದ್ದ. 2013ರ ಅಕ್ಟೋಬರ್ ಬಳಿಕ ಮನೆಗೆ ಬಂದಿಲ್ಲ. ಆತ ಮರಳಬಹುದು ಎಂಬ ನಿರೀಕ್ಷೆಯಿಂದ ನಾವೂ ದೂರು ನೀಡಿರಲಿಲ್ಲ' ಎಂದರು.

'ಈಚೆಗೆ ಎಸ್‌ಐಟಿ ಅವರು ಕರೆ ಮಾಡಿ ಆತನ ವಿಳಾಸವಿರುವ ಚಾಲನಾ ಪರವಾನಗಿ ಪತ್ರ ಧರ್ಮಸ್ಥಳದಲ್ಲಿ ಸಿಕ್ಕಿದ ಬಗ್ಗೆ ಮಾಹಿತಿ ನೀಡಿದ್ದರು. ಹಾಗಾಗಿ ಇಂದು ಬಂದು ಅದನ್ನು ಗುರುತಿಸಿದ್ದೇವೆ' ಎಂದರು.

'ಧರ್ಮಸ್ಥಳ ಬಂಗ್ಲೆಗುಡ್ಡೆ ಕಾಡಿನಲ್ಲಿ ಸಿಕ್ಕಿರುವ ಮೃತದೇಹದ ಅವಶೇಷ ಆದಿಶೇಷ ನಾರಾಯಣ ಅವರದೇ ಎಂಬುದು ಇನ್ನೂ ಖಚಿತವಾಗಿಲ್ಲ. ಡಿಎನ್‌ಎ ಪರೀಕ್ಷೆ ಬಳಿಕವಷ್ಟೇ ಅದನ್ನು ಖಚಿತಪಡಿಸಬಹುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬಂಗ್ಲೆಗುಡ್ಡೆ ಕಾಡಿನಲ್ಲಿ ಸಿಕ್ಕಿದ್ದ ಏಳು ತಲೆ ಬುರುಡೆಗಳಲ್ಲಿ ಒಂದು ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಯು.ಬಿ.ಅಯ್ಯಪ್ಪ ಅವರದು ಎಂಬ ಮಾಹಿತಿ ಈ ಹಿಂದೆಯೇ ಸಿಕ್ಕಿತ್ತು. ಅದನ್ನು ಡಿಎನ್‌ಎ ಪರೀಕ್ಷೆ ಮೂಲಕ ಇನ್ನಷ್ಟೇ ಖಾತರಿಪಡಿಸಿಕೊಳ್ಳಬೇಕಿದೆ.

ಇನ್ನೊಂದು ದೂರು: ಎಸ್‌ಐಟಿಗೆ ಗುರುವಾಯನಕೆರೆ ನಿವಾಸಿ ಶಶಿರಾಜ್ ಶೆಟ್ಟಿ ಎಂಬುವರು ಗುರುವಾರ ದೂರು ನೀಡಿದ್ದಾರೆ. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸುಳ್ಳು ಹೇಳಿದ ಕಾರಣಕ್ಕೆ ಸಾಕ್ಷಿದೂರುದಾರನನ್ನೇ ಎಸ್‌ಐಟಿ ಬಂಧಿಸಿದೆ. ಆ ಬಳಿಕವೂ ಕೆಲವರು, ಈ ಪ್ರಕರಣದಲ್ಲಿ ಸಾಕ್ಷಿಗಳಾಗುತ್ತೇವೆ ಎಂದು ಎಸ್‌ಐಟಿಗೆ ಅರ್ಜಿ ಸಲ್ಲಿಸಿದ್ದಾರೆ. ಅವರೆಲ್ಲರನ್ನೂ ಆರೋಪಿಗಳನ್ನಾಗಿ ಪರಿಗಣಿಸಿ ತನಿಖೆಗೆ ಒಳಪಡಿಸಬೇಕು. ಧರ್ಮಸ್ಥಳದ ಬಗ್ಗೆ ಹಾಗೂ ವೀರೇಂದ್ರ ಹೆಗ್ಗಡೆ ಅವರ ಬಗ್ಗೆ ಅಪಪ್ರಚಾರ ಮಾಡುವುದನ್ನು ತಡೆಯಬೇಕು' ಎಂದರು.

97 ತೇಜಸ್ ಜೆಟ್‌ಗಳ ನಿರ್ಮಾಣಕ್ಕೆ ಎಚ್‌ಎಎಲ್ ಜೊತೆಗೆ ಒಪ್ಪಂದ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಗಾಗಿ ₹62,370 ಕೋಟಿ ವೆಚ್ಚದಲ್ಲಿ 97 ತೇಜಸ್ ಲಘು ಯುದ್ಧ ವಿಮಾನಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯವು ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಜೊತೆಗೆ ಗುರುವಾರ ಒಪ್ಪಂದ ಮಾಡಿಕೊಂಡಿದೆ.

2027–28ರ ವೇಳೆಗೆ ಈ ಯುದ್ಧ ವಿಮಾನಗಳನ್ನು ಎಚ್‌ಎಎಲ್ ವಿತರಿಸಲಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭದ್ರತಾ ಸಂಪುಟ ಸಮಿತಿ (ಸಿಸಿಎಸ್) ಈ ಬೃಹತ್ ಖರೀದಿಗೆ ಒಪ್ಪಿಗೆ ನೀಡಿದ ಸುಮಾರು ಒಂದು ತಿಂಗಳ ನಂತರ ಒಪ್ಪಂದ ಮಾಡಿಕೊಳ್ಳಲಾಗಿದೆ.

ಸರ್ಕಾರಿ ಸ್ವಾಮ್ಯದ ಎಚ್‌ಎಎಲ್‌ಗೆ ನೀಡಲಾದ ಎರಡನೇ ಗುತ್ತಿಗೆ ಇದಾಗಿದೆ. 2021ರ ಫೆಬ್ರವರಿಯಲ್ಲಿ ವಾಯುಪಡೆಗಾಗಿ 83 ತೇಜಸ್ ಎಮ್‌ಕೆ–1ಎ ಜೆಟ್‌ಗಳನ್ನು ಖರೀದಿಸಲು ₹48,000 ಕೋಟಿಗಳ ಒಪ್ಪಂದವನ್ನು ಮಾಡಿಕೊಂಡಿತ್ತು.

ಕಡಿಮೆ ಬೆಲೆಗೆ ಎಲ್ಲಿ ಸಿಕ್ಕರೂ ತೈಲ ಖರೀದಿ: ಅಮಿತ್ ಶಾ

ಪ್ರಜಾವಾಣಿ ವಾರ್ತೆ

ಮುಂಬೈ: 'ರಷ್ಯಾ ಮಾತ್ರವಲ್ಲ, ಕಡಿಮೆ ದರಕ್ಕೆ ಎಲ್ಲಿ ತೈಲ ದೊರೆತರೂ ಅಲ್ಲಿಂದ ಖರೀದಿ ಮಾಡುವುದನ್ನು ಭಾರತ ಮುಂದುವರೆಸುತ್ತದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುರುವಾರ ಹೇಳಿದ್ದಾರೆ.


ಅಮಿತ್ ಶಾ

ರಷ್ಯಾದಿಂದ ಕಚ್ಚಾ ತೈಲ ಖರೀದಿ ಮಾಡುತ್ತಿರುವುದು ಪರೋಕ್ಷವಾಗಿ ಉಕ್ರೇನ್ ಹಿಂಸಾಚಾರಕ್ಕೆ ಧನ ಸಹಾಯ ಮಾಡಿದಂತೆ ಎಂದು ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರಾಯ್ಟ್ ಹೇಳಿಕೆ ಕೊಟ್ಟ ಮಾರನೇ ದಿನ ಅಮಿತ್ ಶಾ ಈ ಪ್ರತಿಕ್ರಿಯೆ ನೀಡಿದ್ದಾರೆ.

ಮುಂಬೈನಲ್ಲಿ ಪತ್ರಿಕಾ ಸಮೂಹವೊಂದು ನಡೆಸಿದ ಸಂವಾದದಲ್ಲಿ ರಷ್ಯಾ ತೈಲ ಖರೀದಿಗೆ ಅಮೆರಿಕ ಆಕ್ಷೇಪ ಮತ್ತು ಭಾರತದ ಮೇಲೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಹೆಚ್ಚುವರಿ ಪ್ರತಿಸುಂಕ, ಎಚ್–1 ಬಿ ವಿಸಾ ಶುಲ್ಕ ಹೆಚ್ಚಳ ಕುರಿತು ಅವರು ಉತ್ತರಿಸಿದರು

'ಭಾರತ–ಅಮೆರಿಕ ನಡುವಿನ ವ್ಯಾಪಾರ ಮಾತುಕತೆ ಮುಂದುವರೆದಿದೆ. ಸಚಿವ ಪಿಯೂಶ್ ಗೋಯಲ್ ಅಮೆರಿಕದಲ್ಲೇ ಇದ್ದಾರೆ. ಎರಡು–ಮೂರು ವಾರಗಳಲ್ಲಿ ನಿರ್ಧಾರ ಆಗಬಹುದು. ಎಲ್ಲವೂ ಶೀಘ್ರ ಬಗೆಹರಿಯಲಿದೆ' ಎಂದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ: 'ರಾಹುಲ್ ಗಾಂಧಿ ಅವರ ಪಕ್ಷದ ಹಲವರು ಜಿಎಸ್‌ಟಿ ನಮ್ಮ ಆಲೋಚನೆ ಎನ್ನುತ್ತಿದ್ದಾರೆ. ಮನಮೋಹನ್ ಸಿಂಗ್ ಸರ್ಕಾರದಲ್ಲಿ ಏಕೆ ಅನುಷ್ಠಾನಕ್ಕೆ ತರಲಿಲ್ಲ. ಅವರು ರಾಜ್ಯಗಳು ವಿರೋಧ ಮಾಡುತ್ತಿವೆ ಎಂದಿದ್ದರು. ರಾಜ್ಯಗಳಿಗೆ ಬೆಳವಣಿಗೆಯ ಖಾತ್ರಿ ನೀಡುವಲ್ಲಿ ಯುಪಿಎ ಸರ್ಕಾರ ವಿಫಲವಾಗಿತ್ತು. ಮೋದಿ ಸರ್ಕಾರ ಶೇಕಡ 14ರಷ್ಟು ಪ್ರಗತಿಯನ್ನು ರಾಜ್ಯಗಳಿಗೆ ಖಾತ್ರಿಪಡಿಸಿತು' ಎಂದರು.

38 ಕೆ.ಜಿ ಹಾಲು ನೀಡಿದ ಹಸು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ದಸರಾ ಉತ್ಸವದ ಪ್ರಯುಕ್ತ ಪಟ್ಟಣದಲ್ಲಿ ಗುರುವಾರ ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆಯು ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಗಂಜಾಂನ ನಿಶಾಂತ್ ಶಿವರಾಂ ಅವರ ಮಿಶ್ರ ತಳಿಯ ಹಸು ಎರಡೂ ಹೊತ್ತು ಸೇರಿ 38 ಕೆ.ಜಿ 300 ಗ್ರಾಂ ಹಾಲು ನೀಡಿ, ಪ್ರಥಮ ಸ್ಥಾನ ಪಡೆಯಿತು.

ಪಾಂಡವಪುರ ತಾಲ್ಲೂಕು ಎಲೆಕೆರೆ ಗ್ರಾಮದ ರವಿಕುಮಾರ್ ಅವರ ಹಸು 36 ಕೆ.ಜಿ 900 ಗ್ರಾಂ ಹಾಲು ನೀಡಿ ದ್ವಿತೀಯ ಸ್ಥಾನ ಗಳಿಸಿತು. ತಾಲ್ಲೂಕಿನ ದೊಡ್ಡಪಾಳ್ಯ ಗ್ರಾಮದ ರಂಜಿತ್ ಅವರ ಹಸು 35 ಕೆ.ಜಿ 850 ಗ್ರಾಂ ಹಾಲು ನೀಡಿ ಮೂರನೇ ಸ್ಥಾನ ಪಡೆದರೆ, ಸಬ್ಬನಕುಪ್ಪೆ ಗ್ರಾಮದ ಗಿರೀಶ್ ಅವರ ಹಸು 33 ಕೆ.ಜಿ 850 ಗ್ರಾಂ ಹಾಲು ನೀಡಿ ನಾಲ್ಕನೇ ಸ್ಥಾನ ಗಳಿಸಿತು.

ಜಿಲ್ಲಾ ಪಂಚಾಯಿತಿ ಸಿಇಒ ಕೆ.ಆರ್. ನಂದಿನಿ ಅಧಿಕ ಹಾಲು ನೀಡಿದ ಈ ಹಸುಗಳ ಮಾಲೀಕರಿಗೆ ಕ್ರಮವಾಗಿ ₹50 ಸಾವಿರ, ₹30 ಸಾವಿರ, ₹20 ಸಾವಿರ, ₹10 ಸಾವಿರ ನಗದು ಮತ್ತು ಟ್ರೋಫಿ ವಿತರಿಸಿದರು. ಇಲಾಖೆ ಉಪನಿರ್ದೇಶಕ ಡಾ.ಶಿವಲಿಂಗಯ್ಯ, ಸಹಾಯಕ ನಿರ್ದೇಶಕ ಡಾ.ಪ್ರವೀಣ್ ಇದ್ದರು.

'ಟ್ರಂಪ್– ಮೋದಿ: ಧನಾತ್ಮಕ ಸಂಬಂಧ'

ನ್ಯೂಯಾರ್ಕ್ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಧನಾತ್ಮಕ ಸಂಬಂಧ ಹೊಂದಿದ್ದು, ಆದಷ್ಟು ಬೇಗ ಇಬ್ಬರೂ ಕೂಡ ಭೇಟಿಯಾಗಲಿದ್ದಾರೆ' ಎಂದು ಅಮೆರಿಕ ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದರು.

'ಮುಂದಿನ ಕ್ವಾಡ್ ಶೃಂಗಸಭೆಯ ಸಂಬಂಧ ಯೋಜನೆ ರೂಪಿಸಲಾಗುತ್ತಿದ್ದು, ಅದಕ್ಕೂ ಮುನ್ನವೇ ಭೇಟಿಯಾಗಬಹುದು' ಎಂದು ಹೇಳಿದ್ದಾರೆ.

ಮುಂದಿನ ಕ್ವಾಡ್ ಶೃಂಗಸಭೆಯ ಆತಿಥ್ಯವನ್ನು ಭಾರತ ವಹಿಸಲಿದೆ. ಅಮೆರಿಕ, ಆಸ್ಟ್ರೇಲಿಯಾ ಹಾಗೂ ಜಪಾನ್ ಸದಸ್ಯ ರಾಷ್ಟ್ರಗಳಾಗಿವೆ. 2024ರಲ್ಲಿ ಅಮೆರಿಕದ ಡೆಲಾವೇರ್‌ನ ವಿಲ್ಮಿಂಗ್ಟನ್‌ನಲ್ಲಿ ಈ ಹಿಂದಿನ ಶೃಂಗಸಭೆ ನಡೆದಿತ್ತು.

'ಸಭೆಯ ವಿಷಯು ಶೀಘ್ರದಲ್ಲಿಯೇ ಹೊರಬೀಳಲಿದೆ. ಅಧ್ಯಕ್ಷರ ಭೇಟಿ ಕುರಿತು ಯಾವುದೇ ಮಾಹಿತಿ ನೀಡುವುದಿಲ್ಲ. ಆದರೂ, ಪ್ರಧಾನಿ ನರೇಂದ್ರ ಮೋದಿ–ಅಧ್ಯಕ್ಷ ಟ್ರಂಪ್ ಆದಷ್ಟು ಬೇಗ ಭೇಟಿಯಾಲಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ನಮ್ಮ ಮನಸ್ಸು ಪರಿಶುದ್ಧವಾಗಿದ್ದರೆ, ಸಂತೋಷ ನಮ್ಮ ನೆರಳಿನಂತೆ ಹಿಂಬಾಲಿಸುತ್ತದೆ. ಅದು ನಮ್ಮನ್ನೆಂದೂ ಬಿಟ್ಟು ಹೋಗುವುದಿಲ್ಲ.
–ಗೌತಮ ಬುದ್ಧ

ಸಂಪಾದಕೀಯ

ಮಾನಹಾನಿ ಪ್ರಕರಣ: ಅಪರಾಧ ವ್ಯಾಪ್ತಿಯ ಹೊರಕ್ಕೆ, ಸೂಕ್ತ ಚಿಂತನೆ

ಮಾನಹಾನಿಗೆ ಸಂಬಂಧಿಸಿದಂತೆ ದೇಶದಲ್ಲಿ ಜಾರಿಯಲ್ಲಿರುವ ಕಾನೂನುಗಳಿಂದ 'ಕ್ರಿಮಿನಲ್' ಅಪರಾಧದ ಆಯಾಮವನ್ನು ತೆಗೆಯಬೇಕು ಎಂದು ಸುಪ್ರೀಂ ಕೋರ್ಟ್ ನೀಡಿರುವ ಸಲಹೆಯು ಬಹುಕಾಲದಿಂದ ಇರುವ ಬೇಡಿಕೆಯೊಂದಕ್ಕೆ ಬಲ ನೀಡುವ ಕೆಲಸ ಮಾಡಿದೆ. ಮಾನಹಾನಿಯನ್ನು ಕ್ರಿಮಿನಲ್ ಅಪರಾಧವನ್ನಾಗಿ ಕಾಣುವುದು ನ್ಯಾಯಸಮ್ಮತವಲ್ಲ; ಅಂತಹ ಕಾನೂನನ್ನು ಜನರನ್ನು ಬೆದರಿಸಲು ಹಾಗೂ ಅವರಿಗೆ ಸುದೀರ್ಘ ಅವಧಿಗೆ ಕಿರುಕುಳ ನೀಡಲು ಬಳಸಲಾಗುತ್ತಿದೆ ಎಂಬ ಅರ್ಥವು ಸುಪ್ರೀಂ ಕೋರ್ಟ್‌ನ ಮಾತುಗಳಲ್ಲಿ ಇದೆ. ಈ ಮಾತುಗಳನ್ನು ಹೇಳುವಾಗ ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಅವರು ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಮಾನನಷ್ಟ ಪ್ರಕರಣಗಳ ಬಗ್ಗೆ ಕಳವಳವನ್ನೂ ವ್ಯಕ್ತಪಡಿಸಿದ್ದಾರೆ. ನ್ಯಾಯಮೂರ್ತಿ ಸುಂದರೇಶ್ ಅವರು ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮ ಅವರೂ ಇರುವ ವಿಭಾಗೀಯ ಪೀಠದ ನೇತೃತ್ವ ವಹಿಸಿದ್ದಾರೆ. 'ಫೌಂಡೇಷನ್ ಆಫ್ ಇಂಡಿಪೆಂಡೆಂಟ್ ಜರ್ನಲಿಸಂ' ಎಂಬ ಸಂಸ್ಥೆಯು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಈ ಪೀಠವು ನಡೆಸುತ್ತಿದೆ. ಸುದ್ದಿತಾಣವೊಂದನ್ನು ನಡೆಸುತ್ತಿರುವ ಈ ಸಂಸ್ಥೆಯು 2016ರಲ್ಲಿ ಪ್ರಕಟವಾದ ಲೇಖನವೊಂದಕ್ಕೆ ಸಂಬಂಧಿಸಿದ ಮಾನನಷ್ಟ ಮೊಕದ್ದಮೆಯ ವಿಚಾರವಾಗಿ ಜಾರಿ ಮಾಡಿರುವ ನೋಟಿಸ್ ಅನ್ನು ಕೋರ್ಟ್‌ನಲ್ಲಿ ಪ್ರಶ್ನಿಸಿದೆ. 2016ರಲ್ಲಿ ನೀಡಿದ ಒಂದು ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಮಾನನಷ್ಟ ಪ್ರಕರಣಗಳನ್ನು ಕ್ರಿಮಿನಲ್ ಆಯಾಮದಿಂದ ಕಾಣುವುದು ಸಾಂವಿಧಾನಿಕವೇ ಆಗಿದೆ ಎಂದು ಹೇಳಿತ್ತು. ಅಲ್ಲದೆ, ಸಂವಿಧಾನದ 21ನೇ ವಿಧಿಯು ನೀಡಿರುವ ಘನತೆಯ ಹಕ್ಕನ್ನು ರಕ್ಷಿಸುವ ಅಗತ್ಯವನ್ನು ಈ ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 499 ಹಾಗೂ 500ರ ಅಡಿಯಲ್ಲಿ, ಮಾನಹಾನಿ ಉಂಟುಮಾಡುವುದನ್ನು ಕ್ರಿಮಿನಲ್ ಅಪರಾಧವನ್ನಾಗಿ ಕಾಣಲಾಗಿತ್ತು. ಈ ಸೆಕ್ಷನ್‌ಗಳನ್ನು ಭಾರತೀಯ ನ್ಯಾಯ ಸಂಹಿತೆಯು (ಬಿಎನ್‌ಎಸ್) ಸೆಕ್ಷನ್ 356ರಲ್ಲಿ ಉಳಿಸಿಕೊಂಡಿದೆ.

ಮಾನಹಾನಿಗೆ ಸಂಬಂಧಿಸಿದ ಕಾನೂನುಗಳಿಂದ 'ಕ್ರಿಮಿನಲ್' ಅಪರಾಧದ ಆಯಾಮವನ್ನು ತೆಗೆಯುವ ಚಿಂತನೆ ಸ್ವಾಗತಾರ್ಹ. ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಘನತೆಯಿಂದ ಬಾಳುವ ಹಕ್ಕನ್ನು ಎತ್ತಿಹಿಡಿಯುತ್ತದೆ.

ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗಳನ್ನು ಜನರನ್ನು ಕಿರುಕುಳಕ್ಕೆ ಗುರಿಪಡಿಸಲು ಬಳಕೆ ಮಾಡುವುದು ಹೆಚ್ಚಾಗುತ್ತಿದೆ. ಅದರಲ್ಲೂ ಮುಖ್ಯವಾಗಿ, ಸಾರ್ವಜನಿಕ ಜೀವನದಲ್ಲಿ ಇರುವ ರಾಜಕೀಯ ಮುಖಂಡರಂತಹ ವ್ಯಕ್ತಿಗಳನ್ನು ನ್ಯಾಯಾಲಯದ ಕಟಕಟೆಗೆ ಎಳೆದು, ಜೈಲುಶಿಕ್ಷೆಯ ಭೀತಿಯನ್ನು ಅವರ ಮನಸ್ಸಿನಲ್ಲಿ ಜೀವಂತವಾಗಿ ಉಳಿಸಲು ಬಳಸಿಕೊಳ್ಳಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಕೂಡ ಇದನ್ನು ಅಸ್ತ್ರವನ್ನಾಗಿ ಬಳಕೆ ಮಾಡಲಾಗಿದೆ. ಈ ಅಸ್ತ್ರಕ್ಕೆ ಗುರಿಯಾದ ಹಲವರ ಪೈಕಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೂ ಒಬ್ಬರು. ಪತ್ರಕರ್ತರನ್ನು ಹಾಗೂ ಮಾಧ್ಯಮ ಸಂಸ್ಥೆಗಳನ್ನು ಗುರಿಯಾಗಿಸಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನೇರವಾಗಿ ಆಕ್ರಮಣ ನಡೆಸಲು ಕೂಡ ಈ ಕಾನೂನನ್ನು ಬಳಕೆ ಮಾಡಲಾಗಿದೆ. ಹಲವು ಕಡೆಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತದೆ; ಅವು ಕ್ರಿಮಿನಲ್ ಪ್ರಕರಣಗಳಾದ ಕಾರಣ ಆರೋಪಿ ಸ್ಥಾನದಲ್ಲಿ ಇರುವವರು ಖುದ್ದಾಗಿ ಹಾಜರಾಗಬೇಕಾದ ಅನಿವಾರ್ಯ ಸೃಷ್ಟಿಯಾಗುತ್ತದೆ. ವಿಚಾರಣೆ ಶುರುವಾಗುವುದಕ್ಕೂ ಮೊದಲು ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆಯುವ ಸಾಧ್ಯತೆ ಇರುತ್ತದೆ, ವಿಚಾರಣೆ ಶುರುವಾದ ನಂತರದಲ್ಲಿ ಅದು ದೀರ್ಘ ಅವಧಿಗೆ ನಡೆಯಬಹುದು. ಇಂತಹ ಪ್ರಕರಣಗಳಲ್ಲಿ 'ಸತ್ಯ'ವು ಗುರಾಣಿಯಾಗಿ ರಕ್ಷಣೆಗೆ ಒದಗಿಬರುವುದಿಲ್ಲವಾದ ಕಾರಣ, ಸಾರ್ವಜನಿಕ ಹಿತವನ್ನು ಕಾಯುವ ಉದ್ದೇಶದಿಂದ 'ಮಾನಹಾನಿಕರ' ಎಂದು ಆರೋಪಿಸಲಾದ ಮಾತುಗಳನ್ನು ಆಡಲಾಗಿದೆ ಎಂಬುದನ್ನು ಆರೋಪಿಯೇ ಸಾಬೀತು ಮಾಡಬೇಕಾಗುತ್ತದೆ. ಈ ಕಾನೂನಿನ ವಿನ್ಯಾಸ ಹೇಗಿದೆ ಎಂದರೆ, ಇದು ಆರೋಪಿಯ ವಿರುದ್ಧವಾಗಿ ಕೆಲಸ ಮಾಡುತ್ತದೆ, ನ್ಯಾಯ ಹಾಗೂ ಸಾಂವಿಧಾನಿಕ ಹಕ್ಕುಗಳ ಮೂಲ ತತ್ತ್ವವನ್ನು ಇದು ಉಲ್ಲಂಘಿಸುತ್ತದೆ. ಈ ಕಾನೂನು ವಸಾಹತು ಕಾಲದ ಪಳೆಯುಳಿಕೆ. ಇದು ಪ್ರಜಾತಂತ್ರದ ವಿರೋಧಿ. ಆದರೆ, ಇಂತಹ ಪ್ರಕರಣಗಳನ್ನು ಎಚ್ಚರಿಕೆಯಿಂದ ನಿರ್ವಹಿಸುವಂತೆ ಸುಪ್ರೀಂ ಕೋರ್ಟ್, ಕೆಳಹಂತದ ನ್ಯಾಯಾಲಯಗಳಿಗೆ ಕಿವಿಮಾತು ಹೇಳಿದ್ದುದು ಪರಿಣಾಮಕಾರಿ ಆಗಿಲ್ಲ.

ವ್ಯಕ್ತಿಗಳು ಹಾಗೂ ಸಂಸ್ಥೆಗಳ ಘನತೆಯನ್ನು ಕಾಯಲು ಅಗತ್ಯವಿರುವ ಕಾನೂನುಗಳು ದೇಶದಲ್ಲಿ ಜಾರಿಯಲ್ಲಿವೆ. ಮಾನಹಾನಿ ಆಗಿದೆ ಎಂಬ ಕಾರಣ ನೀಡಿ ವ್ಯಕ್ತಿಗಳು, ಸಂಸ್ಥೆಗಳು ಕ್ರಿಮಿನಲ್ ಕಾನೂನಿನ ಬಳಕೆಗೆ ಮುಂದಾಗಬೇಕಿಲ್ಲ. ಮಾನನಷ್ಟಕ್ಕೆ ಪರಿಹಾರವನ್ನು ಒದಗಿಸಿಕೊಡುವ ಸಿವಿಲ್ ಕಾನೂನು ಪ್ರಕ್ರಿಯೆಗಳು ಅಗತ್ಯ ರಕ್ಷಣೆಯನ್ನು ಒದಗಿಸುತ್ತವೆ. ಅವು ಘನತೆಯಿಂದ ಬದುಕುವ ಹಕ್ಕನ್ನು ರಕ್ಷಿಸುತ್ತವೆ. ಅದೇ ಸಂದರ್ಭದಲ್ಲಿ ಅವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಕಾಪಾಡುತ್ತವೆ. ಪ್ರಜಾತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಹಲವು ದೇಶಗಳು ಮಾನನಷ್ಟವನ್ನು ಕ್ರಿಮಿನಲ್ ಅಪರಾಧವನ್ನಾಗಿ ಕಾಣುವುದನ್ನು ನಿಲ್ಲಿಸಿವೆ. ಭಾರತವೂ ಇಂಥದ್ದೊಂದು ಬದಲಾವಣೆಗೆ ಸಿದ್ಧವಾಗಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಈಗ ಆಡಿರುವ ಮಾತುಗಳ ಮೂಲಕ ಸೂಚ್ಯವಾಗಿ ಹೇಳಿದೆ.

ಎಸ್‌ಐಟಿ: ಸರ್ಕಾರಕ್ಕೆ ನಿರ್ಲಕ್ಷ್ಯವೇ?

ಅನುರಣನ

ನಾರಾಯಣ ಎ.

ಗಂಭೀರ ಅಪರಾಧ ಕೃತ್ಯಗಳು ನಡೆದಿರುವ ಆರೋಪಗಳ ತನಿಖೆಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ವರ್ತಿಸುತ್ತಿರುವ ರೀತಿ, ತನಿಖೆಯ ಉದ್ದೇಶದ ಬಗ್ಗೆಯೇ ಅನುಮಾನ ಹುಟ್ಟಿಸುವಂತಿದೆ. ಜನರ ಮನಸ್ಸಿನಲ್ಲಿರುವ ಗೊಂದಲಗಳ ನಿವಾರಣೆಯ ಬದಲು, ಅನುಮಾನಗಳನ್ನು ಹೆಚ್ಚಿಸುವಂತೆ ಸರ್ಕಾರ ನಡೆದುಕೊಳ್ಳುತ್ತಿದೆ. ಸತ್ಯಸಂಗತಿ ಬೆಳಕಿಗೆ ಬರುವುದು ವಿರೋಧ ಪಕ್ಷಕ್ಕೂ ಬೇಕಾಗಿರುವಂತೆ ಕಾಣಿಸುತ್ತಿಲ್ಲ.

ನೇರವಾಗಿ ಹೇಳಬೇಕು ಎಂದಾದರೆ ಧರ್ಮಸ್ಥಳದಲ್ಲಿ ನೂರಾರು ಹೆಣಗಳ ಅಕ್ರಮ ವಿಲೇವಾರಿಯಾಗಿದೆ ಎನ್ನುವ ಆಪಾದನೆಗಿಂತ ಹೆಚ್ಚು ಬೆಚ್ಚಿ ಬೀಳಿಸುವುದು ರಾಜ್ಯ ಸರ್ಕಾರ ಈ ಪ್ರಕರಣವನ್ನು ನಿಭಾಯಿಸುತ್ತಿರುವ ರೀತಿ. ಅಕ್ರಮ ಹೆಣ ವಿಲೇವಾರಿ ಆಪಾದನೆಯ ತನಿಖೆಗೆಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದು ಬಿಟ್ಟರೆ, ಸರ್ಕಾರ ಈ ವಿಚಾರದಲ್ಲಿ ಇಡುತ್ತಿರುವ ಪ್ರತಿಯೊಂದು ಹೆಜ್ಜೆಯೂ ಅದರ ನಿಜವಾದ ಉದ್ದೇಶದ ಬಗ್ಗೆ ಅನುಮಾನ ಮೂಡಿಸುತ್ತಿದೆ.

ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವ ಉದ್ದೇಶ ಸರ್ಕಾರಕ್ಕೆ ಇದ್ದಂತೆ ಕಾಣಿಸುತ್ತಿಲ್ಲ; ಸತ್ಯ ಏನು ಎನ್ನುವುದನ್ನು ತಿಳಿದುಕೊಳ್ಳುವ ಇರಾದೆಯೂ ಇದ್ದ ಹಾಗೆ ಕಾಣಿಸುವುದಿಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಿರುವ ವಿಷಯವನ್ನು ಈ ಸರ್ಕಾರ ಅದೆಷ್ಟು ನಿರ್ಲಿಪ್ತತೆಯಿಂದ ನಿರ್ವಹಿಸುತ್ತಿದೆ ಎಂದರೆ, ಸರ್ಕಾರದಲ್ಲಿ ಇರುವವರಿಗೆ 'ಕಾನೂನು ಬದ್ಧ ಆಡಳಿತದಲ್ಲಿ' ಕನಿಷ್ಠ ವಿಶ್ವಾಸವೂ ಇದ್ದ ಹಾಗಿಲ್ಲ. ಇದನ್ನು ನಿರ್ಲಿಪ್ತತೆ ಎನ್ನಬೇಕೋ ಅಥವಾ ಅಸಡ್ಡೆ ಎನ್ನಬೇಕೋ ಅರ್ಥವಾಗದಂತಿದೆ.

ಯಾರಾದರೂ ನ್ಯಾಯ ಕೇಳಿದರೆ ಅದನ್ನೇ ಒಂದು ಪಿತೂರಿ ಎನ್ನುವ ನಿರೂಪಣೆಯನ್ನು ಮುಂದಿಡುತ್ತಿರುವ ಕರ್ನಾಟಕದ ವಿರೋಧ ಪಕ್ಷಗಳ ಮತ್ತು ಮಾಧ್ಯಮಗಳ ಕೆಲವು ಮಂದಿಯ ಜೊತೆಗೆ ಸ್ವತಃ ಉಪಮುಖ್ಯಮಂತ್ರಿಗಳೇ ಧ್ವನಿಗೂಡಿಸಿದ್ದಾರೆ. ರಾಜ್ಯದ ಗೃಹಮಂತ್ರಿಗಳ ಮಾತುಗಳನ್ನು ಕೇಳುತ್ತಿದ್ದರೆ, ಯಾರೋ ಮಾಡುತ್ತಿರುವ ಆಪಾದನೆಗಳಿಂದ ಯಾರನ್ನೋ ಬಚಾವ್ ಮಾಡಬೇಕೆನ್ನುವ ಉದ್ದೇಶ ಅವರಿಗಿದೆ ಎಂದು ಅನ್ನಿಸುತ್ತದೆಯೇ ಹೊರತು, ಧರ್ಮಸ್ಥಳದ ಸುತ್ತಮುತ್ತ ನಡೆದುಹೋಗಿರಬಹುದಾದ, ಪತ್ತೆಯಾಗದ ಅತ್ಯಾಚಾರ, ಕೊಲೆ ಮತ್ತು ಹೆಣ್ಣುಮಕ್ಕಳ ಕಣ್ಮರೆ ಪ್ರಕರಣಗಳ ಸತ್ಯಾಸತ್ಯತೆಯನ್ನು ಭೇದಿಸುವ ಇರಾದೆ ಇದ್ದ ಹಾಗೆ ಕಾಣಿಸುವುದಿಲ್ಲ. ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಆಡುವ ಮಾತುಗಳು ನ್ಯಾಯ ಸಿಗಬಹುದು ಎನ್ನುವ ಭರವಸೆ ಮೂಡಿಸುವುದಿಲ್ಲ. ಮೇಲಿನವರ ಕತೆಯೇ ಹೀಗಾದ ಮೇಲೆ ಎಸ್‌ಐಟಿಯಿಂದ ಏನು ಅಪೇಕ್ಷಿಸುವುದು. ಸಹಜವಾಗಿಯೇ ಆರಂಭದಲ್ಲಿ ಎಸ್‌ಐಟಿ ಬಗ್ಗೆ ಇದ್ದ ಭರವಸೆ ಈಗ ಉಳಿದಿಲ್ಲ. ನ್ಯಾಯಾಲಯದಲ್ಲಿ ಸರ್ಕಾರೀ ವಕೀಲರ ವಾದಗಳು ಇದೇ ಜಾಡುಹಿಡಿದಂತೆ ಕಾಣಿಸುತ್ತದೆ.

ಸಾಕ್ಷಿದಾರ ಹೇಳಿದ ಸ್ಥಳಗಳಲ್ಲಿ ಅಗೆದಾಗ ಅಲ್ಲಿ ಮೂಳೆಗಳು ಸಿಗಲಿಲ್ಲ ಎನ್ನುವುದು ನಿಜವೇ ಆಗಿರಬಹುದು. ಆದರೆ, ಅದಕ್ಕೆ ಕಾರಣ ಆತ ಆರಂಭದಲ್ಲಿ ಅಪಾದಿಸಿದಂತೆ ಅಲ್ಲಿ ಹೆಣಗಳನ್ನು ಅಕ್ರಮವಾಗಿ ಹೂತು ಹಾಕಿಯೇ ಇರಲಿಲ್ಲ ಎಂದೇ, ಅಥವಾ ಆತ ತೋರಿಸಬೇಕಾದ ಜಾಗ ಬಿಟ್ಟು ಬೇರೆ ಜಾಗಗಳನ್ನು ತೋರಿಸಿದ ಎಂಬುದೇ? ಆತ ಮೊದಲಿಗೆ ಆಪಾದನೆ ಮಾಡಿದ್ದೇ ಸುಳ್ಳು ಮತ್ತು ಅದನ್ನು ಆತ ಯಾವುದೋ ಪಿತೂರಿಯ ಭಾಗವಾಗಿ ಮಾಡಿದ ಎನ್ನುವುದು ಕೆಲವರ ವಾದವಾದರೆ, ಆತ ಆರಂಭದಲ್ಲಿ ಮಾಡಿದ ಆಪಾದನೆಗಳೆಲ್ಲ ಸತ್ಯವಾಗಿದ್ದು, ಆ ನಂತರ ಯಾವುದೋ ಒತ್ತಡಕ್ಕೋ, ಆಮಿಷಕ್ಕೋ ಬಲಿಯಾಗಿ ಎಸ್‌ಐಟಿಗೆ ತಪ್ಪು ಮಾಹಿತಿ ನೀಡಿದ್ದ ಎನ್ನುವುದು ಇನ್ನೊಂದು ವಾದ. ಇವೆರಡರಲ್ಲಿ ಎಸ್‌ಐಟಿ ತನಿಖೆ ಯಾವ ಜಾಡುಹಿಡಿದು ಸಾಗುತ್ತಿದೆ ಎನ್ನುವುದು ಸ್ಪಷ್ಟವಿಲ್ಲ.

ಪ್ರಕರಣವನ್ನು ಆರಂಭದಿಂದಲೂ ಗಮನಿಸುತ್ತಾ ಬಂದ ಯಾರಿಗೇ ಆದರೂ ಒಂದು ವಿಷಯ ಸ್ಪಷ್ಟ ಆಗುತ್ತದೆ. ಅದೇನೆಂದರೆ, ಸಾಕ್ಷಿದಾರ ತೋರಿದ ಜಾಗದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಅವಶೇಷಗಳು ಸಿಗಲಿಲ್ಲ ಎನ್ನುವುದೊಂದನ್ನೇ ಹಿಡಿದು ಪ್ರಕರಣದ ಗಂಭೀರತೆಯನ್ನು ಅಲ್ಲಗಳೆಯುವ ಹಾಗಿಲ್ಲ. ಯಾಕೆಂದರೆ, ಆ ನಂತರ ಬೇರೆ ಬೇರೆ ಕಡೆ ಮೂಳೆಗಳು ದೊರಕಿವೆ. ಆತ ತಪ್ಪು ಸ್ಥಳಗಳನ್ನು ತೋರಿಸಿದ್ದಾನೆ, ಸರಿಯಾದ ಸ್ಥಳಗಳನ್ನು ನಾವು ತೋರಿಸುತ್ತೇವೆ ಎಂದು ಕೆಲವು ಸ್ಥಳೀಯರು ಮುಂದೆ ಬಂದಿದ್ದಾರೆ. ನ್ಯಾಯಾಲಯದ ಮೊರೆ ಹೋಗಿದ್ದಾರೆ. ಪಿತೂರಿ ಮಾಡುವವರು ನ್ಯಾಯಾಲಯದ ಮೊರೆಹೋಗಲಾರರು ಎನ್ನುವುದು ಸಾಮಾನ್ಯಜ್ಞಾನ.

ಅಷ್ಟಕ್ಕೂ ಅಲ್ಲಿರುವುದು ಅಕ್ರಮ ಶವ ವಿಲೇವಾರಿಯ ಕತೆಯಷ್ಟೇ ಅಲ್ಲ. ಅದು ಸುಳ್ಳು ಎಂದು ತರ್ಕಕ್ಕಾಗಿ ಒಪ್ಪಿಕೊಂಡರೂ, ಧರ್ಮಸ್ಥಳದ ಸುತ್ತಮುತ್ತ ಅಧಿಕೃತವಾಗಿ ದಾಖಲಾದ ಐದು ಕೊಲೆ ಪ್ರಕರಣಗಳಲ್ಲಿ ಅಪರಾಧಿಗಳು ಯಾರು ಎನ್ನುವುದು ಪತ್ತೆಯಾಗಿಲ್ಲ ಎನ್ನುವುದು ಗಂಭೀರ ವಿಚಾರ. ಪ್ರತಿ ಕೊಲೆ ನಡೆದಾಗಲೂ ಪೊಲೀಸರು ಕಳಪೆ ತನಿಖೆ ನಡೆಸುವುದು, ಅಮಾಯಕರನ್ನು ಸಿಲುಕಿಸುವ ಪ್ರಯತ್ನ ನಡೆಸುವುದು ಯಾಕೆ ಎನ್ನುವುದು ಗಂಭೀರ ಪ್ರಶ್ನೆ. ಐದು ಕೊಲೆ ಪ್ರಕರಣಗಳ ಪೈಕಿ ಇಡೀ ರಾಜ್ಯದ ಗಮನವನ್ನು ದೊಡ್ಡ ಮಟ್ಟದಲ್ಲಿ ಸೆಳೆದ ಸೌಜನ್ಯ ಪ್ರಕರಣದಲ್ಲಿ ಸಾಕ್ಷಿಗಳೆಲ್ಲಾ ನಿಗೂಢವಾಗಿ ಸಾವನ್ನಪ್ಪಿದರು ಎನ್ನುವುದು ಗಂಭೀರ ವಿಷಯ. ಸಾಕ್ಷಿದಾರ ಹೇಳಿದ ಸ್ಥಳದಲ್ಲಿ ಅವಶೇಷಗಳು ಸಿಗದೇ ಹೋದರೂ ಬೇರೆಡೆ ಸಿಕ್ಕಿವೆ ಎನ್ನುವುದೂ ಗಂಭೀರ ವಿಚಾರ. ಧರ್ಮಸ್ಥಳ ಪಂಚಾಯಿತಿ ನೀಡಿದ ಅಧಿಕೃತ ದಾಖಲೆಗಳ ಪ್ರಕಾರ, ಹಲವಾರು ಮೃತದೇಹಗಳನ್ನು ಯಾವುದೇ ಕಾನೂನು ಪ್ರಕ್ರಿಯೆಯನ್ನು ಪಾಲಿಸದೆ ಹೂಳಲಾಗಿದೆ ಎನ್ನುವುದೂ ಗಮನಿಸಬೇಕಾದ ವಿಚಾರ. ಆದರೆ ಸರ್ಕಾರ ಇವ್ಯಾವುದನ್ನೂ ಪರಿಗಣಿಸಿದ ಹಾಗಿಲ್ಲ.

ಇನ್ನು ವಿರೋಧ ಪಕ್ಷವಾದ ಬಿಜೆಪಿಯ ನಡವಳಿಕೆಯಂತೂ ವಿಚಿತ್ರವಾಗಿದೆ. ಕೊಲೆ, ಅತ್ಯಾಚಾರ, ಅಪಹರಣ, ಕಾನೂನುಬಾಹಿರ ಹೆಣ ವಿಲೇವಾರಿ, ಹೀಗೆ ಯಾವ ಅಪರಾಧ ಪ್ರಕರಣಗಳೇ ಆಗಿರಲಿ, ಅವೆಲ್ಲವೂ ಒಂದು ತೀರ್ಥಕ್ಷೇತ್ರದ ಆಸುಪಾಸಿನಲ್ಲಿ ನಡೆದರೆ ಪ್ರಶ್ನಿಸಲೇಬಾರದು; ಪ್ರಶ್ನಿಸಿದರೆ ಅದು ಧರ್ಮವಿರೋಧಿ ನಡೆ ಎನ್ನುವಂತಿದೆ ರಾಜ್ಯ ಬಿಜೆಪಿ ನಾಯಕರ ನಿಲುವು! ಇಂತಹದ್ದೊಂದು ಅಮಾನವೀಯ, ಅಪ್ರಬುದ್ಧ ಮತ್ತು ಅಸಂಗತ ವಾದವನ್ನು ಮುಂದಿಡುವುದಕ್ಕೆ ಆ ಪಕ್ಷದ ನಾಯಕರಿಗೆ ಯಾವುದೇ ಅಂಜಿಕೆ, ಅಳುಕು, ನಾಚಿಕೆ ಏನೂ ಇಲ್ಲ.

ಇಷ್ಟೆಲ್ಲಾ ಆಗಿಯೂ ಕಾಂಗ್ರೆಸ್ಸಿಗೆ ಹೋಲಿಸಿದರೆ ಬಿಜೆಪಿಯವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಬಿಜೆಪಿಯ ರಾಜ್ಯಾಧ್ಯಕ್ಷರು ಪಕ್ಷದ ಒಂದಷ್ಟು ಮಂದಿಯ ಜತೆಗೆ 13 ವರ್ಷಗಳ ಹಿಂದೆ ಕೊಲೆಗೀಡಾದ ಸೌಜನ್ಯ ಮನೆಗೆ ಭೇಟಿ ನೀಡಿದ್ದಾರೆ. ಆ ಕುಟುಂಬ ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸುವ ಮೂಲಕ ಸೌಜನ್ಯ ಪ್ರಕರಣದಲ್ಲಿ ನಡೆಯುತ್ತಿರುವ ಹೋರಾಟವೇ ಬೇರೆ, ಅಕ್ರಮ ಹೆಣ ವಿಲೇವಾರಿ ಆಪಾದನೆಯ ಸುತ್ತ ಎದ್ದಿರುವ ವಿವಾದವೇ ಬೇರೆ ಎಂದು ಬಿಜೆಪಿಯೂ ಒಪ್ಪಿಕೊಂಡಂತಾಗಿದೆ.

ಕರ್ನಾಟಕದಲ್ಲಿ ಇರುವ ರಾಜಕೀಯ ಪಕ್ಷಗಳ ಪೈಕಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಎಂ) ಮತ್ತು ಕರ್ನಾಟಕ ರಾಷ್ಟ್ರೀಯ ಸಮಿತಿ (ಕೆಆರ್‌ಎಸ್) ಮಾತ್ರ ಸೌಜನ್ಯ ಮತ್ತು ಹತ್ಯೆಯಾಗಿ ಹೋದ ಇತರ ನತದೃಷ್ಟ ಜೀವಗಳಿಗೆ ನ್ಯಾಯ ಒದಗಿಸಬೇಕು ಎಂದು ಆರಂಭದಿಂದಲೇ ಗಟ್ಟಿ ಧ್ವನಿ ಎತ್ತಿರುವುದು. ಬಿಜೆಪಿಯವರು ಕೆಆರ್‌ಎಸ್ ಪಕ್ಷದ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಂಡಿರಲಿಲ್ಲ, ಆದರೆ ಸಿಪಿಎಂ ಪಕ್ಷದ ಮತ್ತು ಸಮಸ್ತ ಎಡಪಂಥೀಯ ಸಂಘಟನೆಗಳ ಮೇಲೆ ಇನ್ನಿಲ್ಲದಂತೆ ಮುಗಿಬಿದ್ದಿದ್ದರು. ಇಡೀ ಪ್ರಕರಣವು ಎಡಪಂಥೀಯರು ಮಾಡಿರುವ ಪಿತೂರಿ ಎಂದು ಕಂಡಕಂಡಲ್ಲಿ ಆಪಾದಿಸಿದರು. ಕೇರಳದಲ್ಲಿ ಶಬರಿಮಲೆಯ ಮೇಲೆ ದಾಳಿ, ಇಲ್ಲಿ ಹೀಗೆ ದಾಳಿ ಎಂದು ಎಡಪಂಥೀಯರನ್ನು ಧರ್ಮವಿರೋಧಿಗಳೆಂದು ಚಿತ್ರಿಸಲು ಹೊರಟರು. ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯಸ್ಸಿನ ಹೆಣ್ಣುಮಕ್ಕಳೂ ಭೇಟಿನೀಡಬಹುದೆಂದು ತೀರ್ಪು ನೀಡಿದ್ದು ಸುಪ್ರೀಂ ಕೋರ್ಟು ಎನ್ನುವ ಸತ್ಯ ಮತ್ತು ಎಡಪಕ್ಷಗಳ ಸುದೀರ್ಘ ಆಡಳಿತ ಇರುವ ಕೇರಳದಲ್ಲಿ ವೈದಿಕ ಹಿಂದೂಗಳ ದೇವಾಲಯಗಳು ಅತ್ಯಂತ ಸುಂದರವಾಗಿವೆ ಹಾಗೂ ಸುಸ್ಥಿತಿಯಲ್ಲಿವೆ ಎನ್ನುವ ಸತ್ಯ ಬಿಜೆಪಿಯ ಆಪಾದನೆಗಳ ಸುಂಟರಗಾಳಿಯಲ್ಲಿ ಅಕ್ಷರಶಃ ಕೊಚ್ಚಿಕೊಂಡು ಹೋಗಿತ್ತು. ಇಷ್ಟೆಲ್ಲಾ ರಂಪಾಟ ಮಾಡಿದ ನಂತರ ಕೊನೆಗೂ ಈಗ ಬಿಜೆಪಿ ಕೂಡ, ಕೆಆರ್‌ಎಸ್ ಮತ್ತು ಎಡಪಕ್ಷಗಳ ವಾದವನ್ನು ಒಪ್ಪಿಕೊಂಡಿದೆ. ಅಷ್ಟರಮಟ್ಟಿಗೆ ಬಿಜೆಪಿ ಒಳ್ಳೆಯ ಕೆಲಸ ಮಾಡಿದೆ. ಆದರೆ, ಕಾಂಗ್ರೆಸ್ಸಿನ ಎಡಬಿಡಂಗಿತನ ಮುಂದುವರಿದಿದೆ.

ಸರ್ಕಾರ ಏನೇ ಮಾಡಬಹುದು, ನ್ಯಾಯಾಲಯಗಳು ಏನೇ ತೀರ್ಪು ನೀಡಬಹುದು, ಪೊಲೀಸರು ಯಥಾಪ್ರಕಾರ ಮನುಷ್ಯತ್ವ ಮರೆತು ಅಧಿಕಾರದ ಅಮಲು ಪ್ರದರ್ಶಿಸಬಹುದು... ಆದರೆ, ಇವೆಲ್ಲವನ್ನೂ ಮೀರಿ, ಇಡೀ ರಾಜ್ಯದಲ್ಲಿ, ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಸತ್ಯ ಏನು ಎಂದು ತಿಳಿದ ಲಕ್ಷ ಲಕ್ಷ ಜನರಿದ್ದಾರೆ. ಅವರು ಸತ್ಯ ಏನು ಎಂದು ತಿಳಿಯಲು ಸರ್ಕಾರದತ್ತ, ನ್ಯಾಯಾಲಯಗಳತ್ತ, ತನಿಖಾ ಸಂಸ್ಥೆಗಳತ್ತ ಮುಖಮಾಡಿ ನಿಂತಿಲ್ಲ. ಅವರು ತಮಗೆ ಮನವರಿಕೆ ಆಗಿಹೋಗಿರುವ ಸತ್ಯಕ್ಕೆ ಒಂದು ಅಧಿಕೃತ ಮುದ್ರೆ ಬೀಳಲಿ ಎನ್ನುವ ಒಂದೇ ಕಾರಣಕ್ಕೆ ಕಾನೂನು ಹೋರಾಟ ನಡೆಸುತ್ತಿದ್ದಾರೆ, ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದಾರೆ. ಸರ್ಕಾರ, ರಾಜಕೀಯ ಪಕ್ಷಗಳು, ಮಾಧ್ಯಮ ಮತ್ತು ನ್ಯಾಯಾಲಯ... ಹೀಗೆ ಯಾರೂ ಸತ್ಯ-ನ್ಯಾಯದ ಪರ ಇಲ್ಲ ಎನ್ನುವ ಒಂದು ಅಭಿಪ್ರಾಯ ಅಷ್ಟೊಂದು ದೊಡ್ಡ ಸಂಖ್ಯೆಯ ಜನರಲ್ಲಿ ಮೂಡಿದರೆ ಆಗ ಅವರ ಮನದಾಳದಲ್ಲಿ ಹುಟ್ಟಲಿರುವ ಸಾತ್ವಿಕ ರೋಷದ ಪರಿಣಾಮ ಏನಾಗಬಹುದು? ಸಂಬಂಧಪಟ್ಟ ಎಲ್ಲರೂ ಯೋಚಿಸಬೇಕಾದ ವಿಷಯವಿದು.

ವಾಚಕರ ವಾಣಿ

ಸಮೀಕ್ಷೆ: ಪ್ರೀತಿಯ ಮೊಳಕೆಗಳು ಚಿಗುರಲಿ

ನಾನು ಪದವಿ ಓದುತ್ತಿದ್ದಾಗ ರಾಜೇಶ್ವರಿ ತೇಜಸ್ವಿ ಅವರನ್ನು, 'ನಿಮ್ಮದು ಅಂತರ್ಜಾತಿ ವಿವಾಹ ಅಂತೆ ಮೇಡಂ, ಹೌದಾ?' ಎಂದು ಕೇಳಿದ್ದೆ. ಅದಕ್ಕೆ ಅವರು, 'ಯಾರು ನಿಮಗೆ ಹಾಗೆಂದವರು, ನಮ್ಮದು ಅಂತರ್ಜಾತಿಯದ್ದಲ್ಲ; ಆಂತರ್ಯದ ಪ್ರೀತಿ ವಿವಾಹ' ಎಂದಿದ್ದರು. ಈಗ ಸರ್ಕಾರ ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಸೌಲಭ್ಯ ಕಲ್ಪಿಸಲು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದೆ. ಇದರ ಉದ್ದೇಶ ಒಳ್ಳೆಯದಾಗಿದ್ದರೂ, ಇದನ್ನೇ ನೆಪವಾಗಿಟ್ಟುಕೊಂಡು ಜಾತಿ ವ್ಯವಸ್ಥೆಯು ಇನ್ನಷ್ಟು ಗಟ್ಟಿಗೊಳ್ಳಬಾರದು. ಕಾಲಕ್ರಮೇಣ ಜಾತಿಯ ಕಟ್ಟುಪಾಡುಗಳು ಸಂಪೂರ್ಣ ಇಲ್ಲವಾಗಿ ಪ್ರೀತಿಯ ಮೊಳಕೆಯು ಚಿಗುರಿ ಬೆಳೆಯುವಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವುದು ಸರ್ಕಾರದ ಹೊಣೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಯಕ್ಷಪ್ರಶ್ನೆ: ಖಾಲಿ ಸ್ಥಾನ ತುಂಬಬಲ್ಲರೇ?

ಎಡಪಂಥೀಯರೇ ಆಗಿರಲಿ, ಬಲಪಂಥೀಯರೇ ಆಗಿರಲಿ, ಮಧ್ಯಮ ಪಂಥೀಯರೇ ಆಗಿರಲಿ– ಒಟ್ಟಿನಲ್ಲಿ ಘನವಾದ ಲೇಖಕರು, ಈ ಲೋಕ ಬಿಟ್ಟು ಹೊರಟಾಗ, ಆ ಖಾಲಿ ಸ್ಥಾನವನ್ನು ಮುಂದಿನವರು ತುಂಬಬಲ್ಲರೇ ಎಂಬುದು ಯಕ್ಷಪ್ರಶ್ನೆಯಾಗಿದೆ.

ರಾಜಶೇಖರ ಕುಕ್ಕುಂದಾ, ಬಾಗಲಕೋಟೆ

ಭೈರಪ್ಪನವರಿಗೊಂದು ಸಾಹಿತ್ಯ ಗೌರವ

ಎಸ್.ಎಲ್. ಭೈರಪ್ಪನವರು ಕನ್ನಡ ಕಾದಂಬರಿ ಪ್ರಕಾರದ ಘನತೆಯನ್ನು ವಿಸ್ತರಿಸಿದ ಕೀರ್ತಿಗೆ ಭಾಜನರಾದ ಪ್ರಸಿದ್ಧ ಸಾಹಿತಿ; ಅಪಾರ ಸಂಖ್ಯೆಯ ಓದುಗರನ್ನು ಪಡೆದಿದ್ದ ವಿರಳ ಲೇಖಕರಾದ ಅವರ ಕಾದಂಬರಿಗಳ ವಸ್ತು ನಿರೂಪಣೆ ಮತ್ತು ಆಶಯಗಳು ಸಹಜವಾಗಿ ಆಕರ್ಷಣೀಯವಾಗಿದ್ದವು; ಜೊತೆಗೆ ಚರ್ಚೆ ಮತ್ತು ಚಿಂತನೆಗಳನ್ನೂ ಪ್ರೇರೇಪಿಸಿದವು; ವಾಗ್ವಾದಗಳನ್ನು ಆಹ್ವಾನಿಸಿದವು. ವಿಶೇಷವೆಂದರೆ ಅವರು ಕೃತಿ ರಚನೆಗೆ ಮುಂಚೆ ಅಪರೂಪದ ಕ್ಷೇತ್ರಕಾರ್ಯ ಮಾಡುತ್ತಿದ್ದ ಲೇಖಕರಾಗಿದ್ದರು. ನಾನು ಅವರ ಕೃತಿಗಳೊಂದಿಗೆ ಸಂವಾದ ಮತ್ತು ವಾಗ್ವಾದ – ಎರಡನ್ನೂ ನಡೆಸುವ ಮೂಲಕ ಅವರ ಕಥನ ಕಲೆಯನ್ನು ಗೌರವಿಸಿದ್ದೇನೆ.

'ವಂಶವೃಕ್ಷ' ಕಾದಂಬರಿ ಕುರಿತು 25ಕ್ಕೂ ಹೆಚ್ಚು ಪುಟಗಳ ಕಿರುಪುಸ್ತಕ ಬರೆದು ವಿಶ್ಲೇಷಿಸಿದ್ದೆ. 'ವಂಶವೃಕ್ಷ'ವು ಸಿನಿಮಾ ಆದಾಗ ಕಾದಂಬರಿ ಮತ್ತು ಸಿನಿಮಾವನ್ನು ತೌಲನಿಕವಾಗಿ ಚರ್ಚೆ ಮಾಡಿದ್ದೆ. 'ದಾಟು' ಕಾದಂಬರಿಯನ್ನು ಯು.ಆರ್. ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಗೆ ಹೋಲಿಸಿ ಕೆಲವು ಸಕಾರಾತ್ಮಕ ಅಂಶಗಳನ್ನು ನಿರೂಪಿಸಿದ್ದೆ. 'ಪರ್ವ'ದಂತಹ ಪ್ರಯೋಗಾತ್ಮಕ ಮರುಸೃಷ್ಟಿಯನ್ನು ಆಸಕ್ತಿಯಿಂದ ಅರ್ಥ ಮಾಡಿಕೊಂಡಿದ್ದೆ. 'ಆವರಣ' ಕಾದಂಬರಿಯ ಜೊತೆ ವಾಗ್ವಾದ ಮಾಡಿದ್ದೆ. ಇಷ್ಟೆಲ್ಲ ಮಾಡಿಸಿದ್ದು ಭೈರಪ್ಪನವರ 'ಕೃತಿಸೆಳೆತ'. ಆದರೆ, ಅವರ ಕೆಲವು ಸಾಮಾಜಿಕ-ರಾಜಕೀಯ ಅಭಿಪ್ರಾಯಗಳ ಬಗ್ಗೆ ಖಚಿತ ಭಿನ್ನಾಭಿಪ್ರಾಯ ಹೊಂದಿದ್ದೇನೆ. ತಾತ್ವಿಕ ಭಿನ್ನಾಭಿಪ್ರಾಯಗಳು ವೈಯಕ್ತಿಕ ವಿರೋಧವಾಗಬಾರದೆಂಬ ವಿವೇಕ ಮುಖ್ಯ ಎಂದು ನಾನು ನಂಬಿದ್ದೇನೆ. ಈ ಹಿನ್ನೆಲೆಯಲ್ಲಿ ಅವರು ಕಾದಂಬರಿ ಪ್ರಕಾರದಲ್ಲಿ ಜನಪ್ರಿಯತೆ ಮತ್ತು ಗಂಭೀರತೆಗಳನ್ನು ಬೆಸೆದ ಬಗೆಯನ್ನು ಸಾಹಿತ್ಯ ವಿವೇಕದಿಂದ ಗೌರವಿಸುತ್ತೇನೆ. ಅವರ ಸಾಹಿತ್ಯ ಸ್ಮರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸುತ್ತೇನೆ.

ಬರಗೂರು ರಾಮಚಂದ್ರಪ್ಪ, ಬೆಂಗಳೂರು

ಬಾಯಿಪಾಠದ ಉತ್ತರಕ್ಕೆ ಚುನಾಯಿಸಿಲ್ಲ

'ಪ್ರಧಾನಿ ನರೇಂದ್ರ ಮೋದಿ ಅವರ ನಿವಾಸದ ರಸ್ತೆಯಲ್ಲೂ ಗುಂಡಿಗಳಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿರುವ ಮಾತುಗಳು ಎಷ್ಟರ ಮಟ್ಟಿಗೆ ಸರಿ? ವಿಪಕ್ಷಗಳು ಮಾಡಲಾಗದ್ದನ್ನು ತಾವು (ಕಾಂಗ್ರೆಸ್) ಮಾಡುತ್ತೀರಿ ಎಂಬ ನಂಬಿಕೆಯ ಮೇಲೆ ತಾನೆ ಜನ ಓಟು ಹಾಕಿ ನಿಮ್ಮನ್ನು ಗೆಲ್ಲಿಸಿದ್ದು. 'ನೀವು ಮಾಡಿಲ್ಲ, ಅದಕ್ಕೆ ನಾವು ಮಾಡಿಲ್ಲ' ಎಂಬ ಬಾಯಿ ಪಾಠದ ಉತ್ತರ ನೀಡುವ ಸ್ಥಾನದಲ್ಲಿ ನೀವಿಲ್ಲ ಎಂಬುದನ್ನು ತಿಳಿದುಕೊಂಡರೆ ಒಳ್ಳೆಯದು.

ಆಕಾಶ್, ಬಾಗಲಕೋಟೆ

ಹೆಲಿಕಾಪ್ಟರ್ ಹಾರಾಟ ತಂದ ಪೀಕಲಾಟ

ತುಮಕೂರು ದಸರಾ ಉತ್ಸವದ ಅಂಗವಾಗಿ ತುಮಕೂರು ವಿ.ವಿ. ಆವರಣದಲ್ಲಿ ಹೆಲಿಕಾಪ್ಟರ್ ಸವಾರಿ ಆರಂಭಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಏಕಾಗ್ರತೆಯಿಂದ ಪಾಠ ಕೇಳಲು ಆಗುತ್ತಿಲ್ಲ. ಹೆಲಿಕಾಪ್ಟರ್ ಹಾರಾಟದ ವೇಳೆ ಏಳುವ ದೂಳು ಕ್ಯಾಂಪಸ್‌ನ ಪರಿಸರದ ಮೇಲೆ ಪರಿಣಾಮ ಬೀರಿದೆ. ಜನದಟ್ಟಣೆಯ ಶೈಕ್ಷಣಿಕ ಸ್ಥಳದಲ್ಲಿ ಹೆಲಿಕಾಪ್ಟರ್ ಕಾರ್ಯಾಚರಣೆಯು ಸಂಭಾವ್ಯ ಅಪಾಯವನ್ನು ಉಂಟು ಮಾಡುವ ಆತಂಕವಿದೆ. ಕ್ಯಾಂಪಸ್‌ನ ಮೂಲ ಉದ್ದೇಶ ಶಿಕ್ಷಣಕ್ಕಾಗಿ, ಮನರಂಜನೆಗಾಗಿ ಅಲ್ಲ. ಹಬ್ಬಗಳು ನಮಗೆ ಮುಖ್ಯ. ಆದರೆ, ಆಚರಣೆ ನೆಪದಲ್ಲಿ ವಿದ್ಯಾರ್ಥಿಗಳ ಹಕ್ಕಿನ ಮೊಟಕಿಗೆ ಕಾರಣವಾಗಬಾರದು. ಜಿಲ್ಲಾಡಳಿತದ ಅವೈಜ್ಞಾನಿಕ ನಡೆಗೆ ಇದು ನಿದರ್ಶನವಾಗಿದೆ.

ಶ್ರೀನಿವಾಸ ಎಲ್., ತುಮಕೂರು

ಹಿರಿಯರಿಗೆ ಸಿಗದ 'ಆಯುಷ್ಮಾನ್' ಆಸರೆ

ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತರಿಗೆ ಅಕ್ಟೋಬರ್ 1ರಿಂದ 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' ಜಾರಿ ಆಗುತ್ತಿರುವುದು ಸ್ವಾಗತಾರ್ಹ.

ಕೇಂದ್ರ ಸರ್ಕಾರವು 70 ವರ್ಷ ದಾಟಿದ ಹಿರಿಯ ನಾಗರಿಕರಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಸೌಲಭ್ಯ ನೀಡುವುದಾಗಿ ಘೋಷಿಸಿ ಒಂದು ವರ್ಷ ಸಂದಿದೆ. ಆದರೆ, ಇಲ್ಲಿಯವರೆಗೂ 'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ'ಯ ಕಾರ್ಡನ್ನು ಯಾವುದೇ ಖಾಸಗಿ ಆಸ್ಪತ್ರೆಯೂ ಮಾನ್ಯ ಮಾಡುತ್ತಿಲ್ಲ. ಸರ್ಕಾರವು ಈ ಸಮಸ್ಯೆಯನ್ನು ಬಗೆಹರಿಸಬೇಕಿದೆ.

ಎ.ವಿ. ಶಾಮರಾವ್, ಬೆಂಗಳೂರು

ಲೇಖಕನ ವೈಚಾರಿಕತೆ

ಕಬ್ಬಿಣಕ್ಕೆ ತುಕ್ಕು ನಿರೋಧಕ ಶಕ್ತಿ ಇದ್ದರಷ್ಟೇ ಅದು ಹೆಚ್ಚು ಕಾಲ ಬಾಳುವುದು. ಅದಿಲ್ಲದೇ ಹೋದರೆ ಅದು ಎಷ್ಟೇ ಗಟ್ಟಿಯಿದ್ದರೂ ನಿಧಾನಕ್ಕೆ ತುಕ್ಕು ಹಿಡಿಯುತ್ತದೆ. ಹಾಗೆಯೇ ಎಷ್ಟೇ ದೊಡ್ಡ ಲೇಖಕರಾದರೂ ಅವರಿಗೆ ಧರ್ಮ, ಜಾತಿ, ಲಿಂಗ ತಾರತಮ್ಯದ ವಿಚಾರಗಳಲ್ಲಿ ಅವುಗಳನ್ನು ಮೀರಿ ನಿಲ್ಲುವಂತಹ ವೈಚಾರಿಕತೆ ಇರಬೇಕು.

ರಂಗನಾಥ ಕಂಟನಕುಂಟೆ, ಕವಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಪಾಕಿಸ್ತಾನದ ಬಗ್ಗೆ ಅಸಮಾಧಾನವಿದ್ದರೆ ಭಾರತದ ಕ್ರಿಕೆಟ್ ತಂಡವು ಏಷ್ಯಾ ಕಪ್ ಟೂರ್ನಿಯಲ್ಲಿ ಆಡಬಾರದಿತ್ತು. ನಾವು ಅವರೊಂದಿಗೆ ಆಡಲು ಹೋದರೆ ಸಂಪ್ರದಾಯದಂತೆ ಆಟ ಆಡಬೇಕು. ಎದುರಾಳಿ ತಂಡದ ಆಟಗಾರರೊಂದಿಗೆ ಕೈಕುಲಕಬೇಕಿತ್ತು.

ಶಶಿ ತರೂರ್, ಕಾಂಗ್ರೆಸ್ ಸಂಸದ

ಚುರುಮುರಿ



ಸ್ಥಾನ 'ಮಾನ!'

• ಬಿ.ಎನ್. ಮಲ್ಲೇಶ್

'ಲೇ ತೆಪರ, 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ...' ಇದೇ ತರ ಇನ್ನೊಂದು ಹೇಳಲೆ ನೋಡಾಣ' ಹರಟೆಕಟ್ಟೆಯಲ್ಲಿ ದುಬ್ಬೀರ ಸವಾಲು ಹಾಕಿದ.

'ಅಷ್ಟೇನಾ? 'ಗುಂಡಿ ರಸ್ತೆಯೊಳಗೋ ರಸ್ತೆಯೇ ಗುಂಡಿಯೊಳಗೋ... ಹೆಂಗೆ?' ಎಂದ ತೆಪರೇಸಿ.

'ನಂದೂ ಒಂದು..., 'ಬುರುಡೆ ಟೀವಿಯೊಳಗೋ ಟೀವಿಯೇ ಬುರುಡೆಯೊಳಗೋ...' ಗುಡ್ಡೆ ಸೇರಿಸಿದ.

'ವಾವ್ವಾ... ನಿಮ್ಗೂ ತೆಲಿ ಐತಿ ಬಿಡ್ರಪ, ಏನೇ ಆಗ್ಲಿ ಈ ಕೈ ಸರ್ಕಾರದಲ್ಲಿ ಗುಂಡಿಗಳದ್ದೇ ಕಾರುಬಾರು...' ಎಂದು ಮಂಜಮ್ಮ ಜೋರಾಗಿ ನಕ್ಕಳು.

'ಹಲೋ... ಅವೆಲ್ಲ ನಿಮ್ ಕಮಲ ಸರ್ಕಾರ ಇದ್ದಾಗ ಆದ ಗುಂಡಿಗಳು, ಸ್ವಲ್ಪ ತಿಳ್ಕಂಡು ಮಾತಾಡು' ಎಂದ ಗುಡ್ಡೆ.

'ನಮ್ ಸರ್ಕಾರದ ಗುಂಡಿಗಳಾದ್ರೆ? ನಿಮ್ ಸರ್ಕಾರ ಮುಚ್ಚಬಾರ್ದು ಅಂತಿದೆಯಾ? ಮೊನ್ನೆ ಶುಭಾಂಶು ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿದ್ನಲ್ಲ, ಅಲ್ಲಿಂದ ಬಗ್ಗಿ ಭೂಮಿ ನೋಡಿದ್ನಂತೆ. ಬೆಂಗಳೂರು ಎಲ್ಲಿದೆ ಅಂತ ಜತೆಗಿದ್ದೋರು ಕೇಳಿದಾಗ ಅಲ್ಲಿ ಬರೀ ಗುಂಡಿ ಕಾಣ್ತದಾವಲ್ಲ, ಅದೇ ಬೆಂಗಳೂರು ಅಂದ್ನಂತೆ ಗೊತ್ತಾ?' ಎಂದು ಮಂಜಮ್ಮ ತಿರುಗೇಟು ನೀಡಿದಳು.

'ನಿಮ್ ನಮೋ ಸಾಹೇಬ್ರ ಮನೆ ಮುಂದೂ ಗುಂಡಿಗಳದಾವಂತೆ, ನಮ್ ಡಿಕೆಶಿ ಸಾಹೇಬ್ರು ಹೋಗಿ ನೋಡ್ಕಂಡ್ ಬಂದಿದಾರೆ, ಅದು ಗೊತ್ತಾ ನಿನಗೆ?' ಗುಡ್ಡೆಯೂ ಹಟ ಬಿಡಲಿಲ್ಲ.

'ಈಗ ನಿಮ್ ಕೈ ಸರ್ಕಾರದಲ್ಲಿ ಗುಂಡಿ ತೋಡೋರು ಬಾಳ ಜನ ಆಗಿದಾರೆ, ಯಾರು ಯಾವ ಗುಂಡಿಗೆ ಬೀಳ್ತಾರೋ ನೋಡ್ತಿರು...' ಮಂಜಮ್ಮ ಗರಂ ಆದಳು.

'ಏಯ್, ಈಗ ಇಬ್ರೂ ಸುಮ್ನಿರ್ತೀರೋ ಇಲ್ಲೋ? ಹಂಗೆ ನೋಡಿದ್ರೆ ಆಕಾಶದ ಚಂದ್ರನ ಮ್ಯಾಲೂ ಗುಂಡಿ ಅದಾವಂತೆ, ಅವನ್ನ ಮುಚ್ಚೋರ್ಯಾರು? ಈಗ ಆ ಟಾಪಿಕ್ ಬ್ಯಾಡ, ಲೇ ತೆಪರ, ಜಾತಿ ಸಮೀಕ್ಷೇಲಿ ವೈವಾಹಿಕ ಸ್ಥಾನಮಾನ ಅಂತ ಒಂದು ಕಾಲಂ ಇದೆಯಂತೆ, ನೀನು ಏನು ತುಂಬಿದೆ?' ದುಬ್ಬೀರ ಮಾತು ಬದಲಿಸಿದ.

'ವೈವಾಹಿಕ ಸ್ಥಾನಮಾನನ? ಸ್ಥಾನ ಇದೆ, ಮಾನ ಇಲ್ಲ ಅಂತ ತೆಪರ ತುಂಬಿರ್ತಾನೆ ಅಷ್ಟೆ...' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

25 ವರ್ಷಗಳ ಹಿಂದೆ

ಮಂಗಳವಾರ, 26-9-2000

• **ನ್ಯಾಯಮೂರ್ತಿಗೆ ಬಿಡಿಎ ನೋಟಿಸ್**

ಬೆಂಗಳೂರು, ಸೆ.25– ನಗರದ ಎಚ್‌ಎಸ್‌ಆರ್ (ಹೊಸೂರು– ಸರ್ಜಾಪುರ ರಸ್ತೆ) ಬಡಾವಣೆಯ 2ನೇ ಹಂತ ರಚನೆಗಾಗಿ ಭೂಸ್ವಾಧೀನ ಪಡೆಯಲು ಅಧಿಸೂಚನೆ ಹೊರಡಿಸಿರುವ ಅಗರ ಗ್ರಾಮದ ಸರ್ವೆ ನಂಬರ್ 6/1ರಲ್ಲಿ ಅನಧಿಕೃತವಾಗಿ ಪೆಟ್ರೋಲ್ ಬಂಕ್ ಸ್ಥಾಪಿಸಿರುವುದಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸದ್ಯ ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರಿಗೆ ಮತ್ತು ಇತರ ಮೂವರಿಗೆ ನೋಟಿಸ್ ಜಾರಿಗೊಳಿಸಿದೆ.

ಮೇಲಿನ ಸರ್ವೆ ನಂಬರ್‌ನಲ್ಲಿ ನಾಲ್ಕು ಎಕರೆ 25 ಗುಂಟೆ ಜಮೀನು ಇದೆ. ಇದು ಪ್ರಾಧಿಕಾರದ ಭೂಸ್ವಾಧೀನ ನಡವಳಿಕೆಗೆ ಒಳಪಟ್ಟಿದೆ. ಇದರಲ್ಲಿ 20 ಗುಂಟೆಯನ್ನು ಪೆಟ್ರೋಲ್ ಬಂಕ್ ಸ್ಥಾಪಿಸಲು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಿರುವುದು ಕಾನೂನುಬಾಹಿರ ಎಂದು ಬಿಡಿಎ ಆಯುಕ್ತ ಜಯಕರ್ ಜರೋಮ್ ಅವರು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 26-9-1950

• **ಆರ್ಥಿಕ ಮಂಡಳಿ ಸ್ಥಾಪನೆ**

ನವದೆಹಲಿ, ಸೆ. 25– ದಕ್ಷಿಣ ಭಾರತ ರಾಜ್ಯಗಳಲ್ಲಿ ಭತ್ತದ ಉತ್ಪಾದನೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು, ಶೀಘ್ರವೇ ಆರ್ಥಿಕ ಮಂಡಳಿ ರಚಿಸಲಿದೆ.

ಮೈಸೂರು, ಮದರಾಸ್, ತಿರುವಾಂಕೂರು–ಕೊಚ್ಚಿನ್ ಯೂನಿಯನ್ ಮತ್ತು ಹೈದರಾಬಾದ್ ಈ ಮಂಡಳಿಯ ವ್ಯಾಪ್ತಿಗೆ ಒಳಪಡಲಿವೆ. ಮಂಡಳಿಯ ಕಾರ್ಯ ಚಟುವಟಿಕೆ ಕುರಿತ ರೂಪರೇಷೆಗಳನ್ನು ಅಂತಿಮಗೊಳಿಸಲಾಗಿದೆ.

ಸಂಗತ

ಸಜ್ಜನಿಕೆ ನೇಪಥ್ಯಕ್ಕೆ, ತುಡುಗುತನ ಮುನ್ನೆಲೆಗೆ!

ಕ್ರಿಕೆಟ್ ಸಜ್ಜನರ ಆಟವಾಗಿ ಈಗ ಉಳಿದಂತಿಲ್ಲ. ಪಾಕಿಸ್ತಾನದ ಆಟಗಾರರ ಉದ್ಧಟತನದ ನಡವಳಿಕೆಯಲ್ಲಂತೂ ಕ್ರೀಡಾಸ್ಫೂರ್ತಿಯ ಲವಲೇಶವೂ ಇಲ್ಲ.

• ವಿಶಾಖ ಎನ್.

1980ರ ದಶಕದಲ್ಲಿ ವೆಸ್ಟ್‌ಇಂಡೀಸ್ ಹಾಗೂ ಪಾಕಿಸ್ತಾನದ ನಡುವಿನ ಟೆಸ್ಟ್ ಪಂದ್ಯದಲ್ಲಿ ವಿವಿಯನ್ ರಿಚರ್ಡ್ಸ್ ಅವರಿಗೆ ವಸೀಂ ಅಕ್ರಮ್ ಬೌನ್ಸರ್ ಹಾಕಿದರು. ಚೆಂಡು ಅಪ್ಪಳಿಸಿ ರಿಚರ್ಡ್ಸ್ ತೊಟ್ಟಿದ್ದ ಟೋಪಿ ಕೆಳಗೆ ಬಿತ್ತು. ವಸೀಂ ಆಗಿನ್ನೂ ಯುವಕ. ಹರುಕುಮುರುಕು ಇಂಗ್ಲಿಷ್‌ನಲ್ಲಿ ಏನೋ ಗೊಣಗುಟ್ಟಿದರು. ತಕ್ಷಣವೇ ರಿಚರ್ಡ್ಸ್ ತಮ್ಮ ತಂಟೆಗೆ ಬಂದರೆ ಕೊಂದುಬಿಡುವುದಾಗಿ ಖಡಕ್ಕಾಗಿ ಹೇಳಿದರು.

ದಿನದಾಟ ಮುಗಿದ ಮೇಲೆ ಡ್ರೆಸಿಂಗ್ ಕೋಣೆಯ ಕದ ಬಡಿದ ಸದ್ದು. ಹೋಗಿ ತೆಗೆದರೆ, ಎದುರಲ್ಲಿ ಅಂಗಿಯನ್ನೇ ಹಾಕದೆ ಅರೆನಗ್ನವಾಗಿ ನಿಂತಿದ್ದ ರಿಚರ್ಡ್ಸ್. ಕದ ತೆರೆದ ವಸೀಂ ಎದೆಬಡಿತ ಜೋರಾಯಿತು. ಆದರೆ, ನಡೆದದ್ದೇ ಬೇರೆ. ವಸೀಂ ಎಸೆತದ ಸಹಜ ವೇಗವನ್ನು ವೆಸ್ಟ್‌ಇಂಡೀಸ್‌ನ ದೈತ್ಯ ಬ್ಯಾಟ್ಸ್‌ಮನ್ ಬಾಯಿತುಂಬಾ ಹೊಗಳಿದರು. ವಸೀಂಗೆ ಹೋದ ಜೀವ ಮರಳಿದಂತಾಯಿತು.

ಕ್ರಿಕೆಟ್ ಸಜ್ಜನರ ಆಟ ಎಂದು ಹೆಸರಾಗಿರುವುದು ಯಾಕೆ ಎನ್ನುವುದಕ್ಕೆ ಇಂತಹ ಅಸಂಖ್ಯ ಉದಾಹರಣೆಗಳಿವೆ. ಆದರೆ, ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವಿನ ಪಂದ್ಯಗಳಲ್ಲಿ ಸನ್ನಡತೆಗೆ ಹುಡುಕಾಡಬೇಕಾದ ಪರಿಸ್ಥಿತಿ ಬಂದಿದೆ. ಅದರಲ್ಲೂ ಮೊದಲೇ ಅಸ್ತವ್ಯಸ್ತವಾಗಿರುವಂತೆ ಕಾಣುತ್ತಿರುವ ಪಾಕಿಸ್ತಾನದ ಆಟಗಾರರು ಹೊಣೆಗೇಡಿಗಳಂತೆ ವರ್ತಿಸುತ್ತಿದ್ದಾರೆ.

ಪಾಕಿಸ್ತಾನದ ಬ್ಯಾಟ್ಸ್‌ಮನ್ ಸಾಹಿಬ್‌ಜಾದಾ ಫರ್ಹಾನ್ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಭಾರತದ ಎದುರು ಅರ್ಧಶತಕ ಹೊಡೆದದ್ದು ಮೆಚ್ಚತಕ್ಕದ್ದು. ಆ ಸಾಧನೆ ಮಾಡಿದ ನಂತರ ಅವರು ಬ್ಯಾಟನ್ನು ಎಕೆ-47 ರೀತಿಯಲ್ಲಿ ಹಿಡಿದು, ಗುಂಡಿನ ಮೊರೆತಗೈಯುವಂತಹ ಸಂಜ್ಞೆ ಮಾಡಿದ್ದು ಉದ್ಧಟತನ. ಅದು ಟ್ರೋಲ್‌ಗೆ ಒಳಗಾದ ಮೇಲೂ, ತಾವು ಸಹಜವಾಗಿ ಹಾಗೆ ಸೆಲೆಬ್ರೇಟ್ ಮಾಡಿದ್ದೇ ವಿನಾ ಯಾವುದೇ ದುರುದ್ದೇಶ ಇರಲಿಲ್ಲ ಎಂದು ಸಮರ್ಥಿಸಿಕೊಂಡಿದ್ದಂತೂ ಕ್ರೀಡಾಸ್ಫೂರ್ತಿ ಅವರಲ್ಲಿ ಮಣ್ಣು ಪಾಲಾಗಿದೆ ಎನ್ನುವುದಕ್ಕೆ ಸಾಕ್ಷಿ.

ಬೌಂಡರಿ ಗೆರೆಯ ಬಳಿ ನಿಂತಿದ್ದ ಹ್ಯಾರಿಸ್ ರವೂಫ್ ಅವರನ್ನು ನೋಡಿಕೊಂಡು ಕೆಲವು ಅಭಿಮಾನಿಗಳು 'ಕೊಹ್ಲಿ ಕೊಹ್ಲಿ' ಎಂದು ಚೀರಿದಾಗ ಅವರಿಂದ ಬಂದ ಪ್ರತಿಕ್ರಿಯೆ ಇನ್ನೂ ಆತಂಕಕಾರಿಯಾಗಿತ್ತು. ಅವರು 'ಆರು' ಹಾಗೂ 'ಸೊನ್ನೆ' ಎಂದು ಬೆರಳುಗಳಿಂದ ಇಶಾರೆ ಮಾಡಿ ತೋರಿದರು. 'ಪಹಲ್ಗಾಮ್ ದಾಳಿಯ ನಂತರ ನಡೆದ ಸಂಘರ್ಷದಲ್ಲಿ ಪಾಕಿಸ್ತಾನವು ಭಾರತದ ಆರು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿತು, ಭಾರತ ಉರುಳಿಸಿದ್ದು ಸೊನ್ನೆ ಎನ್ನುವುದನ್ನು ರವೂಫ್ ಆ ರೀತಿ ವ್ಯಕ್ತಪಡಿಸಿದ್ದಾರೆ' ಎಂದು ಅನೇಕರು ಅದನ್ನು ಬಗೆದು ನೋಡಿದರು.

ಏಷ್ಯಾ ಕಪ್‌ನ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಪಾಕಿಸ್ತಾನವು ಜಸ್‌ಪ್ರೀತ್ ಬೂಮ್ರಾ ಅವರನ್ನು ಆತ್ಮವಿಶ್ವಾಸದಿಂದ ದಂಡಿಸಿತು. ಸಾಹಿಬ್‌ಜಾದಾ ಅವರಂತೂ ಭಾರತದ ದಿಗ್ಗಜ ಬೌಲರ್‌ಗೆ ದೊಡ್ಡ ಹೊಡೆತಗಳ ಮೂಲಕವೇ ಉತ್ತರ ಕೊಟ್ಟರು. ಆದರೆ, ಶಿವಂ ದುಬೆ ಅವರಂತಹ ಆಲ್‌ರೌಂಡರ್ ಹಾಕಿದ ಎಸೆತಗಳಿಗೆ ಆ ತಂಡದ ಬ್ಯಾಟ್ಸ್‌ಮನ್‌ಗಳು ಸಜ್ಜಾಗಿರಲಿಲ್ಲ ಎನ್ನುವುದು ಎದ್ದುಕಂಡಿತು.

ಬೌಲಿಂಗ್ ವಿಭಾಗದಲ್ಲಂತೂ ಪಾಕಿಸ್ತಾನ ಬಸವಳಿದಂತೆ ಕಾಣುತ್ತಿದೆ. ಶಾಹೀನ್ ಶಾ ಆಫ್ರಿದಿ ಅವರ ಮೊದಲ ಎಸೆತವನ್ನೇ ಅಭಿಷೇಕ್ ಶರ್ಮಾ ಸಿಕ್ಸರ್‌ಗೆ ಎತ್ತಿದ ನಂತರ ಅವರು ಲಯ ತಪ್ಪಿದಂತೆ ಬೌಲಿಂಗ್ ಮಾಡಿದ್ದು ಸ್ಪಷ್ಟ. ಏಷ್ಯಾ ಕಪ್‌ನಿಂದ ಹೊರನಡೆಯುವುದಾಗಿ ಬೆದರಿಸುವುದೂ ಸೇರಿದಂತೆ ಕ್ರಿಕೆಟೇತರ ಕಾರಣಗಳಿಂದಾಗಿಯೇ ಪಾಕಿಸ್ತಾನ ಸುದ್ದಿಯಾಗುತ್ತಿರುವುದು ಕ್ರೀಡಾಪ್ರೇಮಿಗಳಿಗಂತೂ ಸ್ವೀಕಾರಾರ್ಹ ವಿದ್ಯಮಾನವಲ್ಲ.

ಪಾಕಿಸ್ತಾನವು ಭಾರತದ ಪಾಲಿಗೆ ಹೇಳಿಕೊಳ್ಳುವಂತಹ ಸ್ಪರ್ಧಿ ಅಲ್ಲವೇ ಅಲ್ಲ ಎಂದು ಸೂರ್ಯಕುಮಾರ್ ಯಾದವ್ ಹೇಳಿರುವುದಾಗಲೀ, 'ಫೈನಲ್‌ನಲ್ಲಿ ಭಾರತವನ್ನು ನೋಡಿಕೊಳ್ಳುತ್ತೇವೆ' ಎಂದು ರೌಫ್ ಆಡಿರುವ ವೀರಾವೇಶದ ಮಾತಾಗಲೀ ಕ್ರೀಡಾಪಟುಗಳ ಘನತೆಗೆ ತಕ್ಕುದಲ್ಲ.

ಟಾಸ್ ಹಾಕಿದ ನಂತರ ಭಾರತ– ಪಾಕಿಸ್ತಾನ ತಂಡಗಳ ನಾಯಕರು ಕೈಕುಲುಕುವುದಿಲ್ಲ. ಪಂದ್ಯ ಮುಗಿದ ನಂತರವೂ ಹಸ್ತಲಾಘವದ ಮಾತಿಲ್ಲ. ಆದರೆ, ಪಾಕಿಸ್ತಾನದ ಮಾಜಿ ಆಲ್‌ರೌಂಡರ್ ವಸೀಂ ಅಕ್ರಮ್ ಎದುರಾದರೆ, ಅವರನ್ನು ಮಾತನಾಡಿಸಿ ಅಭಿಷೇಕ್ ಶರ್ಮಾ ಪುಲಕಗೊಳ್ಳುತ್ತಾರೆ. ಭಾರತದ ಸಹವರ್ತಿಗಳ ಜೊತೆ ಕುಳಿತು ಅದೇ ವಸೀಂ ಅಕ್ರಮ್ ಪಂದ್ಯದ ಸೂಕ್ಷ್ಮಗಳ ಕುರಿತು ತಲಸ್ಪರ್ಶಿಯಾಗಿ ಮಾತನಾಡುತ್ತಾರೆ.

ಕ್ರಿಕೆಟ್ ಎನ್ನುವುದೀಗ ಮಾರುಕಟ್ಟೆ ಪ್ರಣೀತ ಆಗಿರುವಾಗ, ಪಾಕಿಸ್ತಾನದ ವಿರುದ್ಧ ಕ್ರಿಕೆಟ್ ಆಡುವುದಿಲ್ಲ ಎಂಬ ಘೋಷವಾಕ್ಯ ಈಗ ದೇಶಭಕ್ತಿಯ ಢೋಂಗಿ ಮುಖವಾಡದಂತೆ ಕಾಣುತ್ತಿದೆ. ಆಡುತ್ತಿರುವುದೇ ನಿಜ ಎಂದ ಮೇಲೆ ಹಸ್ತಲಾಘವಕ್ಕೇಕೆ ಬಿಗುಮಾನ?

ಆತ್ಮವಿಶ್ವಾಸವೇ ಮಣ್ಣಲ್ಲಿ ಹೂತಂತೆ ಕಾಣುತ್ತಿರುವ ತಂಡವನ್ನು ಮೇಲೆತ್ತಲು ಅಗತ್ಯವಿರುವ ಸೂಕ್ಷ್ಮಗ್ರಾಹಿ ಒಳನೋಟವನ್ನು ಬಿಟ್ಟು, ಉಢಾಳರಂತೆ ಶಸ್ತ್ರಾಸ್ತ್ರ, ವಿಮಾನ ಪತನದ ಸಂಜ್ಞೆಗಳನ್ನು ಮಾಡುವ ಆಟಗಾರರ ಮನಃಸ್ಥಿತಿ ನೋಡಿದರೆ 'ವಿಕೃತಿ' ಎನ್ನದೇ ವಿಧಿಯಿಲ್ಲ.

'ಐ ವಿಲ್ ಕಿಲ್ ಯೂ' ಎಂದು ಮೈದಾನದಲ್ಲಿ ಕೆಕ್ಕರಿಸಿ ನೋಡಿ, ಆಮೇಲೆ 'ಶಹಬ್ಬಾಸ್ ಹುಡುಗನೇ' ಎಂದು ವಸೀಂ ಅಕ್ರಮ್ ಬೆನ್ನುತಟ್ಟಿದ್ದ ರಿಚರ್ಡ್ಸ್ ಅವರಂತಹ ದಿಗ್ಗಜರೆಲ್ಲಿ, ಈ ಕಾಲದ ತುಡುಗು ಬುದ್ಧಿಯ ಆಟಗಾರರೆಲ್ಲಿ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



2.74 ಲಕ್ಷ ಲಡಾಖ್‌ನ ಜನಸಂಖ್ಯೆ (2011)

59,146 ಚದರ ಕಿ.ಮೀ ಲಡಾಖ್ ವಿಸ್ತೀರ್ಣ

ಲಡಾಖ್: ರಾಜ್ಯ ಸ್ಥಾನ, ಸ್ವಾಯತ್ತೆಗಾಗಿ ಹೋರಾಟ

ಹಿಮನಾಡು ಲಡಾಖ್‌ನಲ್ಲಿ ರಾಜ್ಯ ಸ್ಥಾನಮಾನ ಮತ್ತು ಸ್ವಾಯತ್ತೆಗಾಗಿ ನಡೆಯುತ್ತಿರುವ ಹೋರಾಟ ಹಿಂಸಾರೂಪ ಪಡೆದುಕೊಂಡಿದೆ. ಬುಧವಾರ ಲೇಹ್‌ನಲ್ಲಿ ನಡೆದ ಹಿಂಸಾಚಾರವನ್ನು ಇತ್ತೀಚೆಗೆ ನೇಪಾಳದಲ್ಲಿ ನಡೆದ 'ಝೆನ್ ಜಿ' ಪೀಳಿಗೆಯ ಹೋರಾಟಕ್ಕೆ ಹೋಲಿಸಲಾಗುತ್ತಿದೆ. 2019ರಲ್ಲಿ ಲಡಾಖ್ ಕೇಂದ್ರಾಡಳಿತ ಪ್ರದೇಶ ಎಂದು ಘೋಷಣೆಯಾದಾಗ ಸ್ವಾಗತಿಸಿದ್ದ ಅಲ್ಲಿನ ಜನರು ಈಗ ಕೇಂದ್ರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ. ಸೂಕ್ಷ್ಮ ಪರಿಸರ, ಭೂಮಿಯ ಹಕ್ಕುಗಳು, ವೈವಿಧ್ಯಮಯ ಸಂಸ್ಕೃತಿಗಳನ್ನು ಉಳಿಸಲು ಸಾಂವಿಧಾನಿಕ ರಕ್ಷಣೆ ಕೇಳುತ್ತಿದ್ದಾರೆ

ಪ್ರಜಾವಾಣಿ ವಾರ್ತೆ

2019ರ ಆಗಸ್ಟ್ 5: ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ ರದ್ದುಮಾಡಿತ್ತು. ಅಲ್ಲದೇ ಜಮ್ಮು ಮತ್ತು ಕಾಶ್ಮೀರದಿಂದ ಲಡಾಖ್ ಅನ್ನು ಪ್ರತ್ಯೇಕಿಸಿ ಎರಡನ್ನೂ ಕೇಂದ್ರಾಡಳಿತ ಪ್ರದೇಶಗಳನ್ನಾಗಿ ರೂಪಿಸಿತ್ತು. ಕೇಂದ್ರದ ನಿರ್ಧಾರವನ್ನು ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಪಕ್ಷಗಳು, ಮುಖಂಡರು ವಿರೋಧಿಸಿದ್ದರು. ಜನರು ಪ್ರತಿಭಟನೆ ನಡೆಸಿದ್ದರು. ಅದು ಹಿಂಸೆಗೂ ತಿರುಗಿತ್ತು. ಆದರೆ, ಪಕ್ಕದ ಲಡಾಖ್ ಶಾಂತವಾಗಿತ್ತು. ಅಲ್ಲಿನ ಮುಖಂಡರು ಕೇಂದ್ರದ ನಿರ್ಧಾರವನ್ನು ಸ್ವಾಗತಿಸಿದ್ದರು. ತಮ್ಮ ಬೇಡಿಕೆಗಳು ಈಡೇರುವ ಸಮಯ ಕೊನೆಗೂ ಬಂತು ಎಂಬುದು ಲಡಾಖ್ ಜನರ ನಿರೀಕ್ಷೆಯಾಗಿತ್ತು. ಆದರೆ, ಆರಂಭದಲ್ಲಿ ಕೇಂದ್ರದ ನಿರ್ಧಾರ ಸ್ವಾಗತಿಸಿದ್ದವರೇ ವರ್ಷಗಳುರುಳುತ್ತಿದ್ದಂತೆ ಕೇಂದ್ರ ಸರ್ಕಾರದ ನಡೆಯನ್ನು ವಿರೋಧಿಸಲು ಆರಂಭಿಸಿದರು. ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟದ ದಾರಿ ಕಂಡುಕೊಂಡರು. ಪ್ರತಿಭಟನೆ, ರ‍್ಯಾಲಿ, ಉಪವಾಸ ಸತ್ಯಾಗ್ರಹಗಳಿಗೆ ಸೀಮಿತವಾಗಿದ್ದ ಹೋರಾಟ ಎರಡು ವರ್ಷಗಳಿಂದೀಚೆಗೆ ತೀವ್ರಗೊಂಡು, ಅದೀಗ ಹಿಂಸಾರೂಪ ತಾಳುವ ಮಟ್ಟಕ್ಕೆ ಏರಿದೆ.

ಲಡಾಖ್‌ನ ಲೇಹ್‌ನಲ್ಲಿ ಬುಧವಾರ ನಡೆದ ಪ್ರತಿಭಟನೆಯು ಹಿಂಸಾಚಾರವಾಗಿ ಪರಿವರ್ತನೆಗೊಂಡು ನಾಲ್ವರು ಮೃತಪಟ್ಟಿದ್ದಾರೆ. ಹತ್ತಾರು ಮಂದಿ ಗಾಯಗೊಂಡಿದ್ದಾರೆ. ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡಬೇಕು. ಲಡಾಖ್ ಅನ್ನು ಸಂವಿಧಾನದ ಆರನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸಿ ಸ್ವಾಯತ್ತ ಪ್ರದೇಶ ಎಂದು ಘೋಷಿಸಬೇಕು ಎಂಬುದು ಲಡಾಖ್ ಜನರ ಪ್ರಮುಖ ಬೇಡಿಕೆ.

'ಝೆನ್ ಜಿ' ಹೋರಾಟ: ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಇಬ್ಬರು ತೀವ್ರ ಅಸ್ವಸ್ಥಗೊಂಡಿದ್ದು ಬುಧವಾರ ನಡೆದ ಪ್ರತಿಭಟನೆ, ಹಿಂಸಾಚಾರಕ್ಕೆ ನೆಪ. ಹಿಂಸೆಗೆ ತಿರುಗಿದ ಈ ಹೋರಾಟವನ್ನು ನೇಪಾಳದಲ್ಲಿ ಇತ್ತೀಚೆಗೆ ನಡೆದ 'ಝೆನ್ ಜಿ' ಪೀಳಿಗೆಯವರ ಪ್ರತಿಭಟನೆಗೆ ಹೋಲಿಸಲಾಗುತ್ತಿದೆ. ರಾಜ್ಯ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿ ನಡೆಯುತ್ತಿರುವ ಚಳವಳಿಯ ಮುಂಚೂಣಿಯಲ್ಲಿರುವ ಪರಿಸರವಾದಿ, ಶಿಕ್ಷಣ ತಜ್ಞ ಸೋನಮ್ ವಾಂಗ್‌ಚುಕ್ ಅವರೇ ಇದು 'ಝೆನ್ ಜಿ' ಹೋರಾಟ ಎಂದು ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲೂ ಇದೇ ರೀತಿ ಬಿಂಬಿಸಲಾಗುತ್ತಿದೆ. ಹಿಂಸಾಚಾರ ನಿಯಂತ್ರಣಕ್ಕೆ ಬಂದಿದೆ. ಆದರೆ, ಲೇಹ್ ಇನ್ನೂ ಬೂದಿ ಮುಚ್ಚಿದ ಕೆಂಡದಂತಿದೆ.

2019ರಲ್ಲಿ ವಿಶೇಷ ಸ್ಥಾನಮಾನ ರದ್ದುಪಡಿಸುವಾಗ ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿದ್ದರೂ ಅಲ್ಲಿ ವಿಧಾನಸಭೆಯನ್ನು ಉಳಿಸಿಕೊಳ್ಳಲಾಗಿತ್ತು (ವಿಧಾನ ಪರಿಷತ್ ಅನ್ನು ರದ್ದುಪಡಿಸಲಾಗಿತ್ತು). ಆದರೆ, ಲಡಾಖ್ ಅನ್ನು ಶಾಸಕಾಂಗ ವ್ಯವಸ್ಥೆ ಇಲ್ಲದ ಕೇಂದ್ರಾಡಳಿತ ಪ್ರದೇಶವಾಗಿ ರೂಪಿಸಲಾಗಿತ್ತು. ಇದರಿಂದಾಗಿ ಲಡಾಖ್‌ನಲ್ಲಿ ರಾಜಕೀಯ ಶೂನ್ಯ ಆವರಿಸಿದೆ. ಕೇಂದ್ರ ಸರ್ಕಾರ ಲೆಫ್ಟಿನೆಂಟ್ ಗವರ್ನರ್ ಮೂಲಕ ನೇರವಾಗಿ ಆಡಳಿತ ನಡೆಸುವುದರಿಂದ ಸ್ಥಳೀಯರಿಗೆ ರಾಜಕೀಯ ಪ್ರಾತಿನಿಧ್ಯ ಇಲ್ಲದಂತಾಗಿದೆ, ಪ್ರಜಾಪ್ರಭುತ್ವದ ಹಕ್ಕುಗಳಿಗೆ ಧಕ್ಕೆಯಾಗುತ್ತಿದೆ ಎಂಬುದು ವಾಂಗ್‌ಚುಕ್ ಹಾಗೂ ಹೋರಾಟಗಾರರ ಆರೋಪ.

ಸೂಕ್ಷ್ಮ ಪರಿಸರ ವ್ಯವಸ್ಥೆ, ನೈಸರ್ಗಿಕ ಸಂಪತ್ತು ಹೊಂದಿರುವ ಈ ಪ್ರದೇಶದಲ್ಲಿ ಕೈಗಾರಿಕೆಗಳಿಗೆ, ಗಣಿಗಾರಿಕೆಗೆ ಕೇಂದ್ರ ಸರ್ಕಾರ ಅವಕಾಶ ನೀಡುತ್ತಿದೆ. ಇದರಿಂದ ಪರಿಸರ ನಾಶವಾಗುತ್ತಿದೆ. ಬುಡಕಟ್ಟು ಸಮುದಾಯಗಳಿಗೆ ತೊಂದರೆಯಾಗುತ್ತಿದೆ. ಲಡಾಖ್‌ನ ಸಾಂಸ್ಕೃತಿಕ ಅಸ್ಮಿತೆಗೂ ಧಕ್ಕೆಯಾಗುತ್ತಿದೆ. ಸ್ಥಳೀಯರಿಗೆ ಉದ್ಯೋಗಗಳು ಸಿಗುತ್ತಿಲ್ಲ ಎಂಬ ಆತಂಕ ಅವರದ್ದು.

ಸ್ವಾಯತ್ತ ಪ್ರದೇಶವಾಗಿ ಘೋಷಿಸಿದರೆ, ಸ್ಥಳೀಯವಾಗಿ ರಾಜಕೀಯ ಪ್ರಾತಿನಿಧ್ಯ ಸಿಕ್ಕಿ, ಸ್ಥಳೀಯರೇ ಆಡಳಿತ ನಡೆಸಲು ಅನುಕೂಲವಾಗುತ್ತದೆ ಎಂಬುದು ಅವರ ವಾದ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು 2019ರಲ್ಲಿ ಲಡಾಖ್ ಅನ್ನು ಆರನೇ ಪರಿಚ್ಛೇದಕ್ಕೆ ಸೇರಿಸುವ ಭರವಸೆ ನೀಡಿತ್ತು. ಆದರೆ, ಅದನ್ನು ಇನ್ನೂ ಈಡೇರಿಸಿಲ್ಲ ಎಂಬುದು ಹೋರಾಟಗಾರರ ಕೋಪಕ್ಕೆ ಪ್ರಮುಖ ಕಾರಣ.

ಸಮಿತಿ ರಚನೆ: 2020ರಿಂದೀಚೆಗೆ ಲಡಾಖ್‌ನಲ್ಲಿ ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ (ಕೆಡಿಎ) ಮತ್ತು ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ) ಅಡಿಯಲ್ಲಿ ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಿದ್ದರಿಂದ ಅಲ್ಲಿನ ಜನರ ಬೇಡಿಕೆಗಳನ್ನು ಅಧ್ಯಯನ ನಡೆಸುವುದಕ್ಕಾಗಿ ಕೇಂದ್ರ ಸರ್ಕಾರ 2023ರ ಜನವರಿ 2ರಂದು ಉನ್ನತಾಧಿಕಾರ ಸಮಿತಿಯನ್ನು ರಚಿಸಿತ್ತು. ಕೇಂದ್ರ ಸರ್ಕಾರವು ಈ ವಿಚಾರವಾಗಿ ಲಡಾಖ್ ನಾಯಕತ್ವದೊಂದಿಗೆ ಹಲವು ಸುತ್ತಿನ ಮಾತುಕತೆಯನ್ನೂ ನಡೆಸಿದೆ. ಅಕ್ಟೋಬರ್ 6ರಂದು ಮತ್ತೊಂದು ಸುತ್ತಿನ ಮಾತುಕತೆ ನಿಗದಿಯಾಗಿದೆ.

ಈ ಹಿಂದೆ, ಲಡಾಖ್‌ನ ಮುಖಂಡರು ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ತಮ್ಮ ಬೇಡಿಕೆಯನ್ನು ಮುಂದಿಟ್ಟ ವೇಳೆ ರಾಜ್ಯ ಸ್ಥಾನಮಾನ ನೀಡಲು ಮತ್ತು ಆರನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸಲು ಅವರು ನಿರಾಕರಿಸಿದ್ದರು ಎನ್ನಲಾಗಿದ್ದು, ಇದು ಚಳವಳಿ ನಡೆಸುತ್ತಿರುವವರ ಅಸಮಾಧಾನಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

ಆಧಾರ: ಪಿಟಿಐ, ಜಮ್ಮು ಮತ್ತು ಕಾಶ್ಮೀರ ಪುನರ್‌ರಚನೆ ಕಾಯ್ದೆ, ಪಿಐಬಿ, ಮಾಧ್ಯಮ ವರದಿಗಳು

ಲಡಾಖ್‌ನ ಲೇಹ್‌ನಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಜನರು ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಪ್ರಮುಖ ಬೇಡಿಕೆಗಳು

- ರಾಜ್ಯದ ಸ್ಥಾನಮಾನ ನೀಡಬೇಕು
- ಲಡಾಖ್‌ನ ಸೂಕ್ಷ್ಮ ಪರಿಸರ, ಸಂಪನ್ಮೂಲಗಳು, ಜನರ ಭೂ ಒಡೆತನದ ಹಕ್ಕು ಮತ್ತು ಸಾಂಸ್ಕೃತಿಕ ಅನನ್ಯತೆಗೆ ಸಾಂವಿಧಾನಿಕ ರಕ್ಷಣೆ ಒದಗಿಸಬೇಕು (ಆರನೇ ಪರಿಚ್ಛೇದಕ್ಕೆ ಸೇರಿಸಬೇಕು)
- ಲೇಹ್ ಮತ್ತು ಕಾರ್ಗಿಲ್‌ಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ಬೇಕು (ಸದ್ಯ ಲಡಾಖ್ ಒಂದೇ ಕ್ಷೇತ್ರ ಇದೆ)
- ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು

ಕೇಂದ್ರ ಸರ್ಕಾರದ ವಾದವೇನು?

ಸಂಸತ್ತಿನಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನ ನೀಡಲು ಬದ್ಧ ಎಂದು ಕೇಂದ್ರ ಸರ್ಕಾರ ಹಲವು ಬಾರಿ ಹೇಳಿದೆ. ಆದರೆ, ಲಡಾಖ್ ಬಗ್ಗೆ ಅದು ಈ ರೀತಿ ಹೇಳಿಲ್ಲ.

ಲಡಾಖ್ ಆಡಳಿತಕ್ಕಾಗಿ ಲಡಾಖ್ ಸ್ವಾಯತ್ತ ಗಿರಿ ಅಭಿವೃದ್ಧಿ ಮಂಡಳಿಗಳನ್ನು (ಲೇಹ್ ಮತ್ತು ಕಾರ್ಗಿಲ್‌ಗೆ) ರಚಿಸಲಾಗಿದೆ. ಇವು ಸ್ವಾಯತ್ತ ಸಂಸ್ಥೆಯಾಗಿದ್ದು, ಆಡಳಿತ, ಆರ್ಥಿಕ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳನ್ನು ನಿರ್ವಹಿಸಲು ಇವುಗಳಿಗೆ ಅಧಿಕಾರ ಇದೆ ಎಂಬುದು ಕೇಂದ್ರ ಸರ್ಕಾರದ ವಾದ.

ಆದರೆ, ಈ ಮಂಡಳಿಯ ಅಧಿಕಾರ ಸೀಮಿತವಾಗಿದೆ ಎಂಬುದು ಹೋರಾಟಗಾರರ ಹೇಳಿಕೆ

ನಿರಾಸಕ್ತಿ ಏಕೆ?

ಲಡಾಖ್‌ನಲ್ಲಿ ಭಾರತ–ಚೀನಾ ಗಡಿ ಪ್ರದೇಶವಿದ್ದು, ಎರಡೂ ದೇಶಗಳ ನಡುವೆ ಗಡಿ ವಿವಾದವು ಇನ್ನೂ ಬಗೆಹರಿದಿಲ್ಲ. ಆಗಾಗ ಘರ್ಷಣೆಯೂ ನಡೆಯುತ್ತಿರುತ್ತದೆ. ಅತ್ಯಂತ ಸೂಕ್ಷ್ಮವಾಗಿರುವ ಈ ಪ್ರದೇಶದ ಆಡಳಿತ ನೇರವಾಗಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬಂದರೆ ಗಡಿ ಭದ್ರತೆಯ ದೃಷ್ಟಿಯಿಂದ ಸಾಕಷ್ಟು ಅನುಕೂಲವಿದೆ ಎಂಬ ಕಾರಣಕ್ಕೆ ರಾಜ್ಯದ ಸ್ಥಾನಮಾನ ಅಥವಾ ಸಾಂವಿಧಾನಿಕವಾಗಿ ಇನ್ನಷ್ಟು ಸ್ವಾಯತ್ತೆ ನೀಡಲು ಕೇಂದ್ರ ಸರ್ಕಾರ ಆಸಕ್ತಿ ತೋರುತ್ತಿಲ್ಲ ಎಂದು ಹೇಳಲಾಗುತ್ತಿದೆ.

ಕಾರ್ಗಿಲ್ ಭಾಗದಲ್ಲಿರುವ ಶಿಯಾ ಮುಸ್ಲಿಮರು, ಲೇಹ್ ವ್ಯಾಪ್ತಿಯಲ್ಲಿರುವ ಬೌದ್ಧ ಧರ್ಮೀಯರು ಒಟ್ಟಾಗಿ ಈ ಬೇಡಿಕೆಗಳ ಈಡೇರಿಕೆಗಾಗಿ ಹೋರಾಡುತ್ತಿದ್ದಾರೆ. ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ (ಕೆಡಿಎ) ಮತ್ತು ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ) ಎಂಬ ಎರಡು ಸಂಘಟನೆಗಳ ಅಡಿಯಲ್ಲಿ ಹೋರಾಟ ನಡೆಯುತ್ತಿದೆ. ಸೋನಮ್ ವಾಂಗ್‌ಚುಕ್ ಅವರು ಚಳವಳಿಯ ಮುಂಚೂಣಿಯಲ್ಲಿದ್ದಾರೆ

ಸೋನಮ್ ವಾಂಗ್‌ಚುಕ್

ಏನಿದು 6ನೇ ಪರಿಚ್ಛೇದ?

ಸಂವಿಧಾನದ ವಿಧಿ 244(2) ಮತ್ತು ವಿಧಿ 275(1) ಅಡಿಯಲ್ಲಿ ಈ ಪರಿಚ್ಛೇದವನ್ನು ಸೇರ್ಪಡೆಗೊಳಿಸಲಾಗಿದೆ.

ಭಾರತದ ಈಶಾನ್ಯ ಭಾಗದಲ್ಲಿರುವ ಅಸ್ಸಾಂ, ಮೇಘಾಲಯ, ತ್ರಿಪುರಾ ಮತ್ತು ಮಿಜೋರಾಂ ರಾಜ್ಯಗಳ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ಆಡಳಿತ ನಿರ್ವಹಣೆಯ ಅವಕಾಶವನ್ನು ಈ ಪರಿಚ್ಛೇದ ನೀಡುತ್ತದೆ.

ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶದಲ್ಲಿ ಸ್ವಾಯತ್ತ ಜಿಲ್ಲಾ ಕೌನ್ಸಿಲ್‌ಗಳನ್ನು ಮತ್ತು ಪ್ರಾದೇಶಿಕ ಕೌನ್ಸಿಲ್‌ಗಳನ್ನು ಸ್ಥಾಪಿಸಬಹುದು ಎಂದು ಇದು ಹೇಳುತ್ತದೆ.

ಸ್ವಯಂ ಆಡಳಿತ ನಡೆಸಲು, ಈಶಾನ್ಯ ರಾಜ್ಯದ ಆದಿವಾಸಿ ಸಮುದಾಯಗಳ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಕೌನ್ಸಿಲ್‌ಗಳಿಗೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರವನ್ನು ಈ ಪರಿಚ್ಛೇದ ನೀಡುತ್ತದೆ.

ಯಾವುದೇ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಮತ್ತು ಬುಡಕಟ್ಟು ಸಮುದಾಯಕ್ಕೆ ಸೇರಿದ ಜನರ ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚು ಇದ್ದರೆ, ಆ ಪ್ರದೇಶವನ್ನು 6ನೇ ಪರಿಚ್ಛೇದಕ್ಕೆ ಸೇರಿಸಲು ಸಂವಿಧಾನದಲ್ಲಿ ಅವಕಾಶವಿದೆ.

ಕೇಂದ್ರದ ಅಂಕಿ ಅಂಶಗಳ ಪ್ರಕಾರ ಲಡಾಖ್‌ನಲ್ಲಿ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಶೇ 97ರಷ್ಟಿದೆ.

ಆಯೋಗ ಶಿಫಾರಸು: ಲಡಾಖ್‌ನಲ್ಲಿ ಬುಡಕಟ್ಟು ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಆ ಪ್ರದೇಶವನ್ನು ಸಂವಿಧಾನದ ಐದನೇ/ಆರನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸಬಹುದು ಎಂದು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ 2019ರ ಸೆಪ್ಟೆಂಬರ್‌ನಲ್ಲೇ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

ರಾಷ್ಟ್ರೀಯ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೇಳಿಕೆ

'ಪ್ಯಾಲೆಸ್ಟೀನ್: ಭಾರತ ನಾಯಕತ್ವ ಪ್ರದರ್ಶಿಸಬೇಕು'

ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): ಪ್ಯಾಲೆಸ್ಟೀನ್ ವಿಚಾರದಲ್ಲಿ ಭಾರತವು ನಾಯಕತ್ವವನ್ನು ಪ್ರದರ್ಶಿಸಬೇಕಾದ ಅಗತ್ಯವಿದೆ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಗುರುವಾರ ಪ್ರತಿಪಾದಿಸಿದ್ದಾರೆ.

ಆದರೆ ಈ ನಿಟ್ಟಿನಲ್ಲಿ ಮೋದಿ ಸರ್ಕಾರ ಮೌನಕ್ಕೆ ಜಾರಿದ್ದು, ಮಾನವೀಯತೆ ಮತ್ತು ನೈತಿಕತೆ ವಿರುದ್ಧವಾಗಿದೆ ಎಂದು ಅವರು ಟೀಕಿಸಿದ್ದಾರೆ.

'ಸರ್ಕಾರದ ಕ್ರಮಗಳು ಸಂವಿಧಾನದ ಮೌಲ್ಯಗಳು ಮತ್ತು ಅದರ ಕಾರ್ಯತಂತ್ರದ ಹಿತಾಸಕ್ತಿಗಳಿಗೆ ಅನುಗುಣವಾಗಿರಬೇಕು. ಆದರೆ ಈ ವಿಷಯದಲ್ಲಿ ಮೋದಿ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ವೈಯಕ್ತಿಕ ಸ್ನೇಹದಿಂದ ನಡೆಯುತ್ತಿರುವಂತೆ ಭಾಸವಾಗುತ್ತಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

'ಹೀಗೆ ವೈಯಕ್ತಿಕವಾದ ರಾಜತಾಂತ್ರಿಕತೆ ಮೇಲೆ ನಡೆಯುವುದು ಎಂದಿಗೂ ಸಮರ್ಥನೀಯವಲ್ಲ ಮತ್ತು ಅದು ಭಾರತದ ವಿದೇಶಾಂಗ ನೀತಿಯ ದಿಕ್ಸೂಚಿ ಆಗಲು ಸಾಧ್ಯವೂ ಇಲ್ಲ' ಎಂದು ಅವರು ತಿಳಿಸಿದ್ದಾರೆ.

ಇಸ್ರೇಲ್–ಪ್ಯಾಲೆಸ್ಟೀನ್ ಸಂಘರ್ಷದ ಕುರಿತು ಅವರು 'ದಿ ಹಿಂದೂ'ದಲ್ಲಿ ಗುರುವಾರ ಬರೆದಿರುವ ಲೇಖನದಲ್ಲಿ ಮೋದಿ ಸರ್ಕಾರದ ನಿಲುವನ್ನು ತೀವ್ರವಾಗಿ ಟೀಕಿಸಿದ್ದಾರೆ.

'ಪ್ಯಾಲೆಸ್ಟೀನ್ ಅನ್ನು ದೇಶವೆಂದು ಗುರುತಿಸುವಲ್ಲಿ ಬ್ರಿಟನ್, ಕೆನಡಾ, ಪೋರ್ಚುಗಲ್, ಆಸ್ಟ್ರೇಲಿಯಾ ಜತೆಗೆ ಇದೀಗ ಫ್ರಾನ್ಸ್ ಸಹ ಸೇರಿಕೊಂಡಿದೆ. ದೀರ್ಘ ಕಾಲದಿಂದ ಬಳಲಿರುವ ಪ್ಯಾಲೆಸ್ಟೀನ್ ಜನರ ಕಾನೂನುಬದ್ಧ ಆಕಾಂಕ್ಷೆಗಳನ್ನು ಈಡೇರಿಸಲು ಇದು ಮಹತ್ವದ ಹೆಜ್ಜೆಯಾಗಿದೆ' ಎಂದು ವಿವರಿಸಿರುವ ಅವರು, ವಿಶ್ವಸಂಸ್ಥೆಯ 193 ದೇಶಗಳ ಪೈಕಿ 150ಕ್ಕೂ ಹೆಚ್ಚು ದೇಶಗಳು ಪ್ಯಾಲೆಸ್ಟೀನ್ ಅನ್ನು ಬೆಂಬಲಿಸಿವೆ ಎಂದೂ ಉಲ್ಲೇಖಿಸಿದ್ದಾರೆ.

ಭಾರತವು 1988ರ ನವೆಂಬರ್ 18ರಂದು ಪ್ಯಾಲೆಸ್ಟೀನ್ ಅನ್ನು ದೇಶವಾಗಿ ಗುರುತಿಸುವ ಮೂಲಕ ನಾಯಕತ್ವ ಪ್ರದರ್ಶಿಸಿತ್ತು. ದಕ್ಷಿಣ ಆಫ್ರಿಕಾದಲ್ಲಿನ ವರ್ಣಭೇದ ನೀತಿಯನ್ನು, ಸ್ವಾತಂತ್ರ್ಯ ಪೂರ್ವದಲ್ಲಿಯೇ ಭಾರತ ಪ್ರಶ್ನಿಸಿತ್ತು. ಅಲ್ಲದೆ 1954–62ರ ಅಲ್ಜೀರಿಯಾ ಸ್ವಾತಂತ್ರ್ಯ ಹೋರಾಟದ ವೇಳೆ ಭಾರತ ಅಲ್ಜೀರಿಯಾ ಪರ ಬಲವಾಗಿ ಧ್ವನಿಯೆತ್ತಿತ್ತು. ಪೂರ್ವ ಪಾಕಿಸ್ತಾನದಲ್ಲಿನ ನರಮೇಧವನ್ನು ತಡೆಯಲು ಭಾರತ ಮಧ್ಯಪ್ರವೇಶಿಸಿತ್ತು. ಆ ಬಳಿಕ 1971ರಲ್ಲಿ ಬಾಂಗ್ಲಾದೇಶ ಜನನವಾಯಿತು ಎಂಬ ಮಾಹಿತಿಯನ್ನು ಅವರು ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ನ್ಯಾಯ, ಗುರುತು, ಘನತೆ ಮತ್ತು ಮಾನವ ಹಕ್ಕುಗಳಿಗಾಗಿ ನಡೆಯುತ್ತಿರುವ ಪ್ಯಾಲೆಸ್ಟೀನ್ ಹೋರಾಟದ ಬಗ್ಗೆ ಭಾರತ ನಾಯಕತ್ವವನ್ನು ಪ್ರದರ್ಶಿಸಬೇಕಿದೆ ಎಂದು ಅವರು ಆಗ್ರಹಿಸಿದ್ದಾರೆ.

ತಿರುಮಲ: ಎ.ಐ ಕಮಾಂಡ್–ಕಂಟ್ರೋಲ್ ಕೇಂದ್ರ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ವಿಶ್ವದ ಅತೀ ಶ್ರೀಮಂತ ಹಿಂದೂ ದೇವಾಲಯವಾದ ತಿರುಮಲದ ತಿಮ್ಮಪ್ಪನ ಸನ್ನಿಧಾನದಲ್ಲಿ ದೇಶದಲ್ಲೇ ಮೊದಲ ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಇಂಟಿಗ್ರೇಟೆಡ್ ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್ (ಐಸಿಸಿಸಿ)ಗೆ ಚಾಲನೆ ನೀಡಲಾಗಿದೆ. ಪ್ರತಿ ಗಂಟೆಗೆ 4,500 ಮಂದಿ ವೆಂಕಟೇಶ್ವರನ ದರ್ಶನ ಪಡೆಯುತ್ತಿದ್ದು, ಹೊಸ ಸೌಲಭ್ಯವು ಭಕ್ತಿ ಹಾಗೂ ಅತ್ಯಾಧುನಿಕ ತಂತ್ರಜ್ಞಾನದ ಸಮ್ಮಿಳಿತವಾಗಿದೆ.

ಅನಿವಾಸಿ ಭಾರತೀಯರು ನೀಡಿದ ದಾನದಿಂದ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. 6 ಸಾವಿರ ಎ.ಐ ನಿಗಾ ಕ್ಯಾಮೆರಾಗಳು ಕಮಾಂಡ್ ಕೇಂದ್ರಗಳಿಗೆ ನಿರಂತರ ಲೈವ್ ವಿಡಿಯೊ ರವಾನಿಸಲಿವೆ. ಇದರಿಂದ, ದಟ್ಟಣೆ ವೇಳೆ ಸರತಿಯ ಸಾಲು ನಿರ್ವಹಣೆಯ ಜೊತೆಗೆ ಕ್ಷಿಪ್ರವಾಗಿ ಸ್ಪಂದಿಸಲು ನೆರವಾಗಲಿದೆ.

ಐಸಿಸಿಸಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು, 'ಭಕ್ತಾದಿಗಳು ದೇವರ ದರ್ಶನ ಪಡೆಯಲು ಕಾಯುವ ಅವಧಿ ಇಳಿಸಲು ಟಿಟಿಡಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಪ್ರಸಕ್ತ ಪ್ರತಿ ತಾಸಿಗೆ 4,500 ಭಕ್ತಾದಿಗಳು ದರ್ಶನ ಪಡೆಯುತ್ತಿದ್ದು, ಇದನ್ನು 5,500ಕ್ಕೆ ಹೆಚ್ಚಿಸಬೇಕು' ಎಂದು ಸೂಚಿಸಿದ್ದಾರೆ.

'ತಿರುಮಲಕ್ಕೆ ಮದ್ಯ ಹಾಗೂ ನಿಷೇಧಿತ ವಸ್ತುಗಳು ಒಳಪ್ರವೇಶಿಸದಂತೆ ಅಲಿಪ್ತಿರಿಯಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಬೇಕು. ಕಮಾಂಡ್ ಕೇಂದ್ರವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಬೇಕು. ದಟ್ಟಣೆ ಉಂಟಾದ ಸಂದರ್ಭದಲ್ಲಿಯೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವುದರ ಜೊತೆಗೆ, ತಿರುಮಲದಲ್ಲಿ ಶೇಕಡಾ 90ರಷ್ಟು ಹಸಿರು ವೃದ್ಧಿಸಲು ಕ್ರಮ ಕೈಗೊಳ್ಳಬೇಕು' ಎಂದು ಅವರು ಸೂಚಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'**ಆಪರೇಷನ್** ಸಿಂಧೂರ ವಿಫಲವಾಗಲು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರೇ ಕಾರಣ. ಪಾಕಿಸ್ತಾನದ ಕ್ಷಿಪಣಿಗಳು ಭಾರತದ ಹಲವು ಸ್ಥಳಗಳಿಗೆ ಅಪ್ಪಳಿಸಿದ್ದವು. ಅವುಗಳನ್ನು ತಡೆಯಲು ಸಾಧ್ಯವಾಗಿರಲಿಲ್ಲ. ಈ ಕಾರ್ಯಾಚರಣೆ ವಿಫಲವಾಗಿದ್ದಕ್ಕೆ ಮೋದಿ ಅವರು ರಾಜೀನಾಮೆ ನೀಡಬೇಕು' ಎಂದು ಗೃಹಸಚಿವ ಅಮಿತ್ ಶಾ ಅವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ ಎನ್ನಲಾದ ವಿಡಿಯೊ ತುಣುಕನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. 1.30 ನಿಮಿಷದ ಈ ತುಣುಕನ್ನು 'ದಿ ವಿಸಲ್ ಬ್ಲೋವರ್' ಎಂಬ 'ಎಕ್ಸ್' ಖಾತೆಯಲ್ಲಿ ಮೊದಲಿಗೆ ಪೋಸ್ಟ್ ಮಾಡಲಾಗಿತ್ತು. ಆದರೆ, ಇದು ಸುಳ್ಳು ಸುದ್ದಿ.

ಈಗ ಹರಿದಾಡುತ್ತಿರುವ ವಿಡಿಯೊ ತುಣುಕನ್ನು ಅಮಿತ್ ಶಾ ಅವರ ಸಂದರ್ಶನವೊಂದರಿಂದ ಪಡೆಯಲಾಗಿದೆ. ಶಾ ಅವರನ್ನು ನ್ಯೂಸ್18 ಹಿಂದಿ ಸುದ್ದಿ ವಾಹಿನಿ ಸಂದರ್ಶನ ಮಾಡಿತ್ತು. ಅದನ್ನು ಫಸ್ಟ್ ಪೋಸ್ಟ್ ಸುದ್ದಿ ಮಾಧ್ಯಮ ಸೆ.19ರಂದು ಪೋಸ್ಟ್ ಮಾಡಿತ್ತು. ಮೋದಿ ಅವರ 75ನೇ ಜನ್ಮದಿನದ (ಎ.17) ನಂತರ ಈ ಸಂದರ್ಶನ ನಡೆಸಲಾಗಿತ್ತು. ಅದರಲ್ಲಿ ಶಾ ಅವರು ಮೋದಿಯವರ ನಾಯಕತ್ವ, ಸಾಧನೆಗಳ ಬಗ್ಗೆ ವಿವರಿಸಿದ್ದಾರೆ. ಆದರೆ, ಎಲ್ಲಿಯೂ ಮೋದಿ ಅಥವಾ ಡೊಭಾಲ್ ಅವರನ್ನು ಟೀಕಿಸಿಲ್ಲ. ಅಥವಾ ಆಪರೇಷನ್ ಸಿಂಧೂರದ ಸಮಯದಲ್ಲಿ ಪಾಕಿಸ್ತಾನದ ದಾಳಿಯಲ್ಲಿ ಭಾರತಕ್ಕೆ ನಷ್ಟವಾಗಿರುವ ಬಗ್ಗೆ ಮಾತನಾಡಿಲ್ಲ. ವಿಡಿಯೊ ಹಾಗೂ ಅದರಲ್ಲಿನ ಧ್ವನಿ ಸತ್ಯಾಸತ್ಯತೆ ತಿಳಿಯುವುದಕ್ಕಾಗಿ ವಿಡಿಯೊ ತುಣುಕನ್ನು ಎಐ ಡೀಪ್‌ಫೇಕ್ ಧ್ವನಿ ಪತ್ತೆಹಚ್ಚುವ 'ಹಿಯಾ ಡೀಪ್‌ಫೇಕ್ ವಾಯ್ಸ್ ಡಿಟೆಕ್ಟರ್' ಮತ್ತು 'ಡೀಪ್‌ಫೇಕ್–ಒ–ಮೀಟರ್'ನಲ್ಲಿ ಹಾಕಿದಾಗ, ಮೂಲ ಸಂದರ್ಶನದಲ್ಲಿ ಶಾ ಹೇಳಿಕೆಯನ್ನು ತಿರುಚಿರುವುದು ದೃಢಪಟ್ಟಿತು. ಎಐ ಬಳಸಿ ಅಮಿತ್ ಶಾ ಹೇಳಿಕೆಯನ್ನು ತಿರುಚಿ, ಮೋದಿ ರಾಜೀನಾಮೆಗೆ ಅವರು ಆಗ್ರಹಿಸಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಆನಂದದ ಅನುಭೂತಿ

ನುಡಿ ಬೆಳಗು

ರೇಣುಕಾ ನಿಡಗುಂದಿ

ಜರ್ಮನಿಯಲ್ಲಿ ಇಕ್‌ಹಾರ್ಟ್ ಎಂಬ ಸಂತನಿದ್ದ. ಒಮ್ಮೆ ಅವನು ಕಾಡಿನಲ್ಲಿ ಒಂದು ಮರದ ಕೆಳಗೆ ಕುಳಿತು ಏಕಾಂತವಾಗಿ ಕಾಲ ಕಳೆಯುತ್ತಿದ್ದಾಗ, ವನವಿಹಾರಕ್ಕೆ ಬಂದಿದ್ದ ಅವನ ಕೆಲವು ಸ್ನೇಹಿತರು ಅವನನ್ನು ನೋಡಿದರು. ಅವನ ಬಳಿ ಬಂದು, 'ನೀನು ಏಕಾಂಗಿಯಾಗಿ ಕುಳಿತಿರುವಿಯಲ್ಲ, ನಿನಗೆ ಬೇಸರವಾಗದಿರಲು ನಾವು ಕೆಲಹೊತ್ತು ನಿನ್ನೊಂದಿಗೆ ಕಾಲ ಕಳೆಯಬಹುದೇ' ಎಂದು ಕೇಳುತ್ತಾರೆ. ಆಗ ಆ ಸಂತ, 'ಗೆಳೆಯರೇ... ಇಷ್ಟು ಹೊತ್ತು ನಾನು ಭಗವಂತನ ಸಹವಾಸದಲ್ಲಿಯೇ ಇದ್ದೆ. ನಿಮ್ಮ ಬರುವಿಕೆಯಿಂದ ಅದಕ್ಕೆ ಭಂಗವುಂಟಾಯಿತು. ಈಗ ನಾನು ಏಕಾಂಗಿಯಾದೆ' ಎಂದು ಉತ್ತರಿಸುತ್ತಾನೆ.

ಇವತ್ತಿನ ಧಾವಂತದ ಬದುಕಿನಲ್ಲಿ ನಾವೆಲ್ಲರೂ ಅತೀ ಒತ್ತಡದಲ್ಲಿ ಬದುಕುತ್ತಿದ್ದೇವೆ. ಸದಾಕಾಲ ಮೊಬೈಲು, ಸಾಮಾಜಿಕ ಮಾಧ್ಯಮಗಳು, ಒಂದಿಲ್ಲಾ ಒಂದರಲ್ಲಿ ಕಣ್ಣು ಕೀಲಿಸಿಕೊಂಡು ನಾವೆಲ್ಲಿ ಏಕಾಂಗಿಗಳಾಗಿ ಬಿಡುತ್ತೇವೋ ಎಂದು ತಲ್ಲಣಿಸಿ ಹಗಲಿರುಳೂ ಒಂದಿಲ್ಲಾ ಒಂದು ಗ್ಯಾಜೆಟ್‌ಗಳ ಸಹವಾಸದಲ್ಲಿ ಬದುಕಲು ಪ್ರಯತ್ನಿಸುತ್ತಿದ್ದೇವೆ. ಈ ತಲ್ಲಣ ಮತ್ತು ಗೀಳಿನ ಬಗ್ಗೆ ಎಂದಾದರೂ ಯೋಚಿಸಿದ್ದೇವೆಯೇ? ನಾವು ಯಾವತ್ತೂ ಶಾಂತ ಮನಸ್ಸಿನಿಂದ ಕುಳಿತಿದ್ದೇ ಇಲ್ಲ. ಎಲ್ಲಿ ನಾವು ಒಬ್ಬಂಟಿಯಾಗಿಬಿಡುತ್ತೇವೋ, ಎಲ್ಲಿ ನಮ್ಮೊಂದಿಗೆ ನಾವಿರಬೇಕಾಗುವುದೋ ಎಂದು ಭಯಬೀಳುತ್ತ ಒಂದಲ್ಲಾ ಒಂದು ಗ್ಯಾಜೆಟ್ಟಿನ ಸಹವಾಸದಲ್ಲಿ ಇರಬಯಸುತ್ತೇವೆ. ಅರೆಕ್ಷಣ ಕೈಯಲ್ಲಿ ಮೊಬೈಲ್ ಇರದಿದ್ದರೂ ಪ್ರಾಣ ಹೋಗುವಂತೆ ಒದ್ದಾಡುತ್ತೇವೆ. ನಮ್ಮನ್ನು ಕಂಡು ನಾವೇ ಹೆದರುತ್ತಿದ್ದೇವೆ. ಲೋಕದಲ್ಲಿ ಪ್ರತಿಯೊಬ್ಬರೂ ಏಕಾಂಗಿತನದ ಬಗ್ಗೆ ಭಯಭೀತರಾಗಿ ಏನೇನೋ ವ್ಯಸನದಲ್ಲಿ ಬದುಕುತ್ತಿದ್ದಾರೆ ಎಂದು ಯಾವತ್ತಾದರೂ ಯೋಚನೆ ಬಂದಿದೆಯೇ?

ಇದು ಆರೋಗ್ಯಕರ ಬೆಳವಣಿಗೆಯಲ್ಲ. ನಾವು ಅಂಟಿಸಿಕೊಂಡಿರುವ ವ್ಯಸನದಿಂದ ಕೆಲಕಾಲವಾದರೂ ಬಿಡುಗಡೆ ಹೊಂದಿ, ಅದರಿಂದ ದೂರವಾಗಿ ನಮ್ಮೊಂದಿಗೆ ನಾವು ಬದುಕುವುದನ್ನು ಕಲಿಯಬೇಕು. ಕೆಲ ಹೊತ್ತು ಮೌನವಾಗಿ ಕಣ್ಣುಮುಚ್ಚಿ ಹೊರಗಿನ ಲೋಕವನ್ನು ಬಿಟ್ಟು ಒಳಗಿನ ಲೋಕದಲ್ಲಿ ವಿರಮಿಸಬೇಕು. ಇದು ಒತ್ತಡದಲ್ಲಿ ಬದುಕುತ್ತಿರುವ ಪ್ರತಿಯೊಬ್ಬರೂ ಮಾಡಬೇಕಾದ ಕಾರ್ಯವಾಗಿದೆ. ಹಾಗೆಂದು ಮನೆ–ಮಠ, ಕೆಲಸ ತೊರೆದು ಹಿಮಾಲಯಕ್ಕೆ ಹೋಗಿ ತಪಸ್ಸು ಮಾಡುವುದಲ್ಲ. ನಮ್ಮನ್ನು ಹಿಡಿದಿಟ್ಟಿರುವ ಯಾವುದೇ ಗೀಳು, ವ್ಯಸನವಾಗಿರಬಹುದು, ಯಾವುದೇ ಅನಾರೋಗ್ಯಕರ ಗೆಳೆತನ, ಸಂಬಂಧವಾಗಿರಬಹುದು ಅಥವಾ ನೀವೇ ಇಷ್ಟಪಡದ ನಿಮ್ಮ ಯಾವುದೇ ಸ್ವಭಾವವಾಗಿರಬಹುದು. ಇವೆಲ್ಲವುಗಳಿಂದ ಕೆಲಹೊತ್ತು ಬಿಡುಗಡೆ ಪಡೆದು ನಾವು ಮಾತ್ರ ಇರುವ ಕೇಂದ್ರಕ್ಕೆ ಇಳಿಯುವ ಏಕಾಂತಕ್ಕೆ ಸರಿಯಬೇಕು. ಹೀಗೆ ನಿಮ್ಮೊಳಗಿನ ನೀವು ನಿಮ್ಮೊಂದಿಗೆ ನೀವಷ್ಟೇ ಇರುವಾಗಿನ ನೆಮ್ಮದಿ ಇದೆಯಲ್ಲ, ಅದನ್ನು ನೀವು ಕೋಟಿ ಹಣಕೊಟ್ಟರೂ ಖರೀದಿಸಲಾರಿರಿ. ನೀವು ದುಡ್ಡುಕೊಟ್ಟು ಯೋಗ ಧ್ಯಾನ ಹೇಳಿಕೊಡುವ ಕೇಂದ್ರಗಳಿಗೆ ಹೋದರೂ ಅಲ್ಲಿ ಹೇಳಿಕೊಡುವ ಸೂತ್ರ ಇದೇ. ಏಕಾಂತದಲ್ಲಿ ಕಳೆದು ಹೋಗುವುದು. ನೀವು ನೀವಷ್ಟೇ ಆಗಿ, ಏಕಾಂಗಿಯಾಗಿ, ಯಾವ ಸಹವಾಸ ಸಾಧನಗಳ ಅವಲಂಬನೆಯಿಲ್ಲದೇ ಇರುವುದೇ ಆನಂದದ ಅನುಭೂತಿ. ❖

ಪದಬಂಧ 6176

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1. ಅವನಿರುವ ಜಾಗದಲ್ಲಿ ಬಡಿದ ಸಿಡಿಲು (3)
2. ಬೆಳೆದ ಬೆಳೆಯಿಂದ ಕಸಕಡ್ಡಿಗಳನ್ನು ಬೇರ್ಪಡಿಸು (2)
3. ಕಿಟಕಿ ಇಲ್ಲಿ ಕಾಣುತ್ತಿದೆ (4)
4. ಸಂಕೋಲೆ ಅಥವಾ ಸೆರೆಮನೆವಾಸ (3)
5. ಹಾಲಿನ ಸಾರವತ್ತಾದ ಭಾಗ (2)
7. ಇವರು ಹುಟ್ಟಿದ ದಿನವನ್ನು ರಾಷ್ಟ್ರೀಯ ಗಣಿತದಿನ ಎಂದು ಆಚರಿಸಲಾಗುತ್ತದೆ (9)
10. ಮೈಮೇಲಿನ ಕೂದಲು (2)
12. ನೂರರ ಮೊತ್ತ (3)
13. ಹಣವಿರುವ ಅಗಲವಾದ ತಟ್ಟೆ! (4)
14. ಭೂಲೋಕದ ಅಮೃತ! (2)
15. ಐತಿಹಾಸಿಕ ತಾಣವಾದ ಲಕ್ಕುಂಡಿ ಈ ಜಿಲ್ಲೆಯಲ್ಲಿದೆ (3)

ಮೇಲಿಂದ ಕೆಳಕ್ಕೆ

1. ಹೃದಯದಿಂದ ದೇಹದ ಇತರೆ ಭಾಗಕ್ಕೆ ರಕ್ತವನ್ನು ಸಾಗಿಸುವ ರಕ್ತನಾಳ (5)
2. ಓಬವ್ವನ ಆಯುಧ (3)
3. ರಾಮ ಚರಿತೆ ಕುರಿತು ರಚಿಸಿದ ಮಹಾಕಾವ್ಯವು ಖುಷಿಯೂ ಆಗಿರುವ ಕವಿಯ ಹೆಸರಿನೊಂದಿಗಿದೆ (7)
6. ಜೇನು ಹುಳುವಿನಿಂದಾಗುವ ಸಿಹಿ ರಸ (2)
8. ಸರಸ್ವತಿಯ ಇನ್ನೊಂದು ಹೆಸರು (2)
9. ನೀರಿನ ಅಲೆ ಎಂಬರ್ಥದ ವಾದ್ಯ (5)
11. ಭವ್ಯವಾದ ಸೌಧ (3)

6175ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವ್ಯತ್ಯಾಸ 3.ಸಂದರ್ಭ 5.ಡಮರುಗ 7.ವಿಭಜನೆ 9.ರಜನಿ 11.ಆರ್ಯೆ 12.ಲಡಿ 13.ಸವತಿ 15.ಹಸುಗೂಸು 19.ಮದಗಜ 20.ವರ್ಣನೆ 21.ಲಿಲಾವು

ಮೇಲಿಂದ ಕೆಳಕ್ಕೆ: 1.ವ್ಯಜನ 2.ಸಡಗರ 4.ದನುಜ 6.ಗವಿ 8.ನೆಗಡಿ 10.ನಿವಾಸ 11.ಆರೋಹ 14.ತಿಲಾಂಜಲಿ 16.ಸುಪರ್ಣ 17.ಸುಮ 18.ಹಗೇವು

ಸುಡೊಕು 6560

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	7			3		1		6
4		9						
	1		7	6	2		5	4
		3	5		6	4		
	4			2			6	7
		5	1		7	3		
	8		6			2		3
2		6			3			
	3	4		7		6		

ಸುಡೊಕು 6559

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಸೆಪ್ಟೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಚತುರ್ಥಿ ಗಂ. 9-34 ನಕ್ಷತ್ರ: ವಿಶಾಖ ಗಂ. 22-09 ಯೋಗ: ವಿಷ್ಕುಂಭ ಗಂ. 22-50 ಕರಣ: ವಿಷ್ಠಿ ಗಂ. 9-34 ಕನ್ಯಾ ಮಾಸದ 09 ನೇ ದಿನ. **ಮಳೆ ನಕ್ಷತ್ರ:** ಉತ್ತರಾ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 12-00, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-21, **ಮುಸ್ಲಿಂ ದಿನಾಂಕ:** 03 ರಬಿಯುಸ್ಸಾನಿ, **ಅದೃಷ್ಟ ಸಂಖ್ಯೆ:** 2, 5

ಮೇಷ: ಹೊಸ ಹುದ್ದೆಯಲ್ಲಿ ಕಷ್ಟಗಳ ಪರ್ವತವೇ ಇದ್ದರೂ ಗೌರವ ದೊರೆಯುವ ಕಾರಣದಿಂದ ಸಮಾಧಾನವನ್ನು ಉಂಟುಮಾಡುತ್ತದೆ. ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಕಲೆಯನ್ನು ಕಲಿಯಬೇಕಾಗುವುದು.

ವೃಷಭ: ಮುಂದಾಲೋಚನೆ ಇಲ್ಲದೇ ಯಾರಿಗೂ ಭರವಸೆಯನ್ನೂ ನೀಡಬೇಡಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಏರುಪೇರಾದರೂ ಆತಂಕಕ್ಕೆ ಕಾರಣವಾಗಬೇಕಿಲ್ಲ, ಮನೆಮದ್ದುಗಳಿಂದ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು.

ಮಿಥುನ: ಪ್ರೀತಿ ಪಾತ್ರರೊಂದಿಗೆ ಭವಿಷ್ಯದ ಯೋಜನೆಗಳ ಹಾಗೂ ಜೀವನದ ಗುರಿ ತಲುಪುವ ಬಗ್ಗೆ ಗಂಭೀರ ಚರ್ಚೆ ನಡೆಸಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ. ದಿನಾಂತ್ಯದಲ್ಲಿ ಅಧಿಕ ಆಯಾಸವಿರುವುದು.

ಕರ್ಕಾಟಕ: ಮನೆಯ ಖರ್ಚು ವೆಚ್ಚಗಳ ಮೇಲಿನ ಈಗಿನ ನಿಮ್ಮ ನಿರ್ಲಕ್ಷ್ಯವು ಮುಂದೊಂದು ದಿನದ ಹಣದ ಅಭಾವಕ್ಕೆ ಕಾರಣವಾಗಬಹುದು. ಕುಟುಂಬದ ಮುಖ್ಯ ಸಂಗತಿಗಳನ್ನು ಏನಾದರೂ ಮರೆತೆನೇ ಎಂದು ಜ್ಞಾಪಿಸಿಕೊಳ್ಳಿ.

ಸಿಂಹ: ರೇಷ್ಮೆ ನೇಕಾರರು ತಮ್ಮ ಉತ್ತಮ ಮಟ್ಟದ ನೇಯ್ಗೆಯಿಂದ ಏಳಿಗೆ ಹೊಂದುವ ಸಾಧ್ಯತೆಗಳಿವೆ. ಪ್ರಾಕೃತ ಭಾಷಾತಜ್ಞರಿಗೆ ಮತ್ತು ಗಣಿತಜ್ಞರಿಗೆ ಬೇಡಿಕೆ ಹೆಚ್ಚಾಗುವುದು. ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತದೆ.

ಕನ್ಯಾ: ಗಿರವಿ ಇಟ್ಟ ಆಭರಣಗಳನ್ನು ಆದಷ್ಟು ಬೇಗ ಬಿಡಿಸಿಕೊಳ್ಳುವ ಯೋಜನೆ ಮಾಡುವುದು ಸೂಕ್ತಕರ. ಘಟನೆ ಪಾಲುದಾರಿಕೆಯ ವ್ಯವಹಾರದಲ್ಲಿ ಭಿನ್ನಾಭಿಪ್ರಾಯ ಮೂಡಲು ಕಾರಣವಾಗುತ್ತದೆ.

ತುಲಾ: ಸಹೋದ್ಯೋಗಿಗಳೊಂದಿಗೆ ಹೊಂದಿಕೊಂಡು ಹೋಗುವ ಗುಣ ಸ್ವಭಾವಗಳನ್ನು ಅಳವಡಿಸಿಕೊಳ್ಳುವುದು ಒಳ್ಳೆಯದು. ಆತ್ಮವಿಶ್ವಾಸದಿಂದಾಗಿ ಕೆಲಸ ಕಾರ್ಯಗಳಲ್ಲಿ ಉತ್ತಮ ಯಶಸ್ಸನ್ನು ಹೊಂದುವಿರಿ.

ವೃಶ್ಚಿಕ: ವೃತ್ತಿ ಜೀವನಕ್ಕೆ ಬಹಳ ಅವಶ್ಯಕ ನಿರ್ಧಾರವೊಂದನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ವಿಚಾರಗಳಲ್ಲಿನ ಭಾವಶೂನ್ಯತೆ ಕುಟುಂಬ ವರ್ಗದವರಿಗೆ ನುಂಗಲಾರದ ತುತ್ತಿನಂತೆ ಕಾಣುತ್ತದೆ.

ಧನು: ಕೃಪಣತೆಯನ್ನು ಹೆಚ್ಚು ಪ್ರದರ್ಶಿಸಿ ಮನೆಯ ಸಾಮಗ್ರಿಗಳನ್ನು ತಂದು ಹಾಕುವಲ್ಲಿ ಕಡಿಮೆ ಮಾಡಿ ಮನೆಯವರ ಅಸಮಾಧಾನಕ್ಕೆ ಕಾರಣವಾಗಬೇಡಿ. ಸರಿ–ತಪ್ಪು ತೀರ್ಮಾನ ಹೇಳುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಡಿ.

ಮಕರ: ಮಡದಿಯ ಅಥವಾ ಸಹೋದರನ ಕೆಲವು ಅಹಿತಕರ ನಡವಳಿಕೆಗಳು ಅಪಮಾನ ಆದಂತೆ ಆಗಬಹುದು. ಉಪನ್ಯಾಸಕಲೆಯನ್ನು ಹೊಂದಿದವರಿಗೆ ಉತ್ತಮವಾದ ವೇದಿಕೆ ಪ್ರಾಪ್ತಿ. ಸಂಜೆಯ ವೇಳೆಗೆ ಶುಭ ಸುದ್ದಿ ಕೇಳುವಿರಿ.

ಕುಂಭ: ಪ್ರಾಚೀನ ಕಾಲದಿಂದ ಪೂರ್ವಿಕರು ನಡೆಸಿಕೊಂಡು ಬರುತ್ತಿರುವ ಸಂಪ್ರದಾಯಗಳನ್ನು ಕೈಬಿಡುವ ಯೋಚನೆ ಮಾಡಬೇಡಿ. ಭೂಮಿಯ ಮಾರಾಟದ ವಿಚಾರದಲ್ಲಿ ಆತುರದ ನಿರ್ಧಾರ ಒಳ್ಳೆಯದಲ್ಲ.

ಮೀನ: ವೈವಾಹಿಕ ಜೀವನದಲ್ಲಿ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ, ಅದು ಅಷ್ಟು ಸುಲಭವಾಗಿ ನಡೆಯುವುದಿಲ್ಲ. ಪಕ್ಕವಾದ್ಯ ಪ್ರವೀಣರಿಗೆ ಸಮಾರಂಭಗಳಲ್ಲಿ ಉತ್ತಮ ಮನ್ನಣೆ.

ಗುಂಡಣ್ಣ

‘ಬಿಸಿಲು ಇಲ್ಲದ ಜಾಗದಲ್ಲಿ ವಾಕಿಂಗ್’

ನಟ ದರ್ಶನ್ ಅಳಲು • ಪ್ರಕರಣದಿಂದ ಬಿಡುಗಡೆ ಕೋರಿ ಅರ್ಜಿ

ಪ್ರಜಾವಾಣಿ ವಾರ್ತೆ

ದರ್ಶನ್

ಪವಿತ್ರಾಗೌಡ

ಬೆಂಗಳೂರು: ‘ನ್ಯಾಯಾಲಯ ಸೂಚನೆ ನೀಡಿದ್ದರೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳು ಯಾವುದೇ ಸೌಲಭ್ಯ ನೀಡಿಲ್ಲ. ಕಿರಿದಾದ ಜಾಗದಲ್ಲಿ ವಾಕಿಂಗ್ ಮಾಡಲು ಬಿಡುತ್ತಾರೆ. ಅಲ್ಲಿ ಬಿಸಿಲು ಸಹ ಬೀಳುವುದಿಲ್ಲ...’

–ಹೀಗೆ ನ್ಯಾಯಾಧೀಶರ ಎದುರು ಮತ್ತೆ ಅಲವತ್ತುಕೊಂಡವರು ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್.

57ನೇ ಸಿಸಿಎಚ್ ನ್ಯಾಯಾಲಯದಲ್ಲಿ ಗುರುವಾರ ನಡೆದ ವಿಚಾರಣೆಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ದರ್ಶನ್ ಹಾಗೂ ಪವಿತ್ರಾಗೌಡ ಅವರು ಹಾಜರಾಗಿದ್ದರು. ಉಳಿದ ಐವರು ಆರೋಪಿಗಳು ಖುದ್ದು ನ್ಯಾಯಾಲಯದಲ್ಲಿ ಹಾಜರಿದ್ದರು.

‘ಆದೇಶ ನೀಡಿ ಎನ್ನುತ್ತಾರೆ’

ದರ್ಶನ್ ಪರ ವಕೀಲ ಸುನಿಲ್ ಅವರು, ‘ದರ್ಶನ್ ಅವರಿಗೆ ವಾಕಿಂಗ್ ಮಾಡಲು ಜೈಲಿನ ಆವರಣದೊಳಗೆ ಅವಕಾಶ ನೀಡಬೇಕೆಂದು ಕೋರಿದ್ದೆವು. ಅದಕ್ಕೆ ನ್ಯಾಯಾಲಯವೂ ಸಮ್ಮತಿಸಿತ್ತು. ಕಿರಿದಾದ ಜಾಗದಲ್ಲಿ ವಾಕಿಂಗ್‌ಗೆ ಅವಕಾಶ ನೀಡಲಾಗಿದೆ. ಅಲ್ಲಿ ಸೂರ್ಯನ ಬೆಳಕು ಬೀಳುತ್ತಿಲ್ಲ. ಜೈಲಿನ ಕೈಪಿಡಿಯಂತೆಯೇ ಸೌಲಭ್ಯ ಕಲ್ಪಿಸಿ ಎಂದರೆ, ಆದೇಶ ನೀಡಿ ಎಂದು 20 ಬಾರಿ ಕೇಳುತ್ತಾರೆ’ ಎಂದು ಆರೋಪಿಸಿದರು.

‘ಜೈಲಿನಲ್ಲಿ ಕನಿಷ್ಠ ಮೂಲ ಸೌಲಭ್ಯಗಳನ್ನೂ ನೀಡುತ್ತಿಲ್ಲ. ಬ್ಯಾರಕ್‌ನಿಂದ ಹೊರಗೆ ಬರುವುದಕ್ಕೂ ಬಿಡುತ್ತಿಲ್ಲ. ಮೈಮೇಲೆ ಬಿಸಿಲು ಬಿದ್ದು ಹಲವು ದಿನಗಳೇ ಆಗಿವೆ. ಕೈಯಲ್ಲಿ ಫಂಗಸ್ ಕಾಣಿಸಿಕೊಂಡಿದೆ (ಚರ್ಮದ ಅಲರ್ಜಿ). ಬೇರೆ ಯಾರಿಗೂ ಬೇಡ; ನನಗೆ ಮಾತ್ರ ವಿಷ ನೀಡಲಿ. ಈ ಸಂಬಂಧ ಕೋರ್ಟ್ ಆದೇಶ ನೀಡಲಿ...’ ಎಂದು ಕಳೆದ ವಿಚಾರಣೆ ವೇಳೆಯೂ ದರ್ಶನ್ ಅವರು ಜೈಲಿನ ಸಿಬ್ಬಂದಿಯ ವಿರುದ್ಧ ಆರೋಪ ಮಾಡಿದ್ದರು. ಈಗ ಮತ್ತೊಮ್ಮೆ ನ್ಯಾಯಾಧೀಶರ ಎದುರು ಕಣ್ಣೀರು ಹಾಕಿದ್ದು ನ್ಯಾಯಾಲಯವು ಆದೇಶ ಮಾಡಿದ್ದರೂ ಪಾಲನೆ ಆಗುತ್ತಿಲ್ಲ ಎಂದು ಆರೋಪಿಸಿದರು.

‘ಇನ್ನೂ ಕ್ವಾರಂಟೈನ್ ಸೆಲ್‌ನಲ್ಲೇ ಇರಿಸಿದ್ದಾರೆ. ಏನೇ ಕೇಳಿದರೂ ನ್ಯಾಯಾಲಯದ ಆದೇಶ ಕೊಡಿ ಎನ್ನುತ್ತಾರೆ. ಹಿಂದೆ ಹಾಸಿಗೆ ದಿಂಬು ಕೊಡುವಂತೆ ನ್ಯಾಯಾಲಯ ಸೂಚನೆ ನೀಡಿತ್ತು. ಆ ಸೂಚನೆಯನ್ನೂ ಪಾಲಿಸುತ್ತಿಲ್ಲ’ ಎಂದು ದರ್ಶನ್ ಅವರು ನ್ಯಾಯಾಧೀಶರ ಗಮನಕ್ಕೆ ತಂದರು.

‘ಕೊಲೆ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಈ ಪ್ರಕರಣದಿಂದ ನನ್ನನ್ನು ಕೈಬಿಡಬೇಕು’ ಎಂದು ಕೋರಿ ಗುರುವಾರ ನಡೆದ ವಿಚಾರಣೆ ವೇಳೆ ದರ್ಶನ್ ಅವರು ಅರ್ಜಿ ಸಲ್ಲಿಸಿದರು.

‘ಮುಂದಿನ ವಿಚಾರಣೆ ವೇಳೆ ಪರಪ್ಪನ ಅಗ್ರಹಾರ ಜೈಲಿನ ಮುಖ್ಯ ಅಧೀಕ್ಷಕರು ಖುದ್ದು ಹಾಜರಿರಬೇಕು’ ಎಂದು ಸೂಚಿಸಿದ ನ್ಯಾಯಾಧೀಶರು, ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 9ಕ್ಕೆ ಮುಂದೂಡಿದರು.

ವ್ಯಕ್ತಿ ಸಾವು

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನೀರಿನ ಟ್ಯಾಂಕರ್ ಸಾಗಿಸುವ ವಾಹನ ಹಾಗೂ ದ್ವಿಚಕ್ರ ವಾಹನದ ನಡುವೆ ಬುಧವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಕೋಲಾರದ ಮುನಿರಾಜ್ (52) ಎಂಬುವವರು ಮೃತಪಟ್ಟಿದ್ದಾರೆ. ಅವರ ಪುತ್ರ ಧನಂಜಯ (16) ಅವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಬೆಳಿಗ್ಗೆ 7.45ರ ಸುಮಾರಿಗೆ ಮುನಿರಾಜು ಅವರು ತಮ್ಮ ಬೈಕ್‌ನಲ್ಲಿ ಪುತ್ರನನ್ನು ಕರೆದುಕೊಂಡು ನಾಗಗೊಂಡನಹಳ್ಳಿ ಕಡೆಯಿಂದ ಇಮ್ಮಡಿಹಳ್ಳಿ ಕಡೆಗೆ ಹೋಗುತ್ತಿದ್ದರು. ಇಮ್ಮಡಿಹಳ್ಳಿ ಮುಖ್ಯರಸ್ತೆಯ ಸಾಯಿ ಸನ್‌ಶೈನ್ ಅಪಾರ್ಟ್‌ಮೆಂಟ್ ಎದುರು ವೇಗವಾಗಿ ಬಂದ ವಾಹನವು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಮುನಿರಾಜು ಅವರ ತಲೆ ಹಾಗೂ ಕಾಲಿಗೆ ಗಂಭೀರವಾದ ಗಾಯಗಳಾಗಿದ್ದವು. ವೈದೇಹಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಸುದ್ದಿ 2 ನಿಮಿಷ

ಎಸ್‌ಐಟಿ ರಚನೆಗೆ ಒತ್ತಡ ಹಾಕಿದ್ದು ಯಾರು: ವಿಜಯೇಂದ್ರ ಪ್ರಶ್ನೆ

ಬೆಂಗಳೂರು: ‘ಧರ್ಮಸ್ಥಳದ ವಿಚಾರದಲ್ಲಿ ಎಸ್‌ಐಟಿ ರಚಿಸಲು ಒತ್ತಡ ಹಾಕಿದವರು ಯಾರು ಎನ್ನುವುದನ್ನು ಬಹಿರಂಗಪಡಿಸಬೇಕು. ಭಕ್ತರ ಭಾವನೆಗಳಿಗೆ ಧಕ್ಕೆ ತಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನರ ಕ್ಷಮೆಯಾಚಿಸಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಾವ ಮಾತಿನಂತೆ ಮುಖ್ಯಮಂತ್ರಿ ಇಂಥ ದೊಡ್ಡ ನಿರ್ಧಾರ ಪ್ರಕಟಿಸಿದರು? ಎಸ್‌ಐಟಿ ರಚನೆ ಆದ ಬಳಿಕ ಸಾಮಾಜಿಕ ಜಾಲತಾಣದಲ್ಲಿ ಎಷ್ಟು ಅಪಪ್ರಚಾರ ನಡೆದಿದೆ ಎನ್ನುವ ಕುರಿತು ಮುಖ್ಯಮಂತ್ರಿ ಉತ್ತರ ನೀಡಬೇಕು’ ಎಂದು ಆಗ್ರಹಿಸಿದರು.



‘ಧರ್ಮಸ್ಥಳದ ವಿರುದ್ಧ ಪಿತೂರಿ ನಡೆಸಿದ ತಂಡವು ಎಸ್‌ಐಟಿ ರಚಿಸಲು ಕೋರಿ ಅರ್ಜಿ ಹಾಕಿದ್ದಾಗಿ ಕೋರ್ಟ್‌ಗೆ ಅನಿಸಿತ್ತು. ಇದರ ಹಿಂದೆ ಸಾರ್ವಜನಿಕ ಹಿತಾಸಕ್ತಿ ಅಡಗಿಲ್ಲ, ವೈಯಕ್ತಿಕ ಹಿತಾಸಕ್ತಿ ಇದರ ಹಿಂದಿದೆ ಎಂದು ಸುಪ್ರೀಂಕೋರ್ಟ್ ಮೇ ತಿಂಗಳಿನಲ್ಲೇ ಹೇಳಿತ್ತು. ಈ ವಿಷಯ ಮುಚ್ಚಿಟ್ಟು ಎಸ್‌ಐಟಿ ರಚನೆಗೆ ಸರ್ಕಾರದ ಮೇಲೆ ಒತ್ತಡ ಹಾಕಿದ್ದರು’ ಎಂದು ವಿಜಯೇಂದ್ರ ದೂರಿದರು.

ಶಾಸಕ ಬೈರತಿ ಬಸವರಾಜು ರಕ್ಷಣೆ ಆದೇಶ ತೆರವು ಕೋರಿ ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: ‘ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಆರೋಪ ಪ್ರಕರಣದಲ್ಲಿ ಶಾಸಕ ಬೈರತಿ ಬಸವರಾಜು ಅವರನ್ನು ಬಂಧಿಸದಂತೆ ರಕ್ಷಣೆ ನೀಡಿರುವ ಆದೇಶ ತೆರವುಗೊಳಿಸಬೇಕು’ ಎಂದು ಕೋರಿ ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದೆ.

ಈ ಕುರಿತ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಷನ್‌ನ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಹಲವು ಮಹತ್ವದ ಸಾಕ್ಷಗಳನ್ನು ಸಂಗ್ರಹಿಸಿದೆ. ಹಿಂದಿನ ವಿಚಾರಣೆಗಳಲ್ಲಿ ಬೈರತಿ ಬಸವರಾಜು ಸುಳ್ಳು ಮಾಹಿತಿ ನೀಡಿದ್ದಾರೆ. ಬೈರತಿ ಬಸವರಾಜು ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕಿದೆ. ಆದ್ದರಿಂದ, ಅವರನ್ನು ಬಂಧಿಸಿದಂತೆ ಈ ಹಿಂದೆ ಹೊರಡಿಸಿರುವ ನಿರ್ಬಂಧದ ಆದೇಶ ತೆರವುಗೊಳಿಸಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬೈರತಿ ಬಸವರಾಜು ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ. ಚೌಟ, ‘ಪೊಲೀಸರು ಕಳೆದ ಒಂದು ತಿಂಗಳಿನಿಂದ ವಿಚಾರಣೆಗೆ ಕರೆದಿಲ್ಲ. ಈ ಹಿಂದೆ ಪೊಲೀಸರು ಕರೆದಾಗಲೆಲ್ಲಾ ಅರ್ಜಿದಾರರು ವಿಚಾರಣೆಗೆ ಸಹಕರಿಸಿದ್ದಾರೆ. ಈಗ ಏಕಾಏಕಿ ಬಂಧನದ ಅಗತ್ಯವಿದೆ ಎಂದು ಹೇಳುತ್ತಿದ್ದಾರೆ. ಈ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ರಾಜಕೀಯ ದೃಷ್ಟಿಯಿಂದ ಕಿರುಕುಳ ನೀಡ ಬಾರದು. ಎಷ್ಟು ದಿನ ಕಸ್ಟಡಿಗೆ ಬೇಕು ಎಂಬುದನ್ನು ಕೋರ್ಟ್‌ಗೆ ತಿಳಿಸಿ’ ಎಂದು ಜಗದೀಶ್ ಅವರಿಗೆ ಸೂಚಿಸಿತಲ್ಲದೆ, ಆಕ್ಷೇಪಣೆ ಸಲ್ಲಿಸುವಂತೆ ಬೈರತಿ ಬಸವರಾಜು ಪರ ವಕೀಲರಿಗೆ ನಿರ್ದೇಶಿಸಿ ವಿಚಾರಣೆಯನ್ನು ಅ.8ಕ್ಕೆ ಮುಂದೂಡಿತು.

ಈ ಪ್ರಕರಣದಲ್ಲಿ ಬೈರತಿ ಬಸವರಾಜು ಐದನೇ ಆರೋಪಿಯಾಗಿದ್ದಾರೆ.

ಬೈಕ್ ಟ್ಯಾಕ್ಸಿ ನೀತಿ ವಿಳಂಬ: ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸಂಚಾರಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಸೂಕ್ತ ನೀತಿಯೊಂದನ್ನು ರೂಪಿಸಲು ಒಂದು ತಿಂಗಳ ಸಮಯಾವಕಾಶ ನೀಡಿದ್ದರೂ, ಸರ್ಕಾರ ಈತನಕ ಕ್ರಮ ವಹಿಸದೆ ನಿರಾಸಕ್ತಿ ತೋರುತ್ತಿದೆ’ ಎಂದು ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧದ ರಿಟ್ ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ನಡೆಸಿತು.

ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ರಾಜ್ಯದಲ್ಲಿ ಪ್ರಯಾಣಿಕರ ಬಳಕೆಗಾಗಿ ಬೈಕ್ ಟ್ಯಾಕ್ಸಿ ಓಡಿಸಲು ಸರ್ಕಾರ ಅನುಮತಿ ನೀಡಿಲ್ಲ. ಬೈಕ್‌ಗಳನ್ನು ಡೆಲಿವರಿಗಾಗಿ (ವಿತರಣೆ) ಬಳಸಲು ಮಾತ್ರವೇ ಅವಕಾಶ ನೀಡಲಾಗಿದೆ. ಡೆಲಿವರಿಗಾಗಿ ಟ್ಯಾಕ್ಸಿ ಎಂದು ನೋಂದಣಿ ಮಾಡಿಸುವ ಅಗತ್ಯವಿಲ್ಲ. ಬೈಕ್‌ಗಳನ್ನು ಡೆಲಿವರಿಗೆ ಬಳಸುವವರಿಗೆ ನೀತಿ ರೂಪಿಸಿದ್ದೇವೆ. ಆದರೆ ಪ್ರಯಾಣಿಕರನ್ನು ಬೈಕ್‌ನಲ್ಲಿ ಕರೆದೊಯ್ಯಲು ಅವಕಾಶವಿಲ್ಲ’ ಎಂದು ನ್ಯಾಯಪೀಠಕ್ಕೆ ಸ್ಪಷ್ಟಪಡಿಸಿದರು.

‘ಕೆಲವು ಟ್ಯಾಕ್ಸಿ ಕಂಪನಿಗಳು ಅನುಮತಿ ಇಲ್ಲದಿದ್ದರೂ ಬೈಕ್ ಟ್ಯಾಕ್ಸಿಗಳನ್ನು ಪ್ರಯಾಣಿಕರಿಗಾಗಿ ಬಳಸುತ್ತಿವೆ. ಅಂತಹ ಬೈಕ್ ಟ್ಯಾಕ್ಸಿ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಅವಕಾಶ ಮಾಡಿಕೊಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಮುಖ್ಯಾಂಶಗಳು

- ರಿಟ್ ಮೇಲ್ಮನವಿಗಳ ವಿಚಾರಣೆ ನಡೆಸಿದ ವಿಭು ಬಖ್ರು ನೇತೃತ್ವದ ನ್ಯಾಯಪೀಠ
- ಬೈಕ್ ಟ್ಯಾಕ್ಸಿ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶ ನೀಡಲು ಮನವಿ
- ವಿಚಾರಣೆ ಅಕ್ಟೋಬರ್ 15ಕ್ಕೆ ಮುಂದೂಡಿಕೆ

ಸರ್ಕಾರದ ವಾದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ಬೈಕ್ ಟ್ಯಾಕ್ಸಿಗೆ ಅನುಮತಿ ನೀಡುವ ಕುರಿತು ನೀತಿ ರೂಪಿಸಲು ಒಂದು ತಿಂಗಳು ಸಮಯ ನೀಡಿದ್ದರೂ ನೀವಿನ್ನೂ ಸೂಕ್ತ ನೀತಿ ರೂಪಿಸಿಲ್ಲ. ನ್ಯಾಯಾಲಯ ಸೂಚಿಸಿದ್ದು ಬೈಕ್ ಟ್ಯಾಕ್ಸಿ ವಿಚಾರ, ಆದರೆ ಇದೀಗ ನೀವು ಗಿಗ್ ಕಾರ್ಮಿಕರ ಬಗ್ಗೆ ಹೇಳುತ್ತಿದ್ದೀರಿ, ಇದನ್ನು ಒಪ್ಪಲಾಗದು’ ಎಂದು ಕಿಡಿ ಕಾರಿತು.

‘ಬೈಕ್ ಟ್ಯಾಕ್ಸಿ ಬಗ್ಗೆ ನಿಮ್ಮ ವಾದವೇನಿದೆ ಮಂಡಿಸಿ ನಂತರ ಸೂಕ್ತ ಆದೇಶ ಹೊರಡಿಸಲಾಗುವುದು’ ಎಂದು ವಿಚಾರಣೆಯನ್ನು ಅಕ್ಟೋಬರ್ 15ಕ್ಕೆ ನಿಗದಿಪಡಿಸಿತು.

ಕಳೆದ ತಿಂಗಳ 22ರಂದು ನ್ಯಾಯಾಲಯ, ‘ಬೈಕ್ ಟ್ಯಾಕ್ಸಿ ಸೇವೆ ನೀಡುವ ವ್ಯಕ್ತಿಗಳಿಗೆ ಕಿರುಕುಳ ನೀಡಬಾರದು’ ಎಂದು ರಾಜ್ಯ ಸರ್ಕಾರಕ್ಕೆ ಮೌಖಿಕವಾಗಿ ಸೂಚಿಸಿತ್ತು.

ಮಹಿಳೆಗೆ ಬೂಟುಕಾಲಿನಿಂದ ಒದ್ದ ಅಂಗಡಿ ಮಾಲೀಕ

ಬೆಂಗಳೂರು: ಸೀರೆ ಕಳವು ಮಾಡಿದ್ದಾರೆ ಎಂದು ಆರೋಪಿಸಿ ಮಹಿಳೆಗೆ ಬಟ್ಟೆ ಅಂಗಡಿ ಮಾಲೀಕರೊಬ್ಬರು ಬೂಟುಕಾಲಿನಿಂದ ಒದ್ದಿದ್ದಾರೆ. ಈ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸೀರೆ ಅಂಗಡಿ ಮಾಲೀಕನ ವರ್ತನೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಅವೆನ್ಯೂ ರಸ್ತೆಯ ಮಾಯಾ ಸಿಲ್ಕ್ ಸ್ಯಾರೀಸ್ ಅಂಗಡಿ ಮಾಲೀಕ ಬಾಬುಲಾಲ್ ಎಂಬುವರು ಮಹಿಳೆ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ಮಾಲೀಕ ಮಾತ್ರವಲ್ಲದೇ ಅಂಗಡಿ ಸಿಬ್ಬಂದಿ ಸಹ ಮಹಿಳೆಗೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ನೋವಿನಿಂದ ಮಹಿಳೆ ಕಿರುಚಾಡಿ ಅಂಗಲಾಚಿದರೂ ಸಹ ಬಿಟ್ಟಿಲ್ಲ. ಮಹಿಳೆ ಮೇಲೆ ಹಲ್ಲೆ ಮಾಡಿದ ದೃಶ್ಯ ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ.

‘ಮಹಿಳೆಯ ನೆರವಿಗೆ ಪೊಲೀಸರು ಬಂದಿಲ್ಲ. ಅಂಗಡಿ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಪೊಲೀಸರು ಮಹಿಳೆಯನ್ನೇ ವಶಕ್ಕೆ ಪಡೆದುಕೊಂಡಿದ್ದಾರೆ’ ಎಂದು ಸ್ಥಳೀಯರು ದೂರಿದ್ದಾರೆ.

ಪ್ಲಾಸ್ಟಿಕ್ ತಲ್ವಾರ್ ಹಿಡಿದು ಕುಣಿದ ಪವನ್ ಕಲ್ಯಾಣ್ ಅಭಿಮಾನಿಗಳು

ಬೆಂಗಳೂರು: ನಟ ಪವನ್ ಕಲ್ಯಾಣ್ ಅಭಿನಯದ ‘ಒಜಿ’ ಸಿನಿಮಾ ಪ್ರದರ್ಶನಗೊಳ್ಳುತ್ತಿರುವ ಮಡಿವಾಳದ ಸಂಧ್ಯಾ ಚಿತ್ರಮಂದಿರಕ್ಕೆ ಬುಧವಾರ ರಾತ್ರಿ ಬಂದಿದ್ದ ಅಭಿಮಾನಿಗಳು ಚಿತ್ರದಲ್ಲಿ ಬರುವ ದೃಶ್ಯದಂತೆಯೇ ಪ್ಲಾಸ್ಟಿಕ್ ತಲ್ವಾರ್ ಹಿಡಿದು ಕುಣಿದಿದ್ದರು.

ಸ್ಥಳೀಯರ ಮೊಬೈಲ್‌ನಲ್ಲಿ ಸೆರೆ ಆಗಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಸ್ಥಳಕ್ಕೆ ಬಂದಿದ್ದ ಮಡಿವಾಳ ಠಾಣೆ ಪೊಲೀಸರು, ಪ್ಲಾಸ್ಟಿಕ್ ತಲ್ವಾರ್ ವಶಕ್ಕೆ ಪಡೆದುಕೊಂಡಿದ್ದಾರೆ.

ಚಿತ್ರಮಂದಿರ ಬಳಿ ಡಿ.ಜೆಗೆ ಅವಕಾಶ ಮಾಡಕೂಡದು ಎಂದು ಪೊಲೀಸರು ಸೂಚಿಸಿ ಮುಚ್ಚಳಿಕೆ ಬರೆಸಿಕೊಂಡಿದ್ದರು. ನಿಯಮ ಮೀರಿ ಡಿ.ಜೆ ಬಳಸಲಾಗಿತ್ತು. ಚಿತ್ರಮಂದಿರದ ವ್ಯವಸ್ಥಾಪಕರ ವಿರುದ್ಧ ಪೊಲೀಸರು ಎನ್‌ಸಿಆರ್ (ಸ್ವಯಂ ಪ್ರೇರಿತವಾಗಿ ಗಂಭೀರ ಸ್ವರೂಪವಲ್ಲದ ಅಪರಾಧ) ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಟಿಪ್ಪರ್ ಡಿಕ್ಕಿ ಹೊಡೆದು ವ್ಯಕ್ತಿ ಸಾವು

ದಾಬಸ್‌ಪೇಟೆ: ಮಧುಗಿರಿ ರಸ್ತೆಯ ಮಾಕೇನಹಳ್ಳಿ ಬಳಿ ಟಿಪ್ಪರ್ ಡಿಕ್ಕಿ ಹೊಡೆದು ಜಿನ್ನಯ್ಯನಪಾಳ್ಯದ ಶ್ರೀನಿವಾಸ್ ಮೃತಪಟ್ಟಿದ್ದಾರೆ.

ಊರಿಗೆ ಹೋಗಲು ರಸ್ತೆಬದಿಯಲ್ಲಿ ನಿಂತಿದ್ದಾಗ ದಾಬಸ್‌ಪೇಟೆ ಮಾರ್ಗವಾಗಿ ಬಂದ ಟಿಪ್ಪರ್ ಶ್ರೀನಿವಾಸ್ ಅವರಿಗೆ ಡಿಕ್ಕಿ ಹೊಡೆದಿದೆ. ಸ್ಥಳದಲ್ಲೇ ಅವರು ಮೃತಪಟ್ಟಿದ್ದಾರೆ.

ಸುರಂಗ ಮಾರ್ಗ ಟೆಂಡರ್ ಪ್ರಶ್ನಿಸಿ ಪಿಐಎಲ್: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರದ ಸಂಚಾರ ದಟ್ಟಣೆ ತಗ್ಗಿಸುವ ನಿಟ್ಟಿನಲ್ಲಿ ಬಹುಕೋಟಿ ರೂಪಾಯಿ ವೆಚ್ಚದ ಜೋಡಿ ಸುರಂಗ ಮಾರ್ಗ ಯೋಜನೆ ಕೈಗೆತ್ತಿಕೊಳ್ಳುವ ಪ್ರಸ್ತಾವದ ಟೆಂಡರ್ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಇಂದಿರಾ ನಗರದ ಡಾ.ಆದಿಕೇಶವುಲು ರವೀಂದ್ರ, ಜೆ.ಪಿ. ನಗರದ ವಿನೋದ್ ವ್ಯಾಸುಲು ಮತ್ತು ಬಸವನಗುಡಿಯ ಎನ್.ಎಸ್.ಮುಕುಂದ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ

ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಪರಿಸರ ಅಧ್ಯಯನ ಮೌಲ್ಯಮಾನ ಪ್ರಾಧಿಕಾರ (ಎಸ್‌ಇಐಎಎ) ನಗರ ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್), ಬೆಂಗಳೂರು ಸ್ಮಾರ್ಟ್ ಮೂಲಸೌಕರ್ಯ ನಿಯಮಿತ (ಬಿ-ಸ್ಮೈಲ್) ರೋಡಿಕ್ ಕನ್ಸಲ್ಟೆಂಟ್ಸ್ ಮತ್ತು ಅಲ್ಟಿನೋಕ್ ಕನ್ಸಲ್ಟೆಂಟಿಂಗ್ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿದೆ.

ಕೋರಿಕೆ: ‘ಜೋಡಿ ಸುರಂಗ ರಸ್ತೆ ಯೋಜನೆಗೆ 2025ರ ಜುಲೈ 14ರಂದು ಕರೆದಿರುವ ಟೆಂಡರ್ ಅಧಿಸೂಚನೆ ರದ್ದುಗೊಳಿಸಬೇಕು. ಪೂರ್ವ-ಬಿಡ್, ಬಿಡ್ ಸಲ್ಲಿಕೆ, ಬಿಡ್ ಮೌಲ್ಯಮಾಪನ ಮತ್ತು ಉದ್ದೇಶಿತ ಟೆಂಡರ್ ಪ್ರಸ್ತಾವ ಅಂತಿಮಗೊಳಿಸುವ ಪತ್ರ ಸೇರಿದಂತೆ ಎಲ್ಲಾ ಹಂತಗಳ ಪ್ರಕ್ರಿಯೆ ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಅರ್ಜಿಯಲ್ಲಿ ಏನಿದೆ?

ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ಅಂದಾಜು ₹19 ಸಾವಿರ ಕೋಟಿ ವೆಚ್ಚದಲ್ಲಿ ಸುರಂಗ ಮಾರ್ಗ ಯೋಜನೆ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ.

ಉದ್ದೇಶಿತ ಸುರಂಗ ರಸ್ತೆ ನಿರ್ಮಾಣಕ್ಕಾಗಿ ಪರಿಸರ ಪರಿಣಾಮ ಮೌಲ್ಯಮಾಪನ ನಡೆಸಿಲ್ಲ. ಸಂಚಾರ ಯೋಜನೆ ಮತ್ತು ಸ್ವಾಧೀನದ ನಿರ್ದಿಷ್ಟ ವೆಚ್ಚದ ಪಟ್ಟಿಯನ್ನೂ ಸಿದ್ಧಪಡಿಸಿಲ್ಲ. ಚಾಲ್ತಿಯಲ್ಲಿರುವ ಎಲ್ಲ ಒಳಚರಂಡಿ ಮತ್ತು ರಾಜಕಾಲುವೆ ಮಾರ್ಗ ಮತ್ತು ಮಳೆ ನೀರು ಮಾರ್ಗಗಳ ನಕ್ಷೆ ಸಿದ್ಧಪಡಿಸಿಲ್ಲ. ಸುರಂಗ ಮಾರ್ಗದಿಂದ ರಾಜಕಾಲುವೆ ಮಾರ್ಗಗಳ ನಕ್ಷೆಗೆ ಅಡ್ಡಿ ಉಂಟಾದರೆ ಪರ್ಯಾಯ ವ್ಯವಸ್ಥೆ ಏನು ಎಂಬುದನ್ನು ಪ್ರಸ್ತಾವದಲ್ಲಿ ಕಾಣಿಸಿಲ್ಲ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಮೈಸೂರು ರೇಸ್

ಇಂಡಿಯನ್ ಬ್ರೋಕೇಡ್ ಗೆಲ್ಲುವ ನಿರೀಕ್ಷೆ

ಮೈಸೂರು 1000 ಗಿನ್ನಿಸ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಇಂಡಿಯನ್ ಬ್ರೋಕೇಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅನ್‌ಫಾರ್ಗೆಟಬಲ್ ಸ್ಟಾರ್ 3, ಸುಪ್ರೀಮ್ ಸಕ್ಸಸ್ 5, ಸೇಪಿಯೆಂಟ್ 2
2ನೇ ರೇಸ್: ಮೈ ಲೈಫ್ ಮೈ ರೂಲ್ಸ್ 4, ವಾರಿಯರ್ ವುಮನ್ 9, ಮಿರಾಕಲ್ ಹನಿ 6
3ನೇ ರೇಸ್: ಬಾಲ್ಟಿಮೋರ್ 5, ಫ್ಲೈಯಿಂಗ್ ಫಾಲ್ಕನ್ 2, ಸನ್‌ವೇ ಲಾಗೂನ್ 4
4ನೇ ರೇಸ್: ಓಷನ್ 2, ನ್ಯಾಚುರಲ್ ವಾರಿಯರ್ 4, ಫಾಲ್ಕನ್ ಫ್ಯೂರಿ 9
5ನೇ ರೇಸ್: ಇಂಡಿಯನ್ ಬ್ರೋಕೇಡ್ 4, ಮಿರಾಕಲ್ ಸ್ಟಾರ್ 6, ಮೂನ್ ಸ್ಟಾರ್ 7
6ನೇ ರೇಸ್: ಪವರ್ ಆಫ್ ಬ್ಯೂಟಿ 1, ಕನ್ಯಾ ರಾಶಿ 3, ಮಜಾಲ್ ಟೊವ್ 5
7ನೇ ರೇಸ್: ಮೂನ್‌ಲೈಟ್ ಕ್ವೀನ್ 5, ವರ್ದಾನ್ 8, ಕೋರ್ಟ್ ಜೆಸ್ಟರ್ 3

ಉತ್ತಮ ಬೆಟ್: ಅನ್‌ಫಾರ್ಗೆಟಬಲ್ ಸ್ಟಾರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಇಂದಿರಾ ಗಾಂಧಿ ವೃತ್ತದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಸಹಿ ಸಂಗ್ರಹ, ಜನಜಾಗೃತಿ ಅಭಿಯಾನ ನಡೆಸಿದರು

‘ಮತ ಕಳವು’ ಆರೋಪ: ‘ಕೈ’ ಸಹಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದ ಬಿಜೆಪಿ ಸರ್ಕಾರ ಮತ ಕಳ್ಳತನದಲ್ಲಿ ತೊಡಗಿದೆ' ಎಂದು ಆರೋಪಿಸಿ ಜಯನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ವತಿಯಿಂದ ಇಂದಿರಾ ಗಾಂಧಿ ವೃತ್ತದಲ್ಲಿ ಸಹಿ ಸಂಗ್ರಹ, ಜನಜಾಗೃತಿ ಅಭಿಯಾನ ನಡೆಯಿತು.

ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ ಮತ್ತು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾದ ಸೌಮ್ಯ ರೆಡ್ಡಿ ಅವರು ಸಹಿ ಹಾಕುವ ಮೂಲಕ ಜನಜಾಗೃತಿ ಮತ್ತು ಸಹಿ ಸಂಗ್ರಹಕ್ಕೆ ಚಾಲನೆ ನೀಡಿದರು.

ಸೌಮ್ಯ ರೆಡ್ಡಿ ಮಾತನಾಡಿ, ‘ಪ್ರಜಾಪ್ರಭುತ್ವದಲ್ಲಿ ಸಂವಿಧಾನ ಮತದಾನದ ಹಕ್ಕು ನೀಡಿದೆ, ಈ ಹಕ್ಕನ್ನು ವಂಚಿಸುವ ಕೆಲಸವಾಗುತ್ತಿದೆ. ಸಣ್ಣ ಮನೆಯಲ್ಲಿ 80ಕ್ಕೂ ಹೆಚ್ಚು ಮತದಾರರು ಇರುವುದು, ಒಬ್ಬ ವ್ಯಕ್ತಿಯ ಹೆಸರು ಹಲವು ಮತಗಟ್ಟೆಯಲ್ಲಿ ಇರುವುದು ಪತ್ತೆಯಾಗಿದೆ’ ಎಂದರು.

‘2023ರಲ್ಲಿ ನಡೆದ ಜಯನಗರ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ನಡೆದ ಘಟನೆ ಇಡೀ ರಾಜ್ಯಕ್ಕೆ ಗೊತ್ತಿದೆ’ ಎಂದ ಅವರು, 'ಪ್ರತಿಯೊಬ್ಬ ಪ್ರಜೆಗೂ ಮತದಾನ ಮಾಡುವ ಹಕ್ಕು ಇದೆ. ಇದರ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ’ ಎಂದರು.

ಅಭಿಷೇಕ್ ದತ್ತ ಅವರು ಮಾತನಾಡಿ, ‘ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸಲು, ಮತ ಕಳ್ಳತನ ವಿರುದ್ಧ ರಾಹುಲ್ ಗಾಂಧಿ ಅವರು ದೇಶದಾದ್ಯಂತ ಹೋರಾಟ ಮಾಡುತ್ತಿದ್ದಾರೆ. ಮಹದೇವಪುರ ಕ್ಷೇತ್ರದಲ್ಲಿ ಬಿಜೆಪಿಯು ಷಡ್ಯಂತ್ರದಿಂದ ಮತ ಕಳ್ಳತನ ಮಾಡಿದೆ’ ಎಂದು ದೂರಿದರು.

‘ಮತದಾರ ಪಟ್ಟಿಯಿಂದ ತೆಗೆದು ಹಾಕಿದ ಮತ್ತು ಸೇರ್ಪಡೆ ಮಾಡಿದ ಪಟ್ಟಿಯನ್ನು ಚುನಾವಣೆ ಆಯೋಗ ನೀಡುತ್ತಿಲ್ಲ’ ಎಂದರು.

ಜಯನಗರ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು.

ವೈದ್ಯಾಧಿಕಾರಿ, ಮಕ್ಕಳ ತಜ್ಞ, ಶಿಕ್ಷಕ, ಇಬ್ಬರು ಸಹಾಯಕರ ಸೆರೆ

ನಕಲಿ ದಾಖಲೆ: ಬಂಧಿತರ ಸಂಖ್ಯೆ ಐದಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಉಮೇಶ್ ಚೌಧರಿ


ಶ್ರೀನಿವಾಸ್

ಭರಮಪ್ಪ

ಹರಿಪ್ರಸಾದ್

ಸುಧಾಕರ್

ಬೆಂಗಳೂರು: ನಕಲಿ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿ, ಅಂಗವಿಕಲ ಕೋಟಾದ ಮೀಸಲಾತಿ ಅಡಿ ಸರ್ಕಾರಿ ವೈದ್ಯಕೀಯ ಸೀಟು ಪಡೆಯಲು ಯತ್ನಿಸಿದ್ದವರಿಗೆ ನೆರವು ನೀಡಿದ್ದ ಪ್ರಕರಣದಲ್ಲಿ ಮತ್ತೆ ಇಬ್ಬರು ಆರೋಪಿಗಳನ್ನು ಮಲ್ಲೇಶ್ವರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ಹೊಸಪೇಟೆಯ ಸರ್ಕಾರಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಹರಿಪ್ರಸಾದ್ ಹಾಗೂ ಮಕ್ಕಳ ತಜ್ಞ ಶ್ರೀನಿವಾಸ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಸೆ.17ರಂದು ಬೆಂಗಳೂರಿನ ನಂದಿನಿ ಲೇಔಟ್‌ನ ನಿವಾಸಿ, ಶಿಕ್ಷಕ ಭರಮಪ್ಪ (ಮೂಲತಃ ಚಿತ್ರದುರ್ಗದ ನಿವಾಸಿ), ಕೊಪ್ಪಳದ ಕುಕನೂರು ತಾಲ್ಲೂಕಿನ ಮಂಗಳೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಾಯಕ ಸುಧಾಕರ್, ಪ್ರಥಮ ದರ್ಜೆ ಸಹಾಯಕ ಉಮೇಶ್ ಚೌಧರಿ ಅವರನ್ನು ಬಂಧಿಸಲಾಗಿತ್ತು.

ಎರಡನೇ ಹಂತದ ಕಾರ್ಯಾಚರಣೆಯಲ್ಲಿ ಬಂಧಿಸಿರುವ ವೈದ್ಯಾಧಿಕಾರಿ ಹಾಗೂ ಮಕ್ಕಳ ತಜ್ಞರನ್ನು ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರ ನಿರ್ದೇಶನದಂತೆ ಮುಖ್ಯ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ್ ಅವರು ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ ಪೊಲೀಸರು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

‘21 ಅಭ್ಯರ್ಥಿಗಳು ಶ್ರವಣ ದೋಷವಿದೆ ಎಂದು ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿದ್ದರು. ಈ ಪೈಕಿ, ಹೆಚ್ಚಿನವರು ಯುಡಿ ಐಡಿ (ಅಂಗವಿಕಲರ ವಿಶಿಷ್ಟ ಗುರುತಿನ ಚೀಟಿ) ಅನ್ನು ವಿಜಯನಗರ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಯಿಂದ ಪಡೆದಿದ್ದರು. ಯುಡಿ ಐಡಿ ಪಡೆಯಲು ಇತ್ತೀಚೆಗೆ ಪಡೆದ ವೈದ್ಯಕೀಯ ಪ್ರಮಾಣಪತ್ರಗಳನ್ನು ಹಾಜರುಪಡಿಸಿದ್ದರು. ಪ್ರಮಾಣ ಪತ್ರಗಳ ಪರಿಶೀಲನೆಯ ವೇಳೆ ಅಭ್ಯರ್ಥಿಗಳು ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಎಂಬುದು ಗೊತ್ತಾಗಿತ್ತು’ ಎಂದು ಮೂಲಗಳು ಹೇಳಿವೆ.

ಅಂಗವಿಕಲರ ಕೋಟಾದಡಿ ನಕಲಿ ಪ್ರಮಾಣಪತ್ರಗಳನ್ನು ಸೃಷ್ಟಿಸಿ, ವೈದ್ಯಕೀಯ ವಿದ್ಯಾರ್ಥಿಗಳಿಂದ ಲಕ್ಷಾಂತರ ರೂಪಾಯಿ ಹಣ ಪಡೆದು ಆರೋಪಿಗಳು ವಂಚಿಸುತ್ತಿದ್ದರು. ಪ್ರಮುಖ ಆರೋಪಿ ಭರಮಪ್ಪ ಅವರು ನಂದಿನಿ ಲೇಔಟ್‌ನ ಶಾಲೆಯೊಂದರಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಅಕ್ರಮವಾಗಿ ಹಣ ಸಂಪಾದಿಸಲು ಅಂಗವಿಕಲ ಕೋಟಾದಡಿ ವೈದ್ಯಕೀಯ ಸೀಟು ಕೊಡಿಸುವುದಾಗಿ ಅಭ್ಯರ್ಥಿಗಳನ್ನು ನಂಬಿಸಿ ಅವರಿಂದ ₹5 ಲಕ್ಷ ಪಡೆಯುತ್ತಿದ್ದರು. ಬಳಿಕ ತನ್ನ ಸಂಪರ್ಕದಲ್ಲಿದ್ದ ಇತರೆ ಆರೋಪಿಗಳೊಂದಿಗೆ ಸೇರಿಕೊಂಡು ನಕಲಿ ಪ್ರಮಾಣಪತ್ರಗಳನ್ನು ಸೃಷ್ಟಿಸುತ್ತಿದ್ದರು. ಈ ವರ್ಷ 21 ಮಂದಿ ಅಭ್ಯರ್ಥಿಗಳಿಂದ ಲಕ್ಷಾಂತರ ಹಣ ಪಡೆದು ನಕಲಿ ದಾಖಲಾತಿ ಸೃಷ್ಟಿಸಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

‘ಭರಮಪ್ಪ ಅವರು ತಾನು ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಕಚೇರಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ಅಭ್ಯರ್ಥಿಗಳಿಗೆ ಸುಳ್ಳು ಹೇಳಿದ್ದರು. ಅಭ್ಯರ್ಥಿಗಳಿಂದ ಅಗತ್ಯ ದಾಖಲಾತಿಗಳನ್ನು ಪಡೆದು ಇತರೆ ಆರೋಪಿಗಳ ಜತೆಗೆ ಸೇರಿಕೊಂಡು ಯುಡಿ ಐಡಿ ಕಾರ್ಡ್ ತಯಾರಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಅಭ್ಯರ್ಥಿಗಳಿಗೆ ನೋಟಿಸ್

21 ಅಭ್ಯರ್ಥಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಕೃತ್ಯದಲ್ಲಿ ಅಭ್ಯರ್ಥಿಗಳೂ ಶಾಮೀಲಾಗಿದ್ದಾರೆಯೇ ಎಂಬುದರ ಕುರಿತು ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

ಎಲ್ಲ ಠಾಣಾಧಿಕಾರಿಗಳಿಗೆ ಸುತ್ತೋಲೆ ರವಾನಿಸಿದ ಡಿಜಿಪಿ ಎಂ.ಎ.ಸಲೀಂ

ಸಿವಿಲ್ ವ್ಯಾಜ್ಯದಲ್ಲಿ ನೆರವು: ಪೊಲೀಸರ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿವಿಲ್ ಸ್ವರೂಪದ ವ್ಯಾಜ್ಯಗಳು ಠಾಣೆಗೆ ಬಂದಾಗ ರಾಜ್ಯದ ಎಲ್ಲ ಪೊಲೀಸ್ ಅಧಿಕಾರಿಗಳು ಅನುಸರಿಸಬೇಕಾದ ಮಾರ್ಗಸೂಚಿಯನ್ನು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಬಿಡುಗಡೆ ಮಾಡಿದ್ದಾರೆ.


ಎಂ.ಎ. ಸಲೀಂ

ಮಾರ್ಗಸೂಚಿ ಅನುಸಾರವೇ ಸಿವಿಲ್ ಸ್ವರೂಪದ ವಿವಾದಗಳನ್ನು ಪೊಲೀಸ್ ಅಧಿಕಾರಿಗಳು ನಿರ್ವಹಿಸಬೇಕು ಎಂದೂ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ರಾಜ್ಯದ ಎಲ್ಲ ಠಾಣಾಧಿಕಾರಿಗಳಿಗೆ ಈ ಸುತ್ತೋಲೆ ರವಾನೆ ಮಾಡಲಾಗಿದೆ.

‘ಯಾವುದೇ ಪೊಲೀಸ್ ಅಧಿಕಾರಿ, ತಾನು ಸ್ವೀಕರಿಸಿದ ದೂರು ಅಥವಾ ಮಾಹಿತಿ ಸಂಪೂರ್ಣವಾಗಿ ಸಿವಿಲ್ ಸ್ವರೂಪದ ವ್ಯಾಜ್ಯವೆಂದು ತಿಳಿದಿದ್ದರೂ ಸದರಿ ವ್ಯಾಜ್ಯವು ಒಂದು ಪಕ್ಷ ಅಥವಾ ವ್ಯಕ್ತಿಗೆ ಸಹಾಯ ಮಾಡಬೇಕೆನ್ನುವ ದುರುದ್ದೇಶದಿಂದ ಕಾನೂನು ಬಾಹಿರವಾಗಿ ಸ್ವತ್ತುಗಳನ್ನು ಪಡೆಯಲು, ಸ್ವಾಧೀನ ಪಡಿಸಿಕೊಳ್ಳಲು ನೆರವು ನೀಡಿದರೆ ಅಪರಾಧಿಕ ದುರ್ನಡತೆ ಎಂದೇ ಪರಿಗಣಿಸಲಾಗುವುದು. ಅಂತಹ ಅಧಿಕಾರಿಯ ವಿರುದ್ಧ ಸೂಕ್ತ ಕಾನೂನು ಕ್ರಮ, ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲಾಗುವುದು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಸುತ್ತೋಲೆಯಲ್ಲಿ ಎಚ್ಚರಿಸಿದ್ದಾರೆ.

ದೂರುದಾರರು ಸಿವಿಲ್ ವ್ಯಾಜ್ಯವಿರುವ ಮಾಹಿತಿಯುಳ್ಳ ದೂರನ್ನು ಠಾಣಾಧಿಕಾರಿಗೆ ಸಲ್ಲಿಸಿದಾಗ ಅಂತಹ ದೂರು ಅಥವಾ ಮಾಹಿತಿಯನ್ನು ಸಂಪೂರ್ಣ ಪರಿಶೀಲನೆಗೆ ಒಳಪಡಿಸಬೇಕು. ಮೇಲ್ನೋಟಕ್ಕೆ ಸಿವಿಲ್ ವ್ಯಾಜ್ಯವೆಂದು ಕಂಡುಬಂದರೆ ಆ ವಿಷಯವನ್ನು ಸ್ಪಷ್ಟವಾಗಿ ‘ಠಾಣಾ ದಿನಚರಿ’ಯಲ್ಲಿ ಉಲ್ಲೇಖಿಸಬೇಕು. ಪರಿಹಾರಕ್ಕಾಗಿ ಸಕ್ಷಮ ಸಿವಿಲ್ ನ್ಯಾಯಾಲಯಕ್ಕೆ ದಾವೆ ದಾಖಲಿಸುವುದು ಸೂಕ್ತವೆಂದು ದೂರುದಾರ ಅಥವಾ ಅವರ ಪ್ರತಿನಿಧಿಗೆ ಹಿಂಬರಹ ನೀಡಿ ಕಳುಹಿಸಬೇಕು ಎಂದೂ ಸುತ್ತೋಲೆಯಲ್ಲಿ ವಿವರಿಸಲಾಗಿದೆ.

‘ಸ್ವೀಕರಿಸಿದ ಮಾಹಿತಿ ಅಥವಾ ದೂರಿನಲ್ಲಿ ಅಪರಾಧಿಕ ಅಂಶಗಳು ಕಂಡುಬಂದು, ಸಂಜ್ಞೇಯ ಅಪರಾಧಿಕ ಅಂಶಗಳು ಮೇಲ್ನೋಟಕ್ಕೆ ಕಂಡುಬರದೇ ಇದ್ದಾಗ ಠಾಣಾಧಿಕಾರಿಯು ಸಂಜ್ಞೇಯ ಅಪರಾಧಿಕ ಅಂಶಗಳು ಕಂಡುಕೊಳ್ಳುವ ಕುರಿತಂತೆ ಪ್ರಾಥಮಿಕ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ‘ಲಲಿತಾ ಕುಮಾರಿ ಹಾಗೂ ಇತರರ ವಿರುದ್ಧದ ಉತ್ತರಪ್ರದೇಶ ರಾಜ್ಯ ಸರ್ಕಾರದ ಪ್ರಕರಣ’ದಲ್ಲಿ ನೀಡಿದ್ದ ನಿರ್ದೇಶನದಂತೆ ಕ್ರಮ ಕೈಗೊಳ್ಳಬಹುದು’ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

‘ವಿಚಾರಣೆಯನ್ನು ನಾಲ್ಕು ದಿನಗಳ ಒಳಗಾಗಿ ಪೂರ್ಣಗೊಳಿಸಿ’

‘ಠಾಣಾಧಿಕಾರಿಯು ಪ್ರಾಥಮಿಕ ವಿಚಾರಣೆಯನ್ನು ನಾಲ್ಕು ದಿನಗಳ ಒಳಗಾಗಿ ಪೂರ್ಣಗೊಳಿಸಬೇಕು. ಆ ಮೂಲಕ ಸಂಜ್ಞೇಯ ಅಪರಾಧಿಕ ದೂರಿನಲ್ಲಿ ಸಂಜ್ಞೇಯ ಅಪರಾಧಿಕ ಅಂಶಗಳು ಕಂಡುಬಂದರೆ ಅಥವಾ ಕಂಡುಬಾರದೇ ಇರುವ ಬಗ್ಗೆ ಅಥವಾ ಪ್ರಕರಣವು ತನಿಖೆಗೆ ಅರ್ಹ ಅಥವಾ ಅರ್ಹವಲ್ಲ ಎಂಬುದನ್ನು ಪತ್ತೆ ಮಾಡಿ ವಿಷಯವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕು’ ಎಂದೂ ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಇದೇ ಸುತ್ತೋಲೆಯಲ್ಲಿ ಸಿವಿಲ್ ಸ್ವರೂಪದ ವಿವಾದಗಳು ಮತ್ತು ಪ್ರಕರಣಗಳಲ್ಲಿ ಪೊಲೀಸ್ ರಕ್ಷಣೆ ನೀಡುವುದರ ಕುರಿತು, ಸಿವಿಲ್ ಸ್ವರೂಪದ ವ್ಯಾಜ್ಯಗಳಲ್ಲಿ ಪೊಲೀಸ್ ಅಧಿಕಾರಿ ಯಾವಾಗ ಮಧ್ಯ ಪ್ರವೇಶಿಸಬಹುದು ಎಂಬುದರ ಕುರಿತು ಉಲ್ಲೇಖಿಸಲಾಗಿದೆ.

ಗ್ರಾಮ ಸಹಾಯಕರಿಗೆ ಇಡುಗಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಸಹಾಯಕರು ಕೆಲಸದಿಂದ ನಿವೃತ್ತಿ ಹೊಂದಿದ ನಂತರ ಅಥವಾ ಕೆಲಸದಲ್ಲಿ ಇರುವಾಗಲೇ ಮೃತರಾದರೆ ₹10 ಲಕ್ಷಗಳ ಇಡುಗಂಟು ನೀಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು. ಅಲ್ಲದೇ, ಈ ಕೆಲಸವನ್ನು ಗ್ರೂಪ್ ‘ಡಿ’ ಹುದ್ದೆಯಲ್ಲಿ ಸಕ್ರಮಗೊಳಿಸುವುದು ಅಥವಾ ಗೌರವ ಧನವನ್ನು ₹15,000 ದಿಂದ ₹27,000ಕ್ಕೆ ಹೆಚ್ಚಿಸುವುದು ಇವೆರಡಲ್ಲಿ ಒಂದು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ಬಾಡಿಗೆ ಮಸೂದೆಗೆ ಒಪ್ಪಿಗೆ: ಕೇಂದ್ರ ಸರ್ಕಾರವು ‘ಜನ ವಿಶ್ವಾಸ’ ಕಾಯ್ದೆಯನ್ನು ಜಾರಿಗೆ ತಂದಿದ್ದು, ಇದನ್ನು ರಾಜ್ಯದಲ್ಲಿ ಜಾರಿಗೆ ತರಲು ಕರ್ನಾಟಕ ಬಾಡಿಗೆ ಕಾಯ್ದೆ 1999ರ ವಿವಿಧ ಕಲಂಗಳ ಅಡಿಯಲ್ಲಿ ದಂಡ, ಅಪರಾಧ ನಿಬಂಧನೆ ಗಳಿಗೆ ತಿದ್ದುಪಡಿ ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

ಇದು ಕೈಗಾರಿಕಾ ಕಟ್ಟಡಗಳು, ಶೆಡ್‌ಗಳ ಬಾಡಿಗೆ ಸಂಬಂಧಿಸಿದ್ದಾಗಿದೆ. ಈ ತಿದ್ದುಪಡಿ ಮಸೂದೆಯನ್ನು ವಿಧಾನ ಮಂಡಲದ ಅಧಿವೇಶನ ದಲ್ಲಿ ಮಂಡಿಸ ಲಾಗುವುದು. ಈ ತಿದ್ದುಪಡಿ ಮೂಲಕ ದಂಡ ಪ್ರಮಾಣವನ್ನು ತರ್ಕಬದ್ಧ ಗೊಳಿಸಲಾಗುವುದು ಎಂದು ಪಾಟೀಲ ಹೇಳಿದರು.

ಮುಖ್ಯವಾಗಿ ವಿವಿಧ ಅಪರಾಧದ ಪ್ರಕರಣಗಳನ್ನು ಅಪರಾಧವಲ್ಲ ಎಂದು ನಿರ್ಣಯಿಸುವುದು, ವಿವಿಧ ರೀತಿಯ ದಂಡಗಳನ್ನು ಪರಿಷ್ಕರಿಸುವುದು, ನ್ಯಾಯಾಂಗ ಅಧಿಕಾರಿ ಯನ್ನು ನೇಮಿಸುವುದು, ಮೇಲ್ಮನವಿ ಘಟಕದ ಸ್ಥಾಪನೆ ಮತ್ತು ದಂಡ ಪ್ರಮಾಣವನ್ನು ಕಾಲ ಕಾಲಕ್ಕೆ ಹೆಚ್ಚಿಸುವ ಅಂಶವನ್ನು ತಿದ್ದುಪಡಿ ಒಳಗೊಂಡಿದೆ ಎಂದರು.

ಲೈಂಗಿಕ ದೌರ್ಜನ್ಯ ತನಿಖೆ ಚುರುಕು

ಬೆಂಗಳೂರು: ಮದುವೆ ಆಗುವುದಾಗಿ ನಂಬಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದ ಅಡಿ ಕ್ರಿಕೆಟ್ ತರಬೇತುದಾರ ಎ.ಬಿ.ಮ್ಯಾಥ್ಯು ಅವರ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಕೋಣನಕುಂಟೆ ಠಾಣೆ ಪೊಲೀಸರು ಚುರುಕುಗೊಳಿಸಿದ್ದಾರೆ.

ಮಹಿಳಾ ಆಯೋಗಕ್ಕೆ ಸಂತ್ರಸ್ತೆ ದೂರು ನೀಡಿದ್ದರು. ದೂರು ಆಧರಿಸಿ, ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿ ಡಿಸಿಪಿಗೆ ಪತ್ರ ಬರೆಯಲಾಗಿತ್ತು. ಆಯೋಗದ ಅಧಿಕಾರಿಗಳ ಸೂಚನೆ ಬೆನ್ನಲ್ಲೇ ಕ್ರಿಕೆಟ್ ಕೋಚ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

‘ಕೆಲ ಯುವತಿಯರ ಜೊತೆಗಿರುವ ಖಾಸಗಿ ಕ್ಷಣದ ದೃಶ್ಯವನ್ನು ಆರೋಪಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುವ ಆರೋಪ ಇದೆ. ಮ್ಯಾಥ್ಯು ಅವರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದ ಬಳಿಕ ಅವರು ಏನೆಲ್ಲಾ ಕೃತ್ಯ ಎಸಗಿದ್ದಾರೆ ಎಂಬುದು ತಿಳಿಯಲಿದೆ’ ಎಂದು ಪೊಲೀಸರು ಹೇಳಿದರು.

110 ಜಂಕ್ಷನ್‌ಗಳಲ್ಲಿ ‘ಅಡಾಪ್ಟಿವ್ ಸಿಗ್ನಲ್’

₹56.45 ಕೋಟಿ ವೆಚ್ಚದಲ್ಲಿ ಅಳವಡಿಕೆ

- ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 110 ಜಂಕ್ಷನ್‌ಗಳಲ್ಲಿ ಅಡಾಪ್ಟಿವ್ ಟ್ರಾಫಿಕ್ ಸಿಗ್ನಲ್‌ಗಳನ್ನು ₹56.45 ಕೋಟಿ ವೆಚ್ಚದಲ್ಲಿ ಅಳವಡಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಭೆಯ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಇದು 2 ನೇ ಹಂತದ ಯೋಜನೆಯಾಗಿದೆ. ಈ ಸಿಗ್ನಲಿಂಗ್ ವ್ಯವಸ್ಥೆ ಅಳವಡಿಸುವ ಮೂಲಕ ಸ್ವಯಂ ಚಾಲಿತವಾಗಿ ಟ್ರಾಫಿಕ್ ನಿಯಂತ್ರಿಸಲು ಸಾಧ್ಯವಾಗುತ್ತದೆ. ಸಾರಿಗೆ ಸಂದಣಿ ಆಧರಿಸಿ ಕಾಲ ಬದ್ಧವಾಗಿ ಬದಲಾವಣೆಯಾಗುವ ಬದಲು, ಕ್ರಿಯಾಶೀಲವಾಗಿ (ಡೈನಮಿಕ್) ಬದಲಾವಣೆಯಾಗುವ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ಅವರು ಹೇಳಿದರು.

ರೋಬೋಟಿಕ್ ವೈದ್ಯಕೀಯ ಉಪಕರಣ: ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಗೆ ರೋಬೋಟಿಕ್ ಉಪಕರಣವನ್ನು ₹20 ಕೋಟಿ ಅಂದಾಜು ಮೊತ್ತದಲ್ಲಿ ಖರೀದಿಸಲು ಅನುಮೋದನೆ ನೀಡಲಾಯಿತು.

2 ನೇ ಹಂತದ ಒಳಚರಂಡಿ: ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ನಗರಕ್ಕೆ 2ನೇ ಹಂತದ ಒಳಚರಂಡಿ ವ್ಯವಸ್ಥೆ ಒದಗಿಸುವ ₹128.74 ಕೋಟಿಗಳ ಪರಿಷ್ಕೃತ ವಿಸ್ತೃತ ಯೋಜನಾ ವರದಿ ಅನುಮೋದಿಸಲಾಯಿತು.

ಮುಖ್ಯಾಂಶಗಳು

- ಸ್ವಯಂ ಚಾಲಿತವಾಗಿ ಟ್ರಾಫಿಕ್ ನಿಯಂತ್ರಿಸಲು ಈ ಸಿಗ್ನಲಿಂಗ್ ವ್ಯವಸ್ಥೆ
- ಸಾರಿಗೆ ಸಂದಣಿ ಆಧರಿಸಿ ಕಾಲ ಬದ್ಧವಾಗಿ ಡೈನಮಿಕ್ ಬದಲಾವಣೆ

ಪ್ರಮುಖ ತೀರ್ಮಾನಗಳು

- ಹೊರಮಾವುನಲ್ಲಿರುವ 20 ಎಂಎಲ್‌ಡಿ ಬಳಸಿದ ನೀರು ಸಂಸ್ಕರಣಾ ಘಟಕವನ್ನು 5 ವರ್ಷಗಳ ಅವಧಿಗೆ ಸಮಗ್ರ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಲು ಅನುಮತಿ ನೀಡಲಾಗಿದೆ. ಇದರ ವೆಚ್ಚ ₹15 ಕೋಟಿ. ಇದನ್ನು ಕೆಟಿಪಿಪಿ ಕಾಯ್ದೆ ಅಡಿ ಅನುಷ್ಠಾನಗೊಳಿಸಬೇಕು. ಅನುದಾನವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಆಂತರಿಕ ಸಂಪನ್ಮೂಲದಿಂದ ಭರಿಸಬೇಕು
- ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪಿಪಿಪಿ ಮಾದರಿಯಲ್ಲಿ ಪ್ರತಿ ದಿನ 1,750 ಮೆಟ್ರಿಕ್ ಟನ್ ಕಟ್ಟಡಗಳ ಹಾಗೂ ನಿರ್ಮಾಣ ಸಾಮಗ್ರಿಗಳ ಅವಶೇಷ ತ್ಯಾಜ್ಯ ಸಂಗ್ರಹಣೆ ವಿಲೇವಾರಿ ಮಾಡುವ (750 ಟಿಪಿಡಿಯ ಒಂದು ಮತ್ತು 500 ಟಿಪಿಡಿಯ ಎರಡು ಪ್ಯಾಕೇಜ್‌ಗಳು) ಯೋಜನೆಗೆ ಒಪ್ಪಿಗೆ
- ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಜಿಪಿಆರ್ ರೈಸಿಂಗ್ ಮೇನ್ ಸೇರಿ ರಾಜಕಾಲುವೆ ಬಳಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಆವರಣದಲ್ಲಿರುವ ನೀರಿನ ಪಂಪಿಂಗ್ ಸ್ಟೇಷನ್, ದೇವನಹಳ್ಳಿ ಬಳಿಯ ಐಟಿ ಪಾರ್ಕ್ ಕೈಗಾರಿಕಾ ಪ್ರದೇಶದಲ್ಲಿ 40 ಎಂಎಲ್‌ಡಿ ಸಾಮರ್ಥ್ಯದ ಮೂರನೇ ಹಂತದ ಸಂಸ್ಕರಣಾ ಘಟಕದ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ₹45 ಕೋಟಿ
- ಎಲೆಮಲ್ಲಪ್ಪಶೆಟ್ಟಿಯಲ್ಲಿರುವ 15 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ ಮತ್ತು ಸಾದರಮಂಗಲದಲ್ಲಿ 5 ದಶಲಕ್ಷ ಲೀಟರ್ ಸಾಮರ್ಥ್ಯದ ಐಎಸ್‌ಪಿಎಸ್ ಮತ್ತು 3.5 ಕಿ.ಮೀಗಳ 450 ಮಿ.ಮೀ ಪೈಪ್‌ಲೈನ್ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ₹19.07 ಕೋಟಿ.

ಇಲಾಖಾ ತನಿಖೆಯ ಶಿಫಾರಸು ತಿರಸ್ಕಾರ

ಡಿವೈಎಸ್‌ಪಿ ಎಂ.ಕೆ.ಗಣಪತಿ ಅವರ ಅಸ್ವಾಭಾವಿಕ ಮರಣದ ಕುರಿತು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎನ್. ಕೇಶವನಾರಾಯಣ ನೇತೃತ್ವದ ವಿಚಾರಣಾ ಆಯೋಗದ ವರದಿಯನ್ನು ಸಚಿವ ಸಂಪುಟವು ಭಾಗಶಃ ಒಪ್ಪಿ, ಅಧಿಕಾರಿಗಳ ವಿರುದ್ಧದ ಇಲಾಖಾ ತನಿಖೆಯ ಶಿಫಾರಸನ್ನು ತಿರಸ್ಕರಿಸಿದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು. ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಎಂ.ಕೆ. ಶ್ರೀವಾಸ್ತವ್ ಅವರ ಅಧ್ಯಯನ ವರದಿಯ ಆಧಾರದಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಇಲ್ಲಿಗೆ ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ ಎಂದರು.

ಎಲ್ಲೆಲ್ಲೂ ಗುಂಡಿ

ಕೊಡತಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸರ್ಜಾಪುರ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರವೇ ದುಸ್ತರವಾಗಿದೆ

ದಿಗಂಬರ್ ದೀಕ್ಷಿತ್, ಕೊಡತಿ

ರೇಸ್‌ಕೋರ್ಸ್ ಹತ್ತಿರದ ಮಾಧವನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಜಲಮಂಡಳಿ ಸಿಬ್ಬಂದಿ ಅಗೆದು ಹಾಗೆಯೇ ಬಿಟ್ಟಿದ್ದಾರೆ

ಮಾಧವನಗರದ ನಿವಾಸಿಗಳು



ಕಮ್ಮಗೊಂಡನಹಳ್ಳಿಯ ರಾಘವೇಂದ್ರ ಬಡಾವಣೆಯ 11ನೇ ಕ್ರಾಸ್‌ನ ರಸ್ತೆಯ ಡಾಂಬರ್ ಕಿತ್ತು ಹೋಗಿದ್ದು, ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ

ಕಿರಣ್ ಕುಮಾರ್, ರಾಘವೇಂದ್ರ ಬಡಾವಣೆ



ಎಸ್‌ಆರ್‌ ನಗರದ ಒಂದನೇ ಮುಖ್ಯರಸ್ತೆಯಲ್ಲಿ ಭಾರಿ ಕಂದಕ ನಿರ್ಮಾಣ ಆಗಿದೆ. ವಾಹನ ಸವಾರರ ಸುರಕ್ಷತೆ ದೃಷ್ಟಿಯಿಂದ ಈ ಕಂದಕದಲ್ಲಿ ಡ್ರಮ್ ಅನ್ನು ಇಡಲಾಗಿದೆ

ಶಿವಪ್ರಸಾದ್, ಎಸ್‌.ಆರ್‌. ನಗರ

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು ‘ಪ್ರಜಾವಾಣಿ’ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ. ವಾಟ್ಸ್‌ಆ್ಯಪ್: **9606038256**

ವಿಪತ್ತು ಉಪಶಮನಕ್ಕೆ ₹1,005 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಪತ್ತು ಉಪಶಮನ ನಿಧಿಯಡಿ ₹1,005 ಕೋಟಿ ವೆಚ್ಚದಲ್ಲಿ ವಿವಿಧ ಜಿಲ್ಲೆಗಳಲ್ಲಿ ಉಪಶಮನ ಕಾಮಗಾರಿಗಳನ್ನು ಕೈಗೊಳ್ಳಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಾದ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಹಾಸನ ಜಿಲ್ಲೆಗಳಲ್ಲಿನ ಪುನರಾವರ್ತಿತ ಭೂಕುಸಿತವನ್ನು ತಡೆಗಟ್ಟಲು ₹466.93 ಕೋಟಿ ವೆಚ್ಚದಲ್ಲಿ 720 ಕಾಮಗಾರಿ ಕೈಗೊಳ್ಳಲು ಒಪ್ಪಿಗೆ ನೀಡಲಾಗಿದೆ ಎಂದರು.

ರೈತರು ತಮ್ಮ ಜಮೀನಿನಲ್ಲಿ ಬಿದ್ದ ಮಳೆಯ ನೀರನ್ನು ಹೊಂಡಗಳಲ್ಲಿ ಸಂಗ್ರಹಿಸಿ ಆಪತ್ಕಾಲದಲ್ಲಿ ಬೆಳೆಗಳಿಗೆ ಬಳಸಲು ‘ಕೃಷಿ ಭಾಗ್ಯ’ ಯೋಜನೆಯಡಿ ಹಣಕಾಸು ನೆರವು ಒದಗಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ₹200 ಕೋಟಿ ಅನುದಾನವನ್ನು ಕೃಷಿ ಇಲಾಖೆಗೆ ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಸಣ್ಣ ನೀರಾವರಿ ಇಲಾಖೆ ವಿಶ್ವ ಬ್ಯಾಂಕ್‌ನಿಂದ ₹550 ಕೋಟಿ ಆರ್ಥಿಕ ನೆರವು ಪಡೆದುಕೊಂಡಿದೆ. ಇದರಲ್ಲಿ ₹300 ಕೋಟಿಯನ್ನು ಬೆಂಗಳೂರು ನಗರದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ ನೀರನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಪೂರೈಕೆ ಮಾಡಲು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳಿಗೆ ಲಿಫ್ಟ್-4 ವೃಷಭಾವತಿ ವ್ಯಾಲಿ ಯೋಜನೆ- ಹಂತ 2 ರ ಮೂಲಕ ನೀರನ್ನು ತುಂಬಿಸುವ ಯೋಜನೆಗೆ ಬಳಸಲು ಒಪ್ಪಿಗೆ ನೀಡಲಾಗಿದೆ ಎಂದು ಅವರು ತಿಳಿಸಿದರು.



ಎಚ್‌.ಕೆ. ಪಾಟೀಲ

ಪ್ರಮುಖ ತೀರ್ಮಾನಗಳು:

- 15 ನೇ ಹಣಕಾಸು ಆಯೋಗದ ಯೋಜನೆಯಡಿ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ ವಿಸ್ತರಣೆ ಮತ್ತು ಆಧುನೀಕರಣಕ್ಕೆ ₹329 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ
- ನವದೆಹಲಿ ಚಾಣಕ್ಯಪುರಿ ಸರ್ದಾರ್ ಪಟೇಲ್ ಮಾರ್ಗದಲ್ಲಿರುವ ಕರ್ನಾಟಕ ಭವನ-2(ಶರಾವತಿ) ಕಟ್ಟಡದ ನವೀಕರಣಕ್ಕೆ ₹16.30 ಕೋಟಿ
- ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ 2019 ರ ಮಾರ್ಚ್ 31 ಕ್ಕೆ ಮೊದಲು ನೋಂದಣಿಯಾದ ವಾಹನಗಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಯೋಜನೆಗೆ ₹40 ಕೋಟಿ
- ಕೆಎಸ್‌ಆರ್‌ಪಿ ಅಧೀನದಲ್ಲಿ ಹೊಸದಾಗಿ ಸ್ಥಾಪಿಸಿರುವ ಎರಡು ಐಆರ್‌ಬಿ ಪಡೆಗಳಿಗೆ ಅವಶ್ಯವಿರುವ ವಸತಿ ಮತ್ತು ವಸತಿಯೇತರ ಸೌಕರ್ಯಗಳನ್ನು ಕಲ್ಪಿಸಲು ₹60 ಕೋಟಿ
- ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ 2 ನೇ ಆವೃತ್ತಿಯನ್ನು ₹40.29 ಕೋಟಿ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಸಮ್ಮತಿ

ಕರ್ನಾಟಕ ಕೌಶಲ ಅಭಿವೃದ್ಧಿ ನೀತಿಗೆ ಅಸ್ತು

ಕರ್ನಾಟಕದ ಯುವ ಜನತೆ ಜಾಗತಿಕ ಮಟ್ಟದಲ್ಲಿ ಉದ್ಯೋಗ ಗಿಟ್ಟಿಸುವ ನಿಟ್ಟಿನಲ್ಲಿ ಕೌಶಲ ಸಾಮರ್ಥ್ಯವನ್ನು ಹೆಚ್ಚಿಸಲು ‘ಕರ್ನಾಟಕ ಕೌಶಲ ಅಭಿವೃದ್ಧಿ ನೀತಿ 2025-2032’ಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಕೌಶಲ ನೀತಿ ಪ್ರಮುಖ ಅಂಶಗಳು: ಕಲಿಕೆ ಜೊತೆಗೆ ಕೌಶಲ, ‘ನನ್ನ ವೃತ್ತಿ ನನ್ನ ಆಯ್ಕೆ’ ಯೋಜನೆಗೆ ಆದ್ಯತೆ. ಅಪ್ರೆಂಟಿಸ್‌ಶಿಪ್, ಐಟಿಐ ತರಬೇತಿ ಮೂಲಕ ವಿಶೇಷ ಸಹಯೋಗ. ತಾಂತ್ರಿಕ ಮತ್ತು ಕೈಗಾರಿಕಾ ಬದಲಾವಣೆಗಳಿಗೆ ತಕ್ಕಂತೆ ನಿರಂತರ ಕಲಿಕೆಗೆ ಒತ್ತು. ಮಹಿಳೆಯರು, ಅಂಗವಿಕಲರು, ನಗರ ಪ್ರದೇಶದ ಬಡವರು, ದಮನಿತ ಸಮುದಾಯಗಳಿಗೆ ತರಬೇತಿ. ಐಟಿಐಗಳ ಆಧುನೀಕರಣ, ಜಿಟಿಟಿಸಿ ವಿಸ್ತರಣೆ ಮತ್ತು ಗ್ರಾಮೀಣ ಮತ್ತು ನಗರ ಕೌಶಲ ಕೇಂದ್ರಗಳ ಸ್ಥಾಪನೆ ಮತ್ತು ಮೂಲಸೌಕರ್ಯ ಹೆಚ್ಚಳಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

‘ಸಮೀಕ್ಷೆಗೆ ಹಾಜರಾಗದಿದ್ದರೆ ಶಿಸ್ತು ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ಹಾಜರಾಗದೇ ಮತ್ತು ಕರ್ತವ್ಯಗಳನ್ನು ನಿರ್ವಹಿಸದೇ ಇರುವ ಅಧಿಕಾರಿ ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಜಿಬಿಎ ಅಡಿ ಐದು ನಗರಪಾಲಿಕೆ ವ್ಯಾಪ್ತಿಯಲ್ಲಿ ಸಮೀಕ್ಷೆ ಕಾರ್ಯಕ್ಕಾಗಿ ಗಣತಿದಾರರಾಗಿ ನಿಯೋಜಿಸಲ್ಪಡುವ ಅಧಿಕಾರಿ ಮತ್ತು ನೌಕರರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 2021ರಡಿ ಹಾಗೂ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅನ್ವಯ ಶಿಸ್ತುಕ್ರಮ ಮತ್ತು ದಂಡನೆ ವಿಧಿಸುವ ಅಧಿಕಾರವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಿಗೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಎಂದು ಹೇಳಿದರು.

ಚಿಟಿಕೆ ಸುದ್ದಿ

‘ದೇವಸ್ಥಾನಗಳ ಮೇಲೆ ಸರ್ಕಾರದ ಹಿಡಿತ ಬೇಡ’

ಬೆಂಗಳೂರು: ದೇವಸ್ಥಾನ ಹಾಗೂ ಹಿಂದೂ ಧಾರ್ಮಿಕ ಕೇಂದ್ರಗಳನ್ನು ಸರ್ಕಾರದ ಸುಪರ್ದಿಯಿಂದ ಮುಕ್ತಗೊಳಿಸುವಂತೆ ಕೋರಿ ವಿಶ್ವ ಹಿಂದೂ ಪರಿಷತ್ ಮುಖಂಡರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು, ಧರ್ಮಾದಾಯ ದತ್ತಿಗಳ ಕಾಯ್ದೆ -1997 ಮತ್ತು ಅದರ ತಿದ್ದುಪಡಿಗಳು ಸಂವಿಧಾನ ಬದ್ಧವಾಗಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಘೋಷಿಸಿದ್ದು, ಕರ್ನಾಟಕ ಹಿಂದೂ ದೇವಸ್ಥಾನಗಳ ಆಡಳಿತಕ್ಕೆ ಸಂವಿಧಾನ ಬದ್ಧವಾದ ಒಂದು ಹೊಸ ವ್ಯವಸ್ಥೆ ರೂಪಿಸಲು ರಾಜ್ಯ ಸರ್ಕಾರಕ್ಕೆ ಸೂಚಿಸಬೇಕು ಎಂದು ಕೋರಿದರು.

ಸಂವಿಧಾನದ ಪ್ರಕಾರ ದೇಶದೊಳಗೆ ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ರಾಜ್ಯ ನಿರಾಕರಿಸಬಾರದು ಎಂದರು. ಪರಿಷತ್ ಮುಖಂಡರಾದ ಸ್ಥಾನು ಮಲಯನ್, ದೀಪಕ್ ರಾಜಗೋಪಾಲ್, ಬಿ.ಸುರೇಶ್, ಮುನಿರಾಜು, ಗಂಗಾಧರ್ ಹೆಗಡೆ, ಶಿವಕುಮಾರ್ ಭಾಗವಹಿಸಿದ್ದರು.

ವಾಹನ ಸಂಚಾರ ಮಾರ್ಗ ಬದಲಾವಣೆ

ಬೆಂಗಳೂರು: ವೈಟ್‌ಫೀಲ್ಡ್, ಹೋಪ್ ಫಾರಂ ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ. ಗುರುವಾರದಿಂದಲೇ ಇದು ಜಾರಿಗೆ ಬಂದಿದೆ.

ರಾಯಲ್ ಮಾರ್ಟ್ ಜಂಕ್ಷನ್‌ನಲ್ಲಿ ವಾಹನ ಸವಾರರು ‘ಯು’ ತಿರುವು ಪಡೆಯುವುದನ್ನು ನಿರ್ಬಂಧಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಅಂಬೇಡ್ಕರ್ ಗುಟ್ಟೆಯಿಂದ ಹೋಪ್ ಫಾರಂ ಕಡೆಗೆ ಸಂಚರಿಸುವ ವಾಹನ ಸವಾರರು, ವಿಜಯನಗರ ರಸ್ತೆಯನ್ನು ಬಳಸಿ ಮುನಿಸಿಂಗ್ ಜಂಕ್ಷನ್ ಕಡೆಯಿಂದ ಹೋಪ್ ಫಾರಂ ಮತ್ತು ಐಟಿಪಿಎಲ್ ಕಡೆಗೆ ಸಂಚರಿಸಬಹುದು. ರಾಯಲ್ ಮಾರ್ಟ್ ಮತ್ತು ವೈಟ್‌ಫೀಲ್ಡ್ ಕಡೆಯಿಂದ ಅಂಬೇಡ್ಕರ್ ಗುಟ್ಟೆ ಕಡೆಗೆ ಹೋಗುವ ವಾಹನ ಸವಾರರು ಹೋಪ್ ಫಾರಂ ಮೂಲಕ ಸಂಚರಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿ.ಎಂ ಮನವಿ ತಿರಸ್ಕರಿಸಿದ ಅಜೀಂ ಪ್ರೇಮ್‌ಜಿ

ಒಂದನೇ ಪುಟದಿಂದ...

ಈ ಪತ್ರಕ್ಕೆ ಗುರುವಾರ ಪ್ರತಿಕ್ರಿಯೆ ಬರೆದಿರುವ ಅಜೀಂ ಅವರು, ‘ಹೊರ ವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ ಸಮಸ್ಯೆಯನ್ನು ತುರ್ತಾಗಿ ಪರಿಹರಿಸಬೇಕು ಎಂಬ ನಿಮ್ಮ ಯೋಚನೆ ಸ್ವಾಗತಾರ್ಹ. ಆದರೆ, ಯಾವುದೋ ಒಂದು ಸ್ಥಳದಲ್ಲಿ ತಕ್ಷಣದ ಇಂತಹ ಬದಲಾವಣೆಯಿಂದ ಸಮಸ್ಯೆ ಬಗೆಹರಿಯಲಾರದು’ ಎಂದಿದ್ದಾರೆ.

‘ವಿಪ್ರೊವಿನ ಸರ್ಜಾಪುರ ಕ್ಯಾಂಪಸ್ ಜಾಗತಿಕ ಮಟ್ಟದ ಮತ್ತು ರಫ್ತನ್ನೇ ಆಧರಿಸಿರುವ ಕಂಪನಿಗಳಿರುವ ಒಂದು ವಿಶೇಷ ಆರ್ಥಿಕ ವಲಯವಾಗಿದೆ (ಎಸ್‌ಇಝಡ್). ವಿದೇಶಿ ಕಂಪನಿಗಳೊಂದಿಗೆ ಇಲ್ಲಿನ ಕಂಪನಿಗಳು ಮಾಡಿಕೊಂಡಿರುವ ಒಪ್ಪಂದಗಳ ಪ್ರಕಾರ ಕ್ಯಾಂಪಸ್‌ನಲ್ಲಿ ಸಾರ್ವಜನಿಕ ಸಂಚಾರಕ್ಕೆ ಅವಕಾಶ ನೀಡುವಂತಿಲ್ಲ. ಹಾಗೆ ಮಾಡಿದರೆ, ಆಡಳಿತಾತ್ಮಕ, ಆರ್ಥಿಕ ಮತ್ತು ಕಾನೂನು ಬಿಕ್ಕಟ್ಟುಗಳನ್ನು ಎದುರಿಸಬೇಕಾಗುತ್ತದೆ’ ಎಂದು ವಿವರಿಸಿದ್ದಾರೆ.

‘ಇದಲ್ಲದೆ, ಖಾಸಗಿ ಸ್ವತ್ತಿನಲ್ಲಿ ಸಾರ್ವಜನಿಕ ವಾಹನಗಳ ಸಂಚಾರಕ್ಕೆ ಅವಕಾಶ ಮಾಡಿಕೊಡುವುದು ಸುಸ್ಥಿರವಲ್ಲದ ಮತ್ತು ಅಲ್ಪಕಾಲೀನ ಪರಿಹಾರವಷ್ಟೆ’ ಎಂದಿದ್ದಾರೆ.

‘ಹೊರ ವರ್ತುಲ ರಸ್ತೆಯ ಸಂಚಾರ ದಟ್ಟಣೆ ವ್ಯವಸ್ಥೆ ಅತ್ಯಂತ ಸಂಕೀರ್ಣವಾದುದು ಮತ್ತು ಬಹು ಆಯಾಮದ್ದು. ಈ ಸಮಸ್ಯೆ ಬಗೆಹರಿಸಲು ತಕ್ಷಣದ, ಮಧ್ಯಮ ಅವಧಿಯ ಮತ್ತು ದೀರ್ಘಕಾಲದ ಉಪಕ್ರಮಗಳ ಅಗತ್ಯ ಇದೆ.

ಅವುಗಳನ್ನು ಕಂಡುಕೊಳ್ಳಲು ಜಾಗತಿಕ ಮಟ್ಟದ ನಗರ ಸಂಚಾರ ತಜ್ಞರ ಮೂಲಕ ಸಮಗ್ರ ಅಧ್ಯಯನ ನಡೆಸಬೇಕು. ಅಂತಹ ಅಧ್ಯಯನಕ್ಕೆ ಸರ್ಕಾರ ಮುಂದಾದರೆ, ನಮ್ಮ ಸಂಸ್ಥೆಯೂ ಪಾಲುದಾರನಾಗಲಿದೆ’ ಎಂದು ಹೇಳಿದ್ದಾರೆ.

ಅಜೀಂ ಪ್ರೇಮ್‌ಜಿ ಹೇಳಿದ್ದು

- ಎಸ್‌ಇಝಡ್ ಪ್ರದೇಶದಲ್ಲಿ ಇಂತಹ ಅವಕಾಶ ಕೊಟ್ಟರೆ ಆಡಳಿತಾತ್ಮಕ, ಕಾನೂನು ತೊಡಕು
- ಖಾಸಗಿ ಸ್ವತ್ತಿನಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅವಕಾಶ ಅಲ್ಪಕಾಲೀನ ಪರಿಹಾರವಷ್ಟೆ
- ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಸಲು ಸಮಗ್ರ ಅಧ್ಯಯನ ನಡೆಸಬೇಕಿದೆ

‘ರಸ್ತೆ ಗುಂಡಿ ಮುಚ್ಚಲು ₹750 ಕೋಟಿ’

ಒಂದನೇ ಪುಟದಿಂದ...

‘ಬಿಜೆಪಿಯವರು ಕೇಂದ್ರದಿಂದ ಬೆಂಗಳೂರಿಗೆ ಒಂದು ರೂಪಾಯಿ ಅನುದಾನ ಕೊಡಿಸಿದ್ದಾರೆಯೇ? ನಾವು ನಮ್ಮ ಪ್ರಯತ್ನ ಮಾಡುತ್ತಿದ್ದೇವೆ’ ಎಂದೂ ತಿರುಗೇಟು ನೀಡಿದರು.

‘ಎಲ್ಲೆಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲಾಗುತ್ತಿದೆಯೊ ಅಲ್ಲಿಗೆ ಆಯಾಯ ಕ್ಷೇತ್ರದ ಶಾಸಕರು ತೆರಳಿ ಪರಿಶೀಲಿಸಿ, ಗುಂಡಿಗಳನ್ನು ಮುಚ್ಚಿಸಿಕೊಳ್ಳಲಿ’ ಎಂದರು.

‘ಗುಂಡಿಗಳನ್ನು ತರಾತುರಿಯಲ್ಲಿ ಮುಚ್ಚಲು ಆಗುವುದಿಲ್ಲ. ಬಿಜೆಪಿಯವರು ಪ್ರತಿಭಟನೆ ವೇಳೆ ಗುಂಡಿ ತುಂಬಿದಂತೆ ಮಾಡಲು ಆಗುವುದಿಲ್ಲ. ಗುಂಡಿಗಳ ಸುತ್ತಲು ಕತ್ತರಿಸಿ ಸರಿಯಾಗಿ ಜಲ್ಲಿ ತುಂಬಿ ನಂತರ ರೋಡ್ ರೋಲರ್ ಮೂಲಕ ದುರಸ್ತಿ ಮಾಡಬೇಕಾಗುತ್ತದೆ’ ಎಂದರು.

‘ಎಲ್ಲೆಲ್ಲಿ ರಸ್ತೆಗುಂಡಿಗಳಿವೆ ಎಂದು ತಿಳಿಸಲು ನಾವೇ ಸಾರ್ವಜನಿಕರಿಗೆ ತಿಳಿಸಿದ್ದೆವು. ಅಧಿಕಾರಿಗಳು ಗುಂಡಿಗಳನ್ನು ಮುಚ್ಚದೇ ಇರಬಹುದು. ಆದರೆ ಜನರೇ ಜಾಗೃತರಾಗಿ ಮಾಹಿತಿ ನೀಡಿ ಎಂದು ಹೇಳಿದ್ದೆವು. ಸಾವಿರಾರು ಜನರು ಜಾಗಗಳನ್ನು ಗುರುತಿಸಿ ಫೋಟೊಗಳನ್ನು ಕಳುಹಿಸಿದ್ದಾರೆ. ಜೊತೆಗೆ ಸಂಚಾರಿ ಪೊಲೀಸರು ತಿಳಿಸಿದ ಜಾಗಗಳಲ್ಲಿಯೂ ರಸ್ತೆಗುಂಡಿಗಳನ್ನು ಮುಚ್ಚುವ ಕೆಲಸವಾಗುತ್ತಿದೆ’ ಎಂದರು.

‘ಗಡುವಿನ ಒಳಗೆ ಎಲ್ಲ ಗುಂಡಿಗಳನ್ನು ಮುಚ್ಚಲಾಗುತ್ತದೆಯೇ’ ಎಂಬ ಪ್ರಶ್ನೆಗೆ, ‘ಇದು ನಿರಂತರ ಪ್ರಕ್ರಿಯೆ. ಮಳೆ ಹೆಚ್ಚಾದರೆ ರಸ್ತೆಗುಂಡಿಗಳು ಉಂಟಾಗುತ್ತವೆ. ದೊಡ್ಡ ವಾಹನಗಳು ಚಲಿಸಿದರೆ ಉಂಟಾಗುತ್ತವೆ. ಈಗ ವಿಧಾನಸೌಧದ ಮುಂದಿನ ರಸ್ತೆಯಲ್ಲಿಯೇ ಗುಂಡಿಗಳಾಗಿವೆ. ಮುಖ್ಯರಸ್ತೆಗಳು ಕಾಂಕ್ರೀಟ್ ರಸ್ತೆಗಳಾಗಿ ಬದಲಾಗುವವರೆಗೆ ಈ ಸಮಸ್ಯೆ ಇದ್ದೇ ಇರುತ್ತದೆ. ರಸ್ತೆಯಲ್ಲಿ ಕಸ ಎಸೆಯುವುದು ಮತ್ತಿತರ ಕೆಲಸಗಳನ್ನು ಮಾಡುವುದು ಬಿಟ್ಟು ಜನರು ನಮಗೆ ಸಹಕಾರ ನೀಡಿದರೆ ಸಮಸ್ಯೆ ಪರಿಹರಿಸಲು ಸಾಧ್ಯ’ ಎಂದರು.

ಪ್ರಧಾನಿ ನಿವಾಸದ ರಸ್ತೆಯಲ್ಲಿ ಗುಂಡಿ ಇದೆ ಎಂದು ಹೇಳಿದ್ದನ್ನೇ ಟೀಕೆ ಮಾಡುತ್ತಿರುವ ಬಗ್ಗೆ ಕೇಳಿದಾಗ, ‘ಟೀಕೆ ಮಾಡಲಿ. ಅವರು ಹೇಳಿದರೆ ನಾವು ತಿದ್ದಿಕೊಳ್ಳಲು ತಯಾರಿದ್ದೇವೆ’ ಎಂದರು.

ರಸ್ತೆಗುಂಡಿ ಸಮಸ್ಯೆ ನಿವಾರಿಸಲು ಶಾಶ್ವತ ಪರಿಹಾರದ ಬಗ್ಗೆ ಕೇಳಿದಾಗ, ‘ವೈಟ್ ಟಾಪಿಂಗ್ ಹಾಗೂ ಹೊಸ ರಸ್ತೆ ಮಾಡುವ ಬಗ್ಗೆ ಆಲೋಚನೆ ಮಾಡಲಾಗುವುದು’ ಎಂದೂ ಹೇಳಿದರು.

ಪ್ರತಿಭಟನೆ: ಕರವೇ ಕಾರ್ಯಕರ್ತರ ಬಂಧನ

ಬೆಂಗಳೂರು: ಕೇಂದ್ರ ಸರ್ಕಾರದ ಸಂಸದೀಯ ರಾಜಭಾಷಾ ಸಮಿತಿ ನಗರದ ಹೋಟೆಲ್‌ನಲ್ಲಿ ಮೂರು ದಿನಗಳಿಂದ ಕರ್ನಾಟಕ ಸೇರಿದಂತೆ ಹಿಂದಿಯೇತರ ರಾಜ್ಯಗಳ ಜನರ ಮೇಲೆ ಹಿಂದಿ ಹೇರಿಕೆ ಮಾಡುವ ಸಂಬಂಧ ನಡೆಸುತ್ತಿದ್ದ ಕಾರ್ಯಕ್ರಮದ ವಿರುದ್ಧ ಗುರುವಾರ ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ ನಡೆಸಿದೆ.

ಈ ವೇಳೆ ಪೊಲೀಸರು ವೇದಿಕೆ ಮುಖಂಡರು, ಕಾರ್ಯಕರ್ತರನ್ನು ಬಂಧಿಸಿ, ಬಳಿಕ ಬಿಡುಗಡೆ ಮಾಡಿದರು.

‘ಹಿಂದಿ ಹೇರಿಕೆಯ ಕಾರ್ಯಕ್ರಮ ಅಲ್ಲ, ಅದು ಹಿಂದಿ ಭಾಷೆಗೆ ಸಂಬಂಧಿಸಿದ್ದೇ ಅಲ್ಲ ಎಂದು ತಿರುಚಲಾಗುತ್ತಿದೆ. ಕೇಂದ್ರ ಸರ್ಕಾರದ ರಾಜಭಾಷಾ ಸಮಿತಿ ಇರುವುದೇ ಹಿಂದಿ ಪ್ರಚಾರಕ್ಕೆ ಮತ್ತು ಹಿಂದಿಯನ್ನು ಹಿಂದಿಯೇತರ ರಾಜ್ಯಗಳ ಮೇಲೆ ಹೇರುವುದಕ್ಕೆ. ಹಿಂದಿ ಸಾಮ್ರಾಜ್ಯಶಾಹಿಯನ್ನು ಸ್ಥಾಪಿಸುವುದಕ್ಕಾಗಿಯೇ ರಾಜಭಾಷಾ ಸಮಿತಿ ಕೆಲಸ ಮಾಡುತ್ತಿದೆ’ ಎಂದು ಕಾರ್ಯಕರ್ತರು ಆರೋಪಿಸಿದರು.

‘ಭಾರತದಲ್ಲಿ ರಾಜಶಾಹಿ ವ್ಯವಸ್ಥೆ ಹೋಗಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಾಗಿದೆ. ಆದರೆ, ರಾಜಭಾಷೆಯ ಹೆಸರಲ್ಲಿ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಯತ್ನ 1947ರಿಂದಲೂ ಜಾರಿಯಲ್ಲಿದೆ. ದೇಶದಲ್ಲಿ ಈಗ ರಾಜರೂ ಇಲ್ಲ, ರಾಜಭಾಷೆಗಳೂ ಇಲ್ಲ. ಇರುವುದು ಈ ನೆಲದ ಭಾಷೆಗಳು. ನಮಗೆ ಕನ್ನಡವೇ ರಾಷ್ಟ್ರ ಭಾಷೆ. ಇನ್ನಾವುದೋ ಭಾಷೆಯನ್ನು ರಾಜಭಾಷೆ ಎಂದು ನಮ್ಮ ಮೇಲೆ ಹೇರಲು ಯತ್ನಿಸಿದರೆ ಸುಮ್ಮನಿರಲ್ಲ’ ಎಂದು ಎಂದರು.

ನಗರದಲ್ಲಿ ಇಂದು

ಜನ ಸಂಗಮ-2025 ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನೆ: ಕೆ.ಆರ್. ಜಲಜಾ, ಭಾಷಣಕಾರರು: ಐ.ಎಸ್. ಪ್ರಸಾದ್, ಅಧ್ಯಕ್ಷತೆ: ವಿಷ್ಣು ಭರತ್ ಅಲಂಪಲ್ಲಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ನಾಲ್ಕನೇ ವಾರ್ಷಿಕೋತ್ಸವ, ಅನುವಾದ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಂತೋಷ ಹಾನಗಲ್ಲ, ಅತಿಥಿಗಳು: ಪಿ. ಗೋಪಕುಮಾರ್, ಮೋಹನ ಕುಂಟಾರ್, ಆಯೋಜನೆ: ದ್ರಾವಿಡ ಭಾಷಾ ಅನುವಾದಕರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

‘ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ-2013ರ’ ಕುರಿತು ಕಾರ್ಯಾಗಾರ: ಆಯೋಜನೆ: ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು ಆಸ್ಪತ್ರೆ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಕೆ.ಆರ್. ವೃತ್ತ, ಬೆಳಿಗ್ಗೆ 11

ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಕಾರ್ಯದರ್ಶಿಗಳು, ಲೀಡರ್, ಟ್ರೈನರ್ಸ್‌ಗಳಿಗೆ ಸನ್ಮಾನ ಸಮಾರಂಭ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಯು.ಟಿ. ಖಾದರ್, ಡಿ.ಕೆ. ಶಿವಕುಮಾರ್, ಡಾ.ಎಂ.ಸಿ. ಸುಧಾಕರ್, ಮಧು ಬಂಗಾರಪ್ಪ, ಕೆ.ಕೆ. ಖಡೇಲ್‌ವಾಲ್, ರಶ್ಮಿ ವಿ. ಮಹೇಶ್, ಪಿ.ಜಿ.ಆರ್. ಸಿಂಧ್ಯ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಗಾಜಿನ ಮನೆ, ರಾಜಭವನ, ಬೆಳಿಗ್ಗೆ 11

42ನೇ ಅಂತರ ವಿಭಾಗ ನಾಟಕ ಸ್ಪರ್ಧೆ: ‘ಗೀತೋಪದೇಶ’ ನಾಟಕ ಪ್ರದರ್ಶನ: ನಿರ್ದೇಶನ: ಎಂ. ಅಶೋಕ್ ಕುಮಾರ್, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

‘ಅತಿಕಾಯ’ ಯಕ್ಷಗಾನ ತಾಳಮದ್ದಳೆ ಪ್ರದರ್ಶನ: ಉದ್ಘಾಟನೆ: ಎಸ್.ಎಂ. ಹೆಗಡೆ, ಉಪಸ್ಥಿತಿ: ಜಿ.ಎಸ್. ಹೆಗಡೆ, ಆಯೋಜನೆ: ಸಪ್ತಕ, ಸ್ಥಳ: ಹೋಟೆಲ್ ಸೌತ್ ರುಚಿಸ್ ಸಭಾಂಗಣ, ಜೈಮಿನಿರಾವ್ ವೃತ್ತ, ವಿಜಯನಗರ, ಸಂಜೆ 6

ಕಪ್ಪಣ್ಣ ಅಂಗಳ ದಶಮಾನೋತ್ಸವ: ‘ಲೀಕ್ ಔಟ್’ ಕಥನ ಪ್ರದರ್ಶನ: ಅಕ್ಷತಾ ಪಾಂಡವಪುರ, ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

ಮಹಾ ಗಣಪತಿ ಉತ್ಸವ: ನಗೆ ಹಬ್ಬ: ರಿಚರ್ಡ್ ಲೂಯಿಸ್ ತಂಡ, ಗಿಚ್ಚಿ ಗಿಲಿಗಿಲಿ ತಂಡ, ಸ್ಥಳ: ಕಮಲಮ್ಮನ ಗುಂಡಿ ಆಟದ ಮೈದಾನ, ಮಹಾಲಕ್ಷ್ಮಿ ಬಡಾವಣೆ, ಸಂಜೆ 6.30

‘ಶಾಶ್ವತ ಪರಿಹಾರ’ ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ನವರಾತ್ರಿ ವಿಶೇಷ

ನವರಾತ್ರಿ ಮಹೋತ್ಸವದ ಅಂಗವಾಗಿ ‘ಧಾತು’ ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ಗಾಯನ: ವಿಜಯ ಮಂಜಪ್ಪ ಮತ್ತು ತಂಡ, ಅತಿಥಿಗಳು: ಪಂಪನಗೌಡ ಮೇಲ್ಸೀಮೆ, ಕೆ.ಎಸ್. ಶಿವಕುಮಾರ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, #533, ಏಳನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಯುವ ದಸರಾ: ಅವಧಾನ: ಶತಾವಧಾನಿ ಆರ್. ಗಣೇಶ್, ಅವಧಾನಿ ರಾಮಕೃಷ್ಣ ಪೆಜತ್ತಾಯ, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ಪುಷ್ಪಾಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ.ನಗರ 3ನೇ ಹಂತ, ಸಂಜೆ 6

ದೇವಿಗೆ ಚರಿ ಅಲಂಕಾರ: ಆಯೋಜನೆ, ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದ ಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಸುವರ್ಣ ಅಲಂಕಾರ: ನೃತ್ಯ: ಶ್ವೇತಾ ಬಾಬು ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರ್ಯುತ್ಸವ: ವಿದ್ವಾಂಸರಿಂದ ಉಪನ್ಯಾಸ: ‘ಶ್ರೀನಿವಾಸ ಕಲ್ಯಾಣದಲ್ಲಿ ಲಕ್ಷ್ಮಿ ತತ್ವ’ ವಿಷಯದ ಬಗ್ಗೆ: ಅಂಬರೀಶಾಚಾರ್ಯ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಅಲಂಕಾರ: ಚಂದನ, ‘ಚಿತ್ರಾಕ್ಷಿ ಕಲ್ಯಾಣ’ ಯಕ್ಷಗಾನ ಪ್ರದರ್ಶನ,ಆಯೋಜನೆ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಅಲಂಕಾರ: ಮಹಾಲಕ್ಷ್ಮಿ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ಶಾಂತಲಾ ತಂಡ, ಗಾಯನ: ದಿವ್ಯಶ್ರೀ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶಾಂತಲಾ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ದೇವಿಗೆ ಲಕ್ಷ್ಮಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಕೆ.ಆರ್. ಪುರ, ಸಂಜೆ 7.30

ವಿವಿಧೆಡೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲಿಸಿದ ಆಯುಕ್ತರು

‘ಬೆಂಗಳೂರು ಸಿಟಿ ದಿಶಾಂಕ್’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ 5 ನಗರ ಪಾಲಿಕೆಗಳು ಸೇರಿದಂತೆ ಎಲ್ಲ ಮಾಹಿತಿಯನ್ನು ತಿಳಿಯಲು ಮೊಬೈಲ್ ತಂತ್ರಾಂಶ ‘ಬೆಂಗಳೂರು ಸಿಟಿ ದಿಶಾಂಕ್’ ಬಿಡುಗಡೆ ಮಾಡಲಾಗಿದೆ.

ಇದು ಜಿಐಎಸ್ ಮೊಬೈಲ್ ಅಪ್ಲಿಕೇಶನ್ ಆಗಿದ್ದು, ಜಿಬಿಎ, 5 ನಗರ ಪಾಲಿಕೆಗಳು, ವಲಯ, ವಿಧಾನಸಭಾ ಕ್ಷೇತ್ರ ಹಾಗೂ ವಾರ್ಡ್‌ಗಳ (ಹಳೆಯ 198 ವಾರ್ಡ್) ಅಧಿಕೃತ ಗಡಿಗಳನ್ನು ವೀಕ್ಷಿಸಬಹುದು. ಮುಂದಿನ ದಿನಗಳಲ್ಲಿ ಮತ್ತಷ್ಟು ವಿವರಗಳಿರುವ ಜಿಐಎಸ್ ಮಾಹಿತಿ ಸೇರಿಸಲಾಗುವುದು ಎಂದು ಜಿಬಿಎ ಮಾಹಿತಿ ತಂತ್ರಜ್ಞಾನ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ರಿಚರ್ಡ್ಸ್ ಟೌನ್ ಪಾರ್ಕ್ ಸಮಸ್ಯೆ: ರಿಚರ್ಡ್ಸ್ ಟೌನ್ ಪಾರ್ಕ್ ಮತ್ತು ಸುತ್ತಲಿನ ಸಮಸ್ಯೆಗಳನ್ನು ಸ್ಥಳೀಯ ನಿವಾಸಿಗಳು ಗುರುವಾರ ಆಯುಕ್ತರ ಮುಂದೆ ತೆರೆದಿಟ್ಟರು.

ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದ್ದ ಸಂದರ್ಭದಲ್ಲಿ ಜನರು ಸಮಸ್ಯೆಗಳ ಬಗ್ಗೆ ವಿವರ ನೀಡಿದರು.

ಪಾರ್ಕ್‌ನಲ್ಲಿರುವ ನಡೆಯುವ ದಾರಿಗಳನ್ನು ದುರಸ್ತಿಪಡಿಸಬೇಕು. ಜಿಮ್ ಸಾಧನಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ರಸ್ತೆ ಗುಂಡಿಗಳನ್ನು ಮುಚ್ಚಬೇಕು. ಪಾದಚಾರಿ ರಸ್ತೆ ಕಾಮಗಾರಿ ನಡೆಸಬೇಕು. ಮಾರಾಟ ವಲಯ ವ್ಯವಸ್ಥೆ ಮಾಡಬೇಕು ಎಂದು ಸ್ಥಳೀಯ ನಿವಾಸಿಗಳು ಆಗ್ರಹಿಸಿದರು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಯುಕ್ತರು ಸೂಚಿಸಿದರು.

ಡೇವಿಸ್ ರಸ್ತೆ, ಕ್ಲಾಕ್ ರಸ್ತೆ, ಹಾಲ್ ರಸ್ತೆ, ವಿವಿಯಾನಿ ರಸ್ತೆ, ಹೆಯ್ನ್ಸ್ ರಸ್ತೆ, ಕೋಲ್ಸ್ ರಸ್ತೆ ಮತ್ತು ಆಸಾಯೆ ರಸ್ತೆಯಲ್ಲಿ ನಡೆಯುತ್ತಿರುವ ಚರಂಡಿ ಮತ್ತು ಪಾದಚಾರಿ ಮಾರ್ಗದ ಕಾಮಗಾರಿಗಳನ್ನು ಆಯುಕ್ತರು ಪರಿಶೀಲಿಸಿದರು. ಲಿಂಗರಾಜಪುರ ಮುಖ್ಯರಸ್ತೆ ಮತ್ತು ಲೆಜರ್ ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ವೀಕ್ಷಿಸಿದರು.

ಆರೋಗ್ಯ ಕೇಂದ್ರಕ್ಕೆ ಭೇಟಿ: ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಕೆ.ವಿ. ಅವರು ಮಹಾಲಕ್ಷ್ಮಿಪುರದಲ್ಲಿರುವ ಡಯಾಲಿಸಿಸ್ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿದರು.

ಸೇವೆಗಳ ಗುಣಮಟ್ಟ, ಉಪಕರಣಗಳ ಕಾರ್ಯಕ್ಷಮತೆ ಮತ್ತು ರೋಗಿಗಳ ಸೌಕರ್ಯಗಳನ್ನು ವಿಶೇಷವಾಗಿ ಪರಿಶೀಲಿಸಿ ಅಲ್ಲಿನ ಸಿಬ್ಬಂದಿಗಳೊಂದಿಗೆ ಚರ್ಚಿಸಿ, ಅಗತ್ಯ ಸೂಚನೆಯನ್ನು ನೀಡಿದರು.

ನಾಗಪುರ, ಮಹಾಲಕ್ಷ್ಮಿಪುರ ವಿಭಾಗದಲ್ಲಿ, ಶಂಕರಮಠ ವೃತ್ತದಿಂದ ಗೆಳೆಯರ ಬಳಗದ ಕಡೆಗೆ ಸಾಗುವ ರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಪರಿಶೀಲಿಸಿದರು. ಹೇರೋಹಳ್ಳಿ ಉಪವಿಭಾಗದ ಕೆಂಗೇರಿ - ಮುದ್ದಿನಪಾಳ್ಯ ಮುಖ್ಯ ರಸ್ತೆ, ರಾಜಾಜಿನಗರ - ತಿಮ್ಮಯ್ಯ ರಸ್ತೆ, ಬಂಡೆಮಠ, ಕೆಂಗೇರಿ ಉಪನಗರದ ರಸ್ತೆ, ಜ್ಞಾನಭಾರತಿ, ರಾಜರಾಜೇಶ್ವರಿ ನಗರ ವ್ಯಾಪ್ತಿಯ ರಸ್ತೆಗಳು, ಹನುಮಂತನಗರದ 50 ಅಡಿ ರಸ್ತೆ, ವಿಜಯನಗರ ವಿಭಾಗದ ಸ್ಯಾಟಲೈಟ್ ಬಸ್ ನಿಲ್ದಾಣದ ಹತ್ತಿರದ ರಸ್ತೆಗಳನ್ನು ಪರಿಶೀಲಿಸಲಾಯಿತು.

ಸಾಮೂಹಿಕ ಸ್ವಚ್ಛತೆ: ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವು ಸ್ಥಳಗಳಲ್ಲಿ ಗುರುವಾರ ಸಾಮೂಹಿಕ ಸ್ವಚ್ಛತೆ ನಡೆಸಲಾಯಿತು.

ಶುಕ್ರವಾರ ಫೋನ್-ಇನ್ ಕಾರ್ಯಕ್ರಮ

ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಲು ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಸೆ. 26ರಿಂದ ಪ್ರತಿ ಶುಕ್ರವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಫೋನ್ ಇನ್ ಕಾರ್ಯಕ್ರಮ ನಡೆಸಲಿದ್ದಾರೆ. ಪ್ರತಿ ದೂರು ಸಹಾಯ 2.0 ಪೋರ್ಟಲ್‌ನಲ್ಲಿ ದಾಖಲಾದ ಬಳಿಕ ಸಂಬಂಧಿಸಿದ ಅಧಿಕಾರಿಯನ್ನು ನಿಯೋಜಿಸಲಾಗುವುದು. ನಾಗರಿಕರಿಗೆ ಎಸ್‌ಎಂಎಸ್ ಮೂಲಕ ದೂರು ಸ್ವೀಕೃತಿಯ ಮಾಹಿತಿ ಹಾಗೂ ಅಧಿಕಾರಿಯ ವಿವರ ಕಳುಹಿಸಲಾಗುತ್ತದೆ.

ನಿಯಂತ್ರಣ ಕೊಠಡಿ ಸಂಪರ್ಕ ಸಂಖ್ಯೆ: ಮೊಬೈಲ್, ವಾಟ್ಸ್‌ಆ್ಯಪ್ ಸಂಖ್ಯೆ: 9480685705, ಸ್ಥಿರ ದೂರವಾಣಿ: 080-22975936/23636671. ಕುಂದುಕೊರತೆಗಳನ್ನು ಸಹಾಯ ಆಪ್ ಮೂಲಕವೂ ನೊಂದಾಯಿಸಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೈಸೂರಿನಲ್ಲಿ ಭೈರಪ್ಪ ಸ್ಮಾರಕ ನಿರ್ಮಾಣ'

ಪಾರ್ಥಿವ ಶರೀರದ ದರ್ಶನ ಪಡೆದು, ಗೌರವ ಸಲ್ಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಎಸ್.ಎಲ್.ಭೈರಪ್ಪ ಅವರ ಸ್ಮಾರಕವನ್ನು ಮೈಸೂರಿನಲ್ಲಿಯೇ ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಗುರುವಾರ ಇರಿಸಲಾಗಿದ್ದ ಭೈರಪ್ಪನವರ ಪಾರ್ಥಿವ ಶರೀರದ ದರ್ಶನ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಬಿಜೆಪಿಯವರು ಹೇಳಿದಂತೆ ಭೈರಪ್ಪ ಅವರ ಸ್ಮಾರಕ ನಿರ್ಮಿಸುವುದಿಲ್ಲ, ಬದಲಿಗೆ ಅವರು ತಮ್ಮ ಜೀವಿತಾವಧಿಯ ಹೆಚ್ಚಿನ ಕಾಲವನ್ನು ಮೈಸೂರಿನಲ್ಲಿಯೇ ಕಳೆದಿದ್ದಾರೆ. ವಿದ್ಯಾಭ್ಯಾಸ, ಸಾಹಿತ್ಯ ಕೃಷಿ ನಡೆಸಿದ್ದಾರೆ. ಇದರಿಂದ ಮೈಸೂರಲ್ಲೇ ಸ್ಮಾರಕ ಮಾಡುತ್ತೇವೆ' ಎಂದರು.

'ಇದಕ್ಕೂ ಮೊದಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, 'ಭೈರಪ್ಪ ಅವರ ಹೆಸರನ್ನು ಚಿರಸ್ಥಾಯಿಯಾಗಿಸಲು ಸ್ಮಾರಕವನ್ನು ನಿರ್ಮಿಸಬೇಕು' ಎಂದು ಹೇಳಿದ್ದರು.

ಅಭಿಮಾನದ ನಮನ: ಗುರುವಾರ ಬೆಳಿಗ್ಗೆ 8.45ರ ಹೊತ್ತಿಗೆ ಭೈರಪ್ಪ ಅವರ ಪಾರ್ಥಿವ ಶರೀರದ ಮೇಲೆ ರಾಷ್ಟ್ರಧ್ವಜವನ್ನು ಹೊದಿಸಿ ಗೌರವ ಸಲ್ಲಿಸಲಾಯಿತು. ಭೈರಪ್ಪನವರ ಅಭಿಮಾನಿ ಓದುಗರು, ವಿವಿಧ ಕ್ಷೇತ್ರದ ಗಣ್ಯರು, ಸಿನಿಮಾ ಕಲಾವಿದರು, ರಾಜಕಾರಣಿಗಳು ಗೌರವ ನಮನ ಸಲ್ಲಿಸಿದರು. ಭೈರಪ್ಪ ಅವರ ಪತ್ನಿ ಸರಸ್ವತಿ, ಪುತ್ರರಾದ ಎಸ್.ಬಿ. ರವಿಶಂಕರ್, ಎಸ್.ಬಿ. ಉದಯಶಂಕರ್ ಹಾಗೂ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಭಾವುಕರಾದ ಕಂಬಾರ: ಭೈರಪ್ಪ ಅವರಿಗೆ ಗೌರವ ಸಲ್ಲಿಸಿದ ಸಾಹಿತಿ ಚಂದ್ರಶೇಖರ ಕಂಬಾರ, 'ನಾವಿಬ್ಬರೂ ಬಹಳ ವರ್ಷಗಳಿಂದ ಸ್ನೇಹಿತರು. ಅವರೊಂದಿಗೆ ಆತ್ಮೀಯತೆ ಇತ್ತು. ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಸ್ಥಾನ ಪಡೆದವರು ಅವರು' ಎಂದು ನೆನಪು ಮಾಡಿಕೊಂಡಾಗ ಕಣ್ಣಾಲಿಗಳು ತುಂಬಿಕೊಂಡವು.

ಸಾಹಿತಿಗಳಾದ ಹಂಪನಾ, ಬಿ.ಆರ್. ಲಕ್ಷ್ಮಣರಾವ್, ಮಲ್ಲಿಕಾ ಘಂಟಿ, ವಿಜಯಮ್ಮ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಬಂಜಾರ ಸಂಸ್ಕೃತಿ ಹಾಗೂ ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ನಲ್ಲೂರು ಪ್ರಸಾದ್, ನಟರಾದ ಶ್ರೀನಾಥ್, ಶ್ರೀಧರ್, ಬಿ.ಸಿ.ಪಾಟೀಲ್, ತಾರಾ ನಾಣಿ, ಡಿಂಗ್ರಿ ನಾಗರಾಜ್, ಉಮಾಶ್ರೀ, ಬಿ.ಜಯಶ್ರೀ, ಗಿರಿಜಾ ಲೋಕೇಶ್, ವಿದ್ಯಾಮೂರ್ತಿ, ಗಿರಿ ದ್ವಾರಕೀಶ್ ಸಹಿತ ಹಲವು ಕಲಾವಿದರು ಭೈರಪ್ಪ ಅವರ ಅಂತಿಮ ದರ್ಶನ ಪಡೆದರು.

ಗಣ್ಯರಿಂದ ಗೌರವ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ, ಮಧುಬಂಗಾರಪ್ಪ, ಶಿವರಾಜ ತಂಗಡಗಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ವೀರಪ್ಪ ಮೊಯಿಲಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಬೋಧಸ್ವರೂಪಾನಂದ ಮಹಾರಾಜ್ ಗೌರವ ಸಲ್ಲಿಸಿದ ಪ್ರಮುಖರು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಭೈರಪ್ಪ ಅವರ ಅಂತಿಮ ದರ್ಶನ ಪಡೆದ ಸಿದ್ದರಾಮಯ್ಯ –ಚಿತ್ರ: ರಂಜು ಪಿ

ಯಾವುದೇ ಪ್ರಶಸ್ತಿಗೂ ಹಂಬಲಿಸದ ಭೈರಪ್ಪನವರಿಗೆ ಅವರ ಸಾಹಿತ್ಯದ ಕೊಡುಗೆ ಪರಿಗಣಿಸಿ [illegible] ಪ್ರಶಸ್ತಿಯನ್ನು ನೀಡಲಾಗಿತ್ತು. ಅದಕ್ಕೆ ಅವರು ಅರ್ಹರಾಗಿದ್ದರು

ಸಿದ್ದರಾಮಯ್ಯ, ಮುಖ್ಯಮಂತ್ರಿ

ದಾಟು ಕಾದಂಬರಿ ನಮಗೆ ಪಠ್ಯವಾಗಿತ್ತು. ಅವರೊಂದಿಗೆ ತಾತ್ವಿಕ ಭಿನ್ನಾಭಿಪ್ರಾಯವಿದ್ದರೂ ನಮ್ಮ ಅಭಿಪ್ರಾಯ ಸ್ವೀಕರಿಸುತ್ತಿದ್ದರು. ಸಹಿಸಿಕೊಳ್ಳುವ ಔದಾರ್ಯತೆ ಇತ್ತು

ಮಲ್ಲಿಕಾ ಘಂಟಿ, ವಿಶ್ರಾಂತ ಕುಲಪತಿ

ಕುಟುಂಬದ ಜೊತೆ ಸೇರಿ ಅಂತ್ಯಕ್ರಿಯೆ

'ನನ್ನ ಅಂತ್ಯಕ್ರಿಯೆ ನೀನು ನಡೆಸಬೇಕು ಎಂದು ಭೈರಪ್ಪನವರು ಹಿಂದೆ ಹೇಳಿದ್ದರು. ಅದನ್ನು ಬರೆದಿಟ್ಟಿದ್ದಾರೆ ಎಂಬುದು ನನಗೆ ಗೊತ್ತಿರಲಿಲ್ಲ. ನಾನು ಇವತ್ತು ಸ್ವೀಡನ್‌ನಿಂದ ವಾಪಸ್ಸಾದೆ. ಭೈರಪ್ಪನವರ ಕುಟುಂಬದ ಮತ್ತು ನಾನು ಒಟ್ಟಿಗೆ ಸೇರಿ ಅಂತ್ಯಸಂಸ್ಕಾರ ನಡೆಸಲು ತೀರ್ಮಾನಿಸಿದ್ದೇವೆ' ಎಂದು ಕಾದಂಬರಿಕಾರ್ತಿ ಸಹನಾ ವಿಜಯಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಹರಾಜು ಶೀಘ್ರ'

ಬೆಂಗಳೂರು: 'ಅವಧಿ ಮುಗಿದಿರುವ ಮದ್ಯದಂಗಡಿಗಳನ್ನು ಹರಾಜು ಮೂಲಕ ಹಂಚಿಕೆ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಕರಡು ನಿಯಮ ಬಿಡುಗಡೆ ಮಾಡಲಾಗಿದ್ದು, ಶೀಘ್ರದಲ್ಲೇ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹರಾಜು ಪ್ರಕ್ರಿಯೆಯಲ್ಲಿ ಮೀಸಲಾತಿ ಕೊಡಬೇಕೆಂಬ ಚಿಂತನೆಯಿದೆ. ಕರಡು ನಿಯಮ ಈಗಾಗಲೇ ಸಿದ್ಧವಾಗಿದೆ' ಎಂದರು.

ಭಾವುಕರಾದ ಅಭಿಮಾನಿಗಳು

ಮೈಸೂರು: ಇಲ್ಲಿನ ಕಲಾಮಂದಿರದ ಕಿಂದರಿಜೋಗಿ ಆವರಣದಲ್ಲಿ ಗುರುವಾರ ಮಧ್ಯಾಹ್ನ ಕಾದಂಬರಿಕಾರ ಪ್ರೊ.ಎಸ್.ಎಲ್.ಭೈರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನವನ್ನು ನೂರಾರು ಮಂದಿ ಪಡೆದರು. ನೆಚ್ಚಿನ ಲೇಖಕರನ್ನು ನೋಡಿ ಭಾವುಕರಾದರು.

ಬೆಂಗಳೂರಿನಿಂದ ಮಧ್ಯಾಹ್ನ 3.40ಕ್ಕೆ ಪಾರ್ಥಿವ ಶರೀರ ತರಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ದರ್ಶನ ಪಡೆದು ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು. ಭೈರಪ್ಪ ಅವರ ಪುತ್ರರಾದ ಉದಯಶಂಕರ್ ಮತ್ತು ರವಿಶಂಕರ್ ಸೇರಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ವಿದ್ವಾಂಸ ಟಿ.ವಿ.ವೆಂಕಟಾಚಲ ಶಾಸ್ತ್ರಿ, ಇತಿಹಾಸ ತಜ್ಞ ಪ್ರೊ.ಪಿ.ವಿ. ನಂಜರಾಜ ಅರಸ್, ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ, ಸಂಸದ ಯದುವೀರ ಒಡೆಯರ್, ವಿಧಾನ ಪರಿಷತ್ ಸದಸ್ಯರಾದ ಅಡಗೂರು ಎಚ್. ವಿಶ್ವನಾಥ್, ಸಿ.ಎನ್.ಮಂಜೇಗೌಡ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಬಿಜೆಪಿ ಮುಖಂಡ ಪ್ರತಾಪಸಿಂಹ ಅಂತಿಮ ನಮನ ಸಲ್ಲಿಸಿದರು. ಸಂಜೆ 6ಕ್ಕೆ ಜೆಎಸ್‌ಎಸ್ ಆಸ್ಪತ್ರೆಯ ಶೈತ್ಯಾಗಾರಕ್ಕೆ ಪಾರ್ಥಿವ ಶರೀರವನ್ನು ಕೊಂಡೊಯ್ಯಲಾಯಿತು.

'ಶುಕ್ರವಾರ ಬೆಳಿಗ್ಗೆ 8ಕ್ಕೆ ಕುವೆಂಪುನಗರದ ಅವರ ನಿವಾಸದಲ್ಲಿ ಕುಟುಂಬದವರು ಧಾರ್ಮಿಕ ಕಾರ್ಯಗಳನ್ನು ನಡೆಸಲಿದ್ದು, ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಬೆಳಿಗ್ಗೆ 11ಕ್ಕೆ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ' ಎಂದು ಬಿಜೆಪಿ ಮುಖಂಡ ಪ್ರತಾಪ ಸಿಂಹ ತಿಳಿಸಿದರು.

ನದಿಗಿಳಿದು ಬೆಳೆಹಾನಿ ಪರಿಶೀಲಿಸಿದ ಶಾಸಕ ಸಲಗರ

ಹುಲಸೂರ ಪಟ್ಟಣದ ಹೊರವಲಯದ ಮಾಂಜ್ರಾ ನದಿಯ ಪ್ರವಾಹದಿಂದ ಜಲಾವೃತಗೊಂಡಿರುವ ತೊಗರಿ ಬೆಳೆ ಹಾನಿಯನ್ನು ಶಾಸಕ ಶರಣು ಸಲಗರ ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಹುಲಸೂರ(ಬೀದರ್ ಜಿಲ್ಲೆ): ಬಸವಕಲ್ಯಾಣ ಶಾಸಕ ಶರಣು ಸಲಗರ ಅವರು ಉಕ್ಕಿ ಹರಿಯುತ್ತಿರುವ ನದಿಯ ಪ್ರವಾಹದ ನೀರಿಗಿಳಿದು ಬೆಳೆಹಾನಿ ಪರಿಶೀಲಿಸಿದರು.

ಬೀದರ್ ಜಿಲ್ಲೆಯ ಮಾಂಜ್ರಾ ನದಿಯು ಉಕ್ಕಿ ಹರಿಯುತ್ತಿದ್ದು, ನದಿ ಪಾತ್ರದಲ್ಲಿ ರೈತರೊಬ್ಬರು ಬೆಳೆದ ತೊಗರಿ ಬೆಳೆಯ ಸಂಪೂರ್ಣ ಜಲಾವೃತಗೊಂಡಿತ್ತು. ರೈತರ ಜೊತೆಗೆ ಶಾಸಕರು ಪ್ರವಾಹದ ನೀರಿನಲ್ಲಿ ಇಳಿದು ಬೆಳೆಯನ್ನು ವೀಕ್ಷಿಸಿದರು.

'ಕೃಷಿ ಹಾಗೂ ಕಂದಾಯ ಸಚಿವರು ಬೆಂಗಳೂರು, ಮಂಡ್ಯ, ಬೆಳಗಾವಿ ಜಿಲ್ಲೆಗಳನ್ನು ಬಿಟ್ಟು, ಕಲ್ಯಾಣ ಕರ್ನಾಟಕ ಬೀದರ್ ಜಿಲ್ಲೆಯ ಹಾನಿಗೊಳಗಾದ ಪ್ರದೇಶಕ್ಕೆ ಭೇಟಿ ನೀಡಿ ರೈತರ ಗೋಳು ಕೇಳಬೇಕು. ಸರ್ಕಾರ ಪ್ರತಿ ಎಕರೆಗೆ ₹25 ಸಾವಿರ ಪರಿಹಾರ ನೀಡಬೇಕು' ಎಂದು ಶರಣು ಸಲಗರ ಅವರು ಸೊಂಟದವರೆಗಿನ ಮಟ್ಟದ್ದ ಪ್ರವಾಹದ ನೀರಲ್ಲಿಯೇ ನಿಂತು ಒತ್ತಾಯಿಸಿದರು.

ಆರ್‌ಸಿ ಬಿಸಿನೆಸ್ ಸಲ್ಯೂಷನ್ 2 ವರ್ಷ ಕಪ್ಪುಪಟ್ಟಿಗೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ಯಳಂದೂರು ವನ್ಯಜೀವಿ ಉಪವಿಭಾಗದ 122 ಗುತ್ತಿಗೆ ಸಿಬ್ಬಂದಿಗೆ ಸಕಾಲದಲ್ಲಿ ವೇತನ, ಭವಿಷ್ಯನಿಧಿ, ಇಎಸ್‌ಐ ಪಾವತಿಸದ ಆರೋಪದಲ್ಲಿ, ಮೈಸೂರಿನ ಆರ್.ಸಿ ಬಿಸಿನೆಸ್ ಸಲ್ಯೂಷನ್ ಕಂಪೆನಿಯನ್ನು ಎರಡು ವರ್ಷಗಳ ಅವಧಿಗೆ ಕಪ್ಪುಪಟ್ಟಿಗೆ ಸೇರಿಸಿ ಬಿಆರ್‌ಟಿ ಉಪ ಸಂರಕ್ಷಣಾಧಿಕಾರಿ ಶ್ರೀಪತಿ ಆದೇಶಿಸಿದ್ದಾರೆ.

ಸೆಪ್ಟೆಂಬರ್ 2024ರಿಂದ ಮಾರ್ಚ್ 2025ರವರೆಗೂ ಇಪಿಎಫ್, ಇಎಸ್‌ಐ ಪಾವತಿಸಿಲ್ಲವೆಂದು ಆರೋಪಿಸಿ ನೌಕರರು ಸಲ್ಲಿಸಿದ್ದ ದೂರನ್ನು ಪರಿಶೀಲಿಸಿದ ಅಧಿಕಾರಿಗಳು ಕಂಪನಿಗೆ ನೋಟಿಸ್ ಜಾರಿಗೊಳಿಸಿ, ಪಾವತಿ ರಶೀದಿ ಸಲ್ಲಿಸುವಂತೆ ಸೂಚಿಸಿದ್ದರು. ಕಂಪನಿಯು ದಾಖಲೆಗಳನ್ನು ಸಲ್ಲಿಸಿತ್ತು. ಬಳಿಕ ಆ ಬಗ್ಗೆ ದಾಖಲೆ ನೀಡುವಂತೆ ಅಧಿಕಾರಿಗಳು ಭವಿಷ್ಯನಿಧಿ ಕಚೇರಿಗೆ ಪತ್ರ ಬರೆದಿದ್ದರು. ಪರಿಶೀಲನೆ ವೇಳೆ, ಪಿಎಫ್ ಪಾವತಿಸಲು ಚಲನ್ ಮಾತ್ರ ತುಂಬಿದ್ದ ಕಂಪನಿಯು ಹಣ ಪಾವತಿಸದಿರುವುದು ಕಂಡುಬಂತು. ಯಳಂದೂರು ಎಸಿಎಫ್ ನೇತೃತ್ವದಲ್ಲಿ ಸಮಿತಿ ರಚಿಸಿ, ತನಿಖೆ ನಡೆಸಿದಾಗ ಲೋಪ ಖಚಿತಪಟ್ಟಿತ್ತು.

'ಟೆಂಡರ್ ಸಮಯದಲ್ಲಿ ಕಂಪನಿಯಿಂದ ಪಡೆದಿದ್ದ ಭದ್ರತಾ ಠೇವಣಿಯನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ' ಎಂದುಡಿಸಿಎಫ್ ಶ್ರೀಪತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸಿಬ್ಬಂದಿಗೆ ಇಪಿಎಫ್, ಇಎಸ್‌ಐ ವಂತಿಗೆ ಪಾವತಿಸದಿರುವುದು ದುರದೃಷ್ಟಕರ. ಸರ್ಕಾರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಒತ್ತಾಯಿಸಿದ್ದಾರೆ.

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು–01

ಹೆಚ್‌ಸಿಸಿ ಸಂ.36/2025 ದಿನಾಂಕ: 24.09.2025

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಉಚ್ಚ ನ್ಯಾಯಾಲಯ ಬೆಂಗಳೂರು, ಪೀಠಗಳಾದ ಧಾರವಾಡ, ಕಲಬುರಗಿ ನ್ಯಾಯಾಲಯಗಳಿಗೆ ಒಟ್ಟು 200 ಸಂಖ್ಯೆಗಳ "Mono Auto Duplex Laser Printers" ಖರೀದಿಸಿ ಅಳವಡಿಲು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರನ್ನು Karnataka Public Procurement Portal ನಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ನ್ನು **ದಿನಾಂಕ: 09.10.2025 ರ 4:00 P.M ಗಂಟೆಯೊಳಗೆ** ಆಸಕ್ತರು upload ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/searchTender/live ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/–
(ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/2978/ಎಂಎಎ/25–26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ದೂ: 0821–2443347, ಇ–ಮೇಲ್: eemidmysore@yahoo.co.in

ಸಂಖ್ಯೆ: 16/2025–26 ದಿನಾಂಕ: 23.09.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–2 ಮತ್ತು 3ರ ರೀತ್ಯ ಒಟ್ಟು 4 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ **ರೂ 40.30 ಲಕ್ಷಗಳು,** ಮತ್ತು ಗರಿಷ್ಟ ಮೊತ್ತ **ರೂ 80.67 ಲಕ್ಷಗಳು,** ಇ.ಎಂ.ಡಿ ಕನಿಷ್ಠ **ರೂ. 0.80 ಲಕ್ಷಗಳು** ಮತ್ತು ಗರಿಷ್ಟ **ರೂ 1.62** ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್ ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ: **04.10.2025, ಸಂಜೆ 5.30**ರೊಳಗೆ ಪಡೆಯ ಬಹುದಾಗಿರುತ್ತದೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ **ದಿನಾಂಕ: 06.10.2025 ಸಂಜೆ 5.30 ಗಂಟೆಗೆ.** ಬಿಡ್ ತೆರೆಯುವ **ದಿನಾಂಕ: 08.10.2025ರ ಬೆಳಿಗ್ಗೆ 11.00 ಗಂಟೆಯ ನಂತರ.** ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– **ಕಾರ್ಯಪಾಲಕ ಇಂಜಿನಿಯರ್**
ಸನೀ ಮತ್ತು ಅಂ.ಅ.ವಿಭಾಗ, ಮೈಸೂರು

DIPR/MYS/1022/SA/2025-26

ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ

ತಾ: ಜಿ: ಗದಗ

ಸಂ:ಪಪಂಮು/ತಾಂ.ವಿ./ಎಸ್.ಬಿ.ಎಂ/ಟೆಂಡರ/ವಹಿ–/2025–26 ದಿನಾಂಕ: 24–09–2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ಪದ್ಧತಿಯಲ್ಲಿ ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಇಂಡೆಂಟ್ ನಂಬರಗಳ ಸಂಖ್ಯೆಗಳು: DMA/2025-26/SE6130ನೇದ್ದರ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ.1/2/3 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಏಜೇನ್ಸಿ/ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ http://kppp.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವದು.

(1) ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 04–10–2025** ಸಂಜೆ: **16:00** ಗಂಟೆಗೆ (2) ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06–10–2025** ಸಂಜೆ: **16.00** ಗಂಟೆಗೆ (3) ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 08–10–2025** ಸಂಜೆ: **16:30** ಗಂಟೆಗೆ

ನಿಗಧಿ ಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಇ.ಎಂ.ಡಿ. ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೇ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯು ವೆಬ್‌ಸೈಟ್ http://www.mulagundatown.mrc.gov.in ಹಾಗೂ ಕಚೇರಿ ವೇಳೆಯಲ್ಲಿ ಸಂಭಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/– (ಶ್ರೀ. ಕೃಷ್ಣಾ ಎಮ್. ಹಾದಿಮನಿ)
ಮುಖ್ಯಾಧಿಕಾರಿ (ಪ್ರಭಾರ)
ಪಟ್ಟಣ ಪಂಚಾಯತ ಮುಳಗುಂದ

ಸಹಿ/– (ಶ್ರೀಮತಿ ಯಲ್ಲವ್ವ ಕೋಂ.ಬ ಕವಲೂರ)
ಅಧ್ಯಕ್ಷರು
ಪಟ್ಟಣ ಪಂಚಾಯತ ಮುಳಗುಂದ

ವಾ.ಸಾ.ಇ/ಗದಗ/304/ದೇಶಪಾಂಡೆಪಬ್ಲಿಸಿಟಿ/2025–26

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210

ಸಂ: ಕಾಅ/ಕವಿ.1/ಎಇ–1/ಎಇ–2/ಎಇ–3/ಎಇ–4/2025–26/40 ದಿನಾಂಕ: 25.09.2025

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ವಿವಿಧ ಸೂಚಿತ ಸ್ಥಳಗಳಲ್ಲಿ ಅಗ್ನಿಶಾಮಕ ಉಪಕರಣಗಳು, ಸ್ಮೋಕ್ ಡಿಟೆಕ್ಟರ್‌ಗಳ ವಾರ್ಷಿಕ ನಿರ್ವಹಣೆ, ಫೈರ್ ಎಕ್ಸ್‌ಟಿಂಗ್ವಿಷರ್‌ನ ರೀಫಿಲ್ಲಿಂಗ್, ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಯುಪಿಎಸ್, ಕಾರ್ಟೇಜ್‌ಗಳ ನಿರ್ವಹಣೆ ಮತ್ತು ಟೋನರ್‌ಗಳು, ಕಾಪಿಯರ್/ಸ್ಕ್ಯಾನರ್ ಮೆಷಿನ್‌ಗಳು, ಇಂಟರ್‌ನೆಟ್‌ಗಳ ಖರೀದಿ, ಕಚೇರಿಗಳ ನಿರ್ವಹಣೆ, ಕೀಬೋರ್ಡ್ ಟ್ರೇ ಒದಗಿಸುವುದು, 25ಎಲ್‌ಪಿಹೆಚ್ ಸಾಮರ್ಥ್ಯದ ಆರ್.ಓ ವಾಟರ್ ಪ್ಯೂರಿಫೈರ್ಸ್‌ನ ವಾರ್ಷಿಕ ನಿರ್ವಹಣೆ, ಉದ್ಯಾನವನಗಳ ವಾರ್ಷಿಕ ನಿರ್ವಹಣೆ, ಡೆಬ್ರೀಸ್, ವೇಸ್ಟೇಜ್‌ಗಳ ಕ್ಲೀನಿಂಗ್, 66ಕೆವಿ 1000ಚ.ಮಿ.ಮೀ. ಯುಜಿ ಕೇಬಲ್ ಅಳವಡಿಸುವುದು ನಂತರ ಕಾಲುದಾರಿ/ರಸ್ತೆದಾರಿಗಳನ್ನು ಒದಗಿಸುವುದು, ಹಾಳಾಗಿರುವ ನೀರು ಸರಬರಾಜು ಹಾಗೂ ಸ್ಯಾನಿಟರಿ ಸಿಸ್ಟಮ್‌ಗಳ ವಾರ್ಷಿಕ ನಿರ್ವಹಣೆ, ಸಂಪ್, ಓವರ್‌ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವುದು, ಪಂಪ್ ಆಪರೇಟರ್, ಪ್ಲಂಬರ್, ಕಾರ್ಪೆಂಟರ್‌ರನ್ನು ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 63 ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.1.89 ಲಕ್ಷಗಳು, ಗರಿಷ್ಠ ರೂ.169.40 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.4,800/-, ಗರಿಷ್ಠ ರೂ.2,54,107/-.** ಕಾಮಗಾರಿಯ ದಸ್ತಾವೇಜು ಬೆಲೆ: ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಪ್ರತೀ ಕಾಮಗಾರಿಯ ಕಾಲಾವಧಿ: **ತಲಾ 10 ತಿಂಗಳು.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **03.10.2025, ಸಂಜೆ 4.30 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಕಾಮಗಾರಿಗಿಟ್ಟ ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ–ಸಿ.ಪಿ/2986/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಟೆಂಡರ್ ಪ್ರಕಟಣೆ ಸಂ: ಕಾಇಂ:ಗ್ರಾಕುನೀ&ನೈವಿಉ:ಟೆಂಡರ್ ನಂ.05/2025–26/851
ದಿನಾಂಕ: 23.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಂದ "ಸ್ವಚ್ಛ್ ಭಾರತ್ ಮಿಷನ್" ಯೋಜನೆಯಡಿಯಲ್ಲಿ ಅನುಮೋದನೆಯಾದ ಕಾಮಗಾರಿ ಅಂದಾಜು ಮೊತ್ತ ರೂ. 97.61 ಲಕ್ಷದ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರನ್ನು (Standard Tender Documents for Procurment of Works) ನ ನಿಭಂದನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರುಗಳನ್ನು ಅಹ್ವಾನಿಸಲಾಗಿದ್ದು, ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka KPP portal WEB site https://www.kppp.karnataka.gov.in ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

(1) ಟೆಂಡರ್ ನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 23.09.2025 ರಿಂದ 03.10.2025 4.00 (PM) (2) ಟೆಕ್ನಿಕಲ್ ಬಿಡ್ಡನ್ನು ತೆರೆಯುವ ದಿನಾಂಕ: 04.10.2025 ರ 04.30 (PM) (3) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 05.10.2025 ರ 11.00 (AM)

ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ. **E-Proc helpdesk: 080-22371090/22373788 Hphelpdesk.blr@intarvo.com**

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ವಾಸಾಇ/ಸನಿಉ/ಕೆಎಸ್‌ಎಂಸಿಎ/415/25–26 ದಿ: 25.09.2025

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಉತ್ತರ ಕನ್ನಡ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಉತ್ತರ ಕನ್ನಡ–ಕಾರವಾರ

Email: dhoukannada@gmail.com Phone: 08382-226339. Fax: 08382-222452

ನಂ: ಅಭಿವೃದ್ಧಿ–1/99/2025–26 ದಿನಾಂಕ: 24/09/2025

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಿಗೆ 2025–26ನೇ ಸಾಲಿಗೆ ಅವಶ್ಯಕವಿರುವ ICU COT FULLY AUTOMATED ವೈದ್ಯಕೀಯ ಸಲಕರಣೆಗಳನ್ನು ಪೂರೈಸಲು ಈ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ವಿವರಗಳು: (1) ಇ.ಎಂ.ಡಿ ಮೊತ್ತ 2.5%: ರೂ. 45,000/– (2) ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ: 24–09–2025, ಬೆಳ್ಳಿಗ್ಗೆ 10.00 ಘಂಟೆಯಿಂದ (3) ಟೆಂಡರ್‌ನಲ್ಲಿ ಅಕ್ಷೇಪಣೆಗಳಿದ್ದಲ್ಲಿ ಅಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 03–10–2025 ಬೆಳ್ಳಿಗ್ಗೆ 10.00 ರಿಂದ ಸಾಯಂಕಾಲ 03–00 ಘಂಟೆಯವರೆಗೆ (4) ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 10–10–2025 ರ ಸಾಯಂಕಾಲ 5–30 ಘಂಟೆಯವರೆಗೆ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: 13–10–2025 ಬೆಳ್ಳಿಗ್ಗೆ 11–30 ಘಂಟೆ (6) ಟೆಂಡರ ಅಂದಾಜು ಮೊತ್ತ: ರೂ. 18,00,000/– ಮಾತ್ರ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ಉ.ಕ ಕಾರವಾರ.

DIPR/ADK/KSMCA/542/25-26 dt. 25.09.2025

ಕರ್ನಾಟಕ ಸರ್ಕಾರ ಆರೋಗ್ಯ ಇಲಾಖೆ
ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬಾದಾಮಿ

ತಾ:ಬಾದಾಮಿ E-mail :mochcbadami@gmail.com ಜಿಲ್ಲಾ:ಬಾಗಲಕೋಟ

ಸಂ.ತಾ.ಸಾ.ಆ.ಬಾ/ಕ್ಯಾಂಟಿನ್/102/2025–26 ದಿನಾಂಕ:24.09.2025

ಪತ್ರಿಕಾ ಪ್ರಕಟಣೆ

ಬಾದಾಮಿ ತಾಲೂಕಾ ಸಾರ್ವಜನಿಕ ಆಸ್ಪತ್ರೆಯ, ಆವರಣದಲ್ಲಿ ಸುಸಜ್ಜಿತವಾದ ಉಪಾಹಾರ ಗೃಹದ ಕಟ್ಟಡವನ್ನು ನಿರ್ಮಾಣ ಮಾಡಲಾಗಿದ್ದು ಸದರ ಉಪಹಾರ ಗೃಹದ ನಿರ್ವಹಣೆಗಾಗಿ (ರಿಯಾಯಿತಿ ದರದಲ್ಲಿ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ದ್ವಿಲಕೋಟೆ ಪದ್ಧತಿಯಲ್ಲಿ ದರಪಟ್ಟಿಯನ್ನು ಅಹ್ವಾನಿಸಲಾಗಿದೆ, ಆಸ್ಪತ್ರೆಯ ವತಿಯಿಂದ ಉಚಿತ ಸ್ಥಳವಕಾಶ ವಿದ್ಯುತ್ ಶಕ್ತಿ ಹಾಗೂ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಅರ್ಹ ಆಸಕ್ತಿಯುಳ್ಳವರು (ಸ್ವ–ಸಹಾಯ ಸಂಘ, ವಿಧವೆಯರು, ವಿಕಲಚೇತನರು & ಎನ್.ಜಿ.ಓ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಮೊದಲ ಆಧ್ಯತೆ ನೀಡಲಾಗುವುದು) ಭರ್ತಿ ಮಾಡಿದ ದರಪಟ್ಟಿಯನ್ನು ಮೊಹರ(ಬಂದ) ಮಾಡಿದ ಲಕೋಟೆಯಲ್ಲಿ ದಿನಾಂಕ : 08/10/2025 ರಂದು ಮಧ್ಯಾಹ್ನ 2:00 ಗಂಟೆಯ ಒಳಗಾಗಿ ಖುದ್ದಾಗಿ / ಪ್ರತಿನಿಧಿ ಮುಖಾಂತರ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ. ಖಾಲಿ ದರಪಟ್ಟಿ ಅರ್ಜಿಯನ್ನು ರೂ.100/– ಶುಲ್ಕ ನೀಡಿ ದಿನಾಂಕ: 29/09/2025 ರಿಂದ ದಿನಾಂಕ: 08/10/2025 ವರೆಗೆ ಕಚೇರಿ ಸಮಯದಲ್ಲಿ ಪಡೆಯಬಹುದಾಗಿದೆ. ದರಪಟ್ಟಿಯನ್ನು ದಿನಾಂಕ : 13/10/2025 ರಂದು ಮಧ್ಯಾಹ್ನ 3:00 ಗಂಟೆಗೆ ಹಾಜರಿದ್ದುದರಪಟ್ಟಿ ಸಲ್ಲಿಸಿದವರ ಸಮ್ಮುಖದಲ್ಲಿ ತಾಲೂಕಾ ಆರೋಗ್ಯಾಧಿಕಾರಿಗಳ ಸಭಾ ಭವನದಲ್ಲಿ ತೆರೆಯಲಾಗುವುದು ದರಪಟ್ಟಿಯನ್ನು ಅಂಗೀಕರಿಸುವ ತಿರಸ್ಕರಿಸುವ ವಿಷಯದಲ್ಲಿ ಆರೋಗ್ಯ ರಕ್ಷಾ ಸಮೀತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಡಳಿತ ವೈದ್ಯಾಧಿಕಾರಿಗಳು ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಾದಾಮಿ

DIPR/BGK/RO-NO-306/KSMCA/2025-26

ಆನೇಕಲ್ ಯೋಜನಾ ಪ್ರಾಧಿಕಾರ

'ಅಣ್ಣ' ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099
www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/39/2025–26 ದಿನಾಂಕ:24.09.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋ–ರಿರುವ ಭೂ ಉಪಯೋಗ
1.	ಶ್ರೀ ಜಿ.ಶುಭಕರ್ ಬಿನ್ ಎ. ಗುರುಮೂರ್ತಿರೆಡ್ಡಿ	ಆನೇಕಲ್	ಕಸಬಾ	ಆನೇಕಲ್ ಗ್ರಾಮಾಂತರ	572	02–01	ಕೃಷಿ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ. ಕಾನೂನುಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

DIPR/CP/VCPL/2989/2025-26

ಕರ್ನಾಟಕ ಕೈಗಾರಿಕಾ ಪ್ರದೇಶಗಳು ಅಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನಕೊಳ್ಳಪಟ್ಟಿದೆ)
#49, ಈಸ್ಟ್ ವಿಂಗ್, 4ನೇ & 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001
ಫೋನ್ ಸಂ: 080–22267905 । website : www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–17/0773/2025–26 ದಿನಾಂಕ: 25.09.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ, ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿಲಕೋಟೆ ಪದ್ಧತಿ ಅಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು: (1) ಧಾರವಾಡ ಜಿಲ್ಲೆ, ತಾರೀಹಾಳ ಕೈಗಾರಿಕೆ ಪ್ರದೇಶದಲ್ಲಿ ರಸ್ತೆ ಸಂಖ್ಯೆ 3, 6, 10, 11 ಮತ್ತು 15ರಡಿಯಲ್ಲಿ ಬರುವ ಚರಂಡಿಗಳನ್ನು ಸುಧಾರಣೆ ಮಾಡುವ ಕಾಮಗಾರಿ. (2) ಧಾರವಾಡ ಜಿಲ್ಲೆ, ತಾರೀಹಾಳ ಕೈಗಾರಿಕೆ ಪ್ರದೇಶದಲ್ಲಿ ರಸ್ತೆ ಸಂಖ್ಯೆ 1, 2, 3, 4, 5, 6, 7, 8, 9, 10, 11, 12, 13, 14, 15 ಮತ್ತು ಪ್ಲಾಟ್ ಸಂಖ್ಯೆ 85(ಪಿ) ಅನ್ನು ಸುಧಾರಣೆ ಮಾಡುವ ಕಾಮಗಾರಿ. (3) ಧಾರವಾಡ ಜಿಲ್ಲೆ, ರಾಯಪುರ ಕೈಗಾರಿಕೆ ಪ್ರದೇಶದಲ್ಲಿ ರಸ್ತೆ ಮತ್ತು ಚರಂಡಿಯನ್ನು ಸುಧಾರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.10.2025**ರ ಸಂಜೆ **4:00** ಗಂಟೆಯವರೆಗೆ.

ಸಹಿ/–
ಮುಖ್ಯ ಅಭಿಯಂತರರು–2,
ಕೆ.ಐ.ಎ.ಡಿ.ಬಿ, ಬೆಂಗಳೂರು

ಡಿಐಪಿಆರ್/ಸಿಪಿ/2987/ಸಿಸಿಎಲ್/2025–26

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಇ.ಮೇಲ್:eeetpgescom@gmail.com, ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ:–ಜೆಸ್ಕಾಂ/ಮು.ಅ.ವಿ(ಕಾ)/ಅ.ಅ.ವಿ(ತಾಂತ್ರಿಕ)/ಸ.ಕಾ.ನಿ.ಅ./ಸ.ಅ/ಎಸ್.ಐ/2025–26/47529–559 ದಿನಾಂಕ:25.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ)

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಜೆಸ್ಕಾಂ ವ್ಯಾಪ್ತಿಯಲ್ಲಿ ಬರುವ ಎಲ್ಲಾ 17 ಕಾರ್ಯ ಮತ್ತು ಪಾಲನೆ ವಿಭಾಗಗಳಲ್ಲಿ ವಿದ್ಯುತ್‌ಜಾಲ ವಿಸ್ತರಣೆ ಹಾಗೂ ವ್ಯವಸ್ಥೆ ಸುಧಾರಣೆ ಕಾಮಗಾರಿಗಳಾದ ಹಾಲಿ ಇರುವ ಹೆಚ್.ಟಿ ವಿದ್ಯುತ್ **ವಾಹಕಗಳನ್ನು, ಹೆಚ್.ಟಿಯು.ಜಿಕೇಬಲ್/ಹೆಚ್.ಟಿ.ಕವರ್ಡ್‌ವಾಹಕಗಳಿಂದ ಬದಲಿಸುವುದು ಹಾಗೂ ಎಲ್.ಟಿ ವಾಹಕವನ್ನು ಎಲ್.ಟಿ ಎ.ಬಿ ಕೇಬಲ್‌ನಿಂದ ಬದಲಿಸಿ** ಅಳವಡಿಸಲು ಬೇಕಾಗಿರುವ ಎಲ್ಲಾ ವಸ್ತುಗಳ ಪೂರೈಕೆ, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ ಸೇರಿದಂತೆ **ದರ ಒಪ್ಪಂದ** 02 ವರ್ಷಗಳ ಅವಧಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** (ವಿದ್ಯುತ್ ಕಂಬಗಳನ್ನುಜೆಸ್ಕಾಂ ವತಿಯಿಂದ ಒದಗಿಸಲಾಗುವುದು) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸ್ಪರ್ಧಾತ್ಮಕ ಬಿಡ್ಡಿಂಗ್ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್** ಮುಖಾಂತರ ಅರ್ಹ ಬಿಡ್‌ರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

ವಿಭಾಗವಾರು ಟೆಂಡರ್ ಸಂಖ್ಯೆ. 1) Bid No.GESCOM/CEE(O)/SEE(Tech)/SIW-01 in O&M Div. Kalaburagi City, 2) Bid No.GESCOM/CEE(O)/SEE(Tech)/SIW-02 in O&M Div-I Kalaburagi, 3) Bid No.GESCOM/CEE(O)/SEE(Tech)/SIW-03 in O&M Div-II Kalaburagi, 4) Bid No.GESCOM/CEE(O)/SEE(Tech)/SIW-04 in O&M Div. Sedam. 5) Bid No.GESCOM/CEE(O)/SEE(Tech)/SIW-05 in O&M Div. Yadgir, 6) Bid No.GESCOM/CEE(O)/SEE(Tech)/SIW-06 in O&M Div. Shorapur, 7) Bid No.GESCOM/CEE(O)/SEE(Tech)/SIW-07 in O&M Div. Bidar, 8) Bid No.GESCOM/CEE(O)/SEE(Tech)/SIW-08 in O&M Div. Humnabad, 9) Bid No.GESCOM/CEE(O)/SEE(Tech)/SIW-09 in O&M Div. Raichur Urban, 10) Bid No.GESCOM/CEE(O)/SEE(Tech)/SIW-10 in O&M Div. Raichur Rural, 11) Bid No.GESCOM/CEE(O)/SEE(Tech)/SIW-11 in O&M Div. Sindhanoor. 12) Bid No.GESCOM/CEE(O)/SEE(Tech)/SIW-12 in O&M Div. Gangavati. 13) Bid No.GESCOM/CEE(O)/SEE(Tech)/SIW-13 in O&M Div. Koppal. 14) Bid No.GESCOM/CEE(O)/SEE(Tech)/SIW-14 in O&M Div. Hospete Urban. 15) Bid No.GESCOM/CEE(O)/SEE(Tech)/SIW-15 in O&M Div. H.B. Halli. 16) Bid No.GESCOM/CEE(O)/SEE(Tech)/SIW-16 in O&M Div. Ballari Urban. 17) Bid No.GESCOM/CEE(O)/SEE(Tech)/SIW-17 in O&M Div. Ballari Rural.

ಸದರಿ ಕಾಮಗಾರಿಗಳಿಗೆ ವಿಭಾಗವಾರು ತಗಲುವ ಅಂದಾಜು ಟೆಂಡರ್ ಮೊತ್ತವು ರೂ.10.83 ಕೋಟಿಗಳ ಮೇಲ್ಪಟ್ಟು ರೂ.82.24 ಕೋಟಿಗಳವರೆಗೆ (ಜಿ.ಎಸ್.ಟಿ ಹೊರತುಪಡಿಸಿ) ಕಾರ್ಯ ಮತ್ತು ಪಾಲನೆ ವಿಭಾಗವಾರು ವಿಸ್ತರಿಸಿದ ಬಿಡ್ಡು ದಾಖಲೆಗಳು **ದಿನಾಂಕ:26.09.2025** ರಂದು ಅಥವಾ ನಂತರ **https://kppp.karnataka.gov.in**ನಲ್ಲಿ ಲಭ್ಯವಿರುತ್ತವೆ. ಬಿಡ್ಡದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ ನಿಗಮ ಕಛೇರಿ, ಯೋಜನೆಗಳ ಶಾಖೆ, ಜೆಸ್ಕಾಂ, ಕಲಬುರಗಿರವರಿಂದ ಪಡೆಯಬಹುದಾಗಿದೆ.

ಸಹಿ/–ಮುಖ್ಯ ಇಂಜನಿಯರ್ (ವಿ),
(ಕಾರ್ಯಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/554/ಕೆ.ಎಸ್.ಎಂ.ಸಿ.&ಎ/2025–26

ಒಬಿಸಿ ಪ್ರಮಾಣ ಪತ್ರ ನೀಡಲು ಆಗ್ರಹ

ಬೆಂಗಳೂರು: ‘ರೈಲ್ವೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ನೌಕರರ ಮಕ್ಕಳಿಗೆ ರಾಜ್ಯ ಸರ್ಕಾರ ಒಬಿಸಿ, ಒಬಿಸಿ–ಎನ್‌ಸಿಎಲ್ ಪ್ರಮಾಣ ಪತ್ರ ನೀಡುತ್ತಿಲ್ಲ. ಇದರಿಂದ ನಮ್ಮ ಮಕ್ಕಳು ಕೇಂದ್ರ ಸರ್ಕಾರದ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ’ ಎಂದು ಅಖಿಲ ಭಾರತ ಹಿಂದುಳಿದ ವರ್ಗಗಳ ರೈಲ್ವೆ ನೌಕರರ ಸಂಘ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಗೋವರ್ಧನ್ ವೈ., ‘ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಮಕ್ಕಳಿಗೆ ಒಬಿಸಿ ಮತ್ತು ಒಬಿಸಿ–ಎನ್‌ಸಿಎಲ್ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ನೀಡುವ ವೇಳೆ ಸಂಬಳ ಮತ್ತು ಕೃಷಿ ಆದಾಯ ಹೊರಗಿಡುವ ನಿಯಮ ಪಾಲಿಸುವಂತೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಬೇಕು. ಇದರಿಂದ ಕೇಂದ್ರ ಸರ್ಕಾರದ ಐಎಎಸ್, ಐಪಿಎಸ್, ಆರ್‌ಬಿಐ, ಐಆರ್‌ಎಸ್ ಸೇರಿ ಅನೇಕ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಸಹಾಯವಾಗುತ್ತದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಈ ಲೋಪ ಸರಿಪಡಿಸಬೇಕು’ ಎಂದರು.

ಮಕ್ಕಳ ವಿದ್ಯಾಭ್ಯಾಸಕ್ಕೆ ಹೆತ್ತವರ ವೇತನ ಮತ್ತು ಕೃಷಿಭೂಮಿಯಿಂದ ಬರುವ ಆದಾಯವನ್ನು ಪರಿಗಣಿಸಬಾರದು. ಇತರ ಆದಾಯಗಳನ್ನಷ್ಟೇ ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್ ಮತ್ತು ಭಾರತ ಸರ್ಕಾರ ಸ್ಪಷ್ಟಪಡಿಸಿದೆ. ಇದು ಇತರ ರಾಜ್ಯಗಳಲ್ಲಿ ಜಾರಿಯಲ್ಲಿದೆ. ಆದರೆ, ಕರ್ನಾಟಕದಲ್ಲಿ ಮಾತ್ರ ಜಾರಿಯಾಗದೇ ಹೆತ್ತವರಿಗೆ ₹ 8 ಲಕ್ಷಕ್ಕಿಂತ ಅಧಿಕ ಆದಾಯವಿದ್ದರೆ ಮಕ್ಕಳಿಗೆ ಸಮಸ್ಯೆಯಾಗುತ್ತಿದೆ ಎಂದರು. ಮಾಜಿ ಶಾಸಕ ನೆ.ಲ. ನರೇಂದ್ರಬಾಬು, ಸಂಘದ ಪದಾಧಿಕಾರಿಗಳಾದ ರೇವಪ್ಪ ಎಳಮೆಲಿ, ಕೆ. ಮುರುಗನ್, ಜಗದೀಶ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಹಳದಿ ಮಾರ್ಗ: ಅಕ್ಟೋಬರ್‌ಗೆ 5ನೇ ರೈಲು

ಆರ್.ವಿ. ರಸ್ತೆ–ಬೊಮ್ಮಸಂದ್ರ ನಡುವೆ ಸಂಚರಿಸಲಿದೆ 15 ನಿಮಿಷಕ್ಕೊಂದು ಮೆಟ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಐದನೇ ರೈಲು ಈ ತಿಂಗಳ ಅಂತ್ಯಕ್ಕೆ ತಲುಪಲಿದೆ. ಅಕ್ಟೋಬರ್ ಮೂರನೇ ವಾರದಲ್ಲಿ ಈ ರೈಲು ಸಂಚಾರ ಆರಂಭಿಸಲಿದ್ದು, ಪ್ರತಿ ಟ್ರಿಪ್‌ನ ಅಂತರವು 15 ನಿಮಿಷಕ್ಕೆ ಇಳಿಯಲಿದೆ.

ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಿಂದ ಐದನೇ ರೈಲು ಕೋಚ್‌ಗಳ ರವಾನೆಯಾಗಿದೆ. ಹೆಬ್ಬಗೋಡಿಯಲ್ಲಿರುವ ನಮ್ಮ ಮೆಟ್ರೊ ಡಿಪೊಗೆ ತಲುಪಿದ ಬಳಿಕ ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ ಆರಂಭಿಕ ಸ್ಥಿರ ಪರೀಕ್ಷೆಗಳು ನಡೆಯಲಿವೆ. ಬಳಿಕ ಎರಡು ವಾರ ವಾಣಿಜ್ಯ ಮಾರ್ಗದಲ್ಲಿ ರಾತ್ರಿ ವೇಳೆ ಪರೀಕ್ಷೆಗಳು ನಡೆಯಲಿವೆ. ಆ ನಂತರ ಸಂಚಾರಕ್ಕೆ ಲಭ್ಯವಾಗಲಿದೆ.

ಮುಖ್ಯಾಂಶಗಳು

- ಹಳದಿ ಮಾರ್ಗಕ್ಕೆ ಬೇಕು ಒಟ್ಟು 14 ರೈಲು
- ವಾಹನ ದಟ್ಟಣೆ ಕಡಿಮೆ ಮಾಡಿದ ಮೆಟ್ರೊ
- ಐಟಿ ಉದ್ಯೋಗಿಗಳಿಗೆ ನಮ್ಮ ಮೆಟ್ರೊ ಅನುಕೂಲಕರ

ಟಿಆರ್‌ಎಸ್‌ಎಲ್ 36 ರೈಲುಗಳನ್ನು ತಯಾರಿಸಲಾಗುತ್ತಿದೆ. ಅದರಲ್ಲಿ 34 ರೈಲುಗಳು ಬಿಎಂಆರ್‌ಸಿಎಲ್‌ಗೆ ಬರಲಿವೆ. 14 ರೈಲುಗಳು ಹಳದಿ ಮಾರ್ಗಕ್ಕೆ ಬಳಕೆಯಾಗಲಿವೆ. ಹಸಿರು ಮತ್ತು ನೇರಳೆ ಮಾರ್ಗದಲ್ಲಿರುವ ರೈಲುಗಳ ಕೊರತೆಯನ್ನು ಉಳಿದವುಗಳು ನೀಗಿಸಲಿವೆ. ಈಗಾಗಲೇ ನೇರಳೆ ಮಾರ್ಗಕ್ಕೆ ಒಂದು ಮತ್ತು ಹಳದಿ ಮಾರ್ಗಕ್ಕೆ ನಾಲ್ಕು ರೈಲು ಕೋಚ್‌ಗಳು ಪೂರೈಕೆಯಾಗಿವೆ.

ಆರ್.ವಿ. ರಸ್ತೆ–ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವಿನ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ವಾಣಿಜ್ಯ ಸಂಚಾರವನ್ನು ಕೇವಲ ಮೂರು ಕೋಚ್‌ಗಳೊಂದಿಗೆ (ಆರು ಬೋಗಿಗಳ ಒಂದು ಸೆಟ್ ಒಂದು ಕೋಚ್) ಆ.11ಕ್ಕೆ ಆರಂಭಿಸಲಾಗಿತ್ತು. ಆಗ 25 ನಿಮಿಷಕ್ಕೊಂದರಂತೆ ಟ್ರಿಪ್‌ಗಳಿದ್ದವು. ಒಂದು ತಿಂಗಳ ಬಳಿಕ ನಾಲ್ಕನೇ ರೈಲು ಓಡಾಟ ಆರಂಭವಾದ ಮೇಲೆ ಟ್ರಿಪ್‌ಗಳ ನಡುವಿನ ಅಂತರ 19 ನಿಮಿಷಕ್ಕೆ ಇಳಿದಿತ್ತು. ಐದನೇ ರೈಲು ಬಂದಾಗ ಇನ್ನೂ ನಾಲ್ಕು ನಿಮಿಷ ಕಡಿಮೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚಿದ ಜನಸಂಚಾರ: ಹಳದಿ ಮಾರ್ಗದಲ್ಲಿ ಟ್ರಿಪ್‌ಗಳ ನಡುವಿನ ಅಂತರ ಹೆಚ್ಚಿರುವುದರಿಂದ ಪ್ರಯಾಣಿಕರ ಸಂಖ್ಯೆ ಕಡಿಮೆ ಇರಬಹುದು. ಆರಂಭದಲ್ಲಿ 25 ಸಾವಿರ ಜನರು ಪ್ರಯಾಣಿಸಬಹುದು. ವಿಶೇಷ ದಿನಗಳಲ್ಲಿ ಗರಿಷ್ಠ 50 ಸಾವಿರವರೆಗೆ ತಲುಪಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಅಂದಾಜಿಸಿದ್ದರು. ಆದರೆ, ನಿರೀಕ್ಷೆ ಮೀರಿ ಪ್ರಯಾಣಿಕರಿಂದ ಸ್ಪಂದನೆ ದೊರೆತಿದೆ. ಮೊದಲು ಸರಾಸರಿ 8.30 ಲಕ್ಷ ಪ್ರಯಾಣಿಕರು ಮೆಟ್ರೊದಲ್ಲಿ ಸಂಚರಿಸುತ್ತಿದ್ದರೆ ಹಳದಿ ಮಾರ್ಗ ಆರಂಭವಾದ ಮೇಲೆ ಪ್ರಯಾಣಿಕರ ಪ್ರಮಾಣ ಸರಾಸರಿ 9.50 ಲಕ್ಷಕ್ಕೆ ತಲುಪಿದೆ. ಪ್ರತಿ ವಾರದಲ್ಲಿ 2–3 ದಿನ ಹತ್ತು ಲಕ್ಷದ ಗಡಿ ದಾಟುತ್ತಿದೆ.

ಐಟಿ ಹಬ್ ಆಗಿರುವ ಎಲೆಕ್ಟ್ರಾನಿಕ್ ಸಿಟಿಗೆ ವಿಪರೀತ ವಾಹನದಟ್ಟನೆಯಿಂದಾಗಿ ರಸ್ತೆ ಮೂಲಕ ಸಾಗುವುದೇ ಹರಸಾಹಸ ಆಗಿರುವುದರಿಂದ ಜನರು ಮೆಟ್ರೊ ಮೂಲಕ ಸಂಚರಿಸಲು ಬಯಸುತ್ತಿದ್ದಾರೆ.

ರೈಲು ಕೋಚ್‌ಗಳ ಸಂಖ್ಯೆ ಹೆಚ್ಚಿದಂತೆ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಲಿದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ರಮಾನಂದ್ ಮಾಹಿತಿ ನೀಡಿದರು.

ನವೆಂಬರ್‌ನಲ್ಲಿ 6ನೇ ರೈಲು

ಅಕ್ಟೋಬರ್ ಕೊನೇ ವಾರದಲ್ಲಿ ಆರನೇ ರೈಲು ಕೋಚ್ ಟಿಆರ್‌ಎಸ್‌ಎಲ್‌ನಿಂದ ರವಾನೆಯಾಗಲಿದೆ. ನವೆಂಬರ್ ಮೊದಲ ವಾರದಲ್ಲಿ ಹೆಬ್ಬಗೋಡಿ ಡಿಪೊ ತಲುಪಲಿದೆ. ನವೆಂಬರ್ ಅಂತ್ಯದಲ್ಲಿ ಏಳು ಮತ್ತು ಎಂಟನೇ ರೈಲು ಕೋಚ್‌ಗಳು ರವಾನೆಯಾಗಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಯಶವಂತಪುರ – ಮಂಗಳೂರು ನಡುವೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಹಬ್ಬದ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಭಾಯಿಸಲು ನೈಋತ್ಯ ರೈಲ್ವೆಯು ಯಶವಂತಪುರ ಮತ್ತು ಮಂಗಳೂರು ಜಂಕ್ಷನ್ ನಡುವೆ ಒಂದು ಟ್ರಿಪ್‌ಗೆ ವಿಶೇಷ ಎಕ್ಸ್ ಪ್ರೆಸ್ ರೈಲನ್ನು ಓಡಿಸಲಿದೆ.

ಸೆ. 30 ರಂದು ರಾತ್ರಿ 11.55ಕ್ಕೆ ಯಶವಂತಪುರದಿಂದ ಹೊರಟು, ಮರುದಿನ ಬೆಳಿಗ್ಗೆ 11.15ಕ್ಕೆ ಮಂಗಳೂರು ಜಂಕ್ಷನ್ ತಲುಪಲಿದೆ. ಅ.1ರಂದು ಮಧ್ಯಾಹ್ನ 2.35ಕ್ಕೆ ಮಂಗಳೂರು ಜಂಕ್ಷನ್‌ನಿಂದ ಹೊರಡಲಿರುವ ರೈಲು, ಅದೇ ದಿನ ರಾತ್ರಿ 11.30ಕ್ಕೆ ಯಶವಂತಪುರ ತಲುಪಲಿದೆ.

ಈ ರೈಲು ಕುಣಿಗಲ್, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು ಮತ್ತು ಬಂಟ್ವಾಳ ನಿಲ್ದಾಣಗಳಲ್ಲಿ ನಿಲುಗಡೆ ಮಾಡಲಿದೆ.

ಹೊಸಪೇಟೆಗೆ ವಿಶೇಷ ರೈಲು: ಪ್ರಯಾಣಿಕರ ದಟ್ಟಣೆ ನಿಭಾಯಿಸಲು ಬೆಂಗಳೂರಿನ ಸರ್. ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಹೊಸಪೇಟೆ ನಡುವೆ ತಲಾ ಎರಡು ಟ್ರಿಪ್‌ಗಳಿಗೆ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿದೆ.

ಸೆ.26 ಮತ್ತು 28ರಂದು ರಾತ್ರಿ 7ಕ್ಕೆ ಎಸ್‌ಎಂವಿಟಿ ಬೆಂಗಳೂರಿನಿಂದ ರೈಲು ಹೊರಡಲಿದ್ದು, ಮರುದಿನ ಬೆಳಿಗ್ಗೆ 4.15ಕ್ಕೆ ಹೊಸಪೇಟೆ ತಲುಪಲಿದೆ. ಸೆ.27, 29ರಂದು ರಾತ್ರಿ 8.45ಕ್ಕೆ ಹೊಸಪೇಟೆಯಿಂದ ಹೊರಟು ಮರುದಿನ ಬೆಳಿಗ್ಗೆ 8.10ಕ್ಕೆ ಎಸ್‌ಎಂವಿಟಿ ಬೆಂಗಳೂರು ತಲುಪಲಿದೆ. ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ, ಬೀರೂರು, ಚಿಕ್ಕಜಾಜೂರು, ಚಿತ್ರದುರ್ಗ, ರಾಯದುರ್ಗ, ಬಳ್ಳಾರಿ ಕಂಟೋನ್ಮೆಂಟ್ ಮತ್ತು ತೋರಣಗಲ್ಲು ನಿಲ್ದಾಣಗಳಲ್ಲಿ ಈ ರೈಲು ನಿಲುಗಡೆ ಹೊಂದಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

‘ಕೈ’ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವೀಧರ ಮತ್ತು ಶಿಕ್ಷಕರ ತಲಾ ಎರಡು ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ 2026ರ ನವೆಂಬರ್ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಪಕ್ಷದಿಂದ ಆಕಾಂಕ್ಷಿಯಾಗಲು ಬಯಸುವವರಿಂದ ಕಾಂಗ್ರೆಸ್ ಪಕ್ಷ ಅರ್ಜಿ ಆಹ್ವಾನಿಸಿದೆ.

ಪಶ್ಚಿಮ ಪದವೀಧರ–ಧಾರವಾಡ, ಹಾವೇರಿ, ಗದಗ, ಉತ್ತರ ಕನ್ನಡ ಜಿಲ್ಲೆ ವ್ಯಾಪ್ತಿ, ಆಗ್ನೇಯ ಪದವೀಧರ–ಚಿತ್ರದುರ್ಗ, ದಾವಣಗೆರೆ (ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ಹೊರತುಪಡಿಸಿ), ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆ, ಈಶಾನ್ಯ ಶಿಕ್ಷಕ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು) ಮತ್ತು ಬೆಂಗಳೂರು ಶಿಕ್ಷಕ–ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಈ ನಾಲ್ಕು ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರ ಅವಧಿ 2026ರ ನ. 11ರಂದು ಅಂತ್ಯವಾಗಲಿದೆ.

ಈ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಬಯಸುವವರು ಕೆಪಿಸಿಸಿ ಅಧ್ಯಕ್ಷರ ಹೆಸರಿನಲ್ಲಿ ₹ 1 ಲಕ್ಷದ ಡಿಡಿ ಸಹಿತ ನ. 1ರ ಒಳಗಾಗಿ ಅರ್ಜಿ ಸಲ್ಲಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

‘ಈ ನಾಲ್ಕು ಕ್ಷೇತ್ರಗಳಲ್ಲಿಯೂ ವಿರೋಧ ಪಕ್ಷದ ಸದಸ್ಯರು ಆಯ್ಕೆಯಾಗಿದ್ದಾರೆ. ನಾನಾ ಕಾರಣಗಳಿಂದ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಲ್ಲಿ ವಿರೋಧ ಪಕ್ಷಗಳ ಅಭ್ಯರ್ಥಿಗಳು ಜಯಶಾಲಿ ಆಗುತ್ತಿದ್ದಾರೆ. ಮುಂಬರುವ ಚುನಾವಣೆ ಗಮನದಲ್ಲಿಟ್ಟು ಪ್ರತಿ ಜಿಲ್ಲೆಯಲ್ಲಿಯೂ ಕಾಂಗ್ರೆಸ್ ಪಕ್ಷದ ಬಗ್ಗೆ ಒಲವು ಇರುವ ಪದವೀಧರರು ಮತ್ತು ಶಿಕ್ಷಕರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರಾಗಿ ನೋಂದಾಯಿಸುವ ಕೆಲಸವನ್ನು ಜಿಲ್ಲಾ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿಗಳು ಮಾಡಬೇಕು. ಈ ಬಗ್ಗೆ ವರದಿ ಕಳುಹಿಸಿಕೊಡಬೇಕು’ ಎಂದು ಈ ಕ್ಷೇತ್ರಗಳ ಪಕ್ಷದ ಮುಖಂಡರಿಗೆ ಶಿವಕುಮಾರ್ ಸೂಚನೆ ನೀಡಿದ್ದಾರೆ.

ಘಟಿಕೋತ್ಸವ: 1062 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಪ್ರಸಕ್ತ ಶೈಕ್ಷಣಿಕ ವ್ಯವಸ್ಥೆಯಡಿ ವೃತ್ತಿಪರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆಯುತ್ತಿರುವುದು ಅಭಿವೃದ್ಧಿ ಪರ ಬೆಳವಣಿಗೆಯಾಗಿದೆ ಎಂದು ಹ್ಯುಲೆಟ್ ಪ್ಯಾಕರ್ಡ್ ಎಂಟರ್ ಪ್ರೈಸಸ್‌ನ ಆರ್ ಆ್ಯಂಡ್ ಡಿ ನಿರ್ದೇಶಕ ಧರ್ಮೇಂದ್ರ ಅಭಿಪ್ರಾಯಪಟ್ಟರು.

ಮಲ್ಲತ್ತಹಳ್ಳಿಯ ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಮೊದಲನೇ ವರ್ಷದ ಬಿ.ಇ ತರಗತಿಗಳ ಉದ್ಘಾಟನಾ ಸಮಾರಂಭ ಹಾಗೂ 12ನೇ ವರ್ಷದ ಘಟಿಕೋತ್ಸವದಲ್ಲಿ ಮಾತನಾಡಿದರು.

ಮೊದಲ ಪ್ರಯತ್ನದಲ್ಲೇ ಫಲಿತಾಂಶ ಸಿಕ್ಕರೆ ಅನ್ವೇಷಣಾ ಸಾಮರ್ಥ್ಯ ಕುಂಠಿತಗೊಳ್ಳುವ ಅಪಾಯವಿದೆ. ತಪ್ಪುಗಳನ್ನು ಮಾಡುವುದರಿಂದಲೇ ಕಲಿಯಲು ಸಾಧ್ಯ. ಕುತೂಹಲ ಹೆಚ್ಚಿದ್ದಷ್ಟು ಮತ್ತಷ್ಟು ಕಲಿಕೆ ಸಾಧ್ಯವಾಗಲಿದೆ ಎಂದು ಹೇಳಿದರು.

ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಡಾ.ಎಂ. ಮಹದೇವ ಮಾತನಾಡಿ, ‘ಉನ್ನತ ಶಿಕ್ಷಣ ಸಂಸ್ಥೆಗಳು ಉದ್ಯಮಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಬೇಕಿದೆ. ಮಕ್ಕಳ ಭವಿಷ್ಯಕ್ಕೆ ಲಕ್ಷಾಂತರ ರೂಪಾಯಿ ವ್ಯಯಿಸುವ ಪೋಷಕರು, ಅವರ ನಿತ್ಯದ ಚಟುವಟಿಕೆಗಳ ಮೇಲೂ ನಿಗಾವಹಿಸಬೇಕು . ಮಕ್ಕಳು ಪೋಷಕರ ನಿರೀಕ್ಷೆಗಳನ್ನು ಪೂರೈಸಬೇಕು. ಅವರ ವೃದ್ಧಾಪ್ಯದಲ್ಲಿ ಆಸರೆಯಾಗಬೇಕು ಎಂದು ಕಿವಿ ಮಾತು ಹೇಳಿದರು.

ಐ ಬಿ ಎಂ ಸೇಲ್ಸ್ ಫೋರ್ಸ್ ಪ್ರಾಕ್ಟೀಸ್ ಲೀಡರ್ ಪಾಲುದಾರರಾದ ವಿಜಯಾ ರಾಮನ್ ಮಾತನಾಡಿ, ‘ ಕಲಿಕಾ ಪ್ರವೃತ್ತಿಯನ್ನು ಜೀವನ ಪರ್ಯಂತ ಕಾಪಿಟ್ಟುಕೊಳ್ಳಬೇಕು’ ಎಂದರು. ಇದೇ ವೇಳೆ ಎಂಜಿನಿಯರಿಂಗ್‌ನ ವಿವಿಧ ವಿಭಾಗದ ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳ ಒಟ್ಟು 1062 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್. ಮರಿಸ್ವಾಮಿ, ಟ್ರಸ್ಟಿ ಎಸ್.ಶಿವಮಲ್ಲು, ಡಾ.ಎಂ.ಎನ್.ತಿಪ್ಪೇಸ್ವಾಮಿ, ಡಾ.ಕೆ.ಎನ್. ಅನುರಾಧ ಉಪಸ್ಥಿತರಿದ್ದರು.

ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿಜಯಾ ರಾಮನ್, ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್.ಮರಿಸ್ವಾಮಿ, ಟ್ರಸ್ಟಿ ಎಸ್.ಶಿವಮಲ್ಲು, ಡಾ.ಎಂ.ಎನ್.ತಿಪ್ಪೇಸ್ವಾಮಿ, ಡಾ.ಕೆ.ಎನ್.ಅನುರಾಧ ಮತ್ತಿತರರು ಇದ್ದಾರೆ

ಫುಟ್‌ಬಾಲ್: ಭಾರತ್ ಬೆಂಗಳೂರು ತಂಡ ಗೆಲುವು

ಬೆಂಗಳೂರು: ಮೊಹಮ್ಮದ್ ಜಾವೇದ್ ಸಲ್ಮಾನಿ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವು ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಗುರುವಾರ 2–0 ಗೋಲುಗಳಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ 2–2ರಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಇನ್ನೊಂದು ಪಂದ್ಯದಲ್ಲಿ ಯುನೈಟೆಡ್ ಸ್ಟಾರ್ಸ್ ಎಫ್‌ಸಿ ತಂಡವು 2–2ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದೊಂದಿಗೆ ಡ್ರಾ ಮಾಡಿಕೊಂಡಿತು.

29ಕ್ಕೆ ಹೃದಯ ದಿನ: ತಥಾಗತ್ ಆಸ್ಪತ್ರೆಯಿಂದ ವಾಕಥಾನ್

ಬೆಂಗಳೂರು: ವಿಶ್ವ ಹೃದಯ ದಿನಾಚರಣೆ ಅಂಗವಾಗಿ ಸೇಂಟ್ ಥೆರೆಸಾ ತಥಾಗತ್ ಹಾರ್ಟ್ ಕೇರ್ ಸೆಂಟರ್ ಸೆ.29ರಂದು ನಗರದಲ್ಲಿ ‘ಹೃದಯದ ಆರೋಗ್ಯಕ್ಕಾಗಿ ನಾಲ್ಕು ಹೆಜ್ಜೆ’ ಎಂಬ ಧ್ಯೇಯದೊಂದಿಗೆ ವಾಕಥಾನ್ ಹಮ್ಮಿಕೊಂಡಿದೆ.

ರಾಜಾಜಿನಗರದ ಸೇಂಟ್ ಥೆರೆಸಾ ತಥಾಗತ್ ಹಾರ್ಟ್ ಕೇರ್ ಸೆಂಟರ್ ಆವರಣದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೋಮವಾರ ಬೆಳಗ್ಗೆ 8ಕ್ಕೆ ವಾಕಥಾನ್‌ಗೆ ಚಾಲನೆ ನೀಡುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉದ್ಘಾಟಿಸಲಿದ್ದಾರೆ. ಸಚಿವರೊಂದಿಗೆ ಶಾಸಕ ಗೋಪಾಲಯ್ಯ, ಜೆಸ್ಸಿ ಮರ್ಲಿನ್, ಡಾ.ಶ್ರೀಧರ್, ಯೋಗೇಶ್ ಪಚಿಶಿಯಾ,ಬಿ.ಜಿ. ಆವಟಿ, ಸವಿತಾಲಕ್ಷ್ಮಿ ಬೆಳಗಲಿ, ಎಂ.ಪಿ. ವೀಣಾ ಮಹಾಂತೇಶ್ ಅವರೂ ಹೆಜ್ಜೆ ಹಾಕಲಿದ್ದಾರೆ. ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ನಂತರ ಮರಳಿ ಸೇಂಟ್ ಥೆರೆಸಾ ಆಸ್ಪತ್ರೆಗೆ ತೆರಳಲಿದೆ.

ವಿವಿಧ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳು, ಸಂಘ, ಸಂಸ್ಥೆಯ ಪ್ರತಿನಿಧಿಗಳು, ತಥಾಗತ್ ಆಸ್ಪತ್ರೆಯ ಸಿಬ್ಬಂದಿ ವಾಕಥಾನ್‌ನಲ್ಲಿ ಭಾಗವಹಿಸಲಿದ್ದಾರೆ. ಸಾರ್ವಜನಿಕರು ಭಾಗವಹಿಸಬಹುದಾಗಿದೆ ಎಂದು ತಥಾಗತ್ ಹಾರ್ಟ್ ಕೇರ್ ಸೆಂಟರ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಮಹಾಂತೇಶ್ ಚರಂತಿಮಠ ಹಾಗೂ ನಿರ್ದೇಶಕ ಡಾ.ಶ್ರೀನಿವಾಸ್ ವೇಲು ತಿಳಿಸಿದ್ದಾರೆ.

‘ಕಾಂತಾರ ಮನಸಿಗೆ ಹತ್ತಿರದ ಸಿನಿಮಾ’

‘ಕಾಂತಾರ’ದ ಕನಕವತಿಯಾಗಿ ನಟಿ ರುಕ್ಮಿಣಿ ವಸಂತ್ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿನ ಪಾತ್ರ ಹಾಗೂ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.

ರುಕ್ಮಿಣಿ ವಸಂತ್

- **ಚಿತ್ರದಲ್ಲಿ ನಿಮ್ಮ ಪಾತ್ರ...**

‘ಕಾಂತಾರ–ಅಧ್ಯಾಯ 1’ ಮನಸಿಗೆ ತುಂಬ ಹತ್ತಿರವಾದ ಸಿನಿಮಾ. ಕನಕವತಿಯಾಗಿ ರಿಷಬ್ ಅವರ ರಾಣಿ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ಪಾತ್ರ ಕುರಿತು ಈಗಲೇ ಹೆಚ್ಚು ವಿವರ ನೀಡಲು ಸಾಧ್ಯವಿಲ್ಲ. ಇಂಥ ಸಿನಿಮಾದಲ್ಲಿ ನಟಿಸುತ್ತೇನೆ ಎಂಬ ಕಲ್ಪನೆಯೂ ಇರಲಿಲ್ಲ.

- **ಕಾಂತಾರಕ್ಕೆ ಆಯ್ಕೆಯಾದ ಕ್ಷಣ ಹೇಗಿತ್ತು?**

‘ಸಪ್ತಸಾಗರದಾಚೆ ಎಲ್ಲೋ’ ಚಿತ್ರ ನೋಡಿದ ರಿಷಬ್ ಅವರು ನನ್ನ ನಟನೆ ಮೆಚ್ಚಿಕೊಂಡರು. ಅದಾದ ಬಳಿಕ ‘ಕಾಂತಾರ’ದ ಪಯಣ ಪ್ರಾರಂಭವಾಯಿತು. ಇದರಲ್ಲಿ ಅವಕಾಶ ಸಿಕ್ಕಿದ್ದು ನನಗೆ ನಂಬಲು ಸಾಧ್ಯವಾಗದಂಥ ಕ್ಷಣ. ನನ್ನ ವೃತ್ತಿಯ ಪ್ರಾರಂಭದಲ್ಲಿಯೇ ಹೊಂಬಾಳೆ ಸಂಸ್ಥೆಯು ಎರಡು ಸಲ ಅವಕಾಶ ನೀಡಿದೆ. ನಿರ್ದೇಶಕರಾಗಿ ರಿಷಬ್ ಕೂಡ ಸಾಕಷ್ಟು ಪ್ರೋತ್ಸಾಹ ನೀಡಿದ್ದಾರೆ. ಗುಣಮಟ್ಟದ ವಿಚಾರದಲ್ಲಿ ಎಲ್ಲಿಯೂ ರಾಜಿಯಾಗಿಲ್ಲ. ಸಣ್ಣ ಸಣ್ಣ ವಿವರಗಳನ್ನು ಬಿಟ್ಟಿಲ್ಲ.

- **ವಿಭಿನ್ನ ಜಗತ್ತಿನಲ್ಲಿನ ಚಿತ್ರೀಕರಣ ಅನುಭವ ಹೇಗಿತ್ತು?**

ಕುಂದಾಪುರ ಬಳಿಯ ಕಾಡಿನಂಚಿನಲ್ಲಿ ಚಿತ್ರೀಕರಣ ನಡೆದಿದ್ದು. ಸರಿಯಾಗಿ ನೆಟ್‌ವರ್ಕ್ ಇರಲಿಲ್ಲ. ಸಾಕಷ್ಟು ಸವಾಲುಗಳಿತ್ತು. ರಿಷಬ್ ಸಣ್ಣ ವಿಚಾರಗಳಲ್ಲಿಯೂ ರಾಜಿಯಾಗುತ್ತಿರಲಿಲ್ಲ. ಆದರೆ ಇಡೀ ತಂಡ ಪ್ರೋತ್ಸಾಹ ನೀಡಿತು. ಹೀಗಾಗಿ ಚಿತ್ರೀಕರಣ ಆಯಾಸ ಅನ್ನಿಸಲಿಲ್ಲ. ಈ ಸಿನಿಮಾದೊಂದಿಗೆ ನಟಿಯಾಗಿ ಮಾತ್ರವಲ್ಲ, ಉತ್ತಮ ವ್ಯಕ್ತಿಯಾಗಿಯೂ ಬೆಳೆದಿದ್ದೇನೆ ಎಂದರೆ ತಪ್ಪಾಗಲಾರದು. ಅಷ್ಟು ಅವಿಸ್ಮರಣೀಯ ನೆನಪುಗಳನ್ನು ಈ ಚಿತ್ರ ನೀಡಿದೆ.

- **ನಿಮ್ಮ ನಟನೆಯ ನಂಟು ಶುರುವಾಗಿದ್ದು ಹೇಗೆ?**

ನಮ್ಮದು ಕಲಾವಿದರ ಕುಟುಂಬ. ಅಜ್ಜಿ, ಅಮ್ಮ ಭರತನಾಟ್ಯ ಕಲಾವಿದೆಯರು. ಹೀಗಾಗಿ ನನಗೂ ಬಾಲ್ಯದಿಂದಲೇ ಭರತನಾಟ್ಯದ ನಂಟು. ಬ್ಯಾಲೆ ಡಾನ್ಸರ್ ಆಗಿದ್ದೆ. ಶಾಲಾ ದಿನಗಳಲ್ಲಿ ರಂಗಭೂಮಿ ನಟನೆ ಪ್ರಾರಂಭಿಸಿದೆ. ಓದಿಗಿಂತ ನಟನೆಯಲ್ಲೇ ಆಸಕ್ತಿ, ಖುಷಿ ಹೆಚ್ಚಿತ್ತು. ಆದರೆ ಅಮ್ಮ ಪಿಯುಸಿ ಮುಗಿಯುವ ತನಕ ನಟನೆ ಬೇಡ ಎಂದಿದ್ದರು. ಪಿಯುಸಿ ಮುಗಿಸಿ ರಂಗ ತರಬೇತಿಗೆ ಲಂಡನ್‌ನ ‘ರಾಯಲ್ ಅಕಾಡೆಮಿ ಆಫ್ ಆರ್ಟ್ಸ್’ ಸೇರಿಕೊಂಡೆ. ನಟನೆಯಲ್ಲಿ ಪದವಿ ಮುಗಿಸಿ ಬೆಂಗಳೂರಿಗೆ ಮರಳಿದೆ.

- **ಈತನಕ ಸಿನಿಮಾ ಪಯಣ ಹೇಗಿತ್ತು?**

‘ಸಪ್ತ ಸಾಗರದಾಚೆ ಎಲ್ಲೋ’ ವೃತ್ತಿ ಬದುಕಿಗೆ ತಿರುವು ನೀಡಿದ ಸಿನಿಮಾ. ಚಿತ್ರದಲ್ಲಿನ ಪುಟ್ಟಿಯಾಗಿ ಸಾಕಷ್ಟು ಜನ ಗುರುತಿಸಿದರು. ಅದರಿಂದಲೇ ಒಂದಷ್ಟು ಉತ್ತಮ ಅವಕಾಶಗಳು ಲಭಿಸಿದವು. ಲಂಡನ್‌ನಿಂದ ಬಂದ ಬಳಿಕ ‘ಆಡಿಷನ್’ ನೀಡಲು ಆರಂಭಿಸಿದೆ. ‘ಬೀರ್‌ಬಲ್’ ಸಿನಿಮಾಕ್ಕೆ ಆಯ್ಕೆಯಾದೆ. 2019ರಲ್ಲಿ ಸಿನಿಮಾ ತೆರೆಗೆ ಬಂತು. ಅಷ್ಟು ಹೊತ್ತಿಗೆ ‘ಸಪ್ತ ಸಾಗರ’ ಆಡಿಷನ್ ಕರೆದಿದ್ದರು. ಅಲ್ಲಿಂದ ನಂತರದ್ದು ಒಂದು ರೀತಿ ಇತಿಹಾಸ. ಗಣೇಶ್ ಅವರ ಜೊತೆಗಿನ ‘ಬಾನ ದಾರಿಯಲ್ಲಿ’ ಸಿನಿಮಾದಲ್ಲಿ ಕಾಣಿಸಿಕೊಂಡೆ. ಶಿವರಾಜ್‌ಕುಮಾರ್ ಜೊತೆಗೆ ‘ಭೈರತಿ ರಣಗಲ್’ ಸಿನಿಮಾದಲ್ಲಿ ನಟಿಸಿದೆ. ವಿಜಯ್ ಸೇತುಪತಿ ಜೊತೆ ‘ಏಸ್’ ಚಿತ್ರದಲ್ಲಿ ಕಾಣಿಸಿಕೊಂಡೆ. ತೆಲುಗಿನಲ್ಲೊಂದು ಚಿತ್ರ ಮಾಡಿದೆ. ಶಿವಕಾರ್ತಿಕೇಯನ್ ಜತೆಗಿನ ‘ಮದರಾಸಿ’ ಚಿತ್ರ ಇತ್ತೀಚೆಗಷ್ಟೆ ತೆರೆ ಕಂಡಿದೆ.

- **‘ಕಾಂತಾರ’, ‘ಟಾಕ್ಸಿಕ್’ ಹೀಗೆ ದೊಡ್ಡ ಸಿನಿಮಾಗಳೇ ನಿಮ್ಮ ಬಳಿ ಇದೆಯಲ್ಲ?**

ನಟನೆಯಲ್ಲಿ ದೊಡ್ಡ, ಚಿಕ್ಕ ಸಿನಿಮಾಗಳೆಂದಿಲ್ಲ. ಎಲ್ಲವೂ ಸಿನಿಮಾಗಳೇ. ಪ್ರತಿ ಪಾತ್ರಕ್ಕೂ ಅದರದ್ದೇ ಆದ ಶ್ರಮವಿರುತ್ತದೆ. ಅವಕಾಶಗಳು ತಾನಾಗಿಯೇ ಬಂದಿರುವಂತದ್ದು. ಒಪ್ಪಿಕೊಂಡು ಮಾಡುತ್ತಿರುವೆ. ಪ್ರಾರಂಭದಲ್ಲಿಯೇ ಉತ್ತಮ ಸಿನಿಮಾಗಳು, ಒಳ್ಳೆ ತಂಡಗಳು ಸಿಗುತ್ತಿವೆ ಎಂಬ ಖುಷಿಯಿದೆ.

- **ನಿಮ್ಮ ಮುಂದಿನ ಸಿನಿಮಾಗಳು...**

‘ತೆಲುಗು ಸಿನಿಮಾವೊಂದರ ಚಿತ್ರೀಕರಣ ನಡೆಯುತ್ತಿದೆ. ಬೇರೆ ಒಂದೆರಡು ಕಥೆಗಳನ್ನು ಕೇಳಿರುವೆ. ❖

ದಸರಾಗಿಲ್ಲ ಸಿನಿಮಾಗಳ ಅಬ್ಬರ

ದಸರಾ, ದೀಪಾವಳಿ ಎಂದರೆ ಚಿತ್ರಮಂದಿರಗಳಲ್ಲಿ ಸಿನಿಮಾ ಸುಗ್ಗಿ ಸಾಮಾನ್ಯವಾಗಿತ್ತು. ಕನ್ನಡದ ಸ್ಟಾರ್ ನಟರ ಚಿತ್ರಗಳ ಜೊತೆಗೆ ಪರಭಾಷಾ ಸ್ಟಾರ್‌ಗಳ ಚಿತ್ರಗಳು ಕೂಡ ತೆರೆಯಲ್ಲಿ ಇರುತ್ತಿದ್ದವು. ಆದರೆ ‘ಕಾಂತಾರ ಅಧ್ಯಾಯ–1’ ಚಿತ್ರ ತೆರೆಗೆ ಬರುತ್ತಿರುವುದರಿಂದ ಈ ದಸರಾಗೆ ಯಾವುದೇ ನಿರೀಕ್ಷಿತ ಚಿತ್ರಗಳು ತೆರೆ ಕಾಣುತ್ತಿಲ್ಲ.



ಹಬ್ಬದ ಸಡಗರ, ಶಾಲೆಗಳಿಗೆ ರಜೆ ಎಂದರೆ ಸಿನಿಮಾ ಬಿಡುಗಡೆಗೆ ಸೂಕ್ತ ಸಮಯ ಎಂಬ ನಂಬಿಕೆ ಮೊದಲಿನಿಂದಲೂ ಇದೆ. ಸಂಕ್ರಾಂತಿ, ದಸರಾ, ದೀಪಾವಳಿ, ಕ್ರಿಸ್‌ಮಸ್‌ಗೆ ಸ್ಟಾರ್‌ಗಳ ಒಂದಷ್ಟು ನಿರೀಕ್ಷಿತ ಚಿತ್ರಗಳು ತೆರೆಗೆ ಬರುತ್ತಿದ್ದವು. ಆದರೆ ಈ ಸಲ ದಸರಾ, ದೀಪಾವಳಿಗೆ ಯಾವ ನಿರೀಕ್ಷಿತ ಚಿತ್ರಗಳು ತೆರೆ ಕಾಣುತ್ತಿಲ್ಲ. ಬಹುನಿರೀಕ್ಷಿತ ‘ಕಾಂತಾರ ಅಧ್ಯಾಯ–1’ ಚಿತ್ರ ಅ.2ರಂದು ತೆರೆಗೆ ಬರುತ್ತಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ. ಇದರಿಂದಾಗಿ ಸಣ್ಣ ಬಜೆಟ್‌ನ ಚಿತ್ರಗಳು ಕೂಡ ಬಿಡುಗಡೆಗೆ ಧೈರ್ಯ ತೋರುತ್ತಿಲ್ಲ.

ವರ್ಷದ ಪ್ರಾರಂಭದ ಮೂರು ತಿಂಗಳು ವಾರಕ್ಕೆ ಆರೆಂಟು ಸಿನಿಮಾಗಳು ತೆರೆಕಂಡವು. ಬಳಿಕ ಚಿತ್ರಗಳ ಬಿಡುಗಡೆ ಸಂಖ್ಯೆ ಗಣನೀಯವಾಗಿ ಇಳಿಯಿತು. ಜುಲೈನಲ್ಲಿ ತೆರೆಕಂಡ ‘ಸು ಫ್ರಂ ಸೋ’ ಚಿತ್ರರಂಗಕ್ಕೆ ಶಕ್ತಿ ತುಂಬಿತು. ಪರಿಣಾಮವಾಗಿ ಆಗಸ್ಟ್‌ನಿಂದ ಇಲ್ಲಿಯ ತನಕ ವಾರಕ್ಕೆ ಸರಾಸರಿ ಆರು ಸಿನಿಮಾಗಳು ತೆರೆ ಕಂಡಿವೆ. ‘ಕಾಂತಾರ’ ತಂಡ ಕೆಲ ತಿಂಗಳ ಹಿಂದೆಯೇ ಬಿಡುಗಡೆ ದಿನಾಂಕ ಘೋಷಿಸಿತ್ತು. ಹೀಗಾಗಿ ಈ ವಾರದಿಂದಲೇ ಚಿತ್ರಗಳ ಬಿಡುಗಡೆ ಸಂಖ್ಯೆ ಕಡಿಯೆಯಾಗಿದ್ದು, ದೀಪಾವಳಿವರೆಗೂ ಇದೇ ಸ್ಥಿತಿ ಇರಲಿದೆ ಎನ್ನುತ್ತಿದ್ದಾರೆ ಚಿತ್ರ ವಿತರಕರು.

ಮೋಹನ್ ಲಾಲ್ ನಟನೆಯ ತೆಲುಗು ಚಿತ್ರ ‘ವೃಷಭ’ ಅ.16ರಂದು ತೆರೆ ಕಾಣಲಿದೆ. ಪವನ್ ಕಲ್ಯಾಣ್ ಅವರ ‘ಒಜಿ’ ಈಗಾಗಲೇ ತೆರೆ ಕಂಡಿದೆ. ಇವೆರಡರ ಹೊರತಾಗಿ ತಮಿಳು, ತೆಲುಗು, ಮಲಯಾಳ ಭಾಷೆಗಳ ಸ್ಟಾರ್‌ಗಳ ಸಿನಿಮಾಗಳೂ ಕೂಡ ತೆರೆ ಕಾಣುತ್ತಿಲ್ಲ.

ಧ್ರುವ ಸರ್ಜಾ ನಟನೆಯ ‘ಕೆಡಿ’ ದಸರಾಗೆ ತೆರೆಗೆ ಬರಲಿದೆ ಎಂದು ಮೊದಲು ನಿರೀಕ್ಷಿಸಲಾಗಿತ್ತು. ಆದರೆ ಚಿತ್ರೀಕರಣವೇ ಪೂರ್ತಿಗೊಳ್ಳದ ಕಾರಣ ಚಿತ್ರ ಬಿಡುಗಡೆ ದಿನಾಂಕ ಕುರಿತು ಯಾವುದೇ ಸ್ಪಷ್ಟತೆ ಇಲ್ಲ.

ಮತ್ತೊಂದು ನಿರೀಕ್ಷಿತ ಚಿತ್ರ ದುನಿಯಾ ವಿಜಯ್ ನಟನೆಯ ‘ಲ್ಯಾಂಡ್‌ಲಾರ್ಡ್’. ದೀಪಾವಳಿಗೆ ಚಿತ್ರ ತೆರೆಗೆ ಬರಲಿದೆ ಎಂದು ತಂಡ ಈ ಹಿಂದೆ ಘೋಷಿಸಿತ್ತು. ‘ದೀಪಾವಳಿಗೆ ಚಿತ್ರ ಬಿಡುಗಡೆ ಕುರಿತು ಯಾವುದೇ ಸ್ಪಷ್ಟತೆ ಇಲ್ಲ. ಕಾಂತಾರದ ಅಬ್ಬರ ನೋಡಿಕೊಂಡು ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ತಂಡ ಆಲೋಚಿಸಿದೆ’ ಎನ್ನುತ್ತಿವೆ ಚಿತ್ರತಂಡದ ಮೂಲಗಳು.

‘ಅಕ್ಟೋಬರ್‌ನಲ್ಲಿ ತೆರೆಗೆ ಬರಲು ಆಲೋಚಿಸಿದ್ದ ಕೆಲ ಸಣ್ಣಪುಟ್ಟ ಸಿನಿಮಾಗಳು ಬಿಡುಗಡೆ ದಿನಾಂಕವನ್ನು ಮುಂದಕ್ಕೆ ಹಾಕಿಕೊಂಡಿವೆ. ಪ್ರಚಾರ ಕಾರ್ಯವನ್ನೂ ಸದ್ಯಕ್ಕೆ ಸ್ಥಗಿತಗೊಳಿಸಿವೆ. ಕಾಂತಾರ ಬಿಡುಗಡೆಯಾಗಿ ವಾರದ ಬಳಿಕ ಮತ್ತೆ ಚಟುವಟಿಕೆಗಳು ಪ್ರಾರಂಭವಾಗಲಿವೆ’ ಎನ್ನುತ್ತಿದ್ದಾರೆ ಚಿತ್ರ ಪ್ರಚಾರಕರ್ತ ಕನ್ನಡ ಪಿಚ್ಚರ್ಸ್ ಪ್ರವೀಣ್. ❖

ಮಲೆನಾಡಿನ ಮೋಡ ಮಳೆ ಮತ್ತು ಶೈಲ

ಮಲೆನಾಡಿನ ಮಳೆಗಾಲದ ಕಥಾಹಂದರವನ್ನು ಹೊಂದಿರುವ ‘ಮೋಡ, ಮಳೆ ಮತ್ತು ಶೈಲ’ ಬಿಡುಗಡೆಗೆ ಸಿದ್ಧವಾಗುತ್ತಿದೆ. ರಕ್ಷಿತ ತೀರ್ಥಹಳ್ಳಿ ನಿರ್ದೇಶನದ ಚಿತ್ರವಿದು. ಈ ಹಿಂದೆ ‘ತಿಮ್ಮನ ಮೊಟ್ಟೆಗಳು’ ಚಿತ್ರ ನಿರ್ದೇಶಿಸಿದ್ದ ರಕ್ಷಿತ್‌ಗೆ ನಾಲ್ಕನೆ ಚಿತ್ರವಿದು.

‘ಸದ್ಯ ನಮ್ಮ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿ ಪೋಸ್ಟ್ ಪ್ರೊಡಕ್ಷನ್ ಕೊನೆಯ ಹಂತದಲ್ಲಿದೆ. ಆದರ್ಶ ಅಯ್ಯಂಗಾರ್ ಅವರಿಗೆ ಕಥೆ ಹೇಳಿದಾಗ ಕಂಟೆಂಟ್ ಸ್ಟ್ರಾಂಗ್ ಆಗಿದೆ, ಚಿತ್ರ ಮಾಡೋಣ ಎಂದರು. ಈ ಚಿತ್ರವನ್ನು ಸಂಪೂರ್ಣ ಮಳೆಯಲ್ಲಿಯೇ ಸಿಂಕ್ ಸೌಂಡ್‌ನಲ್ಲಿ ಚಿತ್ರೀಕರಿಸಲಾಗಿದೆ. ಈ ಮೊದಲಿನ ಮೂರು ಚಿತ್ರಗಳನ್ನು ಭಿನ್ನ ವಿಷಯಗಳ ಮೇಲೆ ಮಾಡಿದ್ದೆ. ಈಗ ಶೈಲ ಕಥೆ ಹೇಳಲು ಹೊರಟಿದ್ದೇನೆ. ಕಲಾವಿದರು ಚೆನ್ನಾಗಿ ನಟಿಸಿದ್ದು, ಇದು ಕಲಾವಿದರ ಸಿನಿಮಾ ಎನ್ನಬಹುದು. ಡ್ರಾಮಾ ಥ್ರಿಲ್ಲರ್ ಜಾನರ್ ಸಿನಿಮಾ ಇದಾಗಿದೆ. ತೀರ್ಥಹಳ್ಳಿ, ಕುಂದಾಪುರ ಸುತ್ತಮುತ್ತ ಚಿತ್ರೀಕರಿಸಲಾಗಿದೆ. ನಾನು 2012-13ರ ಕಾಲಘಟ್ಟದಲ್ಲಿ ನೋಡಿದ ಹಾಗೂ ಕೇಳಿದ ಒಂದಿಷ್ಟು ಕಥೆ ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇನೆ’ ಎಂದರು ನಿರ್ದೇಶಕ.

ಶ್ರೀಕೃಷ್ಣ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಆದರ್ಶ್ ಅಯ್ಯಂಗಾರ್ ಬಂಡವಾಳ ಹೂಡಿದ್ದಾರೆ. ಇದೊಂದು ಮಹಿಳಾ ಪ್ರಧಾನ ಚಿತ್ರವಾಗಿದ್ದು, ಮುಖ್ಯ ಪಾತ್ರದಲ್ಲಿ ಅಕ್ಷತಾ ಪಾಂಡವಪುರ ನಟಿಸಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ಸಂಪತ್ ಮೈತ್ರೇಯ, ಉತ್ಪಲ್ ಗೌಡ, ರಘು ರಾಮನಕೊಪ್ಪ, ಬಲ ರಾಜವಾಡಿ, ಅಶ್ವಿನ್ ಹಾಸನ ಪ್ರಮುಖ ತಾರಾಬಳಗದಲ್ಲಿದ್ದಾರೆ.

‘ಇದರಲ್ಲಿ ನಿರ್ದೇಶಕರು ಮಲೆನಾಡಿನ ಒಂಟಿ ಹೆಣ್ಣಿನ ಕಥೆ ಹೇಳಹೊರಟಿದ್ದಾರೆ. ಮಳೆಯನ್ನು ಕೂಡ ಒಂದು ಪ್ರಮುಖ ಪಾತ್ರವಾಗಿ ತೋರಿಸಲಾಗಿದೆ. ನಾನು ಸಿನಿಮಾ ನೋಡಲು ಕಾತುರದಿಂದ ಕಾಯುತ್ತಿದ್ದೇನೆ’ ಎಂದರು ಅಕ್ಷತಾ. ❖

ಅಕ್ಷತಾ ಪಾಂಡವಪುರ, ರಕ್ಷಿತ್ ತೀರ್ಥಹಳ್ಳಿ

‘ಗಾರ್ಡನ್’ ಒಳಹೊಕ್ಕ ಮನೋಜ್

ನಟ ದರ್ಶನ್ ಅಕ್ಕನ ಮಗ ಮನೋಜ್ ನಟನೆಯ ‘ಗಾರ್ಡನ್’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಆರ್ಯ ಎಂ.ಮಹೇಶ್ ನಿರ್ದೇಶನದ ಚಿತ್ರ ಪೌರಕಾರ್ಮಿಕರ ಕುರಿತಾದ ಕಥೆಯನ್ನು ಹೊಂದಿದೆ. ಮಹೇಶ್ ಈ ಹಿಂದೆ ‘ಕೋಲಾರ’, ‘ಇಂಗ್ಲಿಷ್ ಮಂಜ’ ಚಿತ್ರಗಳನ್ನು ನಿರ್ದೇಶಿಸಿದ್ದರು.

‘ಪೌರಕಾರ್ಮಿಕರ ಬದುಕು–ಬವಣೆಗಳನ್ನು ಬಿಂಬಿಸುವ ಚಿತ್ರವಿದು. ಅವರು ಕಸದ ಯಾರ್ಡ್‌ಗೆ ‘ಗಾರ್ಡನ್’ ಎಂದು ಕರೆಯುತ್ತಾರೆ. ಅದನ್ನೇ ಶೀರ್ಷಿಕೆಯಾಗಿಸಿಕೊಂಡಿದ್ದೇವೆ. ಪೌರಕಾರ್ಮಿಕರ ನಾಯಕನಾಗಿ ನನ್ನ ಪಾತ್ರವಿರುತ್ತದೆ. ಇಂದು ಮಾಮೂಲಿ ಆ್ಯಕ್ಷನ್ ಸಿನಿಮಾ ಮಾಡಿದರೆ ನಾವು ಕೂಡ ನೂರರಲ್ಲಿ ಒಬ್ಬರಾಗುತ್ತೇವೆ. ಹೀಗಾಗಿ ನಾನು ಭಿನ್ನ ಕಥೆಗಳನ್ನೇ ಆಯ್ದುಕೊಳ್ಳುತ್ತೇನೆ’ ಎನ್ನುತ್ತಾರೆ ಮನೋಜ್.

ಮನೋಜ್

‘ಕಥೆ ಕೇಳಿದಾಗ ಆಫ್‌ಬೀಟ್ ಸಿನಿಮಾ ಎನ್ನಿಸಬಹುದು. ಆದರೆ ಗಟ್ಟಿಯಾದ ಕಥೆಯೊಂದಿಗೆ ಮನರಂಜನೀಯ ಅಂಶಗಳೂ ಇವೆ. ಕಥೆಯಲ್ಲಿ ಲವ್ ಟ್ರ್ಯಾಕ್ ಇದೆ. ನಾಲ್ಕು ಫೈಟ್‌ಗಳಿವೆ. ಒಟ್ಟಾರೆಯಾಗಿ ಕಮರ್ಷಿಯಲ್ ಸಿನಿಮಾ. ನಾಯಕಿ ಆಯ್ಕೆಯಾಗಿಲ್ಲ. ಈ ಚಿತ್ರದಲ್ಲಿನ ಕಲಾವಿದರ ಬಗ್ಗೆ ಶೀಘ್ರದಲ್ಲಿಯೇ ಮಾಹಿತಿ ನೀಡುತ್ತೇವೆ. ನನ್ನ ‘ಧರಣಿ’ ಸಿನಿಮಾದ ಒಂದು ಹಾಡಿನ ಚಿತ್ರೀಕರಣ ಬಾಕಿಯಿದೆ. ಅದು ಮುಗಿಯುತ್ತಿದ್ದಂತೆ ಈ ಸಿನಿಮಾದ ಚಿತ್ರೀಕರಣ ಪ್ರಾರಂಭವಾಗಲಿದೆ. ‘ಧರಣಿ’ ಶುರುವಾಗಿ ಎರಡು ವರ್ಷಗಳಾಯ್ತು. ಮುಂದಿನ ತಿಂಗಳುಗಳಲ್ಲಿ ಸಾಕಷ್ಟು ದೊಡ್ಡ ಸಿನಿಮಾಗಳು ಬಿಡುಗಡೆಯಾಗುತ್ತಿರುವುದರಿಂದ ‘ಧರಣಿ’ ಮುಂದಿನ ವರ್ಷದ ಪ್ರಾರಂಭದಲ್ಲಿ ತೆರೆಗೆ ಬರಲಿದೆ’ ಎಂದು ಅವರು ಮಾಹಿತಿ ನೀಡಿದರು.

ಚಿತ್ರಕ್ಕೆ ಮುನಿರಾಜು ಬಂಡವಾಳ ಹೂಡುತ್ತಿದ್ದಾರೆ. ಎ.ಎಂ.ನೀಲ್ ಸಂಗೀತ, ಮುಂಜಾನೆ ಮಂಜು ಗಿರಿ ಸಂಕಲನವಿದೆ. ಅಕ್ಟೋಬರ್ ಮೂರನೆ ವಾರದಿಂದ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ತಂಡ ಯೋಜನೆ ಹಾಕಿಕೊಂಡಿದೆ. ❖

ಮೇಘಶ್ರೀ

ಈ ವಾರ ಎರಡು ಸಿನಿಮಾಗಳು ತೆರೆಗೆ

ಮನಿಷಾ ಕಬ್ಬೂರ

ಕರಾಸ್ತ್ರ

ಯಾವುದೇ ರೀತಿ ಆಪತ್ತಿನ ಸಂದರ್ಭ ಎದುರಾದರೂ ಮಹಿಳೆಯರು ಹೇಗೆ ತಮ್ಮನ್ನು ತಾವು ಸ್ವಯಂರಕ್ಷಣೆ ಮಾಡಿಕೊಳ್ಳಬೇಕು ಎಂಬ ಸಂದೇಶ ಸಾರುವ ಚಿತ್ರವಿದು. ನಾರಾಯಣ ಪೂಜಾರ ನಿರ್ಮಿಸಿ, ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಹೆಣ್ಣುಮಕ್ಕಳಿಗೆ ಸ್ವರಕ್ಷಣೆ ಎಷ್ಟು ಮುಖ್ಯ ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ನನ್ನೂರು ಬ್ಯಾಡಗಿ. ಹೀಗಾಗಿ ಉತ್ತರ ಕರ್ನಾಟಕದ ಪ್ರತಿಭೆಗಳು ಈ ಚಿತ್ರದಲ್ಲಿದ್ದಾರೆ. ನಮ್ಮ ಚಿತ್ರದಲ್ಲಿ ಕರಾಟೆ ಒಂದು ಭಾಗ. ನಾಯಕಿಗೆ ಒಂದು ಸಮಸ್ಯೆ ಎದುರಾಗುತ್ತದೆ. ಆಕೆ ಅದನ್ನು ಹೇಗೆ ಬಗೆಹರಿಸುತ್ತಾಳೆ ಎಂಬುದೇ ಚಿತ್ರಕಥೆ’ ಎಂದಿದ್ದಾರೆ ನಿರ್ದೇಶಕ.

ಮನಿಷಾ ಕಬ್ಬೂರ ಚಿತ್ರದ ನಾಯಕಿ. ಚಿತ್ರದಲ್ಲಿ ಕಾರ್ತೀಕ್ ಪೂಜಾರ್, ಶ್ರೀನಿವಾಸ ಹುಲಕೋಟೆ, ಕ್ಷಿತಿ ವೀರಣ್ಣ, ವಿದ್ಯಾ ಬೆಳಗಾವಿ, ಸ್ಟೆಫಿ ಲೂಯಿಸ್ ಮುಂತಾದವರಿದ್ದಾರೆ. ಶಂಕರ ಸುಗ್ನಳ್ಳಿ, ಲಕ್ಷ್ಮಣ, ಮೈಲಾರಿ, ಗಗನ್ ಅವರ ಛಾಯಾಚಿತ್ರಗ್ರಹಣ, ಮಹಾರಾಜ್ ಸಂಗೀತ, ರಾಜ್ ಭಾಸ್ಕರ್ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ.

ಕುಂಟೆಬಿಲ್ಲೆ

ಗ್ರಾಮೀಣ ಸೊಗಡಿನ ಕಥಾಹಂದರ ಹೊಂದಿರುವ ಚಿತ್ರ. ಜಿ.ಬಿ.ಎಸ್. ಸಿದ್ದೇಗೌಡ ನಿರ್ದೇಶನವಿದೆ. ಯುವ ನಟ ಯದುಗೆ ಮೇಘಶ್ರೀ ಜೋಡಿಯಾಗಿದ್ದಾರೆ.

ಸುಚೇಂದ್ರ ಪ್ರಸಾದ್, ಭವಾನಿ ಪ್ರಕಾಶ್, ಸುಧಾ ಬೆಳವಾಡಿ, ಕಾವ್ಯ ಮೊದಲಾದವರು ಚಿತ್ರದಲ್ಲಿದ್ದಾರೆ. ‘ನಾವೆಲ್ಲ ಚಿಕ್ಕ ವಯಸ್ಸಿನಲ್ಲಿ ಆಡುತ್ತಿದ್ದ ಆಟ ‘ಕುಂಟೆಬಿಲ್ಲೆ’. ಅದೇ ಶೀರ್ಷಿಕೆ ಇಟ್ಟುಕೊಂಡು ಪ್ರೀತಿ, ನೋವು, ಕಾಮ ಎಲ್ಲವನ್ನೂ ಕಟ್ಟಿಕೊಡುವ ಹಳ್ಳಿಯ ಸೊಗಡಿನ ಕಥೆ ಮಾಡಿದ್ದೇವೆ. ಲವ್, ಸಸ್ಪೆನ್ಸ್ ಅಂಶಗಳಿರುವ ಚಿತ್ರ. ನಮ್ಮ ಕೈಯಾರೆ ನಾವೇ ನಮ್ಮ ಪ್ರೀತಿಯನ್ನು ಹೇಗೆ ಹಾಳು ಮಾಡಿಕೊಳ್ಳುತ್ತೇವೆ ಎಂಬುದರ ಸುತ್ತ ಕಥೆ ಸಾಗುತ್ತದೆ’ ಎಂದಿದ್ದಾರೆ ನಿರ್ದೇಶಕ.

ಕುಮಾರ್ ಗೌಡ ಬಂಡವಾಳ ಹೂಡಿದ್ದಾರೆ. ಹರಿಕಾವ್ಯ ಸಂಗೀತ, ಮುಂಜಾನೆ ಮಂಜು ಛಾಯಾಚಿತ್ರಗ್ರಹಣವಿದೆ. ❖

ಪ್ರಜಾವಾಣಿ ನವವರ್ಣ

ಬಿಳಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಶುಕ್ರವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

ನಗರಸಭೆ ಸಿಬ್ಬಂದಿ, ಅರಸೀಕೆರೆ

ದಿವ್ಯಾ & ಗೆಳತಿಯರು, ಚಂದ್ರಾಲೇಔಟ್

ಇಂಧನ ಭವನ ತಂಡ, ಬೆಂಗಳೂರು

ಆರೋಗ್ಯ ಇಲಾಖೆ ಸಿಬ್ಬಂದಿ, ಬೆಂಗಳೂರು

ಮೀರಾ ಸುರೇಬಾನ್ & ಕುಟುಂಬ

ರೇಖಾ & ಮಕ್ಕಳು, ಬೆಂಗಳೂರು

ಶೋಭಾ & ಗೆಳತಿಯರು, ಹೊಸಕೋಟೆ

ಶ್ವೇತಾ & ಗೆಳತಿಯರು, ಬೆಂಗಳೂರು

ತರಿಸಾನ ದೇವಿ, ನಿಶಾ & ರಾಜಲಕ್ಷ್ಮಿ

ತೀಕ್ಷ್ಣ, ಹೊಸಕೋಟೆ

ಡಿಸಿಸಿ ಬ್ಯಾಂಕ್ ಸಿಬ್ಬಂದಿ, ಮಧುಗಿರಿ

ಪೂರ್ಣಿಮಾ & ಗೆಳತಿಯರು, ಕನಕಪುರ

ಅರ್ಚನಾ & ಗೆಳತಿಯರು, ಬೆಂಗಳೂರು

MCECHS ಲೇಔಟ್ ತಂಡ, ಬೆಂಗಳೂರು

ಡಿಜಿಪಿ ಪೂರ್ವ ಕಚೇರಿ ಸಿಬ್ಬಂದಿ, ಬೆಂಗಳೂರು

ಮಧು ಸಿಆರ್, ಬೆಂಗಳೂರು

ಆಚಾರ್ಯ ಪಾಲಿಟೆಕ್ನಿಕ್ ಸಿಬ್ಬಂದಿ, ಸೋಲದೇವನಹಳ್ಳಿ

ಲಲಿತಾ ಮಲ್ಲಪ್ಪ ಕುಂಚಶ್ರೀ ಮಹಿಳಾ ಬಳಗ, ತುಮಕೂರು

ಜಯಲಕ್ಷ್ಮಿ & ಗೆಳತಿಯರು, ಬೆಂಗಳೂರು

ವೀಣಾ & ಗೆಳತಿಯರು, ಬೆಂಗಳೂರು

ಬೋಸ್ಟನ್ ಇಂಟರ್‌ನ್ಯಾಶನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು

ರಜನಿ & ಗೆಳತಿಯರು, ಹೆಬ್ಬಾಳ

ಶಾಮಲಾ ಮತ್ತು ಫ್ರೆಂಡ್ಸ್, ಎಚ್‌ಎಸ್‌ಆರ್ ಲೇಔಟ್

ನಳಿನಾ ಮತ್ತು ತಂಡ, ಬೆಂಗಳೂರು

ಯೂನಿಯನ್ ಬ್ಯಾಂಕ್ ಸಿಬ್ಬಂದಿ, ಉತ್ತರಹಳ್ಳಿ

ಉಷಾ & ಗೆಳತಿಯರು, ನಾಗರಭಾವಿ

‘ಅತಿಥಿ’ಗಳ ನೇಮಕ ಮತ್ತಷ್ಟು ಕಗ್ಗಂಟು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು: ಯುಜಿಸಿ ‘ಅರ್ಹತೆ’ಯ ಕಾನೂನು ಹೋರಾಟ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಗದಿಪಡಿಸಿದ ‘ಅರ್ಹತೆ’ ಇರುವವರು, ಇಲ್ಲದವರ ನಡುವಿನ ಕಾನೂನು ಹೋರಾಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯನ್ನು ಮತ್ತಷ್ಟು ಕಗ್ಗಂಟಾಗಿಸಿದೆ.

ಯುಜಿಸಿ ಅರ್ಹತೆ ಪಡೆದ ಸ್ನಾತಕೋತ್ತರ ಪದವೀಧರರನ್ನೇ ಅತಿಥಿ ಉಪನ್ಯಾಸಕರ ನೇಮಕಾತಿಗೆ ಪರಿಗಣಿಸಬೇಕು ಎಂದು ಹೈಕೋರ್ಟ್‌ನ ದ್ವಿಸದಸ್ಯ ಪೀಠ ಮಧ್ಯಂತರ ಆದೇಶ ಹೊರಡಿಸಿತ್ತು. ಆನಂತರ, ಅರ್ಹತೆ ಪಡೆಯದ 5,000ಕ್ಕೂ ಹೆಚ್ಚು ಉಪನ್ಯಾಸಕರನ್ನು ಪ್ರಕ್ರಿಯೆ ಯಿಂದ ಕೈಬಿಡುವ ಇಕ್ಕಟ್ಟಿಗೆ ರಾಜ್ಯ ಸರ್ಕಾರ ಸಿಲುಕಿದೆ.

ಎರಡು ದಶಕಗಳಿಗೂ ಹೆಚ್ಚು ಅವಧಿಯಿಂದ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಅವರನ್ನು ಮಾನವೀಯತೆ ದೃಷ್ಟಿಯಿಂದ ಮುಂದುವರಿಸಲು ಅವಕಾಶ ನೀಡುವಂತೆ’ ಪುನರ್‌ಪರಿಶೀಲನಾ ಅರ್ಜಿ ಸಲ್ಲಿಸಿದ್ದು, ನೇಮಕಾತಿ ಪ್ರಕ್ರಿಯೆ ಮತ್ತೆ ಮುಂದೂಡಿದೆ. ಇದು ವಿದ್ಯಾರ್ಥಿಗಳ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್ ಕಲಿಕೆಗೂ ತೊಡಕಾಗಿದೆ.

ರಾಜ್ಯದ ಶೇ 50ಕ್ಕೂ ಹೆಚ್ಚು ಪ್ರಥಮ ದರ್ಜೆ ಕಾಲೇಜುಗಳು ಬೋಧನೆಗೆ ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ. ಎರಡು ದಶಕಗಳಿಗೂ ಹೆಚ್ಚು ಸಮಯದಿಂದ ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಲೇಜು ಶಿಕ್ಷಣ ಇಲಾಖೆ ಬಳಸಿಕೊಳ್ಳುತ್ತಾ ಬಂದಿದೆ. ನಿಯಮದಂತೆ, ಅವರನ್ನು ಶೈಕ್ಷಣಿಕ ವರ್ಷದ ಆರಂಭದಲ್ಲಿ ನೇಮಕ ಮಾಡಿಕೊಂಡು, ವರ್ಷದ ಅಂತ್ಯಕ್ಕೆ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತದೆ. 2024–25ನೇ ಸಾಲಿನಲ್ಲಿ ನೇಮಕವಾದ ಅತಿಥಿ ಉಪನ್ಯಾಸಕರನ್ನು ಇದೇ ಆಗಸ್ಟ್ 2ರಂದು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿತ್ತು. ಮತ್ತೆ ಆ.3 ಕ್ಕೆ ಮರು ನೇಮಕ ಮಾಡಿಕೊಳ್ಳಬೇಕಿತ್ತು. ಆದರೆ, ಅತಿಥಿ ಉಪನ್ಯಾಸಕರ ನಡುವಿನ ‘ಅರ್ಹತೆ’ ವಿಷಯದ ಕಾನೂನು ಹೋರಾಟದಿಂದ ನೇಮಕಾತಿ ವಿಳಂಬವಾಗಿದ್ದು, ಶೈಕ್ಷಣಿಕ ಚಟುವಟಿಕೆ ಮೇಲೆ ಪರಿಣಾಮ ಬೀರಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ತೇರ್ಗಡೆಯಾಗಿರಬೇಕು, ಪಿಎಚ್‌.ಡಿ ಪಡೆದಿರಬೇಕು ಎಂದು ಕೆಲ ವರ್ಷಗಳ ಹಿಂದೆಯೇ ಯುಜಿಸಿ ನಿಯಮ ರೂಪಿಸಿತ್ತು. ಪ್ರಥಮ ದರ್ಜೆ ಕಾಲೇಜುಗಳಲ್ಲೂ ಇಂತಹ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರನ್ನೇ ನೇಮಿಸಿಕೊಳ್ಳಲು ಸೂಚಿಸಿತ್ತು.

ಇದನ್ನು ಪ್ರಶ್ನಿಸಿ ಉಪನ್ಯಾಸಕರು ಹೈಕೋರ್ಟ್ ಮೊರೆ ಹೋಗಿದ್ದರು. ಕೋರ್ಟ್, ‘ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಯುಜಿಸಿ ಸೂಚಿಸಿರುವ ಅರ್ಹತೆಗಳನ್ನೇ ಅತಿಥಿ ಉಪನ್ಯಾಸಕರ ಆಯ್ಕೆಗೂ ಅನ್ವಯಿಸಬೇಕು’ ಎಂದು ತೀರ್ಪು ನೀಡಿತ್ತು. ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಉನ್ನತ ಶಿಕ್ಷಣ ಇಲಾಖೆ, ಯುಜಿಸಿ ನಿಗದಿ ಮಾಡಿರುವ ಅರ್ಹತೆ ಹೊಂದಿಲ್ಲದ ಅತಿಥಿ ಉಪನ್ಯಾಸಕರ ಸೇವೆಯನ್ನು 2024–25ನೇ ಸಾಲಿಗೆ ಮುಂದುವರಿಸಿತ್ತು. ಇದನ್ನು ಪ್ರಶ್ನಿಸಿ ಹೊಸದಾಗಿ ಯುಜಿಸಿ ಅರ್ಹತೆ ಪಡೆದಿದ್ದ ಕೆಲವರು ರಿಟ್ ಅರ್ಜಿ ಸಲ್ಲಿಸಿದ್ದರು.

> **ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ನೇಮಕ ವಿಚಾರ ಕಗ್ಗಂಟಾಗಿದ್ದು, ಕಾನೂನು ತಜ್ಞರ ಸಲಹೆ ಪಡೆದು ತ್ವರಿತ ನಿರ್ಧಾರ ತೆಗೆದುಕೊಳ್ಳಲಾಗುವುದು**
> **ಡಾ.ಎಂ.ಸಿ.ಸುಧಾಕರ್**
> ಉನ್ನತ ಶಿಕ್ಷಣ ಸಚಿವ

> **ಎರಡು ದಶಕದಿಂದ ಕಡಿಮೆ ಗೌರವಧನಕ್ಕೆ ದುಡಿಯುತ್ತಿರುವ ಅತಿಥಿ ಉಪನ್ಯಾಸಕರಿಗೆ ಯುಜಿಸಿ ನಿಯಮ ಪೂರ್ವಾನ್ವಯ ಮಾಡದೆ. ಅನುಭವ ಆಧಾರದ ಮೇಲೆ ಮುಂದುವರಿಸಬೇಕು**
> **ಎಚ್‌.ಸೋಮಶೇಖರ ಶಿಮೊಗ್ಗಿ** ಅಧ್ಯಕ್ಷ, ಅತಿಥಿ ಉಪನ್ಯಾಸಕರ ಸಮನ್ವಯ ಸಮಿತಿ

ಎಂ.ಫಿಲ್ ಪರಿಗಣಿಸಲು ಒತ್ತಾಯ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇದ್ದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ 2007–08ಲ್ಲಿ ಹೊರಡಿಸಿದ್ದ ನೇಮಕಾತಿ ಅಧಿಸೂಚನೆಯಲ್ಲಿ ಎಂ.ಫಿಲ್ ಆದವರಿಗೂ ಅವಕಾಶ ನೀಡಲಾಗಿತ್ತು. 2009ರ ಜುಲೈ 11ಕ್ಕೂ ಹಿಂದೆ ಎಂ.ಫಿಲ್ ವಿದ್ಯಾರ್ಹತೆ ಪಡೆದಿದ್ದ ಎಲ್ಲರನ್ನೂ ನೇಮಕಾತಿಗೆ ಪರಿಗಣಿಸಲಾಗಿತ್ತು. ಆಗ ಸಹಾಯಕ ಪ್ರಾಧ್ಯಾಪಕರಾಗಿ ನೇಮಕವಾದ ಹಲವರು ಈಗ ಪ್ರಾಧ್ಯಾಪಕರಾಗಿ ಬಡ್ತಿ ಪಡೆದಿದ್ದಾರೆ. ಹಾಗಾಗಿ, 2009ಕ್ಕೂ ಮೊದಲು ಪಡೆದಿದ್ದ ಎಂ.ಫಿಲ್ ಅರ್ಹತೆಯನ್ನು ಅತಿಥಿ ಉಪನ್ಯಾಸಕರ ನೇಮಕಕ್ಕೆ ಪರಿಗಣಿಸಲು ಒತ್ತಾಯಿಸುತ್ತಾರೆ ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಹನುಮಂತಗೌಡ ಕಲ್ಮನಿ.

ಅಂಕಿ ಅಂಶಗಳು

10,303
2024–25ನೇ ಸಾಲಿನಲ್ಲಿ ಕೆಲಸ ಮಾಡಿದ ಉಪನ್ಯಾಸಕರು

49,702
2025–26ನೇ ಸಾಲಿಗೆ ಅರ್ಜಿ ಸಲ್ಲಿಸಿದವರು

20,504
ಯುಜಿಸಿ ಅರ್ಹತೆ ಪಡೆದವರು

29,198
ಯುಜಿಸಿ ಅರ್ಹತೆ ಇಲ್ಲದವರು

ದಸರಾ ಬೊಂಬೆಗಳ ಚಿತ್ರ ಕಳುಹಿಸಿ

ದಸರಾ ಹಬ್ಬದ ಪ್ರಯುಕ್ತ ಮನೆಗಳಲ್ಲಿ ಬೊಂಬೆಗಳನ್ನು ಪ್ರದರ್ಶನಕ್ಕೆ ಇಟ್ಟದ್ದರೆ ಅವುಗಳ ಫೋಟೊ ಕಳುಹಿಸಿ. ಆಯ್ದ ಚಿತ್ರಗಳನ್ನು ಪ್ರಕಟಿಸಲಾಗುವುದು.
ವಾಟ್ಸ್‌ಆ್ಯಪ್ ನಂಬರ್
9606038256

ಕೇದಾರನಾಥ ಯಾತ್ರೆಯ ವಿಷಯಾಧಾರಿತ ದಸರಾ ಬೊಂಬೆಗಳು
ಚಿತ್ರ ಕಳುಹಿಸಿದವರು: ರಮ್ಯಾ ವಿನಯ್, ಕೆಂಚೇನಹಳ್ಳಿ, ಆರ್‌ಆರ್ ನಗರ

ಜಯನಗರದಲ್ಲಿ ಅಭಯ ಗಣಪತಿ ಸೇವಾ ಟ್ರಸ್ಟ್, ನಿಮಿಷಾಂಬ ದೇವಾಲಯದಲ್ಲಿ ಗೊಂಬೆಗಳನ್ನು ಜೋಡಿಸಿಡಲಾಗಿದೆ

ಲಲಿತಾ ಭವಾನಿ ಪ್ರಸಾದ್, ಪೂರ್ಣಪ್ರಜ್ಞ ಲೇಔಟ್, ಉತ್ತರಹಳ್ಳಿ

ದಿನಪತ್ರಿಕೆ ವಿತರಕರ ಸಂಘದ ಕಚೇರಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಚಳಿ, ಮಳೆ, ಬಿಸಿಲನ್ನು ಲೆಕ್ಕಿಸದೆ ಸಮಯಕ್ಕೆ ಸರಿಯಾಗಿ ದಿನಪತ್ರಿಕೆಗಳನ್ನು ಮನೆಮನೆಗೆ ತಲುಪಿಸುವುದು ಸುಲಭದ ಕಾರ್ಯವಲ್ಲ. ಇಂತಹ ಸವಾಲಿನ ಕಾರ್ಯವನ್ನು ಯಶಸ್ವಿಯಾಗಿ ನಿಭಾಯಿಸುವ ಪತ್ರಿಕಾ ವಿತರಕರ ಕಾರ್ಯ ಶ್ಲಾಘನೀಯ ಎಂದು ಶಾಸಕ ಎಸ್‌.ಆರ್‌.ವಿಶ್ವನಾಥ್ ಹೇಳಿದರು.

ಮಿನಿ ವಿಧಾನಸೌಧದ ಸಮೀಪದಲ್ಲಿ ನೂತನವಾಗಿ ನಿರ್ಮಿಸಿರುವ ಯಲಹಂಕ ದಿನಪತ್ರಿಕೆ ವಿತರಕರ ಸಂಘದ ನೂತನ ಕಚೇರಿ ಉದ್ಘಾಟನೆ ಹಾಗೂ 12ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಈ ಭಾಗದ ಪತ್ರಿಕಾ ವಿತರಕರಿಗೆ ಉಚಿತ ಆರೋಗ್ಯ ಶಿಬಿರ ಆಯೋಜಿಸುವುದರ ಜೊತೆಗೆ ಸೈಕಲ್ ಮತ್ತು ನಿವೇಶನ ವಿತರಣೆ ಸೇರಿ ಹಲವು ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ದಿನಪತ್ರಿಕೆ ವಿತರಕರು ಖಾಸಗಿ ಜಾಗಗಳಲ್ಲಿ ಪತ್ರಿಕೆಗಳನ್ನು ವಿಂಗಡಿಸಿ ವಿತರಿಸಬೇಕಿತ್ತು. ಅದರಲ್ಲೂ ಮಳೆ ಬಂದ ಸಂದರ್ಭಗಳಲ್ಲಿ ಹೆಚ್ಚಿನ ಸಮಸ್ಯೆಯಾಗುತ್ತಿತ್ತು. ಸಂಘದ ಪದಾಧಿಕಾರಿಗಳ ಮನವಿಯ ಮೇರೆಗೆ ಕಚೇರಿ ನಿರ್ಮಿಸಲಾಗಿದೆ. ಇದರಿಂದ ಪತ್ರಿಕೆಗಳ ವಿಂಗಡಣೆ ಕಾರ್ಯದ ಜೊತೆಗೆ ಸಭೆ-ಸಮಾರಂಭಗಳನ್ನು ಆಯೋಜಿಸಲು ಅನುಕೂಲವಾಗಲಿದೆ ಎಂದರು.

ಹಿರಿಯ ಪತ್ರಿಕಾ ವಿತರಕರು ಹಾಗೂ ಹಲವು ಮುಖಂಡರನ್ನು ಸನ್ಮಾನಿಸಲಾಯಿತು. ಪತ್ರಿಕಾ ವಿತರಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು.

ವೀರಶೈವ ಮಹಾಸಭಾದ ಯಲಹಂಕ ಘಟಕ ಅಧ್ಯಕ್ಷೆ ಹೇಮಲತ ಚಿದಾನಂದ, ಯಶೋದಾ ಸತೀಶ್, ಸಂಘದ ಉಪಾಧ್ಯಕ್ಷ ಪಿ.ಕೆ.ಎಸ್.ಶಂಕರ್, ಪ್ರಧಾನ ಕಾರ್ಯದರ್ಶಿ ವೆಂಕಟೇಶಮೂರ್ತಿ, ಖಜಾಂಚಿ ವೈ.ಸಿ.ವೀರಭದ್ರ, ಸಹ ಕಾರ್ಯದರ್ಶಿ ಪ್ರದೀಪ್ ಉಪಸ್ಥಿತರಿದ್ದರು.

ಯಲಹಂಕ ಮಿನಿ ವಿಧಾನಸೌಧದ ಸಮೀಪದಲ್ಲಿ ದಿನಪತ್ರಿಕೆ ವಿತರಕರ ಸಂಘದ ನೂತನ ಕಚೇರಿ ಉದ್ಘಾಟನೆ ಹಾಗೂ 12ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಶಾಸಕ ಎಸ್‌.ಆರ್‌.ವಿಶ್ವನಾಥ್ ಪಾಲ್ಗೊಂಡಿದ್ದರು.

ಜಯನಗರ ಆರ್‌ಟಿಒ ಅಂಜನಾಪುರಕ್ಕೆ ಸ್ಥಳಾಂತರ

ಬೆಂಗಳೂರು: ಜಯನಗರ (ಬೆಂಗಳೂರು ದಕ್ಷಿಣ) ಪ್ರಾದೇಶಿಕ ಸಾರಿಗೆ ಕಚೇರಿಯು ಉತ್ತರಹಳ್ಳಿ ಹೋಬಳಿಯ ಜೆ.ಪಿ.ನಗರ 9ನೇ ಹಂತದಲ್ಲಿರುವ ಅಂಜನಾಪುರದಲ್ಲಿ ನಿರ್ಮಾಣಗೊಂಡಿರುವ ನೂತನ ಕಟ್ಟಡದಲ್ಲಿ ಶುಕ್ರವಾರ ಅಧಿಕೃತವಾಗಿ ಆರಂಭಗೊಂಡಿದೆ.

ಅಂಜನಾಪುರದಲ್ಲಿ ಮೂರು ಅಂತಸ್ತಿನ ಈ ಕಟ್ಟಡವು 38,793 ಚದರಡಿ ವಿಸ್ತೀರ್ಣ ಹೊಂದಿದ್ದು, ₹11.25 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿತ್ತು. ಹೊಸ ಕಟ್ಟಡವನ್ನು ಒಂದು ತಿಂಗಳ ಹಿಂದೆಯೇ ಉದ್ಘಾಟಿಸಲಾಗಿತ್ತು. ಆ ನಂತರ ಕಡತ ಸಹಿತ ವಿವಿಧ ದಾಖಲೆ ಸ್ಥಳಾಂತರ ಕಾರ್ಯ ನಡೆದಿದ್ದವು. ಅಂಜನಾಪುರ ಕಚೇರಿಯಲ್ಲಿ ಎಲ್ಲ ಕೆಲಸಗಳು ಆರಂಭವಾಗಲಿವೆ.

ವಿಳಾಸಕ್ಕೆ ಕ್ಯೂಆರ್ ಕೋಡ್ ಸ್ಕ್ಯಾನ್

ಸಹಕಾರ ನಗರದಲ್ಲಿ ದಸರಾ ಉತ್ಸವ

ಬೆಂಗಳೂರು: ದಸರಾ ಹಬ್ಬದ ಅಂಗವಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ನೇತೃತ್ವದ ತಂಡ ಹಾಗೂ ‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಸಹಕಾರನಗರದ ಮೈದಾನದಲ್ಲಿ ಸೆಪ್ಟೆಂಬರ್ 27 ಮತ್ತು 28ರಂದು ‘ದಸರಾ ಉತ್ಸವ’ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನ, ಸಂಗೀತ ಸಂಜೆ, ಯಕ್ಷಗಾನ, ದಾಂಡಿಯಾ ನೃತ್ಯ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿವೆ. ಅಲ್ಲದೆ ವಿವಿಧ ಉತ್ಪನ್ನಗಳ ಮಾರಾಟ ಮಳಿಗೆಗಳು ಇರಲಿವೆ.

ಸೆ. 27ರಂದು ಸಂಜೆ 4ಕ್ಕೆ ಲಲಿತ ಸಹಸ್ರನಾಮ, ಚಾಮುಂಡೇಶ್ವರಿ ದೇವಿಯ ಪೂಜೆ, ಪ್ರಸಾದ ವಿತರಣೆ ನಡೆಯಲಿದೆ. 5ಕ್ಕೆ ಸಾಮಗಾನ ಸಂಗೀತ ಸಭಾದ ಲಕ್ಷ್ಮಿ ವರುಣ್ ಮತ್ತು ತಂಡದಿಂದ ‘ದೇವರನಾಮ ಗಾಯನ’ ನಡೆಯಲಿದ್ದು, 6ಕ್ಕೆ ದೃಷ್ಟಿ ಆರ್ಟ್ ಸೆಂಟರ್‌ನ ಅನುರಾಧಾ ವಿಕ್ರಾಂತ್ ತಂಡದಿಂದ ‘ದುರ್ಗಾದೇವಿಯ ಒಂಬತ್ತು ಅವತಾರಗಳ’ ನೃತ್ಯ ನಾಟಕ ಪ್ರಸ್ತುತಪಡಿಸಲಾಗುತ್ತದೆ.

ರಾತ್ರಿ 8ಕ್ಕೆ ಸಹಕಾರನಗರ ಮಹಿಳಾ ಕ್ಷೇಮಾಭಿವೃದ್ಧಿ ಸಂಘದಿಂದ ‘ದಾಂಡಿಯಾ ನೃತ್ಯ’ ಪ್ರದರ್ಶನ ನಡೆಯಲಿದೆ.

ಸೆ. 28ರಂದು ಸಂಜೆ 4ಕ್ಕೆ ಜಾನಪದ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸ್ಪರ್ಧೆಗಳು ನಡೆಯಲಿದ್ದು, 6ಕ್ಕೆ ಶಂಕರಿ–ನೃತ್ಯೋಮಾ ಅಕಾಡೆಮಿ ಆಫ್ ಪರ್ಫಾಮಿಂಗ್ ಆರ್ಟ್ಸ್‌ನಿಂದ ‘ಭರತನಾಟ್ಯ’ ಪ್ರದರ್ಶನ, 6.15ಕ್ಕೆ ಪಂಜು ಪ್ರದರ್ಶನ, 7ಕ್ಕೆ ಕೆರೆಮನೆ ಶಿವಾನಂದ ಹೆಗಡೆ ಮತ್ತು ತಂಡದಿಂದ ‘ಸೀತಾಪಹರಣ’ ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ನವವರ್ಣ

ಬಿಳಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಛಾಯಾಚಿತ್ರಗಳನ್ನು ಇಂದು, ಶುಕ್ರವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

ಕೆಪಿಟಿಸಿಎಲ್ ಸರ್ಕಲ್ ನಾರ್ತ್ ಸಿಬ್ಬಂದಿ

ಲೀಲಾ ಮತ್ತು ಫ್ರೆಂಡ್ಸ್, ಬೆಂಗಳೂರು

ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯ ಸಿಬ್ಬಂದಿ

ಅಕಿಐ ಲೇಔಟ್ ತಂಡ, ಸಹಕಾರ ನಗರ

ವೀಣಾ & ಸ್ನೇಹಿತರು, ವಸಂತನಗರ

ಧನ್ಯ & ರೇಷ್ಮಾ

ಸಂಜಯ್ ಗಾಂಧಿ ಸಂಸ್ಥೆ, ಬೆಂಗಳೂರು

ತೇಜಸ್ವಿನಿ ಮತ್ತು ಸ್ನೇಹಿತರು, ಸಹಕಾರ ನಗರ

ಮಮತಾ & ಫ್ರೆಂಡ್ಸ್, ನಾಗರಭಾವಿ

ಐಟಿಐ ಲೇಔಟ್ ತಂಡ, ಬೆಂಗಳೂರು

ಲಲಿತಾ, ಬೆಂಗಳೂರು

ಶಾಲಿನಿ, ಬೆಂಗಳೂರು

ಉಷಾ & ಫ್ರೆಂಡ್ಸ್, ಕೋರಮಂಗಲ

ಸಾರಿಗೆ ಇಲಾಖೆ, ಬೆಂಗಳೂರು

ಅನಿತಾ, ಸಹನಾ, ಕವಿತಾ, ಬೆಂಗಳೂರು

ಮೇಘಾ, ತಿಪಟೂರು

ನೀಲಾಂಬಿಕೆಯರು, ಶಿವರಾಮ ಕಾರಂತ ನಗರ

ಪೂರ್ಣಿಮಾ ಮತ್ತು ಸಿಸ್ಟರ್ಸ್, ಬಸವನಗುಡಿ

ಇಂದಿನ ಬಣ್ಣ - ಬಿಳಿ

ವಾಣಿ & ಶೀತಲ್ ರಾಜರಾಜೇಶ್ವರಿ ನಗರ

ಗೀತಾ & ಪಲವಿ, ಬೆಂಗಳೂರು

ರೇಖಾ ಮತ್ತು ಸ್ನೇಹಿತರು, ಬೆಂಗಳೂರು

ಬೆಸ್ಕಾಂ ಸಿಬ್ಬಂದಿ, ದೊಡ್ಡಬಳ್ಳಾಪುರ

ಅರುಣಾ & ಸ್ನೇಹಿತರು, ಅತ್ತಿಬೆಲೆ

ರೆಡ್ ಹಿಲ್ಸ್ ಶಾಲಾ ಸಿಬ್ಬಂದಿ, ಬೆಂಗಳೂರು

ಚಂದ್ರ & ಲೀಲಾ, ಬೆಂಗಳೂರು


ವೇದಾಂತ ಪಿಯು ಕಾಲೇಜು ಸಿಬ್ಬಂದಿ, ಬೆಂಗಳೂರು

ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು

ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ ತಂಡ, ಬೆಂಗಳೂರು

K.R.A.S.M ಪ್ರಧಾನ ಕಚೇರಿಯ ಸಿಬ್ಬಂದಿ ವರ್ಗದವರು

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ



ಪ್ರೊ. ಮಹದೇವಯ್ಯ
(Physics Teacher)

ಗಾಢ ಶೋಕದೊಂದಿಗೆ ತಿಳಿಸುತ್ತೇವೆ. ನಮ್ಮ ಪ್ರಿಯ ತಂದೆ ಪ್ರೊ. ಮಹದೇವಯ್ಯ ಅವರು ಬುಧವಾರ, 24ನೇ ಸೆಪ್ಟೆಂಬರ್ 2025ರ ರಾತ್ರಿ 10:55ಕ್ಕೆ ಶಾಂತಿಯುತವಾಗಿ ಪರಮಪದ ಪಡೆದಿದ್ದಾರೆ.

ಅಂತಿಮ ಕ್ರಿಯೆಗಳು ಶುಕ್ರವಾರ, 26ನೇ ಸೆಪ್ಟೆಂಬರ್ 2025ರಂದು ನೆರವೇರಲಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ.

ಇಂತಿ ದುಃಖತಪ್ತರು:
ಶ್ರೀಮತಿ ಬಿ.ಎಂ. ಕಮಲಾ
ಬಿ.ಎಂ. ಅನಿಲ್ ಕುಮಾರ್
ಬಿ.ಎಂ. ಮಮತಾ / ಜ್ಞಾನಮೂರ್ತಿ
ಬಿ.ಎಂ. ಕವಿತಾ / ನಿತಿನ್ ಶ್ರೀವತ್ಸ
ಬಿ.ಎಂ. ಸಿರಿಲೇಖಾ/ಸುಹಾಸ್/ಧ್ಯಾನ್
ಬಂಧುಗಳು ಮತ್ತು ಸ್ನೇಹಿತರು

ಭಾರತ ತಂಡದಲ್ಲಿ ಪಡಿಕ್ಕಲ್

ವೆಸ್ಟ್ ಇಂಡೀಸ್ ವಿರುದ್ಧ ಸರಣಿಗೆ ತಂಡ ಆಯ್ಕೆ
ಕರುಣ್ ನಾಯರ್‌ಗೆ ಕೊಕ್ • ಜಡೇಜ ಉಪನಾಯಕ

ಮುಂಬೈ (ಪಿಟಿಐ): ಕರ್ನಾಟಕದ ಅನುಭವಿ ಬ್ಯಾಟರ್ ದೇವದತ್ತ ಪಡಿಕ್ಕಲ್, ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆಯಲಿರುವ ಎರಡು ಟೆಸ್ಟ್‌ಗಳ ಸರಣಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇಂಗ್ಲೆಂಡ್ ವಿರುದ್ಧ ಸರಣಿಯಲ್ಲಿ ಆಡಿದ್ದ ಮಧ್ಯಮ ಕ್ರಮಾಂಕದ ಬ್ಯಾಟರ್ ಕರುಣ್ ನಾಯರ್ ಅವರನ್ನು ಕೈಬಿಡಲಾಗಿದೆ.

ಭಾರತ ತಂಡದ ಉಳಿದುಕೊಂಡಿರುವ ಹೋಟೆಲ್‌ನಲ್ಲಿ ಗುರುವಾರ 15 ಸದಸ್ಯರ ತಂಡವನ್ನು ಪ್ರಕಟಿಸಲಾಯಿತು. ವೆಸ್ಟ್ ಇಂಡೀಸ್ ವಿರುದ್ಧ ಎರಡು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯ ಅಕ್ಟೋಬರ್ 2ರಂದು ಅಹಮದಾಬಾದಿನಲ್ಲಿ ಆರಂಭವಾಗಲಿದೆ.

ರಿಷಭ್ ಪಂತ್ ಅವರು ಬಲಪಾದದ ಗಾಯದಿಂದ ಇನ್ನೂ ಚೇತರಿಸಿಕೊಂಡಿಲ್ಲದ ಕಾರಣ ರವೀಂದ್ರ ಜಡೇಜಾ ಅವರಿಗೆ ಉಪ ನಾಯಕ ಸ್ಥಾನ ವಹಿಸಲಾಗಿದೆ.

ನಾಯರ್ ಜೊತೆಗೆ ಇಂಗ್ಲೆಂಡ್ ವಿರುದ್ಧದ ತಂಡದಲ್ಲಿದ್ದ ಬಂಗಾಳದ ಆರಂಭ ಆಟಗಾರ ಅಭಿಮನ್ಯು ಈಶ್ವರನ್ ಅವರಿಗೆ ಇನ್ನು ಅವಕಾಶವಿರುವುದಿಲ್ಲವೆಂಬ ಸುಳಿವು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರ ಮಾತುಗಳಲ್ಲಿ ವ್ಯಕ್ತವಾಯಿತು.

25 ವರ್ಷ ವಯಸ್ಸಿನ ಎಡಗೈ ಬ್ಯಾಟರ್ ಪಡಿಕ್ಕಲ್ ದೇಶಿಯ ಟೂರ್ನಿಗಳಲ್ಲಿ ತೋರಿದ ಉತ್ತಮ ಆಟದಿಂದ ಸ್ಥಾನ ಪಡೆದಿದ್ದಾರೆ.

ವೇಗದ ಬೌಲರ್ ಬೂಮ್ರಾ ಅವರಿಗೆ ಸಾಕಷ್ಟು ವಿಶ್ರಾಂತಿ ಸಿಕ್ಕಿದ್ದು, ಅವರು ಎರಡೂ ಪಂದ್ಯಗಳಲ್ಲಿ ಆಡಲಿದ್ದಾರೆ ಎಂಬ ಇಂಗಿತ ಅಗರಕರ್ ಮಾತಿನಲ್ಲಿ ವ್ಯಕ್ತವಾಯಿತು. 'ಎರಡೂ ಟೆಸ್ಟ್ ಪಂದ್ಯಗಳಿಗೆ ಈ ತಂಡವನ್ನು ಆಯ್ಕೆ ಮಾಡಲಾಗಿದೆ. ಹೀಗಾಗಿ ಅವರು ಎರಡೂ ಪಂದ್ಯಗಳಿಗೆ ಲಭ್ಯರಿದ್ದಾರೆ. ಇಂಗ್ಲೆಂಡ್ ವಿರುದ್ಧ ಸರಣಿಯ ನಂತರ ಸಾಕಷ್ಟು ವಿರಾಮ ದೊರತಿದೆ. ಅವರು ಆ ಸರಣಿಯ ಐದನೇ ಟೆಸ್ಟ್ ಬೇರೆ ಆಡಿರಲಿಲ್ಲ. ಅವರಿಗೆ ಐದು ವಾರಗಳ ಬಿಡುವು ಸಿಕ್ಕಿದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. 'ಬೂಮ್ರಾ ಸಹ ಸಜ್ಜಾಗಿದ್ದು, ಎರಡೂ ಟೆಸ್ಟ್‌ಗಳಲ್ಲಿ ಆಡಲು ಉತ್ಸುಕರಾಗಿದ್ದಾರೆ' ಎಂದರು.

33 ವರ್ಷ ವಯಸ್ಸಿನ ನಾಯರ್ ಬಗ್ಗೆ ಪ್ರಸ್ತಾಪಿಸಿದ ಅಗರಕರ್, ತಮಗೆ ದೊರೆತ ಅವಕಾಶಗಳನ್ನು ಅವರು ಪೂರ್ಣವಾಗಿ ಬಳಸಿಕೊಳ್ಳಲಿಲ್ಲ. ಇಂಗ್ಲೆಂಡ್ ಪ್ರವಾಸದ ಎಂಟು ಇನಿಂಗ್ಸ್‌ಗಳಲ್ಲಿ ಒಂದು ಅರ್ಧ ಶತಕ ಮಾತ್ರ ಗಳಿಸಿದರು ಎಂದು ವಿವರಿಸಿದರು.

'ಈ ಹಂತದಲ್ಲಿ ಪಡಿಕ್ಕಲ್ ಅವರಿಂದ ಹೆಚ್ಚಿನ ಕೊಡುಗೆ ಸಿಗಬಹುದು. ಆಸ್ಟ್ರೇಲಿಯಾ ಪ್ರವಾಸದ ವೇಳೆ ಅವರು ಟೆಸ್ಟ್ ತಂಡದಲ್ಲಿದ್ದರು. ಇಂಗ್ಲೆಂಡ್ ವಿರುದ್ಧ ಧರ್ಮಶಾಲಾದಲ್ಲಿ ಆಡುವ ಅವಕಾಶ ದೊರೆತಾಗ ಅವರು ಅರ್ಧ ಶತಕ ಸಹ ಹೊಡೆದಿದ್ದರು. ಈ ರೇಸ್‌ನಲ್ಲಿ ಅವರು ಯೋಗ್ಯ ರೀತಿಯಲ್ಲಿ ಆಡಿದ್ದಾರೆ' ಎಂದು ಭಾರತ ತಂಡದ ಮಾಜಿ ವೇಗಿ ತಿಳಿಸಿದರು.

ಕಳೆದ 3-4 ವರ್ಷಗಳಿಂದ ತಂಡದಲ್ಲಿದ್ದರೂ ಈಶ್ವರನ್ ಆಡುವ ಪದಾರ್ಪಣೆ ಅವಕಾಶ ಸಿಕ್ಕಿರಲಿಲ್ಲ. ಈಗ ಅವರು ತಂಡದಿಂದಲೇ ಹೊರಬಿದ್ದಿದ್ದಾರೆ.

'ರಿಷಭ್ ಪಂತ್ ಅವರು ತಂಡದ ಪ್ರಮುಖ ಆಟಗಾರ. ದುರದೃಷ್ಟವಶಾತ್ ಅವರು ಇನ್ನೂ ಪೂರ್ಣವಾಗಿ ಚೇತರಿಸಿಲ್ಲ. ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಗೆ ಲಭ್ಯರಾಗುವ ವಿಶ್ವಾಸವಿದೆ' ಎಂದರು.

ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಟೆಸ್ಟ್‌ಗಳ ಸರಣಿ ನವೆಂಬರ್ 14 ರಿಂದ 26ರ ಅವಧಿಯಲ್ಲಿ ನಡೆಯಲಿದೆ. ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಐದು ಪಂದ್ಯಗಳ ಟಿ20 ಸರಣಿಯೂ ಇದೆ. ಡಿ. 19ರಂದು ಕೊನೆಯ ಟಿ20 ಪಂದ್ಯ ನಡೆಯಲಿದೆ.

ವೇಗದ ಬೌಲರ್ ಮೊಹಮ್ಮದ್ ಶಮಿ ಅವರ ಬಗ್ಗೆ ಕೇಳಿದ ಪ್ರಶ್ನೆಗೆ 'ಅವರು ಎಷ್ಟರ ಮಟ್ಟಿಗೆ ಫಿಟ್ ಆಗಿದ್ದಾರೆ ಎಂಬ ಬಗ್ಗೆ ಹೆಚ್ಚು ತಿಳಿದಿಲ್ಲ' ಎಂದರು. ಅವರಿಗೆ ಇನ್ನು ಅವಕಾಶ ಕಷ್ಟ ಎನ್ನುವ ಇಂಗಿತವನ್ನೂ ನೀಡಿದರು.

ತಂಡ ಇಂತಿದೆ

ಶುಭಮನ್ ಗಿಲ್ (ನಾಯಕ), ರವೀಂದ್ರ ಜಡೇಜ (ಉಪ ನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್.ರಾಹುಲ್, ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ಧ್ರುವ್ ಜುರೇಲ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬೂಮ್ರಾ, ಅಕ್ಷರ್ ಪಟೇಲ್, ನಿತೀಶ್ ಕುಮಾರ್ ರೆಡ್ಡಿ, ಎನ್.ಜಗದೀಶನ್ (ವಿಕೆಟ್ ಕೀಪರ್), ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಕುಲದೀಪ್ ಯಾದವ್.

ನಾಯಕ ಶುಭಮನ್ ಗಿಲ್ ಮತ್ತು ಉಪನಾಯಕ ರವೀಂದ್ರ ಜಡೇಜ ಪಿಟಿಐ ಸಂಗ್ರಹ ಚಿತ್ರ

ದೇವದತ್ತ ಪಡಿಕ್ಕಲ್

'ಎ' ತಂಡಕ್ಕೆ ಶ್ರೇಯಸ್ ಸಾರಥ್ಯ

ಶ್ರೇಯಸ್ ಅಯ್ಯರ್

ನವದೆಹಲಿ (ಪಿಟಿಐ): ಶ್ರೇಯಸ್ ಅಯ್ಯರ್ ಅವರನ್ನು ಆಸ್ಟ್ರೇಲಿಯಾ ಎ ವಿರುದ್ಧ ಆಡಲಿರುವ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಗೆ ಭಾರತ 'ಎ' ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಬೆನ್ನುನೋವಿನ ಕಾರಣ ದೀರ್ಘ ಮಾದರಿಯಿಂದ (ರೆಡ್‌ಬಾಲ್ ಕ್ರಿಕೆಟ್‌ನಿಂದ) ತಮಗೆ ಆರು ತಿಂಗಳ ಬಿಡುವು ನೀಡುವಂತೆ ಎರಡು ದಿನಗಳ ಹಿಂದೆ ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್ ಅವರಿಗೆ ಮನವಿ ಮಾಡಿದ್ದರು.

ಕಾನ್ಪುರದಲ್ಲಿ ಸೆ. 30ರಂದು ಮೊದಲ ಏಕದಿನ ಪಂದ್ಯ ನಡೆಯಲಿದೆ.

ಏಷ್ಯಾ ಕಪ್ ತಂಡದಲ್ಲಿ ಆಡುತ್ತಿರುವ ಸ್ಟಾರ್ ಬ್ಯಾಟರ್ ಅಭಿಷೇಕ್ ವರ್ಮಾ, ತಿಲಕ್ ವರ್ಮಾ, ವೇಗಿ ಹರ್ಷಿತ್ ರಾಣಾ ಮತ್ತು ಅರ್ಷದೀಪ್ ಸಿಂಗ್ ಅವರು ಎರಡನೇ ಪಂದ್ಯ (ಅ.3) ಮತ್ತು ಮೂರನೇ (ಅ. 5) ಪಂದ್ಯಗಳ ವೇಳೆ ತಂಡ ಸೇರಿಕೊಳ್ಳಲಿದ್ದಾರೆ.

ತಂಡ ಹೀಗಿದೆ: ಮೊದಲ ಪಂದ್ಯಕ್ಕೆ ತಂಡ: ಶ್ರೇಯಸ್ ಅಯ್ಯರ್ (ನಾಯಕ), ಪ್ರಭಸಿಮ್ರನ್ ಸಿಂಗ್ (ವಿಕೆಟ್ ಕೀಪರ್), ರಿಯಾನ್ ಪರಾಗ್, ಆಯುಷ್ ಬಡೋನಿ, ಸೂರ್ಯಾಂಶ್ ಶೆಡ್ಗೆ, ವಿಪ್ರಜ್ ನಿಗಮ್, ನಿಶಾಂತ್ ಸಿಂಧು, ಗುರಜಪನೀತ್ ಸಿಂಗ್, ಯುದ್ಧವೀರ್ ಸಿಂಗ್, ರವಿ ಬಿಷ್ಣೋಯಿ, ಅಭಿಷೇಕ್ ಪೊರೆಲ್ (ವಿಕೆಟ್ ಕೀಪರ್), ಪ್ರಿಯಾಂಶ್ ಆರ್ಯ, ಸಿಮರ್ಜೀತ್ ಸಿಂಗ್

ಪಾಟೀದಾರ್ ನಾಯಕ: 32 ವರ್ಷ ವಯಸ್ಸಿನ ಬ್ಯಾಟರ್ ರಜತ್ ಪಾಟೀದಾರ್ ಅವರು ನಾಗ್ಪುರದಲ್ಲಿ ಅಕ್ಟೋಬರ್ 1 ರಿಂದ 4ರವರೆಗೆ ನಡೆಯಲಿರುವ ಇರಾನಿ ಟ್ರೋಫಿ ಪಂದ್ಯದಲ್ಲಿ ವಿದರ್ಭ ತಂಡದ ಎದುರು ಆಡಲಿರುವ ಭಾರತ ಇತರರ ತಂಡದ ನಾಯಕತ್ವವನ್ನು ವಹಿಸಲಿದ್ದಾರೆ.

ದುಲೀಪ್ ಟ್ರೋಫಿಯಲ್ಲಿ ಪ್ರಶಸ್ತಿ ಗೆದ್ದ ಕೇಂದ್ರ ವಲಯ ತಂಡಕ್ಕೂ ಅವರು ನಾಯಕರಾಗಿದ್ದರು.

ತಂಡ: ರಜತ್ ಪಾಟಿದಾರ್ (ನಾಯಕ), ಅಭಿಮನ್ಯು ಈಶ್ವರನ್, ಆರ್ಯನ್ ಜುಯಲ್ (ವಿಕೆಟ್ ಕೀಪರ್), ಋತುರಾಜ್ ಗಾಯಕವಾಡ್, ಯಶ್ ಧುಳ್, ಶೇಖ್ ರಶೀದ್, ಇಶಾನ್ ಕಿಶನ್ (ವಿಕೆಟ್ ಕೀಪರ್), ತನುಷ್ ಕೋಟ್ಯಾನ್, ಮಾನವ್ ಸುತಾರ್, ಗುರ್ನೂರ್ ಬ್ರಾರ್, ಖಲೀಲ್ ಅಹ್ಮದ್, ಆಕಾಶ್ ದೀಪ್, ಅನ್ಶುಲ್ ಕಾಂಬೋಜ್, ಸಾರಾನ್ಶ್ ಜೈನ್.

ಭಾರತ ಎ ತಂಡಕ್ಕೆ ರಾಹುಲ್ ಆಸರೆ

ಲಖನೌ (ಪಿಟಿಐ): ಆಸ್ಟ್ರೇಲಿಯಾ ಎ ತಂಡವು ನೀಡಿದ ಬೃಹತ್ ಗುರಿಯನ್ನು ಬೆನ್ನಟ್ಟಿದ ಭಾರತ ಎ ತಂಡಕ್ಕೆ ಗುರುವಾರ ಆರಂಭಿಕ ಆಟಗಾರ ಕೆ.ಎಲ್.ರಾಹುಲ್ (ಗಾಯಗೊಂಡು ನಿವೃತ್ತಿ 74;92ಎ, 4x9) ಆಸರೆಯಾದರು. ಎರಡನೇ 'ಟೆಸ್ಟ್'ನ ಮೊದಲ ಇನಿಂಗ್ಸ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಆತಿಥೇಯ ತಂಡಕ್ಕೆ ಅವರು ಗೆಲುವಿನ ಆಸೆ ಚಿಗುರಿಸಿದರು.

ಗೆಲುವಿಗೆ 412 ರನ್‌ಗಳ ಗುರಿ ಪಡೆದಿರುವ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 41 ಓವರ್‌ಗಳಲ್ಲಿ 2 ವಿಕೆಟ್‌ಗೆ 169 ರನ್ ಗಳಿಸಿದೆ. ಗೆಲುವಿಗೆ ಇನ್ನೂ 243 ರನ್ ಬೇಕಿದೆ. ಆದರೆ, ಪಂದ್ಯದ ವೇಳೆ ರಾಹುಲ್ ಗಾಯಗೊಂಡು ನಿವೃತ್ತರಾದರು. ಸಾಯಿ ಸುದರ್ಶನ್ (ಔಟಾಗದೇ 44) ಮತ್ತು ಮಾನವ್ ಸುತಾರ್ (ಔಟಾಗದೇ 1) ಅಂತಿಮ ದಿನಕ್ಕೆ ಆಟ ಕಾಯ್ದುಕೊಂಡಿದ್ದಾರೆ.

ಮೊದಲ ಇನಿಂಗ್ಸ್‌ನಲ್ಲಿ 226 ರನ್‌ಗಳ ಮುನ್ನಡೆ ಪಡೆದ ಆಸ್ಟ್ರೇಲಿಯಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಭಾರತದ ಬೌಲರ್‌ಗಳ ದಾಳಿಗೆ ತತ್ತರಿಸಿತು. ಬುಧವಾರ 3 ವಿಕೆಟ್‌ಗೆ 16 ರನ್ ಗಳಿಸಿದ್ದ ತಂಡವು 46.5 ಓವರ್‌ಗಳಲ್ಲಿ 185 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 92.7 ಓವರ್‌ಗಳಲ್ಲಿ 420. ಭಾರತ ಎ: 52.5 ಓವರುಗಳಲ್ಲಿ 194. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ ಎ: 46.5 ಓವರ್‌ಗಳಲ್ಲಿ 185 (ನೇಥನ್ ಮೆಕ್‌ಸ್ವೀನಿ ಔಟಾಗದೇ 85, ಜೋಷ್ ಫಿಲಿಪ್ 50; ಗುರ್ನೂರ್ ಬ್ರಾರ್ 42ಕ್ಕೆ 3, ಮಾನವ್ ಸುತಾರ್ 50ಕ್ಕೆ 3, ಮೊಹಮ್ಮದ್ ಸಿರಾಜ್ 20ಕ್ಕೆ 2, ಯಶ್ ಠಾಕೂರ್ 29ಕ್ಕೆ 2). ಭಾರತ ಎ: 41 ಓವರ್‌ಗಳಲ್ಲಿ 2 ವಿಕೆಟ್‌ಗೆ 169 (ನಾರಾಯಣ ಜಗದೀಶನ್ 36, ಕೆ.ಎಲ್.ರಾಹುಲ್ 74 (ಗಾಯಾಳಾಗಿ ನಿವೃತ್ತಿ), ಸಾಯಿ ಸುದರ್ಶನ್ ಔಟಾಗದೇ 44).

ಸೂಪರ್ ಕಪ್: ಸಿ ಗುಂಪಿನಲ್ಲಿ ಬಿಎಫ್‌ಸಿ

ಕೋಲ್ಕತ್ತ (ಪಿಟಿಐ): ಬೆಂಗಳೂರು ಎಫ್‌ಸಿ ತಂಡವು, ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಸಾಂಪ್ರದಾಯಿಕ ಎದುರಾಳಿ ಗಳಾದ ಮೋಹನ್ ಬಾಗನ್ ಮತ್ತು ಈಸ್ಟ್ ಬೆಂಗಾಲ್ ತಂಡಗಳು ಎ ಗುಂಪಿನಲ್ಲಿದ್ದು 'ಕೋಲ್ಕತ್ತ ಡರ್ಬಿ'ಗೆ ದಾರಿಯಾಗಿದೆ.

ಈ ಎರಡು ದೈತ್ಯ ತಂಡಗಳು ಆರು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಮೂರನೇ ಬಾರಿ ಮುಖಾಮುಖಿ ಆಗಲಿವೆ.

16 ತಂಡಗಳನ್ನು ನಾಲ್ಕು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಯಿತು. 'ಸಿ' ಗುಂಪಿನಲ್ಲಿ ಬಿಎಫ್‌ಸಿ ಜೊತೆ ಮೊಹಮಡನ್ ಸ್ಪೋರ್ಟಿಂಗ್, ಪಂಜಾಬ್ ಎಫ್‌ಸಿ ಮತ್ತು ಗೋಕುಲಂ ಎಫ್‌ಸಿ ತಂಡಗಳಿವೆ. ಬಾಗನ್ ಮತ್ತು ಈಸ್ಟ್ ಬೆಂಗಾಲ್ ನಡುವಣ ಪಂದ್ಯ ಅಕ್ಟೋಬರ್ 31ರಂದು ಮಡಗಾಂವ್‌ನ ಫತೋರ್ಡಾ ಕ್ರೀಡಾಂಗಣದಲ್ಲಿ ನಡೆಯುವ ನಿರೀಕ್ಷೆಯಿದೆ. ಬಾಗನ್ ತನ್ನ ಪಂದ್ಯಗಳನ್ನು ಅ. 25, 28 ಮತ್ತು 31ರಂದು ಆಡಲಿದೆ.

ಸೂಪರ್ ಕಪ್ ಟೂರ್ನಿ ಋತುವಿನ ಕೊನೆಯಲ್ಲಿ ನಡೆಯುತ್ತದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ವರ್ಕ್ ಗಳಿಗೆ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಸಾದವರಿಗೆ ಮೊದಲಆದ್ಯತೆ. 17,500- 25,000/- ಕೊರಿಯರ್ ಸೌಲಭ್ಯವಿದೆ. 9916065497

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel Agencies

01.11.2025ರಿಂದ 15ದಿನಗಳ ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ್,4 ಜ್ಯೋತಿರ್ಲಿಂಗ, ಪಂಚದ್ವಾರಕ,ನಿಶ್ಕಲಂಕ ಮಹಾದೇವ,ಮಾತೃ ಗಯಾ, ಪುಷ್ಕರ್, ಜೈಸಲ್ಮೇರ್, ಜೈಪುರ್ ಅಂಬಾಜಿ. ಶ್ರೀ ಗಂಗಾ ಟೂರಿಸ್ಟ್: 9480253807

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಜೂನಿಯರ್ ಶೂಟಿಂಗ್: ಅನುಷ್ಕಾಗೆ ಚಿನ್ನದ ಪದಕ

ಅನುಷ್ಕಾ ತೋಕೂರು

ನವದೆಹಲಿ (ಪಿಟಿಐ): ಭಾರತ ತಂಡವು, ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಭರ್ಜರಿ ಆರಂಭ ಮಾಡಿತು. ಮೊದಲ ದಿನವಾದ ಗುರುವಾರ 50 ಮೀ. ರೈಫಲ್ ಪ್ರೋನ್ ಸ್ಪರ್ಧೆಯಲ್ಲಿ ಮಹಿಳಾ ತಂಡ ಮೂರೂ ಪದಕ ಗೆದ್ದು ಕ್ಲೀನ್ ಸ್ವೀಪ್ ಮಾಡಿದರೆ, ಪುರುಷರ ತಂಡ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡಿತು.

ಕರ್ನಾಟಕದ ಅನುಷ್ಕಾ ತೋಕೂರು ಅವರು ಡಾ.ಕರ್ಣಿ ಸಿಂಗ್ ರೇಂಜ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ 621.6 ಸ್ಕೋರ್‌ನೊಡನೆ ಚಿನ್ನ ಗೆದ್ದರು.

18 ವರ್ಷ ವಯಸ್ಸಿನ ಅನ್ವಿಕಾ (619.2) ಬೆಳ್ಳಿ ಗೆದ್ದರೆ, 20 ವರ್ಷ ವಯಸ್ಸಿನ ಆಧ್ಯಾ ಅಗರವಾಲ್ (615.9) ಕಂಚಿನ ಪದಕ ಗೆದ್ದರು. ಕಜಕಸ್ತಾನದಲ್ಲಿ ಇತ್ತೀಚೆಗೆ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಅನುಷ್ಕಾ ಅವರು 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಚಿನ್ನಕ್ಕೆ ಗುರಿಯಿಡುವಲ್ಲಿ ಯಶಸ್ವಿ ಆಗಿದ್ದರು.

ದೀಪೇಂದ್ರ ಸಿಂಗ್ ಶೆಖಾವತ್ ಮತ್ತು ರೋಹಿತ್ ಕನ್ಯಾನ ಅವರು ಪುರುಷರ ವಿಭಾಗದ 50 ಮೀ. ರೈಫಲ್ ಪ್ರೋನ್ ಸ್ಪರ್ಧೆಯಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ತಟಸ್ಥ ಅಥ್ಲೀಟ್ಸ್ ತಂಡದ ಕಮಿಲ್ ನುರಿಯಾಕ್‌ಮೆಟೋವ್ (618.9) ಚಿನ್ನ ಗೆದ್ದರು. ದೀಪೇಂದ್ರ 617.9 ಮತ್ತು ರೋಹಿತ್ 616.3 ಸ್ಕೋರ್ ಮಾಡಿದರು.

ಪ್ರೊ ಕಬಡ್ಡಿ: ಬುಲ್ಸ್‌ಗೆ ಟೈಬ್ರೇಕರ್‌ನಲ್ಲಿ ಸೋಲು

ಜೈಪುರ (ಪಿಟಿಐ): ರೋಮಾಂಚಕ ಅಂತ್ಯ ಕಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಯುಪಿ ಯೋಧಾಸ್ ಟೈಬ್ರೇಕರ್‌ನಲ್ಲಿ 6–5 ರಿಂದ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿತು. ಈ ಬಾರಿಯ ಲೀಗ್‌ನಲ್ಲಿ ಇದು ಯೋಧಾಸ್‌ಗೆ ನಾಲ್ಕನೇ ಗೆಲುವು.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯ ನಿಗದಿ ಅವಧಿಯ ವೇಳೆ 36–36ರಲ್ಲಿ ಸಮನಾಗಿತ್ತು.

ಭವಾನಿ ರಜಪೂತ್ ಯುಪಿ ಪರ 10 ಪಾಯಿಂಟ್ಸ್ ಗಳಿಸಿದರು. ಅವರಿಗೆ ಕನ್ನಡಿಗ ಗಗನ್ ಗೌಡ (6), ಸುಮಿತ್ ಸಂಗ್ವಾನ್ (4), ಆಶು ಸಿಂಗ್ (4) ಬೆಂಬಲ ನೀಡಿದರು.

ಬೆಂಗಳೂರು ಬುಲ್ಸ್ ಪರ ಆಲ್‌ರೌಂಡರ್ ಅಲಿರೇಜಾ ಮಿರ್ಜಯೆನ್ 11 ಪಾಯಿಂಟ್ಸ್ ಗಳಿಸಿದರೆ, ರೇಡರ್‌ಗಳಾದ ಆಕಾಶ್ ಶಿಂದೆ (7), ಅಶಿಶ್ ಮಲಿಕ್ (5) ಅವರಿಂದ ಬೆಂಬಲ ದೊರೆಯಿತು.

ದಬಂಗ್‌ಗೆ ಗೆಲುವು: ದಿನದ ಮತ್ತೊಂದು ಪಂದ್ಯದಲ್ಲಿ ಅಶು ಮಲಿಕ್ (23 ಅಂಕ) ಅವರ ಆಟದ ಬಲದಿಂದ ಡೆಲ್ಲಿ ದಬಂಗ್ ತಂಡವು 47–26ರಿಂದ ಯು ಮುಂಬಾ ತಂಡವನ್ನು ಮಣಿಸಿ, ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಮನೆಯಲ್ಲಿ ರುಚಿಕರ ಭಕ್ಷ್ಯ ತಯಾರಿಸುವ ಪ್ರಯತ್ನಕ್ಕಾಗಿ

ಪಾಕಶಾಲೆಯ ಸೀಸನ್-4 ಆರಂಭ

ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸುವ 'ಕರುನಾಡ ಸವಿಯೂಟ' ಪಾಕಪದ್ಧತಿ — ಆವೃತ್ತಿ 4ರ ಎಲ್‌ಪಿಜಿ ಪಾಲುದಾರ — ಇಂಡೇನ್, ಕಿಚನ್ ಪಾಲುದಾರ ಟಿಟಿಕೆ ಪ್ರೆಸ್ಟೀಜ್, ವಿಶೇಷ ಪಾಲುದಾರ ಭೀಮಾ ಜ್ಯುವೆಲ್ಲರ್ಸ್, ಸ್ನ್ಯಾಕ್ಸ್ ಪಾಲುದಾರ — ಲೇಸ್ ಹಾಗೂ ಸಹ ಪಾಲುದಾರರಾದ ಎಸ್‌ಬಿಐ ಕಾರ್ಡ್, ವೆನ್‌ಕಾಬ್ ಚಿಕನ್ ಮತ್ತು ಇಕೋ ಕ್ರಿಸ್ಟಲ್ ವಾಟರ್ ಟ್ರೀಟ್‌ಮೆಂಟ್ ನೊಂದಿಗೆ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆ ಜಂಟಿಯಾಗಿ ಆಯೋಜಿಸಿದ ಉಪಕ್ರಮ.

ಹಬ್ಬದ ಋತುವಿನಲ್ಲಿ ಬರುತ್ತಿರುವ 'ಕರುನಾಡ ಸವಿಯೂಟ' ಸೀಸನ್-4, ನೀವು ಮನೆಯಲ್ಲಿ ತಯಾರಿಸಲು ಬಯಸುವ, ಪ್ರಯತ್ನಿಸುವ ಮತ್ತು ನಿಮ್ಮ ಕುಟುಂಬ ಮತ್ತು ಅತಿಥಿಗಳನ್ನು ಅಚ್ಚರಿಗೊಳಿಸುವ ರುಚಿಕರ ಭಕ್ಷ್ಯಗಳನ್ನು ನೋಡದೇ ತಪ್ಪಿಸಿಕೊಳ್ಳಲಾಗದ ಪಾಕಪದ್ಧತಿಗಳ ಪ್ರದರ್ಶನ ಇದಾಗಿದೆ.

ಕರ್ನಾಟಕದ ಪ್ರತಿಯೊಂದು ಸಮುದಾಯವೂ ತನ್ನದೇ ಆದ ಸಾಂಪ್ರದಾಯಿಕ ಮತ್ತು ವಿಶೇಷ ಭಕ್ಷ್ಯಗಳ ವೈವಿಧ್ಯಮಯ ಪಾಕಪದ್ಧತಿಗಳನ್ನು ಹೊಂದಿದೆ. ನಾಡಿನ ಹಾಗೂ ಸಮುದಾಯದ ಬಹುಮುಖತೆ ಮತ್ತು ವಿಶಿಷ್ಟ ಅಭಿರುಚಿಗೆ ಗೌರವ ನೀಡುವ ಸಲುವಾಗಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ 'ಕರುನಾಡ ಸವಿಯೂಟ' ಹೆಸರಿನಲ್ಲಿ ಸೆಲೆಬ್ರಿಟಿ ಬಾಣಸಿಗರಾದ ಸಿಹಿ ಕಹಿ ಚಂದ್ರು, ಒಗ್ಗರಣೆ ಡಬ್ಬಿ ಮುರಳಿ ಮತ್ತು ಆದರ್ಶ್ ತತ್ಪತಿ ಅವರೊಂದಿಗೆ ಆವೃತ್ತಿ-4 ಅನ್ನು ಆಚರಿಸಲಿದೆ.

ಈ ಸೆಲೆಬ್ರಿಟಿ ಶೆಫ್‌ಗಳು ಕರ್ನಾಟಕ ರಾಜ್ಯದ ವಿವಿಧ ಪ್ರದೇಶಗಳ ಆಹಾರ/ಪಾಕವಿಧಾನದ ವೀಡಿಯೊಗಳನ್ನು ಪ್ರದರ್ಶಿಸಲಿದ್ದಾರೆ. ಇಷ್ಟೇ ಅಲ್ಲದೆ, ಆಯಾ ಪಾಕಪದ್ಧತಿಗಳ ಮಾಹಿತಿಯೊಂದಿಗೆ ಅವರಲ್ಲಿರುವ ಸಣ್ಣ ಸಣ್ಣ ವಿಷಯಗಳ ಸಂಗ್ರಹವನ್ನು ತಿಳಿಸಿಕೊಡಲಿದ್ದಾರೆ.

ಕರುನಾಡ ಸವಿಯೂಟವು ನಮ್ಮ ದೇಶದ ಅತ್ಯಂತ ಹಳೆಯ ಆಹಾರ ಪದ್ಧತಿ ಅಥವಾ ಸಂಪ್ರದಾಯಗಳಲ್ಲಿ ಒಂದಾಗಿದೆ ಹಾಗೂ ವೈವಿಧ್ಯಮಯ ಎಂಬುದಂತೂ ನಿಜ. ಕಾರಣ ವಿಭಿನ್ನ ವಿನ್ಯಾಸದ ಆಹಾರಗಳು, ಅವುಗಳ ಪರಿಮಳ ಹಾಗೂ ಅಭಿರುಚಿಗಳಿಂದ ಅದು ರುಜುವಾತಾಗಿದೆ. ಪ್ರತಿಯೊಂದು ಖಾದ್ಯವನ್ನು ತಯಾರಿಸುವ ವಿಧಾನ ವಿಭಿನ್ನವಾಗಿದ್ದು, ಆಯಾ ಪ್ರದೇಶದ ಇತಿಹಾಸದ ಬಗ್ಗೆ ಕಥೆಯ ರೂಪದಲ್ಲಿ ವರ್ಣಿಸುತ್ತದೆ. ಸ್ಥಳೀಯ ಸಂಸ್ಕೃತಿಯ ಒಂದು ನೋಟವನ್ನು ನೀಡುತ್ತದೆ.

ಫ್ರೀಡಂ ಹೆಲ್ತಿ ಅಡುಗೆ ಎಣ್ಣೆಯು ರಾಜ್ಯದ ಕೆಲವು ಉತ್ತಮ ಗುಣಮಟ್ಟದ ಮತ್ತು ಜನಪ್ರಿಯವಾದ ಆಹಾರ ತಯಾರಿಕೆಯ ವಿಧಾನಗಳನ್ನು 'ಕರುನಾಡ ಸವಿಯೂಟ' ಸೀಸನ್-4ರಲ್ಲಿ ಪ್ರದರ್ಶಿಸುವ ಮೂಲಕ ಪ್ರಸ್ತುತಪಡಿಸುತ್ತದೆ. ಈ ವಿಶೇಷ ಪಾಕಶಾಲೆಯ ವೀಡಿಯೊ ಸರಣಿಯು ಪ್ರಸಿದ್ಧ ಬಾಣಸಿಗರು ಆರಿಸಿ ತಯಾರಿಸಿದ 15 ಭಕ್ಷ್ಯಗಳನ್ನು ಪ್ರದರ್ಶಿಸುತ್ತದೆ. ಪ್ರತಿಯೊಬ್ಬ ಶೆಫ್ ತಾವು ತಯಾರಿಸುವ ಐದು ಭಕ್ಷ್ಯದ ಸೂಕ್ಷ್ಮವ್ಯತ್ಯಾಸಗಳನ್ನೂ ಹಾಗೂ ಅದರ ಸುತ್ತಲಿನ ಕಥೆ ಮತ್ತು ಟ್ವಿಸ್ಟ್‌ಗಳನ್ನು ವಿವರಿಸಲಿದ್ದಾರೆ. ಪ್ರದರ್ಶಿಸಲಾಗುವ ಭಕ್ಷ್ಯಗಳು ಸಾಂಪ್ರದಾಯಿಕ ಮತ್ತು ಕಾಲೋಚಿತ ಭಕ್ಷ್ಯಗಳಾಗಿದ್ದು, ಇವು ಬಾಣಸಿಗರ ಸೃಷ್ಟಿಗಳಾಗಿವೆ.

ಉತ್ತರ ಕರ್ನಾಟಕ, ಮಲೆನಾಡು, ಕೊಡಗು ಮತ್ತು ಕರಾವಳಿ ಕರ್ನಾಟಕ ಭಾಗದಲ್ಲಿ ಆನಂದ ತರುವ ಹಾಗೂ ಅಲ್ಲಿ ಕಾಣುವ ವೈವಿಧ್ಯಮಯ ಭಕ್ಷ್ಯಗಳ ಪ್ರದರ್ಶನ ಇಲ್ಲಿ ನಡೆಯಲಿದೆ. ಭಕ್ಷ್ಯಗಳ ತಯಾರಿಕೆ ಹಂತಗಳ ಮಾರ್ಗದರ್ಶನ, ಶೃಂಗರಿಸುವಿಕೆ, ಬಡಿಸುವ ರೀತಿ ಹಾಗೂ ಆಕರ್ಷಕ ಪ್ಯಾಕ್ ಮಾಡಿದ ವೀಡಿಯೊಗಳು ಮಾರ್ಗದರ್ಶಿಯಾಗಲಿವೆ. ಇವುಗಳ ಬಗ್ಗೆ ನಿಮಗೆ ತಿಳಿದಿದ್ದರೆ, ಮತ್ತೊಮ್ಮೆ ನೋಡಿ ಆನಂದಿಸಲು ಬಯಸುತ್ತಿರಲ್ಲವೇ?

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅಡುಗೆಯ ವಿಧಾನಗಳ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ನಿಮ್ಮ ಬಾಣಸಿಗರನ್ನು ಭೇಟಿ ಮಾಡಿ

ಸಿಹಿ ಕಹಿ ಚಂದ್ರು: ಚಂದ್ರು ಅವರು ತಯಾರಿಸುತ್ತಿರುವ ಹಲಸಿನ ಮುಲ್ಕಾ, ಹುರಿಗಡ್ಲೆ ನಿಪ್ಪಟ್ಟು, ಸೌತೆಕಾಯಿ ಮುದ್ದಿಪಲ್ಯ, ಹಿತ್ಕಿದ ಅವರೆಬೆಲೆ ಮೆಲೋಗ್ರಾ ಮತ್ತು ಬೋಂಡಾ ಸೂಪ್ ಆಕರ್ಷಣೆಗೆ ಒಳಗಾಗಿ ನೀವು ಕೂಡ ತಯಾರಿಸಲು ಪ್ರೇರಿತರಾಗುತ್ತೀರಿ ಎಂಬುದಂತೂ ಖಂಡಿತ.

ಆದರ್ಶ್ ತತ್ಪತಿ: ಅವರ ಕೈಚಳಕದಿಂದ ಮೂಡಿಬರುವ ರಾಯಚೂರು ತುಂಟಪುರ ಕೋಳಿ ಕಡ್ಡಿ, ಬಟಾನಿ ಕುರ್ಮ, ಕಡ್ಲೆ ಮನೋಳಿ ಸುಕ್ಕ ಮಸಾಲೆ, ಕೊಳ್ಳೇಗಾಲ ಮಟನ್ ನಲ್ಲಿ ಪುಲಾವ್ ಮತ್ತು ಕನಕಪುರ ಶೈಲಿಯ ಹೊಳೆ ಮೀನು ಸಾರು ಸ್ವರ್ಗ ಸದೃಶ ಅನುಭವ.

ಒಗ್ಗರಣೆ ಡಬ್ಬಿ ಮುರಳಿ ಮತ್ತು ಅವರ ಪತ್ನಿ ಸುಚಿತ್ರ: ನೀವು ಅವರ ಅಡುಗೆ ಮನೆಯಿಂದ ಚಿಕ್ಕಪೇಟೆ ಕಾಳು ಸೂಪ್, ಮೈಸೂರು ಬೀದಿ ಖೀಮಾ ವಡೆ, ಬ್ಯಾಚುಲರ್ ಕ್ವಿಕ್ ಮಟನ್ ಫ್ರೈ, ಮಳವಳ್ಳಿ ಬಿಳಿ ಚಿಕನ್ ಪುಲಾವ್ ಮತ್ತು ನಾಟಿ ಕೋಳಿ ಬಸ್ಸಾರು ಅನ್ನು ಎಂದಿಗೂ ತಪ್ಪಿಸಿಕೊಳ್ಳಲು ಬಯಸುವುದಿಲ್ಲ. ಮುರಳಿ ಅವರು ತಮ್ಮ ಪತ್ನಿ ಸುಚಿತ್ರಾ ಅವರೊಂದಿಗೆ ನಾನ್ ವೆಜ್ ಪ್ರದರ್ಶಿಸಲಿದ್ದಾರೆ.

LPG Partner: Indane | Kitchen Partner: Prestige | Special Partner: BHIMA | Snacks Partner: Lay's | Associate Sponsors: SBI card, Vencobb, eco crystal Water Treatment

ರಾಜಕೀಯ ಹೇಳಿಕೆ ನೀಡದಂತೆ ಸೂಚನೆ

ದುಬೈ (ಪಿಟಿಐ): ರಾಜಕೀಯ ಸ್ವರೂಪದ್ದೆನಿಸುವ ಯಾವುದೇ ಹೇಳಿಕೆ ನೀಡಬಾರದು ಎಂದು ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರಿಗೆ ಐಸಿಸಿ ಮ್ಯಾಚ್ ರೆಫ್ರಿ ರಿಚಿ ರಿಚರ್ಡ್ಸನ್ ಅವರು ಸೂಚಿಸಿದ್ದಾರೆ.

ಪಾಕಿಸ್ತಾನ ಕ್ರಿಕೆಟ್ ಮಂಡಳಿ ಸಲ್ಲಿಸಿದ ದೂರಿನ ವಿಚಾರಣೆ ನಡೆದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಈ ಸೂಚನೆ ನೀಡಿದೆ.

ಪಾಕಿಸ್ತಾನ ವಿರುದ್ಧ ಪಂದ್ಯದಲ್ಲಿ ಹಸ್ತಲಾಘವಕ್ಕೆ ನಿರಾಕರಿಸಿದ ಸೂರ್ಯ, ಸೆ. 14ರ ಪಂದ್ಯದ ಗೆಲುವನ್ನು ಅಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ತೊಡಗಿದ ಸೇನಾಪಡೆಗೆ ಅರ್ಪಿಸಿದ್ದರು. ಪಹಲ್ಗಾಮ್ ಹತ್ಯಾಕಾಂಡದ ಸಂತ್ರಸ್ತರ ಜೊತೆ ತಂಡ ನಿಲ್ಲುವುದಾಗಿಯೂ ಹೇಳಿಕೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಪಾಕಿಸ್ತಾನ, ಐಸಿಸಿಗೆ ದೂರು ನೀಡಿತ್ತು. ಸೂರ್ಯ ಜೊತೆ ಬಿಸಿಸಿಐ ಸಿಒಒ ಮತ್ತು ಕ್ರಿಕೆಟ್ ಆಪರೇಷನ್ಸ್ ಮ್ಯಾನೇಜರ್ ಸಹ ವಿಚಾರಣೆ ವೇಳೆ ಹಾಜರಿದ್ದರು.



ನಟ ಮೋಹನ್ ಲಾಲ್ ದಾದಾಸಾಹೇಬ್ ಫಾಲ್ಕೆ ಪಡೆದ ಅತ್ಯಂತ ಕಿರಿಯರಾಗಿದ್ದಾರೆ!

ಭಾರತ ತಂಡಕ್ಕೆ ಸುಧಾರಣೆಗೆ ಅವಕಾಶ

ತಪ್ಪುಗಳನ್ನು ಮರೆಮಾಚಿದ ಗೆಲುವುಗಳು: ಸೂರ್ಯ ಪಡೆಗೆ ಇಂದು ಲಂಕಾ ಸವಾಲು

• ಆರ್.ಕೌಶಿಕ್

ಸೂರ್ಯಕುಮಾರ್ ಯಾದವ್

ದುಬೈ: 'ಸಪ್ಪೆ' ಎನ್ನುವ ಪದ ಸಾಮಾನ್ಯವಾಗಿ ಪ್ರಬಲ ಭಾರತ ಟಿ20 ತಂಡದ ಜೊತೆ ಹೊಂದುವುದಿಲ್ಲ. ಆದರೆ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದ ಆರಂಭದಿಂದ ಭಾರತ ಸಪ್ಪೆ ಎನಿಸಿದೆ.

ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳ ವಿರುದ್ಧ ಕ್ರಮವಾಗಿ ಆರು ವಿಕೆಟ್ ಮತ್ತು 41 ರನ್‌ಗಳಿಂದ ಭಾರತ ಅರ್ಹ ರೀತಿಯಲ್ಲಿ ಜಯಗಳಿಸಿದೆ. ಆದರೆ ಮೂರೂ ವಿಭಾಗಗಳಲ್ಲಿ ತನ್ನ ಆಟದ ಉತ್ತುಂಗದಲ್ಲಿ ಇರಲಿಲ್ಲ ಎನ್ನುವುದನ್ನು ಮುಚ್ಚಿಡುವಂತಿಲ್ಲ. ಹಾಲಿ ಟೂರ್ನಿಯಲ್ಲಿ ಸತತ 5 ಪಂದ್ಯ ಗೆದ್ದಿರುವ ತಂಡಕ್ಕೆ ಸುಧಾರಣೆಗೆ ಸಾಕಷ್ಟು ಅವಕಾಶವಿದೆ ಎನ್ನುವುದು ಕಟುವಾಸ್ತವ.

ಪಾಕಿಸ್ತಾನ ವಿರುದ್ಧ ಮೊದಲ 10 ಓವರುಗಳಲ್ಲಿ ತಂಡದ ಬೌಲಿಂಗ್ ಪರಿಣಾಮಕಾರಿ ಆಗಿರಲಿಲ್ಲ. ಬಾಂಗ್ಲಾದೇಶ ತಂಡದ ವಿರುದ್ಧ ಕೊನೆಯ 10 ಓವರುಗಳಲ್ಲಿ ಬ್ಯಾಟಿಂಗ್ ಕಳಾಹೀನವಾಗಿತ್ತು. ಕ್ಷೇತ್ರರಕ್ಷಣೆಯಲ್ಲಂತೂ ತಂಡ ಕಳಪೆ ಎನಿಸಿದ್ದು, ಎರಡು ಪಂದ್ಯಗಳಲ್ಲಿ (39.3 ಓವರ್) 9 ಕ್ಯಾಚುಗಳನ್ನು ಕೈಬಿಟ್ಟಿದೆ.

ಶುಕ್ರವಾರ ತಂಡವು, ಶ್ರೀಲಂಕಾ ವಿರುದ್ಧ ಸೂಪರ್ ಲೀಗ್ ಹಂತದ ಅಂತಿಮ ಪಂದ್ಯ ಆಡಲಿದ್ದು, 48 ಗಂಟೆಗಳ ನಂತರ ನಡೆಯುವ ಫೈನಲ್‌ಗೆ ಮುನ್ನ ಈ ನ್ಯೂನತೆಗಳನ್ನು ತಿದ್ದಲು ಕೊನೆಯ ಅವಕಾಶವಾಗಿದೆ.

ಜಸ್‌ಪ್ರೀತ್ ಬೂಮ್ರಾ ಕೊನೆಗೂ ಲಯಕಂಡುಕೊಂಡಿದ್ದು, ಮೊದಲ ಬಾರಿ ಬುಧವಾರ ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಪರಿಣಾಮಕಾರಿ ಎನಿಸಿದ್ದರು. ವರುಣ್ ಚಕ್ರವರ್ತಿ ಸಹ ಲಯಕ್ಕೆ ಮರಳಿರುವುದು ತಂಡಕ್ಕೆ ಸಮಾಧಾನದ ಅಂಶ. ಕುಲದೀಪ್ ಮಾತ್ರ ಇದುವರೆಗೆ ಯಶಸ್ವಿ ಬೌಲರ್ ಆಗಿ (12 ವಿಕೆಟ್) ಗುರುತಿಸಿಕೊಂಡಿದ್ದಾರೆ.

ಅಭಿಷೇಕ್ ಶರ್ಮಾ ಮತ್ತು ಸ್ವಲ್ಪ ಮಟ್ಟಿಗೆ ಶುಭಮನ್ ಗಿಲ್ ಮಾತ್ರ ಯಶಸ್ವಿ ಎನಿಸಿದ್ದಾರೆ. ಟೂರ್ನಿಯಲ್ಲಿ ಅವರಿಬ್ಬರಷ್ಟೇ ಇದುವರೆಗೆ ನೂರಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಅಭಿಷೇಕ್ 17 ಸಿಕ್ಸರ್ ಸಿಡಿಸಿದ್ದಾರೆ. ತಂಡದ ಉಳಿದವರು ಒಟ್ಟು ಸೇರಿ ಬಾರಿಸಿದ್ದು 16 ಸಿಕ್ಸರ್ ಮಾತ್ರ. ನಾಯಕ ಸೂರ್ಯಕುಮಾರ್ ಯಾದವ್ ಪರದಾಡಿದ್ದಾರೆ.

ಏಷ್ಯಾ ಕಪ್ 2025

ಲಂಕಾ ಆಟಗಾರರೂ ಸೂಪರ್ ಫೋರ್ ಹಂತದಲ್ಲಿ ರನ್‌ಗಳಿಗೆ ಪರದಾಡಿದ್ದಾರೆ. ಎರಡು ಪಂದ್ಯ ಸೋತಿರುವ ಲಂಕಾಕ್ಕೆ ಕಳೆದುಕೊಳ್ಳುವುದು ಏನೂ ಇಲ್ಲದ ಕಾರಣ ನಿರ್ಗಮಿಸುವ ಮುನ್ನ ಆಟದ ಮಟ್ಟ ಎತ್ತರಿಸುವುದೇ ಎಂಬುದನ್ನು ಕಾದುನೋಡಬೇಕು.

ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ರವೂಫ್, ಫರ್ಹಾನ್ ವಿರುದ್ಧ ದೂರು

ದುಬೈ (ಪಿಟಿಐ): ಭಾನುವಾರ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಪ್ರಚೋದನಾತ್ಮಕವಾಗಿ ವರ್ತಿಸಿದ ಪಾಕಿಸ್ತಾನ ತಂಡದ ಆಟಗಾರರಾದ ಹ್ಯಾರಿಸ್ ರವೂಫ್ ಮತ್ತು ಸಾಹಿಬ್‌ಝಾದಾ ಫರ್ಹಾನ್ ವಿರುದ್ಧ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಐಸಿಸಿಗೆ ದೂರು ಸಲ್ಲಿಸಿದೆ. ಬಿಸಿಸಿಐ ಬುಧವಾರ ಇ ಮೇಲ್ ಮುಖಾಂತರ ದೂರು ಸಲ್ಲಿಸಿರುವುದಾಗಿ ಗೊತ್ತಾಗಿದೆ.

ಶಾಹೀನ್ ಮಿಂಚು: ಬಾಂಗ್ಲಾ ವಿರುದ್ಧ ಆಘಾ ಬಳಗಕ್ಕೆ ರೋಚಕ ಗೆಲುವು

ಫೈನಲ್‌ನಲ್ಲಿ ಭಾರತಕ್ಕೆ ಪಾಕಿಸ್ತಾನ ಎದುರಾಳಿ



ಶಾಹೀನ್ ಶಾ ಅಫ್ರಿದಿ

ದುಬೈ (ಪಿಟಿಐ): ಶಾಹೀನ್ ಶಾ ಅಫ್ರಿದಿ (17ಕ್ಕೆ 3) ಅವರ ವೇಗದ ದಾಳಿಯ ನೆರವಿನಿಂದ ಪಾಕಿಸ್ತಾನ ತಂಡವು ಗುರುವಾರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದ ನಿರ್ಣಾಯಕ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ 11 ರನ್‌ಗಳ ರೋಚಕ ಗೆಲುವು ಸಾಧಿಸಿ, ಫೈನಲ್ ಪ್ರವೇಶಿಸಿತು.

ಭಾನುವಾರ (ಸೆ.28) ನಡೆಯುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಮತ್ತೆ ಸೆಣಸಾಡಲಿವೆ. ಸಾಂಪ್ರದಾಯಿಕ ಎದುರಾಳಿಗಳಾದ ಈ ತಂಡಗಳು ಏಷ್ಯಾ ಕಪ್ ಇತಿಹಾಸದಲ್ಲಿ ಇದೇ ಮೊದಲ ಬಾರಿ ಫೈನಲ್‌ನಲ್ಲಿ ಮುಖಾಮುಖಿಯಾಗುತ್ತಿವೆ.

ಸಲ್ಮಾನ್ ಆಘಾ ಪಡೆ ನೀಡಿದ್ದ 136 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಬಾಂಗ್ಲಾ ತಂಡವು 9 ವಿಕೆಟ್‌ಗೆ 124 ರನ್ ಗಳಿಸಲಷ್ಟೇ ಶಕ್ತವಾಯಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ಶಮೀಮ್ ಹುಸೇನ್ (30;25ಎ) ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು. ಹ್ಯಾರಿಸ್ ರವೂಫ್ ಮೂರು ವಿಕೆಟ್ ಪಡೆದರೆ, ಸಯೀಮ್ ಅಯೂಬ್ ಎರಡು ವಿಕೆಟ್ ಗಳಿಸಿ ಗೆಲುವಿನಲ್ಲಿ ಮಿಂಚಿದರು.

ಇದಕ್ಕೂ ಮೊದಲು ಟಾಸ್ ಗೆದ್ದ ಬಾಂಗ್ಲಾ ಫೀಲ್ಡಿಂಗ್ ಆಯ್ದುಕೊಂಡಿತು. ಬೌಲರ್‌ಗಳು ಸಾಂಘಿಕ ನಿರ್ವಹಣೆ ತೋರಿ ಪಾಕ್ ತಂಡವನ್ನು 8 ವಿಕೆಟ್‌ಗೆ 135 ರನ್‌ಗಳಿಗೆ ನಿಯಂತ್ರಿಸಿದರು. ತಂಡ 50 ತಲುಪುವ ಮೊದಲೇ ಐವರು ನಿರ್ಗಮಿಸಿದ್ದರು. ಮೊಹಮ್ಮದ್ ಹ್ಯಾರಿಸ್ (31, 23 ಎ) ಚೇತರಿಕೆ ನೀಡಿದರು. ಮೊಹಮ್ಮದ್ ನವಾಜ್ (25, 15ಎ) ಮತ್ತು ಶಾಹೀನ್ ಶಾ ಅಫ್ರಿದಿ (19, 13ಎ) ಅವರು ಕೊನೆಗಳಿಗೆಯಲ್ಲಿ ತಂಡದ ಮೊತ್ತ 130 ದಾಟಿಸಿದರು.

ಬಾಂಗ್ಲಾ ವೇಗಿ ತಸ್ಕಿನ್ ಅಹ್ಮದ್ ಮೂರು ವಿಕೆಟ್ ಪಡೆದರೆ, ಆಫ್ ಸ್ಪಿನ್ನರ್ ಮಹೆದಿ ಹಸನ್ ಮತ್ತು ಲೆಗ್ ಸ್ಪಿನ್ನರ್ ರಿಷದ್ ಹುಸೇನ್ ತಲಾ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರುಗಳಲ್ಲಿ 8ಕ್ಕೆ 135 (ಮೊಹಮ್ಮದ್ ಹ್ಯಾರಿಸ್ 31, ಮೊಹಮ್ಮದ್ ನವಾಝ್ 25; ತಸ್ಕಿನ್ ಅಹ್ಮದ್ 28ಕ್ಕೆ3, ಮಹೆದಿ ಹಸನ್ 28ಕ್ಕೆ2, ರಿಷದ್ ಹುಸೇನ್ 18ಕ್ಕೆ2) ಬಾಂಗ್ಲಾದೇಶ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 124 (ಸೈಫ್ ಹಸನ್ 18, ಶಮೀಮ್ ಹುಸೇನ್ 30; ಶಾಹಿನ್ ಶಾ ಅಫ್ರಿದಿ 17ಕ್ಕೆ 3, ಹ್ಯಾರಿಸ್ ರವೂಫ್ 33ಕ್ಕೆ 3, ಸಯೀಮ್ ಅಯೂಬ್ 16ಕ್ಕೆ 2). ಫಲಿತಾಂಶ: ಪಾಕಿಸ್ತಾನಕ್ಕೆ 11 ರನ್‌ಗಳ ಜಯ. ಪಂದ್ಯದ ಆಟಗಾರ: ಶಾಹಿನ್ ಶಾ ಅಫ್ರಿದಿ

ಇನ್ನಷ್ಟು ಕ್ರೀಡಾ ಸುದ್ದಿ 3A

HONDA
The Power of Dreams

How we move you.
CREATE ▸ TRANSCEND, AUGMENT

The Honda Joy Fest

Bring Home a Honda, Bring Home Joy

^GET GST BENEFIT UP TO ₹14000/-

INSTANT CASHBACK UP TO ₹5000/-** | LOAN UP TO 100%* | LOW ROI @6.99%* | LOW EMI ₹49* PER DAY

Scan to download
MyHonda-India
Customer Connect App

HDFC BANK Credit Card | IDFC FIRST Bank CREDIT CARDS

For more information give a missed call on 7230032200

For dealer details scan the QR Code

Terms and Conditions applied. *Approval of the loan is at the sole discretion of the financiers, and additional documentation may be required. *The interest rates, loan amount, down payment, tenure options and EMI are based on the financier's assessment of the applicant's credit profile. *Low EMI offers are applicable for select HMSI models as follows: ₹49/- per day for Shine100 DX; ₹79/- per day for Shine125, SP125 & CB125 Hornet; ₹1999/- per month for Activa. *Some of the mentioned components of the scheme cannot be clubbed together. *The offers/features may be modified or withdrawn at any time without prior intimation. *Offer valid until 31st October 2025. **Instant Cashback up to ₹5000 is available on selected HMSI models for EMI transactions using HDFC Bank credit cards with a minimum transaction value of Rs. 40000. **An instant cashback of flat ₹2000 is applicable on a minimum full swipe transaction of ₹40000, and flat ₹3000 Instant cashback on a minimum full swipe transaction of ₹75001. **Instant Cashback up to ₹4000 is available on selected HMSI models for EMI transactions using IDFC Bank credit cards. **The offer is valid on credit card transactions processed through Pine Labs machines only and is applicable for one transaction per card/order during the offer period. **The HDFC Bank Instant Cashback offer is valid until 31st October 2025, while the IDFC Bank Instant cashback offer is valid until 30th September 2025. ^GST benefit is based on a reduction from 28% to 18% GST on the Ex-showroom price of NX 200. ^The actual savings may vary depending on the selected model and state. Product shown in the picture may vary from actual product available in the market. Accessories shown in the picture are not part of standard equipment.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122052, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 9880458863; **City Honda - ST. JOHNS ROAD:** 08025139199; **H.R.B.R:** 9845941305; **FRAZER TOWN:** 9480812353; **LALBAGH:** 9480812397; **Haiku Honda - DOMLUR:** 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 9343968419; **THANISANDRA (NAGAWARA):** 7353030333; **YELAHANKA:** 9343968407; **VIDYARANYAPURA:** 8150866333; **MALLESHWARAM:** 8971887792; **Raja Honda - KORAMANGALA:** 08067329000; **Prime Honda - VIJAYNAGAR:** : 080-23010300; **NAGARBHAVI:** 080-23010700; **KAMAKSHIPALYA:** 080-23019700; **Silicon Honda - RV ROAD:** 9844502222; **BANSHANKARI:** 9844502444; **R.R. NAGAR:** 9964388333; **MONOTYPE:** 7353744400; **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885; **HENNUR ROAD:** 9108989811; **Tansi Honda - HOODI:** 7259030091; **MARTHAHALLI:** 7259030100; **VARTHUR RD:** 8105597877; **GUNJUR:** 9606450642; **Turbo Honda - DODDABALLAPURA:** 7022620885; **NELAMANAGALA:** 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610; **CHINTAMANI:** 9606060620; **BAGEPALLI:** 9611596112; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Shantinath Honda - TUMKUR:** 9972433799; **KUNIGAL:** 08132-295609; **KUNIGAL ROAD:** 9844351599; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9964605093; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030; **KANAKAPURA:** 9606036053; **CHANNAPATNA:** 9606490034; **ART Honda - BIDADI:** 9945966771; **Springs Honda - KENGERI:** 9513771114; **Nideesh Honda - DEVANAHALLI:** 9108871999; **VIJAYAPURA:** 9108871999.

For Bulk/Institutional enquiries, please write us at: institutionalsales@honda.hmsi.in

TRUE VALUE
MARUTI SUZUKI

1 ವರ್ಷದವರೆಗಿನ ವಾರಂಟಿ ಜೊತೆಗೆ ಪ್ರೀ-ಓನ್ಡ್ ಕಾರು ಖರೀದಿಸಿ.
TRUE VALUE ನ ಅನುಭವ ಪಡೆಯಿರಿ

CELEBRATING 60 Lakh STORIES OF TRUST

- 376 ಕ್ವಾಲಿಟಿ ಚೆಕ್ ಪಾಯಿಂಟ್‌ಗಳು
- ದೃಢೀಕೃತ ಕಾರಿನ ಇತಿಹಾಸ*
- 1 ವರ್ಷದ ತನಕ ವಾರಂಟಿ ಮತ್ತು 3 ಉಚಿತ ಸೇವೆಗಳು*

Download on the App Store | Get it on Google play
ಆ್ಯಪ್ ಅನ್ನು ಇಲ್ಲಿ ಡೌನ್‌ಲೋಡ್ ಮಾಡಿ.

*ಕರಾರುಗಳು ಮತ್ತು ಷರತ್ತುಗಳು ಅನ್ವಯ. **Verified Car History** ಮತ್ತು **Warranty** ಕೇವಲ **True Value**ನಲ್ಲಿ ಮಾತ್ರ ಅನ್ವಯ. ಉಚಿತ ಸೇವೆಯು ಕೇವಲ ಲೇಬರ್ ಶುಲ್ಕಗಳಿಗೆ ಮಾತ್ರ ಅನ್ವಯ. ಗಾಜಿನ ಮೇಲೆ ಕಾಣುವಂತಹ ಕಪ್ಪು ಶೇಡ್‌ಗಳು ಲೈಟಿಂಗ್ ಪರಿಣಾಮದಿಂದಾಗಿ ಉಂಟಾಗಿದೆ. ಬಳಸಲಾದ ಚಿತ್ರಗಳು ಕೇವಲ ವಿವರಣೆಗಾಗಿ ಮಾತ್ರ.

ವಿಚಾರಣೆಗಾಗಿ ಕರೆ ಮಾಡಿ 1800 102 1800 | ಅಥವಾ www.marutisuzukitruevalue.com ಗೆ ಭೇಟಿ ನೀಡಿ

TRUE VALUE CERTIFIED

BANGALORE: ELECTRONIC CITY / CHANDAPURA, SURAKSHAA CAR CARE: 8884442360, 8884442301 | **HESARGHATTA / SUMMANAHALLI JUNCTION**, VARUN MOTORS: 9513979172, 9620833320 | **WHITEFIELD**, BIMAL AUTO: 9880699997, 9742271855 | **MYSORE ROAD / WHITEFIELD / UTTARAHALLI / KR PURAM / MAGADI ROAD / THANISANDRA**, KALYANI MOTORS: 9008099721, 9886353916, 9900026475, 9900023527, 9008555785, 9845179376 | **SARJAPUR**, PRATHAM MOTORS: 9686529082, 9632008765 | **YESHWANTPUR / GG PALYA**, RNS MOTORS: 7760989633, 9606933236 | **VIJAYANAGAR / BASAVESHWAR NAGAR / YELAHANKA / JP NAGAR**, MANDOVI MOTORS: 9686699756, 9686699757, 9980930227, 9880912413 | **MYSORE ROAD**, KATARIA AUTOMOBILES: 9742190214, 9742880444 | **HULIMAAVU**, SANVIT AUTOMOTIVES LLP: 9108427383 | **MADAVARA**, AVANISH AUTO LLP: 9108429127| **TUMKUR**, SAKETH AUTOMOBILES: 7625000706.